ಮಂಗಳೂರು
ಗುರುವಾರ, 4 ಜೂನ್ 2026
ಸಂಪುಟ 48, ಸಂಚಿಕೆ 77 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಚಿನ್ನ ಮಾರಾಟ ಕೇವಲ ವದಂತಿ | ೦೭

ನಾಲ್ಕನೇ ಎಸ್-400 ತುಕಡಿ ಸುದರ್ಶನ ಚಕ್ರಕ್ಕೆ ಬಲ | ೦೭

ಜೆಟ್ ತೈಲ ಹೊರೆ ತಗ್ಗಿಸಲು ನಿಧಿ | ೦೭

ಶುಭ ದಿನ


ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ದೇಹ ಚಿಕ್ಕದಾದ ಮಾತ್ರಕ್ಕೆ ತಿಳುವಳಿಕೆಯೂ ಹಾಗೆಯೇ ಎಂದು ವಿವೇಕಿಗಳು ತಿಳಿಯುವುದಿಲ್ಲ. ಸೂರ್ಯಬಿಂಬ ಚಿಕ್ಕದಾಗಿದ್ದರೂ ಅದು ಭೂಮ್ಯಾಕಾಶ ಬೆಳಗುವುದಿಲ್ಲವೇ?
▲ ನೀತಿ ಮಂಜರಿ


ಪ್ರಮಾಣವಚನಕ್ಕೂ ಮುನ್ನ ತಾಯಿ ಆಶೀರ್ವಾದ ಪಡೆದ ಡಿಕೆಶಿ.


ಜೆಡಿಎಸ್ ವರಿಷ್ಠ ದೇವೇಗೌಡರ ಭೇಟಿ, ಆಶೀರ್ವಾದ.


ಮಾಜಿ ಸಿಎಂ ಯಡಿಯೂರಪ್ಪ ಮನೆಗೆ ಭೇಟಿ.

ಕಿರುಸುದ್ದಿ

ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚಳ
• ಪುಟ ೭

ಭಾರತ-ಬಾಂಗ್ಲಾ ಆಂತರಿಕ ಭದ್ರತೆ ಕುರಿತ ಚರ್ಚೆ ಶೀಘ್ರ
• ಪುಟ ೭


ಟಿಟಿಡಿ ತುಪ್ಪ ಕಲಬೆರಕೆ: ಡೇರಿಗಳಲ್ಲಿ ಇಡಿ ಶೋಧ
• ಪುಟ ೭

ಅಜ್ಜಯ್ಯನ ಹೆಸರಲ್ಲಿ ಡಿಕೆಶಿ ಪ್ರಮಾಣ | ಡಿಸಿಎಂ ಪರಂ ಸೇರಿ 12 ಮಂದಿ ಸಚಿವರಾಗಿ ಪ್ರತಿಜ್ಞೆ

ಮೊದಲ ಸಂಪುಟದಲ್ಲೇ ಭರ್ಜರಿ ಕೊಡುಗೆ | ಬಿ ಖಾತಾದಿಂದ ಎ ಖಾತೆ ರಾಜ್ಯವ್ಯಾಪಿ

ಭರಪೂರ ಬಳುವಳಿ





• **ಬೆಂಗಳೂರು:** ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ ನಡೆದ ಮೊದಲ ಸಂಪುಟದಲ್ಲಿಯೇ ರಾಜ್ಯದ ಜನರಿಗೆ ಭರ್ಜರಿ ಕೊಡುಗೆ ಘೋಷಣೆ ಮಾಡಿದ್ದಾರೆ.

ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ಸರ್ಕಾರಿ ಹುದ್ದೆ ಭರ್ತಿ ಜೊತೆಗೆ ಖಾಸಗಿ ಉದ್ಯೋಗ ವಿನಿಮಯ ವ್ಯವಸ್ಥೆ, ಪಂಚಾಯಿತಿಗೆ ಒಂದರಂತೆ ರಾಜ್ಯದಲ್ಲಿ 10 ಸಾವಿರ ಯುವಕರ



ಸಂಘ ಸ್ಥಾಪನೆ ಹಾಗೂ 10 ಲಕ್ಷ ಅನುದಾನ, ಒಸಿ ಸಿಸಿ ಸಮಸ್ಯೆಗೆ ಪರಿಹಾರ, ರಾಜ್ಯದೆಲ್ಲೆಡೆ ಬಿ ಖಾತಾದಿಂದ ಎ ಖಾತಾ ಪರಿವರ್ತನೆ, ಬೆಂಗಳೂರು ನಗರದ ರಸ್ತೆಗಳ ಡಾಂಬರೀಕರಣಕ್ಕೆ 2 ಸಾವಿರ ಕೋಟಿ ಅನುದಾನ... ಇವಿಷ್ಟು ಕರ್ನಾಟಕ ರಾಜ್ಯದಲ್ಲಿ ಯುವ ಯುಗ ಆರಂಭಕ್ಕೆ ಸಿಎಂ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ನೂತನ ಸರ್ಕಾರ ಕೈಗೊಂಡಿರುವ ಷಟ್ಪದಿಗಳು. ವಿಧಾನಸೌಧದಲ್ಲಿ ಬುಧವಾರ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿ ಮೊದಲ ಸಚಿವ ಸಂಪುಟ ಸಭೆ ನಡೆಸಿದ ಬಳಿಕ ಮುಖ್ಯಮಂತ್ರಿ ಶಿವಕುಮಾರ್ ಅವರು, 6 ಮಹತ್ವದ ಘೋಷಣೆಗಳನ್ನು ಮಾಡಿದ್ದಾರೆ.

ಅಜ್ಜಯ್ಯನ ಹೆಸರಿನಲ್ಲಿ ಪ್ರಮಾಣ: ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಭಾರತದ ಸಂವಿಧಾನ ಪ್ರತಿ ಹಿಡಿದು ನೊಣವಿನಕೆರೆ ವೀರ ಗಂಗಾಧರ ಅಜ್ಜಯ್ಯನ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದ್ದಾರೆ. ಲೋಕಭವನದ ಗಾಜಿನ ಮನೆಯಲ್ಲಿ ಬುಧವಾರ ನಡೆದ ಸರಳ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಬೋಧಿಸಿದ ಗೌಪ್ಯತಾ ಪ್ರಮಾಣವಚನವನ್ನು ಶಿವಕುಮಾರ್ ಅವರು ಸ್ವೀಕರಿಸಿದರು. ಸಂಜೆ 4.07ಕ್ಕೆ ಪ್ರಮಾಣವಚನ ಸಮಾರಂಭ ಪ್ರಾರಂಭ ವಾಯಿತು. ಶಿವಕುಮಾರ್ ಅವರು 4.14ರ ಶುಭ ಮುಹೂರ್ತ ದಲ್ಲಿ ಪ್ರಮಾಣವಚನ ಸ್ವೀಕರಿಸಿದರು.
➡ಪುಟ ೪

- ಕರ್ನಾಟಕದ ಧ್ವಜದ ಬಣ್ಣಗಳನ್ನು ಪ್ರತಿಬಿಂಬಿಸುವ ಕೆಂಪು ಮತ್ತು ಹಳದಿ ಬಣ್ಣಗಳಲ್ಲಿ ಲೋಕಭವನದ ಗಾಜಿನ ಮನೆಯನ್ನು ಅಲಂಕರಿಸಲಾಗಿತ್ತು,
- ಜ್ಯೋತಿಷಿಯ ಸಲಹೆಯಂತೆ ವೇದಿಕೆಯನ್ನು ಪೂರ್ವಕ್ಕೆ ಮುಖ ಮಾಡಿ ನಿರ್ಮಿಸಲಾಗಿತ್ತು.
- ವೇದಿಕೆಗೆ ಹೋಗುವ ಮೊದಲು, ಶಿವಕುಮಾರ್ ಪ್ರಮಾಣವಚನ ಸಮಾರಂಭಕ್ಕಾಗಿ ಆಗಮಿಸಿದ್ದ ವಿವಿಧ ಧಾರ್ಮಿಕ ನಾಯಕರ ಆಶೀರ್ವಾದ ಪಡೆದರು.
- ಕೆಲ ಧಾರ್ಮಿಕ ನಾಯಕರು ಡಿ.ಕೆ. ಶಿವಕುಮಾರ್ ಅವರ ಮೇಲೆ ಹೂದಳಗಳನ್ನು ಸುರಿಸಿದರೆ, ಇತರರು ಆಶೀರ್ವಾದ ಮತ್ತು ರುದ್ರಾಕ್ಷ ಮಾಲೆ ನೀಡಿದರು.
- ಶಿವಕುಮಾರ್ ಅವರು ಕಂದು ಬಣ್ಣದ ರೇಷ್ಮೆ ಜುಬ್ಬಾ ಮತ್ತು ಕಾಂಗ್ರೆಸ್ ಪಕ್ಷದ ತ್ರಿವರ್ಣ ಧ್ವಜ ಹೊಂದಿರುವ ಶಾಲು ಧರಿಸಿದ್ದರು.
- ಪ್ರಮಾಣವಚನ ಸ್ವೀಕರಿಸುವ ಮೊದಲು ಶಿವಕುಮಾರ್ ಗಣ್ಯರನ್ನು ಸ್ವಾಗತಿಸಿದರು.

ಪೀಠಾಧಿಪತಿಗಳಿಂದ ಡಿಕೆಶಿಗೆ ಆಶೀರ್ವಾದ

ಡಿ.ಕೆ. ಶಿವಕುಮಾರ್ ಅವರು ಮಧ್ಯಾಹ್ನ 3.30ಕ್ಕೆ ಲೋಕಭವನದ ಗಾಜಿನಮನೆ ಪ್ರವೇಶಿಸಿದರು. ಅವರು ನೇರವಾಗಿ ಧರ್ಮಗುರುಗಳು, ವಿವಿಧ ಮಠಗಳ ಸ್ವಾಮೀಜಿಗಳು ಆಸೀನರಾಗಿದ್ದ ಕಡೆ ತೆರಳಿ ಆಶೀರ್ವಾದ ಪಡೆದರು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ರುದ್ರಾಕ್ಷಿ ಮಾಲೆ ಹಾಕಿ ಅಭಿನಂದಿಸಿದರು. ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ರೇಷ್ಮೆ ಶಾಲು ಮತ್ತು ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ಕನಕಪೀಠದ ಸ್ವಾಮೀಜಿ ನಿರಂಜನಾನಂದಪುರಿ ಕರಿ ಕಂಬಳಿ ಹೊದೆಸಿ ನಿಮ್ಮ ಹಾದಿ ಸುಗಮವಾಗಿರಲಿ ಎಂದು ಶುಭ ಕೋರಿದರು. ಇತರ ಸ್ವಾಮೀಜಿಗಳು ರುದ್ರಾಕ್ಷಿ ಸರ, ಕ್ರೈಸ್ತ ಧರ್ಮಗುರುಗಳು ಶಿಲುಬೆಯ ದಾರವನ್ನು ಕೊರಳಿಗೆ ಹಾಕಿ ಆಡಳಿತ ಅವಧಿಯಲ್ಲಿ ಕರ್ನಾಟಕದ ಅಭಿವೃದ್ಧಿ ಇನ್ನೂ ಉತ್ತುಂಗಕ್ಕೆ ಏರಲಿ ಎಂದು ಹಾರೈಸಿದರು. ಸಂತ ಸೇವಾಲಾಲ್ ಸ್ವಾಮೀಜಿ ಲಂಬಾಣಿ ಕುಸುರಿ ಕಲೆ ಹೊಂದಿರುವ ಶಲ್ಯ ನೀಡಿದರು.

> ಕರ್ನಾಟಕದ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರಿಗೆ ಅಭಿನಂದನೆಗಳು. ಕೇಂದ್ರವು ಕರ್ನಾಟಕ ಸರ್ಕಾರದೊಂದಿಗೆ ಜನರ ಕಲ್ಯಾಣಕ್ಕಾಗಿ ನಿಕಟವಾಗಿ ಕಾರ್ಯನಿರ್ವಹಿಸಲಿದೆ.
> ■ ನರೇಂದ್ರ ಮೋದಿ, ಪ್ರಧಾನಿ

> ಇಂದು ನನ್ನ ಹೆಗಲ ಮೇಲಿರುವುದು ಕೇವಲ ಮುಖ್ಯಮಂತ್ರಿಯ ಜವಾಬ್ದಾರಿಯಲ್ಲ, ಬದಲಿಗೆ ಕೋಟ್ಯಂತರ ಕನ್ನಡಿಗರ ಕನಸುಗಳನ್ನು ನನಸು ಮಾಡುವ ಪವಿತ್ರ ಕರ್ತವ್ಯ.

- ವಿಧಾನಸೌಧ ಉತ್ತರ ಗೇಟ್ ಮೂಲಕ ವಿಧಾನಸೌಧ ಪ್ರವೇಶ
- ವಿಧಾನಸೌಧದ ಆವರಣದಲ್ಲಿರುವ ಮುನೇಶ್ವರಸ್ವಾಮಿಗೆ ಪೂಜೆ
- ಪಶ್ಚಿಮ ದ್ವಾರದ ಮೂಲಕ ವಿಧಾನಸೌಧ ಮೆಟ್ಟಿಲಿಗೆ ನಮಸ್ಕರಿಸಿ ಪ್ರವೇಶ
- ಒಳ ಪ್ರವೇಶಿಸುವ ಮುನ್ನ ಮುಖ್ಯಮಂತ್ರಿ ಕಚೇರಿಯ ಹೊಸ್ತಿಲಿಗೆ ನಮಸ್ಕಾರ
- ನೊಣವಿನಕೆರೆ ಸ್ವಾಮಿಗಳಿಂದ ವಿಧಾನಸೌಧ ಮೆಟ್ಟಿಲುಗಳಿಗೆ ನೀರು ಪ್ರೋಕ್ಷಣೆ
- ವಿಧಾನಸೌಧದ ಆವರಣದಲ್ಲಿರುವ ಬಸವಣ್ಣ, ಕೆಂಪೇಗೌಡರು, ಮಹಾತ್ಮ ಗಾಂಧಿ, ಬಿ.ಆರ್.ಅಂಬೇಡ್ಕರ್, ಪ್ರತಿಮೆಗಳಿಗೆ ಪುಷ್ಪಾರ್ಚನೆ

ರಾಜ್ಯದಲ್ಲಿ ಡಿ.ಕೆ. ಶಿವಕುಮಾರ್ ಶಕೆ.. • ಪುಟ ೫

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್

• **ಬೆಂಗಳೂರು:** ಎಲ್ಲ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವ ಮಹತ್ವದ ತೀರ್ಮಾನವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಮೊದಲ ಸಚಿವ ಸಂಪುಟದಲ್ಲಿ ಕೈಗೊಂಡಿದೆ. ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ವಿಧಾನಸೌಧದಲ್ಲಿ ನಡೆದ ಮೊದಲ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು, ಬುಧವಾರ ಸಚಿವ ಸಂಪುಟ ಸಭೆಯಲ್ಲಿ 6 ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.
➡ಪುಟ ೪



- ರಾಜ್ಯಾದ್ಯಂತ ಬಿ ನಿಂದ ಎ ಖಾತೆಗೆ ಪರಿವರ್ತನೆ
- 2,500 ಚ.ಅಡಿ ವಿಸ್ತೀರ್ಣದ ಕಟ್ಟಡಗಳಿಗೆ ವಿದ್ಯುತ್, ನೀರು ಸಂಪರ್ಕ
- ಖಾಸಗಿ ಉದ್ಯೋಗ ವಿನಿಮಯ ಕೇಂದ್ರ
- ಭಾರತ್ ಜೋಡೋ ಯುವಕರ ಸಂಘ

ಬಿ.ಕೆ.ಹರಿಪ್ರಸಾದ್‌ಗೆ ಕೆಪಿಸಿಸಿ ಅಧ್ಯಕ್ಷ ಪಟ್ಟ

• **ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಹಿರಿಯ ಕಾಂಗ್ರೆಸ್ ಮುಖಂಡ, ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ನೇಮಕಗೊಂಡಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಹಲವು ಆಕಾಂಕ್ಷಿಗಳಿದ್ದರು. ಸತೀಶ್ ಜಾರಕಿಹೊಳಿ, ಈಶ್ವರ ಖಂಡ್ರೆ, ಜಿ.ಪರಮೇಶ್ವರ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಹೆಸರುಗಳು ಕೇಳಿಬಂದಿದ್ದವು. ಕೊನೆಯದಾಗಿ ಮೂಲ ಕಾಂಗ್ರೆಸಿಗ, ಹಿಂದುಳಿದ ವರ್ಗದ ನಾಯಕ ಎಂಬ ಪ್ರಮುಖ ಅಂಶಗಳನ್ನು ಪರಿಗಣಿಸಿ 71 ವರ್ಷದ ಬಿ.ಕೆ. ಹರಿಪ್ರಸಾದ್‌ಗೆ ಕೆಪಿಸಿಸಿ ಪಟ್ಟ ನೀಡಿದೆ.

ಡಿ.ಕೆ.ಶಿವಕುಮಾರ್ ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ಆರಂಭ ವಾಗಿತ್ತು. ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಲಾಬಿ ನಡೆಸಿದ್ದರು. ಸಿದ್ದರಾಮಯ್ಯ ಬಳಿಕ ಅಹಿಂದ ಜವಾಬ್ದಾರಿಯನ್ನು ತಾನು ವಹಿಸಿಕೊಳ್ಳಲಿದ್ದೇನೆ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದರು.

ಆದರೆ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಹೈಕಮಾಂಡ್ ವಲಸೆ ಕಾಂಗ್ರೆಸಿಗ ಎಂಬ ಕಾರಣಕ್ಕಾಗಿಯೋ ಏನೋ ಸತೀಶ್ ಜಾರಕಿಹೊಳಿಗೆ ಕೆಪಿಸಿಸಿ ಪಟ್ಟ ನೀಡಲು ಒಲವು ತೋರಲಿಲ್ಲ. ಹೀಗಾಗಿ, ಸತೀಶ್ ಜಾರಕಿಹೊಳಿ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ.
➡ಪುಟ ೪


3 ಕಾರ್ಯಾಧ್ಯಕ್ಷರ ನೇಮಕಕ್ಕೆ ಚಿಂತನೆ

ದಿಲ್ಲಿಯ ಹೊಟೇಲ್‌ನಲ್ಲಿ ಅಗ್ನಿ ಅವಘಡ

10 ವಿದೇಶಿಯರು ಸೇರಿ 21 ಜನ ಸಜೀವ ದಹನ



• **ಹೊಸದಿಲ್ಲಿ:** ದಕ್ಷಿಣ ದಿಲ್ಲಿಯ ಮಾಳವೀಯ ನಗರ ಪ್ರದೇಶದಲ್ಲಿ ಬುಧವಾರ ಅಗ್ನಿಶಾಮಕ ದಳದ ಸುರಕ್ಷತಾ ಅನುಮತಿ ಪತ್ರ(ಎನ್‌ಒಸಿ) ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದ ಹೊಟೇಲ್‌ನಲ್ಲಿ ಸಂಭವಿಸಿದ ಭೀಕರ ಅಗ್ನಿ ಅನಾಹುತದಲ್ಲಿ ಕನಿಷ್ಠ 21 ಜನರು ಸಜೀವ ದಹನವಾಗಿದ್ದಾರೆ. ಹೌಜ್ ರಾಣಿಯಲ್ಲಿರುವ ಫ್ಲೋರಿಶ್ ಸ್ಟೇ ಬಿ ಆಂಡ್ ಬಿ ಹೊಟೇಲ್‌ನ ಐದು ಅಂತಸ್ತಿನ ಕಟ್ಟಡದಲ್ಲಿ ಬೆಳಗ್ಗೆ 8.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ. ಈ ಕಟ್ಟಡ ಕೇವಲ ಒಂದೇ ಪ್ರವೇಶ ಮತ್ತು ನಿರ್ಗಮನ ದ್ವಾರ, ಶಾಶ್ವತವಾಗಿ ಮುಚ್ಚಿದ ಕಿಟಕಿಗಳು, ಸೆನ್ಸರ್ ಚಾಲಿತ ಮುಖ್ಯ ಬಾಗಿಲನ್ನು ಹೊಂದಿತ್ತು. ಕನಿಷ್ಠ 58 ಜನರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರಲ್ಲಿ 11 ವಿದೇಶಿಯರು, 10 ಭಾರತೀಯರು ಸೇರಿದಂತೆ ಒಟ್ಟು 21 ಮಂದಿ ಮೃತಪಟ್ಟಿದ್ದಾರೆ ಎಂದು ಘೋಷಿಸಲಾಗಿದೆ.
➡ಪುಟ ೪

ಕಿರುಸುದ್ದಿ

2026ನೇ ಸಾಲಿನ ಕೊಡಗಿನ ಗೌರಮ್ಮ ಕಥಾಸ್ಪರ್ಧೆಗೆ ಆಹ್ವಾನ

ಬದಿಯಡ್ಕ: 2026ನೇ ಸಾಲಿನ ಕೊಡಗಿನ ಗೌರಮ್ಮ ದತ್ತಿನಿಧಿ ಹಾಗೂ ಹವ್ಯಕ ಮಹಾಮಂಡಲ ಮಾತೃಮಂಡಳಿ ಸಹಯೋಗದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಹವ್ಯಕ ಮಹಿಳೆಯರಿಗಾಗಿ ಒಂದು ಸಣ್ಣ ಕಥಾ ಸ್ಪರ್ಧೆಯನ್ನು ಅಖಿಲ ಭಾರತ ಮಟ್ಟದಲ್ಲಿ ಆಯೋಜಿಸಲಾಗಿದೆ. ಕಥೆ ನೀಡುವವರು ಈ ಕೆಳಗಿನ ನಿಯಮಾವಳಿಗಳಂತೆ ಕಥೆಗಳನ್ನು ಕಳುಹಿಸಬಹುದು. ಸರ್ಧೆಯ ನಿಯಮಾವಳಿಗಳು ಈ ರೀತಿಯಾಗಿವೆ. ಹವ್ಯಕ ಮಹಿಳೆಯರು (ವಯೋಮಿತಿ ಇಲ್ಲ, ಹೈಸ್ಕೂಲ್, ಕಾಲೇಜು ವಿದ್ಯಾರ್ಥಿನಿಯರೂ ಭಾಗವಹಿಸಬಹುದು). ಹವ್ಯಕ ಭಾಷೆ (ಯಾವುದೇ ಸೀಮೆಯ ಹವ್ಯಕ ಭಾಷೆ)ಯಾಗಿರಬೇಕು. ಈ ವರೆಗಿನ ಪ್ರಥಮ ವಿಜೇತೆಯರಿಗೆ ಅವಕಾಶವಿಲ್ಲ. ಇಲ್ಲಿಯತನಕ ಎಲ್ಲಿಯೂ ಪ್ರಕಟವಾಗಿರದ ಸಾಮಾಜಿಕ ಕಥೆಯಾಗಿರಬೇಕು. 6ರಿಂದ 7 ಪುಟಕ್ಕೆ ಮೀರದಂತೆ ಕಾಗದದ ಒಂದೇ ಬದಿಗೆ ಸ್ಫುಟವಾಗಿ ಬರೆದಿರಬೇಕು. (ಟೈಪ್ ಮಾಡಿದ್ದಾದರೆ ಉತ್ತಮವಾಗಿದ್ದು, ಎರಡು ಸಾವಿರ ಪದಗಳು) ಬರಹಗಾರರು ತಮ್ಮ ಹೆಸರು, ವಿಳಾಸ, ಸಂಪರ್ಕ ಸಂಖ್ಯೆಯನ್ನು ಬೇರೆ ಕಾಗದದಲ್ಲಿ ಬರೆದು ಲಗತ್ತಿಸಿರಬೇಕು. ಇ-ಮೇಲ್ ಮೂಲಕ ಕಳುಹಿಸಿದರೆ ಸ್ವೀಕಾರಾರ್ಹವಲ್ಲ. ವಿಜೇತರ ಘೋಷಣೆಯ ಬಳಿಕ ಪತ್ರಿಕಾ ಪ್ರಕಟಣೆಯನ್ನು ಆಯೋಜಕರೇ ಪ್ರಕಟಿಸಿದ ನಂತರವಷ್ಟೇ ಸಾಮಾಜಿಕ ಜಾಲತಾಣದಲ್ಲಿ ವಿಜೇತರು ತಮ್ಮ ಅನುಭವಗಳನ್ನು ಹಂಚಿಕೊಳ್ಳಬಹುದು.

ವಿಜೇತರಿಗೆ ಬಹುಮಾನಗಳು: ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ಕಥೆಗಳಿಗೆ ಪ್ರಶಸ್ತಿ ಪತ್ರ, ಸ್ಮರಣಿಕೆ ಹಾಗೂ ನಗದನ್ನು ಬಹುಮಾನವಾಗಿ ನೀಡಲಾಗುವುದು. ಆಸಕ್ತರು 15-07-2026ರ ಮೊದಲು ಕಥೆಗಳು ತಲುಪುವಂತೆ ಅಂಚೆಯ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಸಂಚಾಲಕರು, ಧನ್ಯಶ್ರೀ ಸರಳಿ, ಅಶ್ವಿನಿ ಸ್ಟುಡಿಯೋ, ಬಸ್ ತಂಗುದಾಣದ ಮುಂಭಾಗ, ಬದಿಯಡ್ಕ, ವಯಾ ಪೆರಡಾಲ - 671551, ಕಾಸರಗೋಡು ಜಿಲ್ಲೆ, ಕೇರಳ. ಹೆಚ್ಚಿನ ಮಾಹಿತಿಗೆ 9495132198 ಸಂಪರ್ಕಿಸಬಹುದು.

ಔತಣ ಕೂಟದ ವೇಳೆ ಪಟಾಕಿ ಸಿಡಿಸಿದ್ದ ಯುವಕರ ಮೇಲೆ ಹಲ್ಲೆ: ಪ್ರಕರಣ ದಾಖಲು

ಕಾಸರಗೋಡು: ಔತಣ ಕೂಟದ ವೇಳೆ ಪಟಾಕಿ ಸಿಡಿಸಿದ ದ್ವೇಷದಿಂದ ಇಬ್ಬರು ಯುವಕರ ಮೇಲೆ ಹಲ್ಲೆ ನಡೆಸಲಾಗಿದ್ದು, ಕಾಸರಗೋಡು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪೆರಿಯಡ್ಕ ಶಿರಿಬಾಗಿಲು ಕಾಜಾನಗರದ ಮೊಹಮ್ಮದ್ ಸಜೀರ್ ಅಬ್ದುಲ್ಲ (18) ಮತ್ತು ಎರಿಯಾಲ್‌ನ ಅಫಾನ್ (20) ಎಂಬವರು ಹಲ್ಲೆಗೊಳಗಾಗಿದ್ದು, ಅವರು ನೀಡಿದ ದೂರಿನಂತೆ ಎರಿಯಾಲ್‌ನ ಅಬ್ದುಲ್ ಅಫಾನ್ ಮತ್ತು ಮೊಹಮ್ಮದ್ ಅಜ್ಮಲ್ ಎಂಬವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮೇ 30ರಂದು ರಾತ್ರಿ ಎರಿಯಾಲ್ ಬಳಿಯ ಮನೆಯೊಂದರಲ್ಲಿ ಏರ್ಪಡಿಸಲಾಗಿದ್ದ ಔತಣ ಕೂಟದಲ್ಲಿ ಪಟಾಕಿ ಸಿಡಿಸಿದ ದ್ವೇಷದಿಂದ ಆರೋಪಿಗಳು ಸೋಡಾ ಬಾಟಲಿಯಿಂದ ಹೊಡೆದು ಹಾಗೂ ಇರಿದು ಗಾಯಗೊಳಿಸಿರುವುದಾಗಿ ಪೊಲೀಸರಿಗೆ ನೀಡಿದ ದೂರಿನಲ್ಲಿ ಗಾಯಾಳುಗಳು ತಿಳಿಸಿದ್ದಾರೆ.

ಮದ್ಯ ಸಾಗಾಟದ ಕಾರು ಚರಂಡಿಗೆ: ಚಾಲಕ ಸೆರೆ

ಮಂಜೇಶ್ವರ: ಕರ್ನಾಟಕದಿಂದ ಮದ್ಯ ಸಾಗಿಸುತ್ತಿದ್ದ ಕಾರು ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಯಲ್ಲಿ ಚರಂಡಿಗಾಗಿ ತೆಗೆದ ಹೊಂಡಕ್ಕೆ ಬಿದ್ದು ಅಪಘಾತಕ್ಕೀಡಾಗಿದೆ. ವಿಷಯ ತಿಳಿದು ಅಲ್ಲಿಗೆ ಆಗಮಿಸಿದ ಪೊಲೀಸರು ಚಾಲಕನನ್ನು ಸೆರೆಹಿಡಿದು ಕೇಸು ದಾಖಲಿಸಿದ್ದಾರೆ. ಸೋಮವಾರ ರಾತ್ರಿ 11.20ರ ವೇಳೆ ಉಪ್ಪಳ ಗೇಟ್ ಬಳಿ ಈ ಘಟನೆ ನಡೆದಿದೆ. ಕಾರಿನಲ್ಲಿ ಕರ್ನಾಟಕ ನಿರ್ಮಿತ 180 ಎಂಎಲ್‌ನ 1483 ಬಾಟ್ಲಿ ಮದ್ಯ, 90 ಎಂಎಲ್‌ನ 763 ಬಾಟ್ಲಿ ಮದ್ಯ ಪತ್ತೆಯಾಗಿದೆ. ಈ ಸಂಬಂಧ ಕಾರು ಚಾಲಕ, ಕುಳೂರು ಚಾರ್ಲ ಕೆಮ್ಮಜಲು ನಿವಾಸಿ ಪ್ರಜ್ವಲ್ (25) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಅಪಘಾತದ ಸುದ್ದಿ ತಿಳಿದು ಮಂಜೇಶ್ವರ ಪೊಲೀಸ್ ಠಾಣೆಯ ಎಸ್‌ಐ ಉಮೇಶ್ ಕೆ.ಆರ್. ನೇತೃತ್ವದ ಪೊಲೀಸರು ತಕ್ಷಣ ಸ್ಥಳಕ್ಕೆ ತೆರಳಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದರು. ಕಾರನ್ನು ಕ್ರೇನ್ ಬಳಸಿ ಮೇಲಕ್ಕೆತ್ತಲಾಯಿತು. ನಂತರ ಕಾರಿನೊಳಗೆ ಪರಿಶೀಲಿಸಿದಾಗ ಮದ್ಯ ಪತ್ತೆಯಾಯಿತು. ಉಪ್ಪಳ ಹಾಗೂ ಆಸುಪಾಸಿನ ಭಾಗಗಳಲ್ಲಿ ಮಾರಾಟಗೈಯ್ಯಲು ಮದ್ಯ ಸಾಗಿಸಲಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಮೀನುಗಾರಿಕೆ ನಿಷೇಧ

ಮಡಿಕೇರಿ: ಮುಂಗಾರು ಆರಂಭದ ಅವಧಿಯಲ್ಲಿ ಮೀನುಗಳ ವಂಶಾಭಿವೃದ್ಧಿ ಚಟುವಟಿಕೆಗಳು ನಡೆಯುವುದರಿಂದ ಜೂ. 1ರಿಂದ ಜು. 30ರವರೆಗೆ ಜಿಲ್ಲೆಯ ಸಾರ್ವಜನಿಕರು ಹಾಗೂ ಮೀನುಗಾರರು ಕೆರೆಗಳು, ಜಲಾಶಯಗಳು ತೊರೆಗಳು, ಅಳಿವೆಗಳು ಮತ್ತು ನದಿಗಳಲ್ಲಿ ಮೀನುಗಳನ್ನು ಹಿಡಿಯದೆ ಅವುಗಳ ಸಂತಾನ ಅಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸಿಕೊಟ್ಟು ಮೀನಿನ ಸ್ಥಳೀಯ ತಳಿಗಳ ಸಂರಕ್ಷಣೆಯಲ್ಲಿ ಇಲಾಖೆಯೊಂದಿಗೆ ಸಹಕರಿಸಬೇಕೆಂದು ಮೀನುಗಾರಿಕೆ ಉಪ ನಿರ್ದೇಶಕ ಸಿ.ಎಸ್.ಸಚಿನ್ ಅವರು ಕೋರಿದ್ದಾರೆ.



ಪ್ರಮಾಣವಚನ ಸಮಾರಂಭದಲ್ಲಿ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಭೇಟಿಯಾಗಿ ಪ್ರಸಾದ ನೀಡಿ ಹರಸಿದರು.

ರಾಷ್ಟ್ರೀಯ ಹೆದ್ದಾರಿ 66ರ ತೆಕ್ಕಟ್ಟೆ ಜಂಕ್ಷನ್ ಸಮೀಪ ಭೀಕರ ರಸ್ತೆ ಅಪಘಾತ

ಪಿಕಪ್ ಡಿಕ್ಕಿಯಾಗಿ ಬೈಕ್ ಸವಾರ ಸಾವು

ಕೋಟ: ರಾಷ್ಟ್ರೀಯ ಹೆದ್ದಾರಿ 66ರ ತೆಕ್ಕಟ್ಟೆ ಜಂಕ್ಷನ್ ಸಮೀಪ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಯುವಕ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ದುರ್ಘಟನೆ ಮಂಗಳವಾರ ರಾತ್ರಿ ನಡೆದಿದೆ.

ಮೃತರನ್ನು ಬೈಕ್ ಸವಾರ ಗಣೇಶ ಪೂಜಾರಿ ಎಂದು ಗುರುತಿಸಲಾಗಿದೆ. ಮಲ್ಯಾಡಿ ರಸ್ತೆ ಕಡೆಯಿಂದ ತೆಕ್ಕಟ್ಟೆ ಜಂಕ್ಷನ್ ಮೂಲಕ ಕುಂದಾಪುರ ಕಡೆಗೆ ತೆರಳುತ್ತಿದ್ದರು. ಇದೇ ವೇಳೆ ಉಡುಪಿ ಕಡೆಯಿಂದ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಪಿಕಪ್ ವಾಹನವನ್ನು ಚಾಲನೆ ಮಾಡುತ್ತಿದ್ದ ವಿಜಯ ಎಂಬವರು ರಸ್ತೆಯ ಎಡಭಾಗಕ್ಕೆ ಬಂದಿದ್ದು, ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ ಎನ್ನಲಾಗಿದೆ.



ಅಪಘಾತದ ತೀವ್ರತೆಗೆ ಬೈಕ್ ಸಮೇತ ರಸ್ತೆಗೆ ಬಿದ್ದ ಗಣೇಶ ಪೂಜಾರಿ ಅವರ ತಲೆಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಅವರು ಅಸ್ವಸ್ಥ ಸ್ಥಿತಿಗೆ ತಲುಪಿದ್ದರು. ಸ್ಥಳೀಯರು ಹಾಗೂ ಪರಿಚಿತರು ಅವರನ್ನು ತಕ್ಷಣ ಚಿಕಿತ್ಸೆಗಾಗಿ ಕೋಟ ಸಮೀಪದ ಎನ್.ಆರ್. ಆಚಾರ್ಯ ಆಸ್ಪತ್ರೆಗೆ ದಾಖಲಿಸಿದರು.

> ಪಿಕಪ್ ವಾಹನವನ್ನು ಚಾಲನೆ ಮಾಡುತ್ತಿದ್ದ ವಿಜಯ ರಸ್ತೆಯ ಎಡಭಾಗಕ್ಕೆ ಬಂದಿದ್ದು, ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ

ಆದರೆ ಗಾಯದ ತೀವ್ರತೆಯನ್ನು ಗಮನಿಸಿದ ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಉಡುಪಿಯ ಆಸ್ಪತ್ರೆಗೆ ಕರೆದೊಯ್ಯುವಂತೆ ಸಲಹೆ ನೀಡಿದ್ದರು. ಅದರಂತೆ ಅವರನ್ನು ಆದರ್ಶ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಪರೀಕ್ಷಿಸಿದ ವೈದ್ಯರು ಗಣೇಶ್ ಮೃತಪಟ್ಟಿರುವುದಾಗಿ ಘೋಷಿಸಿದರು.

ಘಟನೆಗೆ ಸಂಬಂಧಿಸಿದಂತೆ ಕುಂಭಾಶಿ ಗ್ರಾಮ ನಿವಾಸಿ ರವಿ ನೀಡಿದ ದೂರಿನ ಮೇರೆಗೆ ಕೋಟ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 94/2026 ದಾಖಲಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆ ಕಲಂ 281 ಹಾಗೂ 106ರಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅಪಘಾತದ ನಿಖರ ಕಾರಣಗಳ ಕುರಿತು ತನಿಖೆ ನಡೆಸುತ್ತಿದ್ದಾರೆ.

489 ಮಂದಿ ನೇಮಕ | ಮಳೆಗಾಲ ಎದುರಿಸಲು ಮೆಸ್ಕಾಂ ಸಿದ್ಧತೆ

ವಿಶೇಷ ಕಾರ್ಯಪಡೆ ರಚನೆ

ಮಂಗಳೂರು: ಮಳೆಗಾಲದಲ್ಲಿ ಎದುರಾಗುವ ವಿದ್ಯುತ್ ಅವಘಡ ತಪ್ಪಿಸಲು ಮೆಸ್ಕಾಂ ಸರ್ವ ಸಿದ್ಧತೆ ನಡೆಸಿದೆ. ಈಗಾಗಲೇ ವಿಭಾಗವಾರು ತುರ್ತು ನಿರ್ವಹಣಾ ಕೆಲಸಗಳನ್ನು ನಿರ್ವಹಿಸಲು ಮೆಸ್ಕಾಂ ವ್ಯಾಪ್ತಿಯ 4 ಜಿಲ್ಲೆಗಳ 14 ವಿಭಾಗಗಳಿಗೆ ಒಟ್ಟು 489 ಮಂದಿಯ ಕಾರ್ಯಪಡೆಯನ್ನು ರಚಿಸಲಾಗಿದೆ.

ಒಟ್ಟು 62 ವಾಹನಗಳನ್ನು ಹೆಚ್ಚುವರಿಯಾಗಿ ವ್ಯವಸ್ಥೆಗೊಳಿಸಲಾಗಿದ್ದು, ದೂರವಾಣಿ ಕರೆಗಳ ನಿರ್ವಹಣೆಗಾಗಿ 23 ಮಂದಿಯ ವಿಶೇಷ ಪಡೆಯನ್ನು ಸಿದ್ಧಗೊಳಿಸಲಾಗಿದೆ.

ಎಲ್ಲೆಲ್ಲಿ ಎಷ್ಟು?

ತುರ್ತು ಸಂದರ್ಭಗಳಲ್ಲಿ ಸ್ಪಂದಿಸಲು ಮಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಅತ್ತಾವರ-12 ಮಂದಿಯ ಕಾರ್ಯಪಡೆ, 6 ವಾಹನಗಳು, ಕಾವೂರು-36 ಮಂದಿ, 8 ವಾಹನಗಳು. ಪುತ್ತೂರು- 48 ಮಂದಿಯ ಕಾರ್ಯಪಡೆ, 8 ವಾಹನಗಳು. ಬಂಟ್ವಾಳ - 50 ಮಂದಿಯ ಕಾರ್ಯಪಡೆ, 7 ವಾಹನಗಳು.

ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ, ಉಡುಪಿ-55 ಮಂದಿಯ ಕಾರ್ಯಪಡೆ, 5 ವಾಹನಗಳು, ಕಾರ್ಕಳ- 24 ಮಂದಿಯ ಕಾರ್ಯಪಡೆ, 4 ವಾಹನಗಳು, ಕುಂದಾಪುರ - 48 ಮಂದಿಯ ಕಾರ್ಯಪಡೆ. ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ, ಶಿವಮೊಗ್ಗ-33 ಮಂದಿಯ ಕಾರ್ಯಪಡೆ, 1 ವಾಹನ, ಶಿಕಾರಿಪುರ- 24 ಮಂದಿಯ ಕಾರ್ಯಪಡೆ, 3 ವಾಹನಗಳು, ಭದ್ರಾವತಿ-20 ಮಂದಿಯ ಕಾರ್ಯಪಡೆ, 2 ವಾಹನಗಳು, ಸಾಗರ- 34 ಮಂದಿಯ ಕಾರ್ಯಪಡೆ, 6 ವಾಹನಗಳು.

ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ, ಚಿಕ್ಕಮಗಳೂರು-40 ಮಂದಿಯ ಕಾರ್ಯಪಡೆ, 4 ವಾಹನಗಳು, ಕೊಪ್ಪ-41 ಮಂದಿಯ ಕಾರ್ಯಪಡೆ, 3 ವಾಹನಗಳು, ಕಡೂರು 34 ಮಂದಿಯ ಕಾರ್ಯಪಡೆ, ಹಾಗೂ 7 ವಾಹನಗಳನ್ನು ವ್ಯವಸ್ಥೆಗೊಳಿಸಲಾಗಿದೆ.

ವಿದ್ಯುತ್ ಸರಬರಾಜು ವ್ಯವಸ್ಥೆಗೆ ಅಡಚಣೆಯಾಗುವ ಮತ್ತು ಅಪಾಯಕಾರಿಯಾಗಿರುವ ಮರ/ಕೊಂಬೆಗಳನ್ನು ಕತ್ತರಿಸುವ ಕೆಲಸ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿದ್ದು, ಹಲವು ಕಡೆ ಕೆಲಸ ಪ್ರಗತಿಯಲ್ಲಿದೆ. ಅಪಾಯಕಾರಿ ಸ್ಥಿತಿಯಲ್ಲಿ ಕಂಡುಬರುವ ವಿದ್ಯುತ್ ಕಂಬಗಳು ಮತ್ತು ತಂತಿಗಳನ್ನು ಸರಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ಮೆಸ್ಕಾಂ ತಿಳಿಸಿದೆ.





ಮಾಹಿತಿ ನೀಡಬಹುದು

ಮಳೆಗಾಲದಲ್ಲಿ ಮೆಸ್ಕಾಂ ಸಂಬಂಧಿತ ದೂರುಗಳಿದ್ದರೆ ಸಾರ್ವಜನಿಕರು ಮಾಹಿತಿ 24X7 ಕೇಂದ್ರೀಯ ಸೇವಾ ಕೇಂದ್ರವನ್ನು ಮೆಸ್ಕಾಂ ಸಹಾಯವಾಣಿ ಸಂಖ್ಯೆ 1912 ಮೂಲಕ ಸಂಪರ್ಕಿಸಬಹುದು. ಅಲ್ಲದೇ ಅಪಾಯಕಾರಿ ಮತ್ತು ತುರ್ತು ಸಂದರ್ಭಗಳಲ್ಲಿ ದೂರವಾಣಿ ಸಂಖ್ಯೆ 8277883388 ಮತ್ತು 0824-2950953 ನ್ನು ಸಂಪರ್ಕಿಸಬಹುದು. ಅಲ್ಲದೆ ಅಪಾಯಕಾರಿ ಸ್ಥಿತಿಯಲ್ಲಿರುವ ವಿದ್ಯುತ್ ಕಂಬಗಳು ಮತ್ತು ತಂತಿಗಳು ಕಂಡುಬಂದಲ್ಲಿ ಗ್ರಾಹಕರು ಮೆಸ್ಕಾಂಗೆ ಮಾಹಿತಿ ನೀಡುವಂತೆ ಮೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಮನವಿ ಮಾಡಿದ್ದಾರೆ.

> ತುರ್ತು ನಿರ್ವಹಣಾ ಕೆಲಸಗಳನ್ನು ನಿರ್ವಹಿಸಲು ಮೆಸ್ಕಾಂ ವ್ಯಾಪ್ತಿಯ 4 ಜಿಲ್ಲೆಗಳ 14 ವಿಭಾಗಗಳಿಗೆ ಒಟ್ಟು 489 ಮಂದಿಯ ಕಾರ್ಯಪಡೆಯನ್ನು ರಚಿಸಲಾಗಿದೆ.

> ಅಪಾಯಕಾರಿಯಾಗಿರುವ ಮರ/ಕೊಂಬೆಗಳನ್ನು ಕತ್ತರಿಸುವ ಕೆಲಸ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿದ್ದು, ಹಲವು ಕಡೆ ಕೆಲಸ ಪ್ರಗತಿಯಲ್ಲಿದೆ.

ಜೂ.5-7: ಕಿಲ್ಲೆ ಮೈದಾನದಲ್ಲಿ ಹಲಸು ಮತ್ತು ಹಣ್ಣುಗಳ ಮೇಳ

ಪುತ್ತೂರು: ಪುತ್ತೂರು ನವತೇಜ ಟ್ರಸ್ಟ್ ನೇತೃತ್ವದಲ್ಲಿ ಮುಳಿಯ ಮ್ಯಾನೇಜ್ಡ್ ಫಾರ್ಮ್ ಲ್ಯಾಂಡ್ ಪ್ರಾಯೋಜಕತ್ವದಲ್ಲಿ ಹಲಸು ಮತ್ತು ಹಣ್ಣುಗಳ ಮೇಳವು ಹಣ್ಣುಗಳ ಪ್ರದರ್ಶನ, ಮೌಲ್ಯವರ್ಧಿತ ಉತ್ಪನ್ನ, ಕೃಷಿ ಪರಿಕರಗಳ ಮಳಿಗೆಗಳೊಂದಿಗೆ ಜೂ. 5ರಿಂದ 7ರ ವರೆಗೆ ಪುತ್ತೂರಿನ ಕಿಲ್ಲೆ ಮೈದಾನದಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಅನಂತಪ್ರಸಾದ್ ನೈತ್ತಡ್ಕ ತಿಳಿಸಿದರು.

ಅವರು ಪುತ್ತೂರಿನಲ್ಲಿ ಬುಧವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಕಳೆದ 7 ಆವೃತ್ತಿಗಳಲ್ಲಿ ಮೇಳವು ಯಶಸ್ವಿಯಾಗಿ ನಡೆದಿದ್ದು, ಪ್ರಸ್ತುತ 8ನೇ ಆವೃತ್ತಿಯ ಮೇಳ ನಡೆಯುತ್ತಿದೆ. ಜೂ. 5ರಂದು ಬೆಳಗ್ಗೆ 9.30ಕ್ಕೆ ಪುತ್ತೂರಿನ ವೈದ್ಯ ಡಾ.ಕೆ. ರಮೇಶ್ ಭಟ್ ಮಳಿಗೆಗಳನ್ನು ಉದ್ಘಾಟಿಸಲಿದ್ದು, ಉದ್ಯಮಿ ರೂಪೇಶ್ ಶೇಟ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಂಜೆ 4ಕ್ಕೆ ನವತೇಜ ಟ್ರಸ್ಟ್ ಅಧ್ಯಕ್ಷ ಅನಂತಪ್ರಸಾದ್ ನೈತ್ತಡ್ಕ ಅವರ ಅಧ್ಯಕ್ಷತೆಯಲ್ಲಿ ಮೇಳವನ್ನು ಕ್ಯಾಂಪ್ಕೋ ನಿರ್ದೇಶಕ ಮುರಳಿಕೃಷ್ಣ ಚಳ್ಳಂಗಾರು ಉದ್ಘಾಟಿಸಲಿದ್ದಾರೆ. ಪರಿಸರ-ಜಲ ತಜ್ಞ ಶ್ರೀಪಡ್ರೆ ದಿಕ್ಸೂಚಿ ಭಾಷಣ ಮಾಡಲಿದ್ದು, ಪುತ್ತೂರು ಗೇರು ಸಂಶೋಧನಾಲಯ ನಿರ್ದೇಶನಾಲಯದ ವಿಜ್ಞಾನಿ ಡಾ. ವೀಣಾ ಶುಭಹಾರೈಸಲಿದ್ದಾರೆ. ಈ ಸಂದರ್ಭದಲ್ಲಿ ಡಾ. ನರೇಂದ್ರ ರೈ ದೇರ್ಲ ಅವರ 'ಹಲಸಿನಲ್ಲಿ ಹಸಿರು ಕ್ರಾಂತಿ' ಕೃತಿ ಬಿಡುಗಡೆಗೊಳ್ಳಲಿದೆ ಎಂದರು.

ಜೂ.6ರಂದು ಬೆಳಗ್ಗೆ 11ಕ್ಕೆ ಹಣ್ಣುಗಳೊಂದಿಗೆ ಮಾತುಕತೆ ವಿಚಾರಗೋಷ್ಠಿ ನಡೆಯಲಿದ್ದು, ಮುಳಿಯ ಮ್ಯಾನೇಜ್ಡ್ ಫಾರ್ಮ್ ಲ್ಯಾಂಡ್ ಮುಖ್ಯಸ್ಥ ಕೇಶವ ಪ್ರಸಾದ್ ಮುಳಿಯ, ಕೊಕ್ಕೋ-ಕಾಫಿ ಬೆಳೆಗಾರ ಚಂದ್ರಶೇಖರ್ ತಾಳ್ತಜೆ, ಮೂಲ್ಕಿಯ ಗೇರು ಹಣ್ಣಿನ ಮೌಲ್ಯವರ್ಧಕ ಕೆನ್ಯೂಟ್ ಅರಾನ್ಹಾ ಅವರು ವಿಷಯ ಪ್ರಸ್ತುತಿ ಮಾಡಲಿದ್ದಾರೆ. ಜೂ. 7ರಂದು ಬೆಳಗ್ಗೆ 10ಕ್ಕೆ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಹಲಸು-ಮಾವು-ಕೃಷಿ ರಸಪ್ರಶ್ನೆ ನಡೆಯಲಿದ್ದು, ಬಳಿಕ ಹಲಸು ವೈವಿಧ್ಯ-ವಿವಿಧ ಸ್ಪರ್ಧೆಗಳು ನಡೆಯಲಿದೆ.

ಸಂಜೆ 4ಕ್ಕೆ ಕೇಶವ ಪ್ರಸಾದ್ ಮುಳಿಯ ನೇತೃತ್ವದಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ನವತೇಜ ಟ್ರಸ್ಟಿನ ವೇಣುಗೋಪಾಲ್ ಅವರು ಸಮಾಪನ ವರದಿ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ಜೇಸಿಐ ವಲಯ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ, ಪುತ್ತೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಧಾಕರ ಸುವರ್ಣ, ಪುತ್ತೂರು ಗ್ರಾಮಜನ್ಯ ರೈತೋತ್ಪಾದಕ ಸಂಸ್ಥೆಯ ನಿರ್ದೇಶಕ ನಿರಂಜನ್ ಪೋಳ್ಯ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ನವತೇಜ ಟ್ರಸ್ಟಿನ ವೇಣುಗೋಪಾಲ್, ಸುಹಾಸ ಮರಿಕೆ, ಮುಳಿಯ ಸಂಸ್ಥೆಯ ರಜತ್ ಉಪಸ್ಥಿತರಿದ್ದರು.

ಭಾರತೀಯ ನೌಕಾಪಡೆಯ ಸಬ್ ಲೆಫ್ಟಿನೆಂಟ್ ಅಧಿಕಾರಿಯಾಗಿ ನಿಶೆಲ್ ಫ್ಲೋರಾ ಆಲ್ಮೆಡಾ



ಮಂಗಳೂರು: ಭಾರತೀಯ ನೌಕಾಪಡೆಯಲ್ಲಿ ಸಬ್ ಲೆಫ್ಟಿನೆಂಟ್ ಅಧಿಕಾರಿಯಾಗಿ ನಿಯೋಜನೆಗೊಂಡ ಕುಲಶೇಖರ ಕೊಂಗೂರು ನಿವಾಸಿ ನಿಶೆಲ್ ಫ್ಲೋರಾ ಆಲ್ಮೆಡಾ ಅವರ ಮನೆಗೆ ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಿ. ವೇದವ್ಯಾಸ ಕಾಮತ್ ಅವರು ಭೇಟಿ ನೀಡಿ ವಿಶೇಷವಾಗಿ ಅಭಿನಂದಿಸಿದರು.

ನವೀನ್ ಆಲ್ಮೆಡಾ ಹಾಗೂ ಕ್ರಿಸ್ ಎವರ್ಟ್ ಡಿಸೋಜ ದಂಪತಿಗಳ ಪುತ್ರಿ, ಕುಮಾರಿ ನಿಶೆಲ್ ಫ್ಲೋರಾ ಆಲ್ಮೆಡಾ ಅವರು ಸೇನೆಗೆ ಆಯ್ಕೆಯಾಗಿರುವುದು ಇಡೀ ನಮ್ಮ ತುಳುನಾಡಿಗೆ ಹೆಮ್ಮೆ ಹಾಗೂ ಸಂತಸ ತಂದಿದೆ. ಇವರ ಈ ಸಾಧನೆಯು ಯುವ ಜನಾಂಗಕ್ಕೆ ಪ್ರೇರಣೆಯಾಗಿದೆ. ಕೊಂಗೂರಿನ ನಾಗರೀಕ ಬಂಧುಗಳು ಪ್ರೀತಿ ಹಾಗೂ ಹೆಮ್ಮೆಯಿಂದ ಇವರನ್ನು ಬರಮಾಡಿಕೊಂಡಿರುವುದು ಸೇನೆಗೆ ನಮ್ಮ ಜನರು ಕೊಡುವ ಗೌರವಕ್ಕೆ ಸಾಕ್ಷಿ. ಅವರಿಗೆ ಭಾರತ ಮಾತೆಯ ಸೇವೆಯಲ್ಲಿ ಅದ್ಭುತ ಅವಕಾಶಗಳು ಒದಗಿ ಬರಲೆಂದು ಹಾರೈಸುತ್ತೇನೆ ಎಂದು ಶಾಸಕರು ಹೇಳಿದರು.

> ಕೊಂಗೂರಿನ ನಾಗರೀಕ ಬಂಧುಗಳು ಪ್ರೀತಿ ಹಾಗೂ ಹೆಮ್ಮೆಯಿಂದ ಇವರನ್ನು ಬರಮಾಡಿಕೊಂಡಿರುವುದು ಸೇನೆಗೆ ನಮ್ಮ ಜನರು ಕೊಡುವ ಗೌರವಕ್ಕೆ ಸಾಕ್ಷಿ.

ಈ ಸಂದರ್ಭದಲ್ಲಿ ಮನಪಾ ನಿಕಟಪೂರ್ವ ಸದಸ್ಯ ಕಿಶೋರ್ ಕೊಟ್ಟಾರಿ, ಬಿಜೆಪಿ ಪ್ರಮುಖರಾದ ರಮೇಶ್ ಹೆಗ್ಡೆ, ಪ್ರವೀಣ್ ನಿಡ್ಡೇಲ್, ಮಣಿ, ತೇಜಸ್ ಕೊಂಗೂರು, ಭಾಸ್ಕರ್, ಚೇತನ್, ಮೊದಲಾದವರು ಉಪಸ್ಥಿತರಿದ್ದರು.

ಕೇರಳ ರಾಜ್ಯದಲ್ಲಿ ಅಪಾಯಕಾರಿಯಾದ ನಿಷ್ಕ್ರಿಯ ಶಿಲಾ ಕೊಳಗಳು


ತಿಂಗಳೊಳಗೆ ವಿವರಣೆ ಸಲ್ಲಿಸುವಂತೆ ನಿರ್ದೇಶನ

ಕಾಸರಗೋಡು: ಕೇರಳ ರಾಜ್ಯದ ವಿವಿಧ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಜಲಮೂಲಗಳಾಗಿ ಮಾರ್ಪಟ್ಟಿರುವ ನಿಷ್ಕ್ರಿಯ ಶಿಲಾ ಕೊಳಗಳಿಂದ ಅಪಾಯವನ್ನು ತಪ್ಪಿಸುವ ನಿಟ್ಟಿನಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಒಂದು ತಿಂಗಳೊಳಗೆ ಸಮಗ್ರ ವಿವರಣೆಯನ್ನು ಸಲ್ಲಿಸುವಂತೆ ಮಾನವ ಹಕ್ಕುಗಳ ಆಯೋಗವು ನಿರ್ದೇಶಿಸಿದೆ.

ಜಲಮೂಲಗಳಾಗಿ ಮಾರ್ಪಟ್ಟಿರುವ ನಿಷ್ಕ್ರಿಯ ಶಿಲಾ ಕೊಳಗಳ ಸುತ್ತಲೂ ಬ್ಯಾರಿಕೇಡ್‌ಗಳಿಂದ ಬಂದ್ ಮಾಡಲು ಮತ್ತು ಅಪಾಯದ ಎಚ್ಚರಿಕೆ ಫಲಕಗಳನ್ನು ಸ್ಥಾಪಿಸಲು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಅಲೆಕ್ಸಾಂಡರ್ ಥೋಮಸ್ ಅವರು ಗಣಿಗಾರಿಕೆ ಮತ್ತು ಭೂವಿಜ್ಞಾನ ನಿರ್ದೇಶಕರಿಗೆ ಸೂಚಿಸಿದ್ದಾರೆ.

ಈ ಕೆಲಸವನ್ನು ಆಯಾ ಕಲ್ಲು ಕೋರೆ ಮಾಲಕರು ಅಥವಾ ಕೋರೆ ನಿರ್ವಾಹಕರ ಮೇಲೆ ಹೊರಿಸುವ ಅಂಗವಾಗಿ ಶಾಸನವನ್ನು ಜಾರಿಗೆ ತರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಬೇಕು ಎಂದು ತಿಳಿಸಲಾಗಿದೆ. ಕೇರಳ ಮೈನರ್ ಮಿನರಲ್ಸ್ ರಿಯಾಯಿತಿ ನಿಯಮಗಳನ್ನು ತಿದ್ದುಪಡಿ ಮಾಡುವ ಸಾಧ್ಯತೆಗಳನ್ನು ವರದಿಯಲ್ಲಿ ನಮೂದಿಸಬೇಕು ಎಂದು ಮಾನವ ಹಕ್ಕುಗಳ ಆಯೋಗ ಹೇಳಿದೆ.

ಎರ್ನಾಕುಳಂನ ಪೆಟ್ಟಿಮಲೈನಲ್ಲಿ ಬಳಕೆಯಲ್ಲಿಲ್ಲದ ಬಂಡೆಯ ನಡುವಿನ ಕೊಳದಲ್ಲಿ ಜಾಹೀರಾತು ಚಿತ್ರೀಕರಿಸಲು ಬಂದ ತಂಡದ ಯುವ ಮಾಡೆಲ್ ಮುಳುಗಿ ಸಾವನ್ನಪ್ಪಿದ ಘಟನೆಯನ್ನು ಆಧರಿಸಿ ರಾಜ್ಯ ಮಾನವ ಹಕ್ಕುಗಳ ಆಯೋಗವು ಮಧ್ಯಪ್ರವೇಶಿಸಿದೆ. ಉತ್ತರ ಭಾರತದ ಈ ಯುವ ಮಾಡೆಲ್ ಮೃತಪಟ್ಟ ಘಟನೆಯ ಕುರಿತು ಪತ್ರಿಕಾ ವರದಿಯ ಆಧಾರದ ಮೇಲೆ ಮಾನವ ಹಕ್ಕುಗಳ ಆಯೋಗವು ಸ್ವಯಂಪ್ರೇರಿತ ಪ್ರಕರಣವನ್ನು ದಾಖಲಿಸಿತ್ತು.



ಮಾಡೆಲ್ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಅಪಘಾತದ ವಿಷಯದ ಬಗ್ಗೆ ಎರ್ನಾಕುಳಂ ಜಿಲ್ಲಾಧಿಕಾರಿ ಮಟ್ಟದಲ್ಲಿ ತನಿಖೆ ನಡೆಸಬೇಕೆಂದು ನ್ಯಾಯಮೂರ್ತಿ ಅಲೆಕ್ಸಾಂಡರ್ ಥೋಮಸ್ ನಿರ್ದೇಶಿಸಿದ್ದಾರೆ. ತನಿಖೆಗೆ ಎಆರ್‌ಡಿಎಯನ್ನು ನಿಯೋಜಿಸಬೇಕು. ಅಗ್ನಿಶಾಮಕ ಇಲಾಖೆ ಮತ್ತು ಎಸ್‌ಎಚ್‌ಒ ಸಹಯೋಗದೊಂದಿಗೆ ತನಿಖೆ ನಡೆಸಬೇಕು ಎಂದು ತಿಳಿಸಲಾಗಿದೆ.

ತನಿಖಾ ವರದಿಯೊಂದಿಗೆ ಒಂದು ತಿಂಗಳೊಳಗೆ ಜಿಲ್ಲಾಧಿಕಾರಿ ಆಯೋಗಕ್ಕೆ ವಿವರಣೆಯನ್ನು ಸಲ್ಲಿಸಬೇಕೆಂದು ರಾಜ್ಯ ಮಾನವ ಹಕ್ಕುಗಳ ಆಯೋಗವು ಶಿಫಾರಸು ಮಾಡಿದೆ. ಮುಝೂ ಗ್ರಾಮ ಪಂಚಾಯತ್ ಕಾರ್ಯದರ್ಶಿಯವರು ಪ್ರತ್ಯೇಕ ವಿವರಣೆ ಸಲ್ಲಿಸುವಂತೆಯೂ ಕೇಳಲಾಗಿದೆ. ಅಲ್ಲದೆ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಕೈಗಾರಿಕಾ ಇಲಾಖೆಯ ನಿರ್ದೇಶಕರು ಪ್ರತ್ಯೇಕ ವರದಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಜುಲೈ 14 ರಂದು ಎರ್ನಾಕುಳಂನ ಪಟ್ಟಡಿಪಾಲಂ ವಿಶ್ರಾಂತಿ ಗೃಹದಲ್ಲಿ ನಡೆಯಲಿರುವ ಸಭೆಯಲ್ಲಿ ಸರಕಾರಿ ಪ್ರತಿನಿಧಿಗಳಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕರು ಮತ್ತು ಕೈಗಾರಿಕಾ ಇಲಾಖೆಯ ಅಧೀನ ಕಾರ್ಯದರ್ಶಿಗಳು ಹಾಜರಾಗಬೇಕೆಂದು ರಾಜ್ಯ ಮಾನವ ಹಕ್ಕುಗಳ ಆಯೋಗವು ನಿರ್ದೇಶಿಸಿದೆ.

ರಾಜ್ಯ ಮಟ್ಟದ ಮಹಿಳಾ ಮದ್ಯವರ್ಜನ ಶಿಬಿರದ ಪೂರ್ವಭಾವಿ ಸಮಾಲೋಚನಾ ಸಭೆ | ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಕರೆ

ಜು.4-13: ಮಹಿಳಾ ಮದ್ಯವರ್ಜನ ಶಿಬಿರ ಯಶಸ್ವಿಗೊಳಿಸಲು 'ಆಳ್ವಾಸ್ ಪುನರ್ಜನ್ಮ'

ಮೂಡುಬಿದಿರೆ: ಆಳ್ವಾಸ್ ಪುನರ್ಜನ್ಮ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ, ಬೆಳ್ತಂಗಡಿ ಇವರ ಸಂಯುಕ್ತ ಆಶ್ರಯದಲ್ಲಿ ಆಳ್ವಾಸ್ ಪುನರ್ಜನ್ಮ ಸಮಗ್ರ ವೈದ್ಯಕೀಯ ಚಿಕಿತ್ಸೆಯ ದುಶ್ಚಟ ನಿವಾರಣಾ ಕೇಂದ್ರದಲ್ಲಿ ಜುಲೈ 4ರಿಂದ 13ರವರೆಗೆ ನಡೆಯಲಿರುವ ರಾಜ್ಯ ಮಟ್ಟದ ಮಹಿಳಾ ಮದ್ಯವರ್ಜನ ಶಿಬಿರದ ಪೂರ್ವಭಾವಿ ಸಮಾಲೋಚನಾ ಸಭೆ ಮೂಡುಬಿದಿರೆಯಲ್ಲಿ ನಡೆಯಿತು.

ಸಭೆಯಲ್ಲಿ ಮಾತನಾಡಿದ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಪ್ರಾದೇಶಿಕ ನಿರ್ದೇಶಕ ವಿವೇಕ್ ವಿನ್ಸೆಂಟ್ ಪಾಯ್ಸ್ ಇತ್ತೀಚಿನ ದಿನಗಳಲ್ಲಿ ಮದ್ಯ, ಮಾದಕ ವಸ್ತುಗಳು ಹಾಗೂ ಇತರ ವ್ಯಸನಗಳ ಬಲೆಗೆ ಮಹಿಳೆಯರೂ ಸಿಲುಕುತ್ತಿರುವುದು ಆತಂಕಕಾರಿ ಬೆಳವಣಿಗೆ. ವ್ಯಸನವು ವ್ಯಕ್ತಿಯ ಆರೋಗ್ಯ, ಕುಟುಂಬದ ನೆಮ್ಮದಿ ಹಾಗೂ ಸಮಾಜದ ಸ್ವಾಸ್ಥ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಮಹಿಳೆ ದಾರಿ ತಪ್ಪಿದರೆ ಇಡೀ ಕುಟುಂಬವೇ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ. ಆದ್ದರಿಂದ ಮಹಿಳೆಯರಲ್ಲಿ ಜಾಗೃತಿ ಮೂಡಿಸಿ, ವ್ಯಸನಮುಕ್ತ ಬದುಕಿನತ್ತ ಕೊಂಡೊಯ್ಯುವ ಉದ್ದೇಶದಿಂದ ಈ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಶಿಬಿರದ ವಿಶೇಷತೆಗಳು

ಶಿಬಿರದಲ್ಲಿ ಮನೋವೈದ್ಯಕೀಯ, ಸ್ತ್ರೀರೋಗ, ದಂತ, ಶ್ವಾಸಕೋಶ, ನೇತ್ರ, ಚರ್ಮ, ನರರೋಗ, ಪೌಷ್ಟಿಕಾಂಶ ಸೇರಿದಂತೆ ವಿವಿಧ ವಿಭಾಗಗಳ ಸಮಗ್ರ ವೈದ್ಯಕೀಯ ತಪಾಸಣೆ ನಡೆಯಲಿದೆ. ಅಗತ್ಯವಿರುವವರಿಗೆ ಡಿಟಾಕ್ಸ್ ಹಾಗೂ ವ್ಯಸನಮುಕ್ತಿ ಚಿಕಿತ್ಸೆ, ಇತರ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆಯ ಜೊತೆಗೆ ವೈಯಕ್ತಿಕ ಸಮಾಲೋಚನೆ, ಮಾನಸಿಕ ಆರೋಗ್ಯ ಶಿಕ್ಷಣದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಯೋಗ, ಧ್ಯಾನ, ಪ್ರಕೃತಿ ಚಿಕಿತ್ಸೆ, ಆಯುರ್ವೇದ, ಹೋಮಿಯೋಪಥಿ ಚಿಕಿತ್ಸೆಗಳೊಂದಿಗೆ ಸಮಗ್ರ ಆರೋಗ್ಯ ಪುನಶ್ಚೇತನ ಕಾರ್ಯಕ್ರಮಗಳು ನಡೆಯಲಿವೆ. ಜೊತೆಗೆ ಹೊಲಿಗೆ, ಬ್ಯೂಟಿಷಿಯನ್ ಸೇರಿದಂತೆ ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿಗಳ ಪರಿಚಯಾತ್ಮಕ ಅಧಿವೇಶನಗಳನ್ನು ಆಯೋಜಿಸಲಾಗಿದ್ದು, ಮಹಿಳೆಯರ ಸ್ವಾವಲಂಬನೆಗೆ ಉತ್ತೇಜನ ನೀಡಲಾಗುವುದು. ಶಿಬಿರದ ಅವಧಿಯಲ್ಲಿ ಭಜನೆ, ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಒಳಾಂಗಣ ಕ್ರೀಡೆಗಳು, ವಿವಿಧ ಚಟುವಟಿಕೆಗಳು ಹಾಗೂ ಸ್ಪರ್ಧೆಗಳು ನಡೆಯಲಿವೆ. ಭಾಗವಹಿಸುವವರಿಗೆ ಆಹಾರ, ವಸತಿ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.



ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಆಳ್ವಾಸ್ ವೈದ್ಯಕೀಯ ಕಾಲೇಜಿನ ಡೀನ್ ಡಾ. ಮಹಾಬಲ ಶೆಟ್ಟಿ, ಮಹಿಳಾ ಮದ್ಯವರ್ಜನ ಶಿಬಿರದ ಯಶಸ್ಸಿನ ಪ್ರಮುಖ ಅಂಶಗಳಲ್ಲಿ ಗೌಪ್ಯತೆ ಅತ್ಯಂತ ಮಹತ್ವದ್ದಾಗಿದೆ. ವ್ಯಸನದ ಸಮಸ್ಯೆಯಿಂದ ಬಳಲುತ್ತಿರುವ ಅನೇಕ ಮಹಿಳೆಯರು ಸಾಮಾಜಿಕ ಕಳಂಕ, ಕುಟುಂಬದ ಒತ್ತಡ ಹಾಗೂ ಸಾರ್ವಜನಿಕ ಅಭಿಪ್ರಾಯದ ಭಯದಿಂದ ತಮ್ಮ ಸಮಸ್ಯೆಯನ್ನು ಬಹಿರಂಗಪಡಿಸಲು ಹಿಂಜರಿಯುತ್ತಾರೆ. ಇಂತಹ ಸಂದರ್ಭದಲ್ಲಿ ಶಿಬಿರಾರ್ಥಿಗಳ ವೈಯಕ್ತಿಕ ಮಾಹಿತಿ, ಆರೋಗ್ಯ ಸಂಬಂಧಿತ ವಿವರಗಳು ಹಾಗೂ ಸಮಾಲೋಚನಾ ಪ್ರಕ್ರಿಯೆಯಲ್ಲಿ ಹಂಚಿಕೊಳ್ಳುವ ವಿಷಯಗಳನ್ನು ಸಂಪೂರ್ಣ ಗೌಪ್ಯವಾಗಿ ಇಡಲಾಗುವುದು ಎಂದರು.

> ಡಾ. ಡಿ. ವಿರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಮೂಲಕ ಇದುವರೆಗೆ ಸುಮಾರು 1.5 ಲಕ್ಷಕ್ಕೂ ಅಧಿಕ ಮಂದಿ ವಿವಿಧ ವ್ಯಸನಗಳಿಂದ ಮುಕ್ತರಾಗಿದ್ದು, ಸಾವಿರಾರು ಕುಟುಂಬಗಳಲ್ಲಿ ಹೊಸ ಬದುಕಿನ ಆಶಾಕಿರಣ ಮೂಡಿದೆ. ಮಹಿಳೆಯರಿಗಾಗಿ ವಿಶೇಷವಾಗಿ ಆಯೋಜಿಸಲಾಗುತ್ತಿರುವ ಈ ಶಿಬಿರವು ಸಂಪೂರ್ಣ ವಸತಿ ಸಹಿತ ಪುನರ್ವಸತಿ ಶಿಬಿರವಾಗಿದ್ದು, ಪರಿಣತ ವೈದ್ಯರು ಹಾಗೂ ಮನೋವೈದ್ಯರ ಮಾರ್ಗದರ್ಶನದಲ್ಲಿ ಚಿಕಿತ್ಸೆ ಮತ್ತು ಸಲಹಾ ಸೇವೆಗಳನ್ನು ಒದಗಿಸಲಾಗುವುದು
>
> ■ ವಿವೇಕ್ ವಿನ್ಸೆಂಟ್ ಪಾಯ್ಸ್

ಸಭೆಯಲ್ಲಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಮೂಡುಬಿದಿರೆ ವಲಯದ ವಾಸುದೇವ ನಾಯ್ಕ, ಪ್ರಮುಖರಾದ ಸುಭಾಶ್ಚಂದ್ರ ಚೌಟ, ಬಾಹುಬಲಿ ಪ್ರಸಾದ ಇದ್ದರು. ಪುನರ್ಜನ್ಮದ ಆಪ್ತ ಸಮಾಲೋಚಕಿ ಸುಮನ್ ಪಿಂಟೋ, ಮೂಡುಬಿದಿರೆ ವಲಯ ಯೋಜನಾಧಿಕಾರಿ ಧನಂಜಯ ವಂದಿಸಿ, ಯೋಜನಾಧಿಕಾರಿ ಗಣೇಶ್ ಆಚಾರ್ಯ ನಿರೂಪಿಸಿದರು.

ಕಿರುಸುದ್ದಿ

ತಾಯಿ, ಮಗನಿಗೆ ಜೀವ ಬೆದರಿಕೆ; ಕತ್ತಿಯಿಂದ ಇರಿತ

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ಮಾನಂಪಾಡಿ ಬಳಿ ಶ್ರೀಧರ್ ಶೆಟ್ಟಿ ಎಂಬಾತ ಕ್ಷುಲ್ಲಕ ಕಾರಣಕ್ಕೆ ತಗಾದೆ ನಡೆಸಿ ಮಹಿಳೆ ಹಾಗೂ ಆಕೆಯ ಪುತ್ರನಿಗೆ ಕತ್ತಿಯಿಂದ ಬಲವಾಗಿ ಬೀಸಿ ಹಲ್ಲೆ ನಡೆಸಿದ್ದು ಮಹಿಳೆಯ ಮತ್ತು ಪುತ್ರ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಾಳು ಮಹಿಳೆಯನ್ನು ಮಾನಂಪಾಡಿ ಗುತ್ತು ಬಳಿಯ ನಿವಾಸಿ ಶುಭ ಶೆಟ್ಟಿ (58) ಮತ್ತು ಆಕೆಯ ಪುತ್ರ ನಿಹಾಲ್ (23) ಎಂದು ಗುರುತಿಸಲಾಗಿದೆ. ಮಾನಂಪಾಡಿ ನಿವಾಸಿ ಶ್ರೀಧರ್ ಶೆಟ್ಟಿ ಎಂಬಾತ ಬೆಳಗಿನ ಜಾವ ಗದ್ದೆಯ ಕಡೆಗೆ ಮಹಿಳೆ ಶುಭ ಶೆಟ್ಟಿ ಅವರ ಅಂಗಳದಿಂದ ನಡೆದುಕೊಂಡು ಹೋಗುತ್ತಿದ್ದು ಈ ವೇಳೆ ಮಹಿಳೆ ಶುಭ ಶೆಟ್ಟಿ ಅಂಗಳದಿಂದ ಹೋಗಬೇಡ, ಮನೆಯ ಹಿಂಬದಿಯಲ್ಲಿ ದಾರಿ ಇದೆಯಲ್ಲ, ಅಲ್ಲಿಂದಾಗಿ ಹೋಗಿ ಎಂದು ಹೇಳಿದಾಗ ಬೆದರಿಕೆ ಹಾಕಿದೆ. ಈ ಸಂದರ್ಭ ಶುಭ ಶೆಟ್ಟಿಯವರ ಪುತ್ರ ನಿಹಾಲ್ ಸ್ಥಳಕ್ಕೆ ಧಾವಿಸಿ ಪ್ರಶ್ನಿಸಿದಾಗ ಶ್ರೀಧರನು ಕತ್ತಿ ತೋರಿಸಿ ಜೀವ ಬೆದರಿಕೆ ಒಡ್ಡಿದ್ದಲ್ಲದೆ, ಕತ್ತಿಯನ್ನು ನಿಹಾಲನ ಕುತ್ತಿಗೆಗೆ ಹಿಡಿದಿದ್ದಾನೆ. ಈ ಸಂದರ್ಭ ಶುಭಾ ಶೆಟ್ಟಿ ಜಗಳವನ್ನು ತಡೆಯಲು ಯತ್ನಿಸಿದ್ದಾರೆ. ಆದರೂ ಶ್ರೀಧರನು ಕತ್ತಿಯನ್ನು ಬಲವಾಗಿ ಬೀಸಿದ್ದರ ಪರಿಣಾಮ ಶುಭ ಶೆಟ್ಟಿಯ ಎಡಕೈಗೆ ಗಾಯ ಉಂಟಾಗಿದ್ದು, ಪುತ್ರ ನಿಹಾಲ್‌ನಿಗೂ ಕತ್ತಿಯಿಂದ ಬಲಕೈಗೆ ಗೀರಿದ ಗಾಯಗಳಾಗಿ ತಾಯಿ ಮತ್ತು ಮಗ ಆಸ್ಪತ್ರೆಗೆ ದಾಖಲಾಗಿದ್ದಾರೆ. ಶುಭ ಶೆಟ್ಟಿ ನೀಡಿದ ದೂರಿನಂತೆ ಶ್ರೀಧರ್ ಶೆಟ್ಟಿ ವಿರುದ್ಧ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಡರ್ ಪಾಸ್‌ನಲ್ಲಿ ಕಟ್ಟಿನಿಂತ ನೀರು: ಅಪಾಯಕ್ಕೀಡಾದ ಬಸ್: ಮಕ್ಕಳು ಪಾರು

ಕಾಸರಗೋಡು: ಶಾಲಾ ಮಕ್ಕಳನ್ನು ಹೇರಿಕೊಂಡು ಸಾಗುತ್ತಿದ್ದ ಬಸ್ ರಾಷ್ಟ್ರೀಯ ಹೆದ್ದಾರಿಯ ಮಾವುಂಗಾಲ್ ಮೂಲಕಂಡ ಅಂಡರ್‌ಪಾಸ್‌ನಡಿ ಸಿಲುಕಿ ಮಗುಚುವ ಹಂತಕ್ಕೆ ತಲುಪಿದ್ದು, ಅದೃಷ್ಟವಶಾತ್ ಅಪಾಯದಿಂದ ಮಕ್ಕಳು ಪಾರಾಗಿದ್ದಾರೆ. ನೆಲ್ಲಿತ್ತರ ವಣ್ಣಾಟ್ ಮೂಲಕ ವೆಳ್ಳಿಕೋತ್‌ಗೆ ತೆರಳುವ ಸದ್ಗುರು ಶಾಲೆಯ ಬಸ್ ಮಂಗಳವಾರ ಸಂಜೆ ಅಪಾಯಕ್ಕೀಡಾದುದಾಗಿದೆ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಸಂಬಂಧಿಸಿ ಚರಂಡಿ ಸ್ಥಾಪನೆಯು ಈ ಭಾಗದಲ್ಲಿ ಅರ್ಧದಲ್ಲೇ ನಿಂತಿದೆ. ಪಲ್ಲೂರು ತೋಡಿಗೆ ಹರಿದುಹೋಗಬೇಕಾದ ನೀರು ಚರಂಡಿ ನಿರ್ಮಾಣದ ಲೋಪದಿಂದಾಗಿ ಅಂಡರ್ ಪ್ಯಾಸೇಜ್‌ನಲ್ಲಿ ಕಟ್ಟಿ ನಿಲ್ಲುತ್ತಿದ್ದು, ಇದರಿಂದಾಗಿ ಅಂಡರ್ ಪ್ಯಾಸೇಜ್‌ನ ಮೂಲಕ ವಾಹನಗಳು ಸಾಗುವಾಗ ಹೊಂಡ ಗಮನಕ್ಕೆ ಬಾರದೆ ಅಪಾಯಕ್ಕೆ ಕಾರಣವಾಗುತ್ತಿದೆ ಎಂದು ಹೇಳಲಾಗುತ್ತಿದೆ. ಈ ಬಸ್‌ನಲ್ಲಿ 30ರಷ್ಟು ಮಂದಿ ಮಕ್ಕಳು ಇದ್ದರು. ಅವರನ್ನು ಆಟೋ ಚಾಲಕರು ಹಾಗೂ ಸ್ಥಳೀಯರು ಸೇರಿ ಸುರಕ್ಷಿತವಾಗಿ ಕಳುಹಿಸಿಕೊಟ್ಟರು.

ಜ್ಯುವೆಲ್ಲರಿ ಕಳವು ಯತ್ನ: ಆರೋಪಿಗಳಿಗಾಗಿ ಶೋಧ

ಕುಂಬಳೆ: ವರ್ಕಾಡಿ ಬಳಿಯ ಮಜೀರ್‌ಪಳ್ಳದ ಜ್ಯುವೆಲ್ಲರಿ ಕಳವಿಗೆ ಯತ್ನಿಸಿದ ಪ್ರಕರಣದಲ್ಲಿ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿ ತನಿಖೆ ಆರಂಭಿಸಿದ್ದಾರೆ. ಅಶ್ರಫ್ ಹಾಗೂ ಶರೀಫ್ ಎಂಬವರ ಪಾಲುದಾರರಾಗಿರುವ ಚೋಯ್ಸ್ ಗೋಲ್ಡ್ ಎಂಬ ಜ್ಯುವೆಲ್ಲರಿಯಿಂದ ಕಳವು ಯತ್ನ ನಡೆದಿದೆ. ಎಂದಿನಂತೆ ಸೋಮವಾರ ರಾತ್ರಿ ಜ್ಯುವೆಲ್ಲರಿ ಮುಚ್ಚಿ ಅವರು ಮರಳಿದ್ದರು. ಮಂಗಳವಾರ ಬೆಳಗ್ಗೆ ಕಳವು ಯತ್ನ ನಡೆದಿರುವುದು ತಿಳಿದುಬಂತು. ಸೋಮವಾರ ರಾತ್ರಿ ಕಳ್ಳರು ಈ ಕೃತ್ಯ ನಡೆಸಿರಬಹುದೆಂದು ಅಂದಾಜಿಸಲಾಗಿದೆ. ಜ್ಯುವೆಲ್ಲರಿಯ ಮುಂಭಾಗದ ಶಟರ್‌ನ್ನು ಲಿವರ್ ಬಳಸಿ ಎತ್ತಿದ ಸ್ಥಿತಿಯಲ್ಲಿ ಕಂಡುಬಂದಿದ್ದು. ಮಾಹಿತಿ ತಿಳಿದು ಮಂಜೇಶ್ವರ ಪೊಲೀಸರು ಸ್ಥಳಕ್ಕಾಗಮಿಸಿ ಸಮಗ್ರ ಪರಿಶೀಲನೆ ನಡೆಸಿದ್ದಾರೆ.

ಅಪಾಯಕಾರಿ ಜಾಹೀರಾತು ಫಲಕಗಳು, ಧ್ವಜಸ್ತಂಭಗಳನ್ನು ತೆರವುಗೊಳಿಸಲು ಸೂಚನೆ

ಕಾಸರಗೋಡು: ಜಿಲ್ಲೆಯ ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆಬದಿಗಳಲ್ಲಿ ಮತ್ತು ಕಟ್ಟಡಗಳ ಮೇಲ್ಭಾಗದಲ್ಲಿ ನಿರ್ಮಿಸಲಾದ ಎಲ್ಲಾ ಅಪಾಯಕಾರಿ ಮತ್ತು ಅಕ್ರಮ ಜಾಹೀರಾತು ಫಲಕಗಳು ಹಾಗೂ ಧ್ವಜಸ್ತಂಭಗಳು ಬಲವಾದ ಗಾಳಿ ಮತ್ತು ಮಳೆಗೆ ಉರುಳುವ ಸಾಧ್ಯತೆಯಿದೆ ಎಂದು ಚೆರುವತ್ತೂರು ಗ್ರಾಮ ಪಂಚಾಯತ್ ಕಾರ್ಯದರ್ಶಿ ತಿಳಿಸಿದ್ದಾರೆ. ಹೈಕೋರ್ಟ್ ತೀರ್ಪಿನ ಪ್ರಕಾರ ಮಳೆಗಾಲಕ್ಕೆ ಮೂರು ದಿನಗಳ ಮೊದಲು ಅಂತಹ ಜಾಹೀರಾತು ಫಲಕಗಳನ್ನು ತೆಗೆದುಹಾಕಬೇಕು ಎಂದು ಸೂಚಿಸಲಾಗಿದೆ.

ಅರ್ಜಿ ಆಹ್ವಾನ

ಉಡುಪಿ: ನಮ್ಮ ಕ್ಲಿನಿಕ್‌ಗಳಲ್ಲಿ ಖಾಲಿಯಿರುವ 13 ವೈದ್ಯಾಧಿಕಾರಿಗಳ ಹಾಗೂ 04 ಪಿ.ಹೆಚ್.ಸಿ.ಒ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 11 ಕೊನೆಯ ದಿನವಾಗಿದ್ದು, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ Udupi.nic.in ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.



ಪುತ್ತೂರು



ಕುಕ್ಕೆ ಸುಬ್ರಹ್ಮಣ್ಯ



ಮಂಗಳೂರು

5 ವರ್ಷದಿಂದ ಅನ್ಯ ಜಿಲ್ಲೆ ಉಸ್ತುವಾರಿಗಳ ಕಾರ್ಬಾರ್ | ನಿರೀಕ್ಷೆ ಹೆಚ್ಚಿಸಿದೆ ಖಾದರ್ ಸಚಿವ ಸ್ಥಾನ

ದ.ಕ.ಗೆ ಮತ್ತೆ ತವರಿನ ಉಸ್ತುವಾರಿ ಭಾಗ್ಯ?

ಮಂಗಳೂರು: ದಕ್ಷಿಣ ಕನ್ನಡ ತವರು ಜಿಲ್ಲೆಯ ಉಸ್ತುವಾರಿ ಸಚಿವರನ್ನು ಕಾಣುವ ದಿನ ಹತ್ತಿರವಾಗಿದೆ. ವಿಶೇಷವಾಗಿ ಸ್ಪೀಕರ್ ಆಗಿದ್ದ ಯು.ಟಿ. ಖಾದರ್ ಅವರು ಮತ್ತೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದು, ಜಿಲ್ಲೆಯ ಉಸ್ತುವಾರಿ ಸಚಿವರಾಗುವ ಸಾಧ್ಯತೆ ನಿಚ್ಚಳವಾಗಿದೆ.

ಕಳೆದ ಐದು ವರ್ಷಗಳಿಂದ ದಕ್ಷಿಣ ಕನ್ನಡ ತವರಿನ ಉಸ್ತುವಾರಿ ಸಚಿವರನ್ನು ಕಂಡಿಲ್ಲ. ಇದೇ ಜಿಲ್ಲೆಯ ಮಂದಿ ಶಾಸಕರಾಗಿದ್ದರೂ ಉಸ್ತುವಾರಿ ಸ್ಥಾನ ಮಾತ್ರ ಅನ್ಯ ಜಿಲ್ಲೆಯ ಪಾಲಾಗುತ್ತಿತ್ತು. ಡಿ.ಕೆ.ಶಿವಕುಮಾರ್ ಅವರ ಅವಧಿಯಲ್ಲಿ ಇದು ಬದಲಾಗುವ ಸಾಧ್ಯತೆ ಇದೆ.

ಈ ಹಿಂದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವರಾಗಿ ಜವಾಬ್ದಾರಿ ನಿರ್ವಹಿಸಿದ ಅನುಭವ ಹೊಂದಿರುವ ಯು.ಟಿ.ಖಾದರ್ ಅವರು ಮೂರನೇ ಬಾರಿಗೆ ಮತ್ತೆ ಸಚಿವರಾಗುತ್ತಿದ್ದಾರೆ.

ಕೋಟ, ಸುನಿಲ್ ಉಸ್ತುವಾರಿಗಳಾಗಿದ್ದರು

2019 ಸೆಪ್ಟೆಂಬರ್‌ನಿಂದ 2021ರ ಆಗಸ್ಟ್ ವರೆಗೆ ಕೋಟ ಶ್ರೀನಿವಾಸ ಪೂಜಾರಿ ಅವರು ದ.ಕ. ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು. ಆಗಸ್ಟ್ 2021ರಿಂದ 2022ರ ಜನವರಿವರೆಗೆ ಎಸ್.ಅಂಗಾರ ಅವರು ಉಸ್ತುವಾರಿ ಸಚಿವರಾಗಿದ್ದರು. 2022 ಜ. 24ರಿಂದ 2023ರ ಮೇ ವರೆಗೆ ಸುನಿಲ್ ಕುಮಾರ್ ಅವರು ದ.ಕ. ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು. ಆ ಬಳಿಕ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ದಿನೇಶ್ ಗುಂಡೂರಾವ್ ಅವರು ಉಸ್ತುವಾರಿ ಸಚಿವರಾಗಿದ್ದರು. ಇದೀಗ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸಿದ್ದು, ಇದೇ ವೇಳೆ ಯು.ಟಿ. ಖಾದರ್ ಕೂಡ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅವರು ಉಪಮುಖ್ಯಮಂತ್ರಿ ಸ್ಥಾನದ ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರಾಗುವ ಮಾತುಗಳು ಕೇಳಿಬರುತ್ತಿವೆ.

ಡಿಕೆಶಿ ಸಂಪುಟದಲ್ಲಿ ಕರಾವಳಿಯ ಏಕೈಕ ಸಚಿವ

ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಖಾದರ್ ಅವರು ಕರಾವಳಿ ಕರ್ನಾಟಕದಿಂದ ಡಿ.ಕೆ.ಶಿ. ಸಂಪುಟ ಸೇರಿರುವ ಏಕೈಕ ಶಾಸಕರಾಗಿದ್ದಾರೆ.

ಖಾದರ್ ಅವರು 1990ರಲ್ಲಿ ಎನ್‌ಎಸ್‌ಯುಐ ದ. ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ, 1994 ರಿಂದ 1999ರವರೆಗೆ ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷರಾಗಿ, 1999 ರಿಂದ 2001 ರವರೆಗೆ ಎನ್‌ಎಸ್‌ಯುಐ ರಾಜ್ಯ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ನಂತರ ಕೆಪಿಸಿಸಿ ಸದಸ್ಯರಾಗಿ 2008 ರಲ್ಲಿ ಕೆಪಿಸಿಸಿ ಕಾರ್ಯದರ್ಶಿಯಾಗಿ ಆಯ್ಕೆಯಾದರು.

2008 ರಲ್ಲಿ ತಮ್ಮ ತಂದೆಯವರ ನಿಧನದಿಂದ ತೆರವಾದ ಮಂಗಳೂರು (ಉಳ್ಳಾಲ) ಕ್ಷೇತ್ರದ ಶಾಸಕ ಸ್ಥಾನಕ್ಕೆ ನಡೆದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿ ನಂತರ 2008,2013,2018 ಹಾಗೂ 2023 ರಲ್ಲಿ ಸತತ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು.

ಖಾದರ್ ಅವರು ಬುಧವಾರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.



ಮಂಗಳೂರಿನಲ್ಲಿ ಸಂಭ್ರಮಾಚರಣೆ

ಮಂಗಳೂರು: ಕರ್ನಾಟಕದ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮಲ್ಲಿಕಟ್ಟೆಯ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಪಕ್ಷದ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು. ಈ ಸಂದರ್ಭ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂತಸ ವ್ಯಕ್ತಪಡಿಸಿದರು. ಮುಖಂಡರಾದ ಟಿ.ಕೆ.ಸುಧೀರ್, ಭರತೇಶ್ ಅಮೀನ್, ಜೀತೇಂದ್ರ ಜೆ.ಸುವರ್ಣ, ಯೋಗಿಶ್ ಕುಮಾರ್, ಉದಯ್ ಆಚಾರ್ಯ, ಹನೀಫ್ ಬಜಾಲ್, ವೆಲ್ವಿನ್, ವಿನೋದ್ ರಾಜ್ ಪಣಂಬೂರು, ಲಕ್ಷ್ಮಣ್ ಶೆಟ್ಟಿ, ಪ್ರಶಾಂತ್ ಅಮೀನ್, ಉದಯ್ ಕುಂದರ್ ಉಪಸ್ಥಿತರಿದ್ದರು.

ಧಾರ್ಮಿಕ ಕೇಂದ್ರಗಳಲ್ಲಿ ವಿಶೇಷ ಪ್ರಾರ್ಥನೆ





ಸುಳ್ಯ: ಕರ್ನಾಟಕ ರಾಜ್ಯದ 25ನೇ ಮುಖ್ಯಮಂತ್ರಿಗಳಾಗಿ ಡಿ.ಕೆ. ಶಿವ ಕುಮಾರ್ ಅಧಿಕಾರ ಸ್ವೀಕಾರ ಹಿನ್ನೆಲೆಯಲ್ಲಿ ತಾಲೂಕಿನ 21 ದೇಗುಲ, 7 ದರ್ಗಾ, 3 ಚರ್ಚ್‌ಗಳಲ್ಲಿ ವಿಶೇಷ ಪೂಜೆ ಮತ್ತು ಪ್ರಾರ್ಥನೆ ಬುಧವಾರ ನಡೆಯಿತು. ಬುಧವಾರ ಮುಂಜಾನೆಯಿಂದಲೇ ಸುಳ್ಯ ತಾಲೂಕಿನ ಸರಕಾರಿ ಧಾರ್ಮಿಕ ದತ್ತಿ ನಿಧಿ ಇಲಾಖೆ ಅಡಿಯಲ್ಲಿ ಬರುವ ತಾಲೂಕಿನ ಶ್ರೀ ಚೆನ್ನಕೇಶವ, ಕರ್ಲಪ್ಪಾಡಿ ಶ್ರೀ ಶಾಸ್ತವೇಶ್ವರ, ಐವರ್ನಾಡು ಪಂಚಲಿಂಗೇಶ್ವರ, ಅಡ್ಕಾರು ಶ್ರೀ ಸುಬ್ರಹ್ಮಣ್ಯ ಸ್ವಾಮಿ ಕ್ಷೇತ್ರ, ಹರಿಹರೇಶ್ವರ ದೇಗುಲ ಹರಿಹರ, ನಾಲ್ಕೂರು ಮರಕತ ಶ್ರೀ ದುರ್ಗಾಪರಮೇಶ್ವರಿ ದೇಗುಲ ಸೇರಿದಂತೆ ತಾಲೂಕಿನ 21 ಹಿಂದು ಧಾರ್ಮಿಕ ಕೇಂದ್ರಗಳಲ್ಲಿ ಹಾಗೂ ಇಸ್ಲಾಂ ಧರ್ಮದ 7 ದರ್ಗಾಗಳಲ್ಲಿ ಮತ್ತು ಕ್ರಿಶ್ಚಿಯನ್ ಸಮುದಾಯದ 3 ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆ ಹಾಗೂ ಪುರಸ್ಕಾರಗಳನ್ನು ಡಿ.ಕೆ ಶಿವಕುಮಾರ್ ಹೆಸರಿನಲ್ಲಿ ನಡೆಸಲಾಯಿತು.

ಈ ಸಂದರ್ಭ ಬ್ಲಾಕ್ ಕಾಂಗ್ರೆಸ್ ಮುಖಂಡರಾದ ರಾಧಾಕೃಷ್ಣ ಬೊಳ್ಳೂರು, ಭವಾನಿಶಂಕರ್ ಕಲ್ಮಡ್ಕ, ಯುವ ಕಾಂಗ್ರೆಸ್ ಅಧ್ಯಕ್ಷ ಚೇತನ್ ಕಜೆಗದ್ದೆ, ಸ್ಥಳೀಯ ದೇಗುಲಗಳ ವ್ಯವಸ್ಥಾಪನಾ ಸಮಿತಿ ಸದಸ್ಯರು, ಧಾರ್ಮಿಕ ಕೇಂದ್ರಗಳ ಪ್ರಮುಖರು, ಮತ್ತಿತರರು ಭಾಗವಹಿಸಿದ್ದರು.

ಕುಕ್ಕೆ ಶ್ರೀ ದೇವಳದಲ್ಲಿ ವಿಶೇಷ ಪೂಜೆ



ಸುಬ್ರಹ್ಮಣ್ಯ: ಕರ್ನಾಟಕ ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರಿಗೆ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವರ ಪೂರ್ಣ ಅನುಗ್ರಹ ಪ್ರಾಪ್ತಿಯಾಗಲಿ ಎಂದು ಪ್ರಾರ್ಥಿಸಿ ದೇವರಿಗೆ ವಿಶೇಷ ಪೂಜೆಯನ್ನು ಬುಧವಾರ ಸಲ್ಲಿಸಲಾಯಿತು. ಈ ಸಂದರ್ಭ ದೇವಳದ ಕಾರ್ಯನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಡಾ. ರಘು, ಲೀಲಾ ಮನಮೋಹನ್, ಪ್ರವೀಣ ರೈ ಮರುವಂಜ, ಸೌಮ್ಯ ಭರತ್, ಮಾಸ್ಟರ್ ಪ್ಲಾನ್ ಸಮಿತಿ ಸದಸ್ಯರಾದ ಸತೀಶ ಕೂಜುಗೋಡು, ಲೋಲಾಕ್ಷ ಕೈಕಂಬ, ಕಡಬ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಭಿಲಾಷ್, ಮಾಜಿ ಅಧ್ಯಕ್ಷ ಗಣೇಶ ಕೈಕುರೆ, ಮುಖಂಡರಾದ ವೆಂಕಟರಮಣ ಗೌಡ ಹಾಂಗ, ಗೋಪಾಲ್ ಎಣ್ಣೆಮಜಲು, ಸುಬ್ರಹ್ಮಣ್ಯ ಭಟ್, ಭವಾನಿ ಶಂಕರ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ

ಹರಿಹರ ಪಲ್ಲತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಮುಖ್ಯ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರ ಮುಂದಿನ ರಾಜಕೀಯ ಜೀವನ ಹಾಗೂ ಸಿಎಂ ಆಗಿ ಅವರ ಅವಧಿಯಲ್ಲಿ ರಾಜ್ಯಕ್ಕೆ ಮಳೆ ಬೆಳೆ ಸಮೃದ್ಧಿಯಾಗಿ, ಸುಭಿಕ್ಷೆಯಿಂದ ಆಡಳಿತ ಮಾಡುವಂತಾಗಲಿ ಎಂದು ದೇವರಲ್ಲಿ ಅರ್ಚಕರ ಮುಖೇನ ಪ್ರಾರ್ಥನೆ ಸಲ್ಲಿಸಿ ಶ್ರೀ ದೇವರಿಗೆ ವಿಶೇಷ ಸೇವೆ ಅರ್ಪಿಸಲಾಯಿತು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು, ಉಪಾಧ್ಯಕ್ಷ ಗುಣವರ್ಧನ ಕೆದಿಲ ಮತ್ತು ವ್ಯವಸ್ಥಾಪನಾ ಸಮಿತಿ ಸದಸ್ಯರು ಪ್ರಾರ್ಥನೆ ಸಲ್ಲಿಸಿದರು.

ಮುಡಿಪುವಿನಲ್ಲಿ ಸಂಭ್ರಮಾಚರಣೆ



ಕೋಣಾಜೆ: ನೂತನ ಮುಖ್ಯಮಂತ್ರಿ ಡಿಕೆಶಿ ಹಾಗೂ ನೂತನ ಸಚಿವರಾಗಿ ಯು.ಟಿ.ಖಾದರ್ ಅವರು ಅಧಿಕಾರ ವಹಿಸಿದ ಹಿನ್ನೆಲೆಯಲ್ಲಿ ಮುಡಿಪು ಬ್ಲಾಕ್ ಯುವ ಕಾಂಗ್ರೆಸ್ ವತಿಯಿಂದ ಮುಡಿಪು ಜಂಕ್ಷನ್‌ನಲ್ಲಿ ಅಂಗಡಿ ಮುಂಗಟ್ಟುಗಳಿಗೆ ಹಾಗೂ ಸಾರ್ವಜನಿಕರಿಗೆ ಸಿಹಿತಿಂಡಿ ವಿತರಿಸಿ, ಪಟಾಕಿ ಸಿಡಿಸಿ ನಡೆದ ಸಂಭ್ರಮಾಚರಣೆ ನಡೆಯಿತು.

ಮುಡಿಪು ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಪ್ರತಾಪ್ ಚಂದ್ರ ಕರ್ಕೇರ, ತಾ.ಪಂ. ಮಾಜಿ ಅಧ್ಯಕ್ಷ ಚಂದ್ರಹಾಸ್ ಕರ್ಕೇರ, ಕುರ್ನಾಡು ಗ್ರಾ.ಪಂ. ಮಾಜಿ ಅಧ್ಯಕ್ಷ ದೇವದಾಸ್ ಭಂಡಾರಿ, ಗ್ರಾ.ಪಂ ಸದಸ್ಯರುಗಳಾದ ಯಾಕೂಬ್ ಇರಾ, ಅಬ್ದುಲ್ ರಹಿಮಾನ್ ಹೂಹಾಕುವಕಲ್ಲು, ಸಿ.ಎಂ ಶರೀಫ್ ಪಟ್ಟೋರಿ, ಆಸೀಫ್ ಮೋಂಟುಗೋಳಿ, ಮೊಯ್ದೀನ್ ಕುಂಞ ಇರಾ, ಉಸ್ಮಾನ್ ಕುರಿಯಾಡಿ, ಬಾವು ಮೂಳೂರು, ಝೂಹಿರ್ ಸಂಪಿಲ, ಜಾಸೀಮ್ ಕುರ್ನಾಡು, ಲತೀಫ್ ಮೊದಲಾದವರು ಈ ಸಂದರ್ಭ ಉಪಸ್ಥಿತರಿದ್ದರು.

ಕೊಡಗಿನ ವಿವಿಧೆಡೆ ಪಟಾಕಿ ಸಿಡಿಸಿ, ಸಿಹಿತಿಂಡಿ ವಿತರಿಸಿ ಸಂಭ್ರಮಾಚರಣೆ

ಮಡಿಕೇರಿ: ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯ ವಿವಿಧೆಡೆಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು. ಮಡಿಕೇರಿ ನಗರ ಕಾಂಗ್ರೆಸ್ ಮತ್ತು ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಇಂದಿರಾಗಾಂಧಿ ವೃತ್ತ (ಚೌಕಿ)ದಲ್ಲಿ ಸಂಭ್ರಮಾಚರಣೆ ನಡೆಯಿತು. ಕಾಂಗ್ರೆಸ್ ನಗರಾಧ್ಯಕ್ಷ ಎ.ಎಸ್.ಪ್ರಕಾಶ್ ಆಚಾರ್ಯ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಸರಕಾರ ಮತ್ತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರ ಘೋಷಣೆಗಳನ್ನು ಕೂಗಿದ ಪಕ್ಷದ ಪ್ರಮುಖರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಮಡಿಕೇರಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಮಂದ್ರೀರ ಮೋಹನ್ ದಾಸ್, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶಶಿಕಲಾ, ಕಾಂಗ್ರೆಸ್ ಮುಖಂಡರುಗಳಾದ ಕಲೀಲ್ ಬಾಷಾ, ಯಶ್ ದೋಲ್ಪಾಡಿ, ಫ್ಯಾನ್ಸಿ ಪಾರ್ವತಿ, ದಿನೇಶ್ ಶೆಟ್ಟಿ, ಚಂದ್ರಶೇಖರ್ ಆರ್.ಪಿ, ಮುದ್ದುರಾಜು, ರವೂಫ್ ಅಹಮದ್, ಕೋಚನ ಚೇತನ್, ಪುಷ್ಪ ಪೂರ್ಣಚ್ಚ, ನಂದ, ಸುಬ್ರಮಣಿ ಎಚ್.ಕೆ, ಜಿ.ಆರ್.ರಾಜು, ಎ.ಕೆ.ನಜಿರ್ ಹುಸೇನ್, ಸದಾ ಮುದ್ದಪ್ಪ, ಜಗದೀಶ್ ಜೆ.ಸಿ, ಪವಿತ್ರಾ, ವಿಮಲಾ, ಪ್ರೇಮಾ, ಲೀಲಾ ಶೇಷಮ್ಮ, ನಿಂಗಪ್ಪ, ಧನಲಕ್ಷ್ಮಿ, ಫರೀದಾ ಬಾನು, ತಾಜುನ್ನಿಸಾ, ರವಿ ಪಾಪು, ರಿಯಾಸುದ್ದೀನ್, ಸೈಮನ್, ದಯಾನಂದ್ ಎಂ.ಎನ್, ಪ್ರತಾಪ್, ಯತೀಶ್, ಸುಲೇಮಾನ್, ಸಂಪತ್ ರಾಜ್ ಹಾಗೂ ಕಾರ್ಯಕರ್ತರು ಹಾಜರಿದ್ದರು.

ಸಂಭ್ರಮಾಚರಣೆಯ ನಂತರ ಸಿಡಿದ ಪಟಾಕಿಗಳ ತ್ಯಾಜ್ಯವನ್ನು ತೆಗೆದು ರಸ್ತೆಯನ್ನು ಸ್ವಚ್ಛಗೊಳಿಸಿದರು.



ಕುಶಾಲನಗರ ಕಾಂಗ್ರೆಸ್ ವತಿಯಿಂದ ಸಂಭ್ರಮಾಚರಣೆ; ಸಿಹಿ ವಿತರಣೆ

ಮಡಿಕೇರಿ: ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸಿದ ಹಿನ್ನಲೆಯಲ್ಲಿ ಕುಶಾಲನಗರದ ನಗರ ಕಾಂಗ್ರೆಸ್ ವತಿಯಿಂದ ಕುಶಾಲನಗರದ ಕಾರ್ಯಪ್ಪ ವೃತ್ತದಲ್ಲಿ ಸಂಭ್ರಮಾಚರಣೆ ನಡೆಸಲಾಯಿತು.

ಕುಶಾಲನಗರ ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್ ಅವರ ನೇತೃತ್ವದಲ್ಲಿ ಕುಶಾಲನಗರ ನಗರ ಕಾಂಗ್ರೆಸ್ ಕಾರ್ಯಕರ್ತರು ಡಿ.ಕೆ.ಶಿವಕುಮಾರ್ ಅವರ ಪರವಾಗಿ ಘೋಷಣೆಗಳನ್ನು ಕೂಗಿ, ಸಿಹಿ ವಿತರಿಸಿ ಸಂಭ್ರಮಾಚರಣೆ ನಡೆಸಿದರು. ಈ ಸಂದರ್ಭ ಮಾತನಾಡಿದ ಕಾಂಗ್ರೆಸ್ ನಗರಾಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯಕ್ಕೆ ಉತ್ತಮವಾದ ಆಡಳಿತ ನೀಡಲಿದೆ ಎಂದರು.

ಕೂಡಾ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಮಾಜಿ ಕೂಡಾ ಅಧ್ಯಕ್ಷ ಮಂಜುನಾಥ್ ಗುಂಡೂರಾವ್, ಕುಶಾಲನಗರ ಪುರಸಭೆ ಮಾಜಿ ಸದಸ್ಯರಾದ ವಿ.ಎಸ್.ಆನಂದ್ ಕುಮಾರ್, ಖಲೀಮುಲ್ಲಾ, ಶಿವಶಂಕರ್, ಪದ್ಮಾ, ಪ್ರಕಾಶ್, ನವೀನ್, ಜಿ.ಬಿ.ಜಗದೀಶ್, ಕಾಂಗ್ರೆಸ್ ಮುಖಂಡರಾದ ಚಂದ್ರು, ರಶೀದ್, ಅನಿಲ್, ರವಿ, ಸಂಗೀತಾ, ಗೋವಿಂದಯ್ಯ, ಜಲೀಲ್ ಹಾಗೂ ಇನ್ನಿತರರು ಈ ಸಂದರ್ಭ ಇದ್ದರು.



ಕಾಸರಗೋಡಿನಲ್ಲಿ ಮಳೆಗಾಲಕ್ಕೆ ಜಿಲ್ಲಾಡಳಿತದ ಸಿದ್ಧತೆ | ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿ ಬಗ್ಗೆ ಚರ್ಚೆ | ಸ್ಥಳೀಯಾಡಳಿತ ಸಂಸ್ಥೆಗಳ ಅಧ್ಯಕ್ಷರ ಸಭೆ

ಸರ್ವೀಸ್ ರಸ್ತೆಗಳಲ್ಲಿ ಸಂಚಾರ ದಟ್ಟಣೆ, ಭೂಕುಸಿತ ತಡೆಗೆ ಕ್ರಮ ಕೈಗೊಳ್ಳಲು ಆದೇಶ

ಕಾಸರಗೋಡು: ಮಳೆಗಾಲದ ಸಿದ್ಧತೆಯ ಭಾಗವಾಗಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಪ್ರದೇಶದ ನಗರಸಭೆ ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷರ ಸಭೆಯು ಬುಧವಾರ ಜರಗಿತು. ಭೂಕುಸಿತ ಮತ್ತು ನೀರಿನ ಅಡಚಣೆಯನ್ನು ಪರಿಹರಿಸಲು ಮತ್ತು ಸರ್ವೀಸ್ ರಸ್ತೆಗಳಲ್ಲಿ ಸಂಮಚಾರ ದಟ್ಟಣೆಯನ್ನು ಬಗೆಹರಿಸಲು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವಿವಿಧ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ತಲಪಾಡಿಯಿಂದ ಕಾಲಿಕ್ಕಡವು ವರೆಗಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಸ್ಥಳೀಯಾಡಳಿತ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಪ್ರಸ್ತಾಪಿಸಿದರು. ಕಾಸರಗೋಡು ನಗರಸಭೆಯ ನುಳ್ಳಿಪಾಡಿಯಲ್ಲಿರುವ ಸರ್ವೀಸ್ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿಗೆ ವಾಹನಗಳು ಪ್ರವೇಶಿಸಲು ವ್ಯವಸ್ಥೆ ಮಾಡಬೇಕೆಂದು ಕಾಸರಗೋಡು ನಗರಸಭಾ ಉಪಾಧ್ಯಕ್ಷರು ಒತ್ತಾಯಿಸಿದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ತಕ್ಷಣವೇ ಪರಿಶೀಲನೆ ನಡೆಸಿ ಸಂಚಾರಕ್ಕೆ ಅನುಕೂಲವಾಗುವಂತೆ ಹೆಚ್ಚುವರಿ ಪ್ರವೇಶ ದ್ವಾರಗಳನ್ನು ಒದಗಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ. ಈ ಬಗ್ಗೆ ಮೋಟಾರು ವಾಹನ ಇಲಾಖೆ, ಪೊಲೀಸ್ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜಂಟಿಯಾಗಿ ತಪಾಸಣೆ ನಡೆಸುವುದಾಗಿಯೂ ನಿರ್ಧರಿಸಲಾಗಿದೆ.

ತಲಪಾಡಿಯಿಂದ ಕಾಲಿಕ್ಕಡವು ವರೆಗಿನ ವಿವಿಧ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ತಕ್ಷಣ ಪರಿಹರಿಸಲು ನಿರ್ಮಾಣ ಗುತ್ತಿಗೆ ಕಂಪೆನಿಗಳು ಕ್ಷಿಪ್ರ ಪ್ರಕ್ರಿಯೆ ತಂಡಗಳನ್ನು ನೇಮಿಸಿವೆ ಎಂದು ರಾಷ್ಟ್ರೀಯ ಹೆದ್ದಾರಿ ಯೋಜನಾ ನಿರ್ದೇಶಕ ಉಮೇಶ್ ಗರ್ಗ್ ತಿಳಿಸಿದ್ದಾರೆ.

ಕಾಞಂಗಾಡಿನ ನೆಹರೂ ಕಾಲೇಜು ಮುಂಭಾಗ ಮತ್ತು ಜಿಲ್ಲಾಸ್ಪತ್ರೆ ಮುಂಭಾಗದಲ್ಲಿ ಪಾದಚಾರಿ ಮೇಲ್ಸೇತುವೆಗಳ ನಿರ್ಮಾಣವನ್ನು ತ್ವರಿತಗೊಳಿಸಬೇಕೆಂದು ಸಭೆಯು ಒತ್ತಾಯಿಸಿತು. ಚಟ್ಟಂಚಾಲ್‌ನಿಂದ ಚೆರ್ಕಳ ವರೆಗಿನ ವಿಭಾಗದಲ್ಲಿ ಮತ್ತು ಚೆರುವತ್ತೂರಿನ ವೀರಮಲೆ ಬೆಟ್ಟ ಹಾಗೂ ಮಟ್ಟಲಾಯಿ ಬೆಟ್ಟ ಪ್ರದೇಶಗಳಲ್ಲಿ ಭೂಕುಸಿತದ ಬೆದರಿಕೆಯಿದ್ದು, ಮಳೆಗಾಲಕ್ಕೆ ಮುನ್ನ ಅನಾಹುತ ಸಂಭವಿಸದಂತೆ ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಲಾಯಿತು. ಅಗತ್ಯವಿರುವ ಸ್ಥಳಗಳಲ್ಲಿ ಪಾದಚಾರಿ ಮೇಲ್ಸೇತುವೆಗಳು ಮತ್ತು ಬಸ್ ಶೆಲ್ಟರ್‌ಗಳನ್ನು ಸಕಾಲಿಕವಾಗಿ ಸ್ಥಾಪಿಸುವಂತೆ ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.

ಸಭೆಯಲ್ಲಿ ಕಾಸರಗೋಡು ಆರ್‌ಡಿಒ ಬಿನು ಜೋಸೆಫ್, ಕಾಞಂಗಾಡು ಆರ್‌ಡಿಒ ಕೆ.ಆರ್. ಮನೋಜ್ ಮತ್ತು ಇತರರಿಗೆ ನಿರ್ಮಾಣ ಪ್ರಗತಿಯನ್ನು ಸಕಾಲಿಕವಾಗಿ ಪರಿಶೀಲಿಸಿ, ಅನಾಹುತದ ಸಾಧ್ಯತೆಯನ್ನು ತಡೆಗಟ್ಟಲು ವರದಿಯನ್ನು ಸಲ್ಲಿಸುವ ಜವಾಬ್ದಾರಿಯನ್ನು ವಹಿಸಲಾಯಿತು. ಕಲ್ವರ್ಟ್ ನಿರ್ಮಾಣದಲ್ಲಿನ ದೋಷಗಳು, ಭೂಕುಸಿತಗಳು, ಬೀದಿ ದೀಪಗಳ ಕೊರತೆ ಮತ್ತು ಹಳ್ಳಗಳನ್ನು ಮಣ್ಣಿನಿಂದ ಮುಚ್ಚುವ ಬಗ್ಗೆ ಎಲ್‌ಎಸ್‌ಜಿಡಿ, ಕಂದಾಯ, ಪೊಲೀಸ್, ಆರ್‌ಟಿಒ ಮತ್ತು ನಿರ್ಮಾಣ ಗುತ್ತಿಗೆ ಕಂಪೆನಿಯ ಪ್ರತಿನಿಧಿಗಳು ಜಂಟಿ ಪರಿಶೀಲನೆ ನಡೆಸಲಿದ್ದಾರೆ.

ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಮತ್ತು ಕಾಞಂಗಾಡು ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್, ಕಾಸರಗೋಡು ನಗರಸಭಾ ಉಪಾಧ್ಯಕ್ಷ ಕೆ.ಎಂ. ಹನೀಫ್, ನೀಲೇಶ್ವರ ನಗರಸಭಾ ಉಪಾಧ್ಯಕ್ಷೆ ಪಿ.ಎಂ. ಸಂಧ್ಯಾ, ಪಿಲಿಕ್ಕೋಡು ಗ್ರಾಮ ಪಂಚಾಯತ್ ಅಧ್ಯಕ್ಷ ಇ.ಕುಂಞಿರಾಮನ್, ಚೆಂಗಳ ಗ್ರಾಮ ಪಂಚಾಯತ್ ಅಧ್ಯಕ್ಷ ವಸಂತ ಅಜಕ್ಕೋಡು, ಮಂಜೇಶ್ವರ ಗ್ರಾಮ ಪಂಚಾಯತ್ ಅಧ್ಯಕ್ಷ ಅಬ್ದುಲ್ ರಹಮಾನ್ ಬಶೀರ್, ಉದುಮ ಗ್ರಾಮ ಪಂಚಾಯತ್ ಅಧ್ಯಕ್ಷ ಪಿ.ವಿ.ರಾಜೇಂದ್ರನ್, ಮಂಗಲ್ಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಮಾನ್, ಮೀಂಜ ಗ್ರಾಮ ಪಂಚಾಯತ್ ಅಧ್ಯಕ್ಷ ಸಿ.ಎ.ತಾಜುದ್ದೀನ್, ಚೆಮ್ನಾಡು ಗ್ರಾಮ ಪಂಚಾಯತ್ ಅಧ್ಯಕ್ಷೆ ಆಯೇಷಾ ಅಬೂಬಕ್ಕರ್, ಪಳ್ಳಿಕೆರೆ ಗ್ರಾಮ ಪಂಚಾಯತ್ ಅಧ್ಯಕ್ಷೆ ಟಿ.ಶೋಭನಾ, ಕುಂಬಳೆ ಗ್ರಾಮ ಪಂಚಾಯತ್ ಅಧ್ಯಕ್ಷ ವಿ.ಪಿ.ಅಬ್ದುಲ್ ಖಾದರ್, ಪುಲ್ಲೂರು ಪೆರಿಯ ಗ್ರಾಮ ಪಂಚಾಯತ್ ಅಧ್ಯಕ್ಷೆ ಸಿ.ಕೆ. ಸಬಿತಾ, ಮೊಗ್ರಾಲ್ ಪುತ್ತೂರು ಗ್ರಾಮ ಪಂಚಾಯತ್ ಅಧ್ಯಕ್ಷ ಕೆ.ಎ.ಅಬ್ದುಲ್ಲ ಕುಂಞ, ಅಜಾನೂರು ಗ್ರಾಮ ಪಂಚಾಯತ್ ಉಪಾಧ್ಯಕ್ಷ ಮೂಲಕಂಡಂ ಪ್ರಭಾಕರನ್, ಚೆರುವತ್ತೂರು ಗ್ರಾಮ ಪಂಚಾಯತ್ ಅಧ್ಯಕ್ಷ ಟಿ.ನಾರಾಯಣನ್, ಎಡಿಎಂ ಕೆ.ವಿ.ಶ್ರುತಿ, ಉಪ ಕಲೆಕ್ಟರ್ ಲಿಪು ಎಸ್.ಲಾರೆನ್ಸ್, ಕಾಸರಗೋಡು ಆರ್‌ಡಿಒ ಬಿನು ಜೋಸೆಫ್, ಕಾಞಂಗಾಡು ಆರ್‌ಡಿಒ ಕೆ.ಆರ್.ಮನೋಜ್, ಮೋಟಾರು ವಾಹನ ಇಲಾಖೆ ಆರ್‌ಡಿಒ ಜೆ.ಗೆರಾರ್ಡ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಉಮೇಶ್ ಗರ್ಗ್, ಮೇಘಾ ಕನ್‌ಸ್ಟ್ರಕ್ಷನ್ ಪ್ರತಿನಿಧಿಗಳು ಮತ್ತು ಯುಎಲ್‌ಸಿಸಿಎಸ್ ಪ್ರತಿನಿಧಿಗಳು ಸಭೆಯಲ್ಲಿ ಮಾತನಾಡಿದರು.



ವಿಶೇಷ ಪರಿಹಾರ ಶಿಬಿರ

ಕಾಸರಗೋಡು ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾರ್ಯ ನಡೆಯುತ್ತಿರುವ ಪ್ರದೇಶಗಳ ಎಲ್ಲಾ ಗ್ರಾಮ ಪಂಚಾಯತ್‌ಗಳು ಮತ್ತು ನಗರಸಭೆಗಳ ಅಧ್ಯಕ್ಷರು ಸಭೆಯಲ್ಲಿ ವಿವಿಧ ವಿಷಯಗಳನ್ನು ಪ್ರಸ್ತಾಪಿಸಿದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಉಮೇಶ್ ಗರ್ಗ್ ಮತ್ತು ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಗುತ್ತಿಗೆ ಕಂಪೆನಿಯ ಪ್ರತಿನಿಧಿಗಳು ಸಭೆಯಲ್ಲಿ ಪ್ರಸ್ತುತ ನಡೆಯುತ್ತಿರುವ ನಿರ್ಮಾಣ ಕಾರ್ಯದ ಪ್ರಗತಿಯನ್ನು ವಿವರಿಸಿದರು. ಮನೆಗಳಿಗೆ ನೀರು ನುಗ್ಗಿ ಸ್ಥಳಾಂತರಗೊಳ್ಳಬೇಕಾದ ಸಂದರ್ಭದಲ್ಲಿ ವಿಶೇಷ ಪರಿಹಾರ ಶಿಬಿರಗಳನ್ನು ಪ್ರಾರಂಭಿಸುವಂತೆ ತಹಶೀಲ್ದಾರರು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳ ಕಾರ್ಯದರ್ಶಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಿಎಂ ಕುರ್ಚಿ ನನ್ನದಲ್ಲ, ಜನರದ್ದು: ಸಿಎಂ ಡಿಕೆಶಿ

• **ಬೆಂಗಳೂರು:** ಸಿಎಂ ಕುರ್ಚಿ ಈ ಡಿ.ಕೆ. ಶಿವಕುಮಾರ್‌ದಲ್ಲ, ಇದು ಜನರ ಕುರ್ಚಿ. ಜನರು ಕೊಟ್ಟಿರುವ ಅಧಿಕಾರವನ್ನು ಜನರ ಸೇವೆಗೆ ಮುಡಿಪಾಗಿಡುತ್ತೇನೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊದಲ ಸಚಿವ ಸಂಪುಟ ಸಭೆ ಬಳಿಕ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು. ನನ್ನ ವೈಯಕ್ತಿಕ ವಿಚಾರ ಬದಿಗಿಟ್ಟು, ರಾಜ್ಯದ ಜನರ ಸೇವೆಗೆ ಸಂಕಲ್ಪ ಮಾಡಿ ಈ ಅಧಿಕಾರ ಸ್ವೀಕರಿಸಿದ್ದೇನೆ. ಹಿಂದಿನ ಹೆಜ್ಜೆಗಳನ್ನು ಮರೆತವನು ಮುಂದಿನ ಹೆಜ್ಜೆ ಇಡಲಾರ ಎಂಬ ಮಾತನ್ನು ನಂಬಿರುವವನು ನಾನು. ನಾವು ನಮ್ಮ ಬೇರು ಮರೆತರೆ ಫಲ ಸಿಗುವುದಿಲ್ಲ ಎಂದು ಹೇಳುತ್ತಿರುತ್ತೇನೆ. ಇಂದು ಹೊಸ ದಿನ. ಹೊಸ ಕೆಲಸ ಮಾಡಿ, ಹೊಸ ಅವಕಾಶಗಳನ್ನು ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯದ ಜನತೆ ನೀಡಿದ್ದಾರೆ. ಬಾಕಿ ಇರುವ 2 ವರ್ಷಗಳಲ್ಲಿ ರಾಜ್ಯದ ಜನರ ಸೇವೆ ಮಾಡಲು ಏನೆಲ್ಲಾ ಸೇವೆ ಮಾಡಬಹುದು, ರಾಜ್ಯದ ಕಲ್ಯಾಣಕ್ಕೆ ನಾನು ಹೊಸ ಅವಕಾಶಗಳನ್ನು ಹುಡುಕುತ್ತಿದ್ದೇನೆ ಎಂದು ತಿಳಿಸಿದರು.


ಎಲ್ಲಾ ಗೊಂದಲಗಳಿಗೆ ಹೈಕಮಾಂಡ್ ನಾಯಕರು ತೆರೆ ಎಳೆದಿದ್ದಾರೆ: ಮಾಧ್ಯಮಗಳು ಇಷ್ಟು ದಿನ ಅಧಿಕಾರ ಹಸ್ತಾಂತರ, ನಾಯಕತ್ವ ಬದಲಾವಣೆ ವಿಚಾರವಾಗಿ ಅನೇಕ ಸುದ್ದಿ, ಹೇಳಿಕೆಗಳನ್ನು ಪ್ರಸಾರ ಮಾಡುತ್ತಿದ್ದವು. ಮಲಗಿದ್ದವರನ್ನು ಎಬ್ಬಿಸಿ, ಎದ್ದಿದ್ದವರನ್ನು ಮಲಗಿಸುತ್ತಿದ್ದರು. ನಮ್ಮ ಪಕ್ಷದ ವರಿಷ್ಠರು ಇದಕ್ಕೆಲ್ಲ ಈಗ ತೆರೆ ಎಳೆದಿದ್ದಾರೆ. ಶುಭ ಗಳಿಗೆ, ಶುಭ ಮುಹೂರ್ತ ಬರುತ್ತದೆ. ಸ್ವಲ್ಪ ತಾಳ್ಮೆಯಿಂದ ಕಾಯಿರಿ ಎಂದು ಹೇಳುತ್ತಲೇ ಇದ್ದೆ. ಇಂದು ಸಂಜೆ 4.15ಕ್ಕೆ ಶುಭ ಗಳಿಗೆ, ಶುಭ ಮುಹೂರ್ತಕ್ಕೆ ಮಾಧ್ಯಮಗಳು ಹಾಗೂ ರಾಜ್ಯದ ಜನತೆ ಸಾಕ್ಷಿಯಾಗಿದ್ದಾರೆ ಎಂದು ತಿಳಿಸಿದರು.

ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ: ರಾಜ್ಯದ ಜನತೆಗೆ ನನ್ನ ಮೇಲೆ ಅಪಾರ ವಿಶ್ವಾಸ ಇದೆ. ಹಿಂದೆ ಅನೇಕ ಟೀಕೆ, ಹೊಗಳಿಕೆ ವ್ಯಕ್ತವಾಗಿರಬಹುದು. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ ಎಂದು ನಾನು ಹೇಳಿದ್ದೆ. ರಾಜ್ಯದ ಆರ್ಥಿಕತೆಯನ್ನು ಹೊಸ ಬೆಳಕು ಮಾಡಿಸಲು ನನ್ನ 40 ವರ್ಷಗಳ ರಾಜಕೀಯ ಅನುಭವದಲ್ಲಿ ಪ್ರಯತ್ನ ಮಾಡುತ್ತೇನೆ. ಇದೇ ವಿಶ್ವಾಸ ಮತ್ತೆ ರಾಜ್ಯದ ಜನರ ಸೇವೆ ಮಾಡಿ, ಸಾಕ್ಷಿಗುಡ್ಡೆ ಬಿಟ್ಟು ಹೋಗಲು ಅವಕಾಶ ಸಿಕ್ಕಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದಿದ್ದಾರೆ: ಕಾಂಗ್ರೆಸ್ ಕಾರ್ಯಕರ್ತರು, ಜನರು ಬಹಳ ನಂಬಿಕೆಯಿಂದ ಕೊಟ್ಟಿರುವ ಅವಕಾಶ. ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವದಲ್ಲಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಈ ತೀರ್ಮಾನ ಮಾಡಿದ್ದಾರೆ. ಇದು ಸ್ವಲ್ಪ ತಡವಾಗಿದೆ. ಆದರೂ ನಮ್ಮ ನಾಯಕರಾದ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದಿದ್ದಾರೆ. ನಮ್ಮ ವರಿಷ್ಠರು ನಮ್ಮಿಬ್ಬರನ್ನು ಕರೆಸಿ ಈ ತೀರ್ಮಾನ ಮಾಡಿದಾಗ, ಸಿದ್ದರಾಮಯ್ಯ ಅವರು ಬಹಳ ಸಂತೋಷದಿಂದ ನನಗೆ ಜಾಗ ಮಾಡಿಕೊಟ್ಟಿದ್ದಾರೆ ಎಂದರು.

ಮಾನವ ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇನೆ: ಗ್ರಾಮೀಣ ಭಾಗದ ರೈತರ ಪರಿಸ್ಥಿತಿ ಹಾಗೂ ನಗರ ಪ್ರದೇಶ ಜನರ ಸಮಸ್ಯೆ ನಾನು ಅರಿತಿದ್ದೇನೆ. 42% ಜನ ನಗರದಲ್ಲಿದ್ದಾರೆ. ಜನ ಉದ್ಯೋಗಕ್ಕಾಗಿ ನಗರಗಳತ್ತ ವಲಸೆ ಬರುತ್ತಿದ್ದಾರೆ. ಬೀದಿ ವ್ಯಾಪಾರ ಮಾಡಿಕೊಂಡಾದರೂ ಒಳ್ಳೆಯ ಬದುಕು, ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ವ್ಯವಸಾಯ ತೊರೆದು ನಗರಗಳತ್ತ ಬರುತ್ತಿದ್ದಾರೆ. ಈ ಸರ್ಕಾರದ ಪ್ರತಿ ತೀರ್ಮಾನ ಕೇವಲ ಶಿವಕುಮಾರ್ ತೀರ್ಮಾನ ಮಾತ್ರವಲ್ಲ, ಸಾಮೂಹಿಕ ತೀರ್ಮಾನವಾಗಿರುತ್ತದೆ. ನನಗೆ ಜಾತಿ ಮೇಲೆ, ಧರ್ಮದ ಮೇಲೆ ನಂಬಿಕೆ ಇಲ್ಲ. ನನಗೆ ನನ್ನದೇ ಆದ ನಂಬಿಕೆ ಇರಬಹುದು. ಆದರೆ ಮಾನವ ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿರುವವನು ಎಂದು ತಿಳಿಸಿದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆಣೀಜಿ

◈ ಶಿವ ಬೇರೆಯವರ ದೋಷವನ್ನು ಕಂಡಲ್ಲಿ, ಬೇರೆಯವರ ಒಳ್ಳೆಯ ಗುಣಗಳನ್ನು ಚಂದಿರನಂತೆ ತಲೆಯ ಮೇಲೆ ಹೊತ್ತಂತೆ ನಾವು ಇನ್ನೊಬ್ಬರ ದೋಷಗಳನ್ನು ಹೇಳದೆ ಸದ್ಗುಣಗಳನ್ನು ಪ್ರಚಾರ ಮಾಡಬೇಕು

– ಪುತ್ತಿಗೆ ಶ್ರೀಗಳು

– ನಾವು ಇನ್ನೊಬ್ಬರ ಸಣ್ಣ ದೋಷವನ್ನು ದೊಡ್ಡದಾಗಿ ಹೇಳುತ್ತೇವೆ, ದೋಷವಿಲ್ಲದಿದ್ದಲ್ಲಿ ಇಲ್ಲದ ಸಲ್ಲದ ಕಥೆಯನ್ನು ಕಟ್ಟಿ ದೋಷಾರೋಪಣೆಯನ್ನು ಮಾಡಿ ಕೃತಾರ್ಥರಾಗಿ ಬಾಳುತ್ತೇವೆ!

ದಿನ ಭವಿಷ್ಯ

ಮೇಷ
ನಿಮ್ಮ ಪಾಲಿಗೆ ಶುಭದಿನ. ಗುರಿ ಸಾಧನೆ. ವೃತ್ತಿಯಲ್ಲಿ ಉನ್ನತಿಯ ಸಂಕೇತ. ಭಾವನಾತ್ಮಕ ನೋವು ಉಪಶಮನ. ಮನಸ್ಸು ನಿರಾಳ.

ವೃಷಭ
ಉಳಿದವರ ಮುಂದೆ ತಲೆಬಾಗಿ ವರ್ತಿಸಿ. ದುಡುಕು, ಆತಂಕ ಪ್ರತಿಕೂಲ ಪರಿಣಾಮ ತಂದೀತು. ಮನೆಯಲ್ಲಿ ಅಸಹಕಾರ.

ಮಿಥುನ
ಮನೆಯವರ ಜತೆ ಮನಸ್ಸು ಬಿಚ್ಚಿ ಮಾತನಾಡಿ. ಮುಚ್ಚುಮರೆ ಮಾಡದಿರಿ. ಕೆಲಸದಲ್ಲಿ ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡಬಹುದು.

ಕಟಕ
ಸಹೋದ್ಯೋಗಿ ಜತೆ ಸೌಜನ್ಯದ ವರ್ತನೆ ಇರಲಿ. ಸಂಬಂಧ ಕೆಟ್ಟರೆ ಬೇಗ ಸರಿಯಾಗದು. ಆಪ್ತ ವ್ಯಕ್ತಿಯೊಬ್ಬರು ನೋವು ಉಂಟು ಮಾಡಬಹುದು.

ಸಿಂಹ
ಆತ್ಮೀಯರ ಮನಸ್ಸಿನ ನೋವು ಶಮನಕ್ಕೆ ಗಮನ ಕೊಡಿ. ಹಣದ ಒತ್ತಡ. ವೃತ್ತಿ ಕಾರ್ಯದಲ್ಲಿ ಸಣ್ಣಪುಟ್ಟ ವಿಘ್ನಗಳು ಬರಬಹುದು.

ಕನ್ಯಾ
ಗ್ರಹಗತಿ ಅನುಕೂಲ ಪೂರಕವಾಗಿಲ್ಲ. ಕಾರ್ಯ ವಿಳಂಬ. ಇತರರು ನಿಮ್ಮ ಮನ ನೋಯಿಸುತ್ತಾರೆ. ಆತ್ಮೀಯರ ಜತೆ ಜಗಳ ಸಂಭವ. ತಾಳ್ಮೆ ಅವಶ್ಯ.

ತುಲಾ
ಕುಟುಂಬಸ್ಥರ ಜತೆ ಆತ್ಮೀಯವಾಗಿ ಕಳೆಯಿರಿ. ನಿಮ್ಮದೇ ವೃತ್ತಿ ಕಾರ್ಯದಲ್ಲಿ ಕೌಟುಂಬಿಕ ಹಿತಾಸಕ್ತಿ ಮರೆಯದಿರಿ. ಆರ್ಥಿಕ ಒತ್ತಡ.

ವೃಶ್ಚಿಕ
ವೃತ್ತಿ ಕ್ಷೇತ್ರದಲ್ಲಿ ಜಗಳದಲ್ಲಿ ತೊಡಗದಿರಿ. ಹೆಚ್ಚು ತಾಳ್ಮೆ, ಶಿಸ್ತು ಅವಶ್ಯ. ಮನೆಯವರ ಆರೋಗ್ಯ ಚಿಂತೆಗೆ ಕಾರಣವಾದೀತು. ಆರ್ಥಿಕ ಬಿಕ್ಕಟ್ಟು.

ಧನು
ಗುರಿ ಸಾಧನೆ ತುಸು ಕಷ್ಟಕರವಾದೀತು. ಹೊಸ ವ್ಯವಹಾರದಲ್ಲಿ ತಕ್ಷಣ ಹಣ ಹೂಡಬೇಡಿ. ಪರಿಚಿತರೇ ನಿಮಗೆ ವಂಚನೆ ಮಾಡಬಹುದು, ಎಚ್ಚರ.

ಮಕರ
ಆಪ್ತರ ಸಲಹೆ ನಿಮಗೆ ಅಪಥ್ಯವಾದೀತು. ಆದರೆ ಅದಕ್ಕೆ ಕಿವಿಗೊಡಿ. ತೀರ್ಥಕ್ಷೇತ್ರ ಭೇಟಿ ಸಾಧ್ಯತೆ ಕಾಣುತ್ತಿದೆ. ಮಾನಸಿಕ ನೆಮ್ಮದಿಗೆ ಇದು ದಾರಿ.

ಕುಂಭ
ನಿಮ್ಮ ಆದರ್ಶ ಪಾಲಿಸಲು ಕೆಲವರು ಯತ್ನಿಸುವರು. ಇದು ನಿಮಗೆ ಸಲ್ಲುವ ಗೌರವ. ಇತರರ ನೋವಿಗೆ ಪರಿಹಾರ ತೋರುವಿರಿ.

ಮೀನ
ಕೆಲವರ ಜತೆ ಭಿನ್ನಾಭಿಪ್ರಾಯ ಮೂಡಿದರೂ ಅತಿರೇಕದ ವರ್ತನೆ ತೋರದಿರಿ. ಶಾಂತವಾಗಿ ವರ್ತಿಸಿ. ಮನೆಯಲ್ಲಿ ಹರುಷ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 9,5,0,2

ನಾಗೇಂದ್ರ ವಿರುದ್ಧ ಚಾರ್ಜ್ ಶೀಟ್ ಸಲ್ಲಿಕೆ

• **ಬಳ್ಳಾರಿ:** ರಾಜ್ಯ, ದೇಶದಲ್ಲೇ ಸದ್ದು ಮಾಡಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣದ ತನಿಖೆ ಬಹುತೇಕ ಪೂರ್ಣಗೊಳಿಸಿದ ಸಿಬಿಐ ಅಧಿಕಾರಿಗಳು, ಮಾಜಿ ಸಚಿವ, ಗ್ರಾಮೀಣ ಶಾಸಕ ಬಿ.ನಾಗೇಂದ್ರ ಹಾಗೂ ಅವರ ಸಹಚರರ ವಿರುದ್ಧ ಸಿಬಿಐ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ. ಹಗರಣದ ತನಿಖೆ ಬೆನ್ನು ಬಿದ್ದ ಸಿಬಿಐ ಅಧಿಕಾರಿಗಳು, ಹಗರಣದಲ್ಲಿ ನಾಗೇಂದ್ರ, ಅವರ ಆಪ್ತಸಹಾಯಕ ನೆಕ್ಕಂಟಿ ನಾಗರಾಜ್, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿಗಳು ಸೇರಿದಂತೆ ಇತರೆ ಸರ್ಕಾರಿ ಇಲಾಖೆ ಅಧಿಕಾರಿಗಳು, ಯುನಿಯನ್ ಬ್ಯಾಂಕ್, ಇಂಡಿಯನ್ ಓವರ್ ಸೀಸ್ ಬ್ಯಾಂಕ್, ಹೈದ್ರಾಬಾದ್‌ನ ಕುಕ್ಕಟಪಲ್ಲಿ ಶಾಖೆ ಸಿಬ್ಬಂದಿಗಳು ಹಾಗೂ ಮಧ್ಯವರ್ತಿಗಳು ಸೇರಿದಂತೆ ಒಟ್ಟು 30 ಜನರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದಾರೆ. ಸಹೋದರ, ಮಾಜಿ ಸಚಿವ ನಾಗೇಂದ್ರ ಅವರ ರಾಜಕೀಯ ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಬೆಳೆದಿದ್ದಾರೆ. ಇದನ್ನು ಸಹಿಸದ ಸಹಿಸದ ಕೆಲವರು, ವಾಲ್ಮೀಕಿ ಹಗರಣದಲ್ಲಿ ಉದ್ದೇಶ ಪೂರ್ವಕವಾಗಿ ಸುಳ್ಳು ಆರೋಪಗಳನ್ನು ಹೊರೆಸಿ, ಸಿಲುಕಿಸಿದ್ದಾರೆ. ಈ ಎಲ್ಲ ಆರೋಪಗಳಿಂದ ನಮ್ಮ ಸಹೋದರ ಮುಕ್ತರಾಗಿ ಹೊರ ಬರಲಿದ್ದಾರೆ ಎಂದು ನಾಗೇಂದ್ರ ಅವರ ಸಹೋದರ ವೆಂಕಟೇಶ ಪ್ರಸಾದ್ ಹೇಳಿದ್ದಾರೆ.

ಭರಪೂರ ಬಳುವಳಿ

ಪುಟ 0 ➜ಅದಕ್ಕೂ ಮುನ್ನ ಅವರು ವೇದಿಕೆಯಲ್ಲಿದ್ದ ವೀರ ಗಂಗಾಧರ ಅಜ್ಜಯ್ಯನ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಬಳಿಕ ವೇದಿಕೆಯತ್ತ ಮುಖಮಾಡಿ ಅಡ್ಡ ಬಿದ್ದು ಸಭೆಯಲ್ಲಿದ್ದವರಿಗೆ ನಮಿಸಿದರು. ಬಳಿಕ ರಾಜ್ಯಪಾಲರಿಂದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಈ ವೇಳೆ ಶಿವಕುಮಾರ್ ಅವರ ಕೈಯಲ್ಲಿ ಸಂವಿಧಾನದ ಪುಸ್ತಕವಿತ್ತು. ಅವರು ವೀರ ಗಂಗಾರಧರ ಅಜ್ಜಯ್ಯ ಅವರ ಹೆಸರಿನಲ್ಲಿ ಪ್ರಮಾಣ ಮಾಡಿದರು.

ಅಂಬೇಡ್ಕರ್, ಸಂವಿಧಾನದ ಹೆಸರಲ್ಲಿ ಪ್ರಮಾಣ: ಡಿ.ಕೆ. ಶಿವಕುಮಾರ್ ಅವರೊಂದಿಗೆ ಉಪ ಮುಖ್ಯಮಂತ್ರಿಯಾಗಿ ಡಾ. ಜಿ. ಪರಮೇಶ್ವರ ಮತ್ತು 12 ಜನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಡಾ. ಜಿ ಪರಮೇಶ್ವರ್ ಅವರು ಡಾ. ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಮಾಣ ಮಾಡಿದರೆ, ಯತೀಂದ್ರ ಸಿದ್ದರಾಮಯ್ಯ ಅವರು ಸಂವಿಧಾನದ ಹೆಸರಿನಲ್ಲಿ ಪ್ರಮಾಣ ಮಾಡಿದರು.

ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್, ಯು.ಟಿ. ಖಾದರ್, ಭೈರತಿ ಸುರೇಶ್ ಮತ್ತು ಡಾ. ಶರಣ ಪ್ರಕಾಶ್ ಪಾಟೀಲ್ ಅವರು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿದರು. ಎಂ.ಬಿ. ಪಾಟೀಲ್ ಅವರು ವಿಶ್ವಗುರು ಅಣ್ಣ ಬಸವಣ್ಣ, ಬಸವಾದಿ ಶರಣರು ಮತ್ತು ಸಿದ್ದೇಶ್ವರ ಮಹಾ ಸ್ವಾಮಿ ಹೆಸರಿನಲ್ಲಿ, ಈಶ್ವರ ಖಂಡ್ರೆ ದೇವರ ಮತ್ತು ಚೆನ್ನಬಸಪ್ಪ ಪಟ್ಟದೇವರ ಹೆಸರಿನಲ್ಲಿ ಪ್ರಮಾಣ ಮಾಡಿದರು. ಉಳಿದಂತೆ ರಾಮಲಿಂಗಾರೆಡ್ಡಿ, ಸತೀಶ್ ಜಾರಕಿಹೊಳಿ, ಕೃಷ್ಣ ಬೈರೇಗೌಡ ಮತ್ತು ಪ್ರಿಯಾಂಕ್ ಖರ್ಗೆ ಶ್ರದ್ಧಾ ಪೂರ್ವಕವಾಗಿ ಪ್ರಮಾಣ ಕೈಗೊಂಡರು.

ವೇದಿಕೆಯಲ್ಲಿ ಎಐಸಿಸಿ ಅಧ್ಯಕ್ಷ ಮತ್ತು ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ, ತೆಲಂಗಾಣ ಮುಖ್ಯ ಮಂತ್ರಿ ರೇವಂತ್ ರೆಡ್ಡಿ, ಕೇರಳಂ ಮುಖ್ಯಮಂತ್ರಿ ವಿ.ಡಿ. ಸತೀಶನ್, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಉಪಸ್ಥಿತರಿದ್ದರು.

ರೇಷ್ಮೆ ಪಂಚೆ ಶರ್ಟ್‌ನಲ್ಲಿ ಮಿಂಚಿದ ಡಿಕೆಶಿ

ತಮ್ಮ ಜೀವನದ ವಿಶೇಷ ಕ್ಷಣದಲ್ಲಿ ಡಿ.ಕೆ. ಶಿವಕುಮಾರ್ ಅವರು ರೇಷ್ಮೆ ಪಂಚೆ, ಶರ್ಟ್ ಧರಿಸಿ ಮಿಂಚಿದರು. ಶಿವಕುಮಾರ್ ಅವರು ಧರಿಸಿದ್ದ ಶಲ್ಯದಲ್ಲಿ ಕಾಂಗ್ರೆಸ್‌ನ ಧ್ವಜ, ಕೈಯಲ್ಲಿ ಭಾರತದ ಸಂವಿಧಾನ ಪುಸ್ತಕ ಹಿಡಿಯುವ ಮೂಲಕ ತಾನೊಬ್ಬ ಭಾರತೀಯ ಅದರಲ್ಲೂ ಕಟ್ಟಾ ಕಾಂಗ್ರೆಸಿಗ ಎಂಬುದನ್ನು ಸಾರಿದರು.

ಕಾರ್ಯಕ್ರಮಕ್ಕೆ ಸಾಕ್ಷಿಯಾದ ಗಣ್ಯರು

ನೂತನ ಮುಖ್ಯಮಂತ್ರಿಗಳ ಪ್ರಮಾಣವಚನ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಕನಕಪೀಠದ ಸ್ವಾಮೀಜಿ ನಿರಂಜನಾನಂದಪುರಿ, ಸಂತ ಸೇವಾಲಾಲ್ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಮಹಾಸ್ವಾಮಿ, ಪೇಜಾವರ ಮಠದ ಶ್ರೀವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಭೋವಿ ಮಠದ ಇಮ್ಮಡಿ ಸಿದ್ದೇಶ್ವರ ಸ್ವಾಮೀಜಿ, ದ್ವಾರಕಾನಾಥ ಗುರೂಜಿ, ವಾಲ್ಮೀಕಿ ಗುರು ಪೀಠದ ಪ್ರಸನ್ನಾನಂದ ಸ್ವಾಮೀಜಿ, ಗದುಗಿನ ತೋಂಟದಾರ್ಯ ಸ್ವಾಮೀಜಿ, ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಸಹಿತ 55ಕ್ಕೂ ಅಧಿಕ ಮಠಾಧೀಶರು ಉಪಸ್ಥಿತರಿದ್ದರು. ಕ್ರೈಸ್ತ ಸಮುದಾಯದ ಧರ್ಮಗುರು ಆರ್ಚ್ ಬಿಷಪ್ ಡಾ. ಪೀಟರ್ ಮಚಾದೋ, ಮುಸ್ಲಿಂ ಸಮುದಾಯ ಧರ್ಮಗುರು ಕಲಬುರಗಿಯ ದರ್ಗಾ ಹಜರತ್ ಖ್ವಾಜಾ ಬಂದೇನವಾಜ್‌ನ ಹಜರತ್ ಹಫೀಜ್ ಡಾ.ಸೈಯದ್ ಮೊಹಮ್ಮದ್ ಅಲಿ ಅಲ್ ಹುಸೈನ್, ಶಿವಕುಮಾರ್ ಅವರ ಧರ್ಮಪತ್ನಿ ಉಷಾ ಶಿವಕುಮಾರ್, ಪುತ್ರಿ ಐಶ್ವರ್ಯ ಡಿ.ಕೆ.ಎಸ್. ಹೆಗ್ಡೆ, ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಭಾಗವಹಿಸಿದ್ದರು. ಕನಕಪುರ ದೊಡ್ಡಾಲಹಳ್ಳಿ ಸರಕಾರಿ ಶಾಲೆ ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು, ಪೌರ ಕಾರ್ಮಿಕರು, ರೈತ ಮುಖಂಡರು, ದಲಿತ ಸಂಘಟನೆ ಮುಖಂಡರು, ಹಿಂದುಳಿದ ವರ್ಗಗಳ ಮುಖಂಡರು, ಸ್ತ್ರೀ ಶಕ್ತಿ ಸಂಘಗಳ ಪ್ರತಿನಿಧಿಗಳು, ಮಹಿಳಾ ಮುಖಂಡರು, ಸಿನಿಮಾರಂಗ, ನ್ಯಾಯಾಂಗ, ಕ್ರೀಡಾಕ್ಷೇತ್ರ, ರಂಗಭೂಮಿ, ಸಾಹಿತಿಗಳು, ಕಲಾವಿದರು, ಕೈಗಾರಿಕೋದ್ಯಮಿಗಳು, ವಾಣಿಜ್ಯೋದ್ಯಮಿಗಳು, ಹೋಟೆಲ್ ಉದ್ಯಮಿಗಳು, ಯುವ ಮುಖಂಡರು ಮತ್ತಿತರರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಸಿದ್ದರಾಮಯ್ಯ ಸಂಪುಟದ 16 ಸಚಿವರಿಗೆ ಕೊಕ್

ಮೊದಲ ಹಂತದಲ್ಲಿ 13 ಶಾಸಕರು ಮಾತ್ರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದು, ಸಿದ್ದರಾಮಯ್ಯ ಸಂಪುಟದಲ್ಲಿದ್ದ 16 ಶಾಸಕರನ್ನು ಸಂಪುಟದಿಂದ ಕೈಬಿಡಲಾಗಿದೆ.

1.	ಜಮೀರ್ ಅಹಮದ್ ಖಾನ್	11.	ಮಧು ಬಂಗಾರಪ್ಪ
2.	ಎಚ್.ಸಿ.ಮಹದೇವಪ್ಪ	12.	ಎಂ.ಸಿ.ಸುಧಾಕರ್
3.	ಕೆ.ವೆಂಕಟೇಶ್	13.	ಶರಣಬಸಪ್ಪ ದರ್ಶಾನಪುರ
4.	ಶಿವರಾಜ್ ಎಸ್. ತಂಗಡಗಿ	14.	ಎಸ್.ಎಸ್. ಮಲ್ಲಿಕಾರ್ಜುನ
5.	ಆರ್.ಬಿ.ತಿಮ್ಮಾಪುರ್	15.	ಸಂತೋಷ್ ಲಾಡ್
6.	ಶಿವಾನಂದ ಪಾಟೀಲ್	16.	ಎನ್.ಚೆಲುವರಾಯಸ್ವಾಮಿ
7.	ಎಚ್.ಕೆ.ಪಾಟೀಲ್		ರಾಜೀನಾಮೆ ಹಾಗೂ ನಿಧನದಿಂದ ತೆರವಾದವರು:
8.	ಎನ್.ಎಸ್.ಬೋಸರಾಜು	17.	ಬಿ.ನಾಗೇಂದ್ರ
9.	ದಿನೇಶ್ ಗುಂಡುರಾವ್	18.	ಕೆ.ಎನ್.ರಾಜಣ್ಣ
10.	ಲಕ್ಷ್ಮೀ ಹೆಬ್ಬಾಳ್ಕರ್	19.	ದಿವಂಗತ ಡಿ.ಸುಧಾಕರ್

- ▸▸ ಶಿವಕುಮಾರ್ ಅವರ ಪತ್ನಿ ಉಷಾ, ಮಗಳು ಐಶ್ವರ್ಯ ಡಿಕೆಎಸ್ ಹೆಗ್ಡೆ ಮತ್ತು ಇತರ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.
- ▸▸ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಿರ್ಗಮಿತ ಸಿಎಂ ಸಿದ್ದರಾಮಯ್ಯ, ಮಾಜಿ ಸಿಎಂ ವೀರಪ್ಪ ಮೊಯ್ಲಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯಸಭಾ ಸದಸ್ಯ ಕೆ.ಸಿ. ವೇಣುಗೋಪಾಲ್, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಕೇರಳ ಸಿಎಂ ವಿ.ಡಿ. ಸತೀಶನ್, ಹಿಮಾಚಲ ಪ್ರದೇಶ ಸಿಎಂ ಸುಖವಿಂದರ್ ಸಿಂಗ್ ಸುಖು ಭಾಗಿ.
- ▸▸ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಉಪಸ್ಥಿತರಿದ್ದರು.
- ▸▸ ಇನ್ಫೋಸಿಸ್ ಸಹ-ಸಂಸ್ಥಾಪಕ ನಾರಾಯಣ ಮೂರ್ತಿ, ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಉಪಸ್ಥಿತರಿದ್ದರು.
- ▸▸ ಆದಿಚುಂಚನಗಿರಿ ಸಂಸ್ಥಾನದ ನಿರ್ಮಲಾನಂದನಾಥ ಸ್ವಾಮೀಜಿ ಉಪಸ್ಥಿತಿ
- ▸▸ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಮಾಜಿ ಭಾರತೀಯ ಕ್ರಿಕೆಟಿಗರಾದ ಮೊಹಮ್ಮದ್ ಅಜರುದ್ದೀನ್, ಅನಿಲ್ ಕುಂಬ್ಳೆ ಉಪಸ್ಥಿತರಿದ್ದರು.
- ▸▸ ನಟ ಧನಂಜಯ, ಸಂಗೀತ ನಿರ್ದೇಶಕರಾದ ಅರ್ಜುನ್ ಜನ್ಯ ಮತ್ತು ಗುರುಕಿರಣ್ ಮತ್ತು ನಟಿ-ರಾಜಕಾರಣಿ ರಮ್ಯಾ ಭಾಗಿ
- ▸▸ ಪ್ರಮಾಣವಚನ ಕಾರ್ಯಕ್ರಮ ಬಳಿಕ ಶಿವಕುಮಾರ್ ಅವರು ವಿಧಾನಸೌಧ ಪ್ರವೇಶಿಸುವ ಮುನ್ನ
- ▸▸ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.
- ▸▸ ಜಗಜ್ಯೋತಿ ಬಸವಣ್ಣ ನಾಡಪ್ರಭು ಕೆಂಪೇಗೌಡ, ರಾಷ್ಟ್ರಪಿತ ಮಹಾತ್ಮಾ ಗಾಂಧಿ, ದೇಶದ ಪ್ರಥಮ ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರು ಅವರ ಪ್ರತಿಮೆಗೂ ಪುಷ್ಪ ನಮನ ಸಲ್ಲಿಸಿದರು.
- ▸▸ ವಿಧಾನಸೌಧದ ಉತ್ತರ ದ್ವಾರದ ಮೆಟ್ಟಿಲುಗಳಿಗೆ ನಮಿಸಿ ವಿಧಾನಸೌಧ ಪ್ರವೇಶಿಸಿದರು.
- ▸▸ ವಿಧಾನಸೌಧದ ಮೂರನೇ ಮಹಡಿಯಲ್ಲಿ ಮುಖ್ಯಮಂತ್ರಿ ಕಚೇರಿಗೆ ಪ್ರವೇಶಿಸಿದ ಡಿ.ಕೆ ಶಿವಕುಮಾರ್ ಅವರು ಪುರೋಹಿತರ ವೇದಘೋಷಗಳ ಮಧ್ಯೆ ಮುಖ್ಯಮಂತ್ರಿ ಕುರ್ಚಿಗೆ ನಮಿಸಿ, ಆಸೀನರಾದರು.
- ▸▸ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ರಾಜ್ಯದ 230 ಬಸ್ ನಿಲ್ದಾಣಗಳಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಲಾಯಿತು.

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್: ಘೋಷಣೆ



ಪುಟ 0 ➜ರಾಜ್ಯದಲ್ಲಿ ಉದ್ಯೋಗ ಸಮಸ್ಯೆಯಿದ್ದು, 56 ಸಾವಿರ ಹುದ್ದೆಗಳು ಖಾಲಿ ಇವೆ. ಇವುಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಖಾಸಗಿ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪನೆ: ಸರ್ಕಾರದ ವತಿಯಿಂದ ಖಾಸಗಿ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪಿಸಿ, ಖಾಸಗಿ ಕಂಪನಿಗಳಿಗೆ ಬೇಕಾದ ಹುದ್ದೆಗಳ ಅನುಗುಣವಾಗಿ ತರಬೇತಿ ನೀಡಲಾಗುವುದು ಎಂದರು. ಅಲ್ಲದೆ, ಖಾಸಗಿ ಕಂಪನಿಗಳು ಕರ್ನಾಟಕದ ಉದ್ಯೋಗಿಗಳಿಗೆ ಹೆಚ್ಚಿನ ಪಾಲನ್ನು ನೀಡಬೇಕಾಗುತ್ತದೆ ಎಂದು ಹೇಳಿದರು. ಕಂಪನಿ ಅಥವಾ ಸಂಸ್ಥೆಗಳಿಗೆ ಯಾವ ರೀತಿಯ ಉದ್ಯೋಗಿಗಳ ಅಗತ್ಯವಿದೆಯೋ, ಅದಕ್ಕೆ ತಕ್ಕಂತೆ ಯುವಕರಿಗೆ ಉದ್ಯೋಗ ಆಧಾರಿತ ತರಬೇತಿ ನೀಡಲಾಗುವುದು. ತರಬೇತಿಯ ನಂತರ ಆಯಾ ಸಂಸ್ಥೆಗಳೇ ತಮಗೆ ಬೇಕಾದವರನ್ನು ಆಯ್ಕೆ ಮಾಡಿಕೊಳ್ಳಬಹುದು. ಉದ್ಯೋಗಗಳಲ್ಲಿ ಕನ್ನಡಿಗರಿಗೆ ಹೆಚ್ಚಿನ ಪಾಲನ್ನು ನೀಡಲಾಗುವುದು. ಇದಕ್ಕಾಗಿ ವೈದ್ಯಕೀಯ, ಕಾಲೇಜುಗಳು ಸೇರಿದಂತೆ ವಿವಿಧ ರಂಗಗಳ ಪ್ರಮುಖರನ್ನು ಕರೆಸಿ ವಿಶ್ವಾಸಕ್ಕೆ ತೆಗೆದುಕೊಂಡು ಶೇಕಡಾವಾರು ಪ್ರಮಾಣವನ್ನು ನಿಗದಿಪಡಿಸಲಾಗುವುದು ಎಂದು ತಿಳಿಸಿದರು. ಈ ಕುರಿತು ಸಂಪೂರ್ಣವಾಗಿ ಚರ್ಚಿಸಿ ವರದಿ ನೀಡಲು ಕ್ಯಾಬಿನೆಟ್ ಸಹೋದ್ಯೋಗಿಗಳಿಗೆ ಸೂಚಿಸಲಾಗಿದ್ದು, ಒಂದು ತಿಂಗಳ ಒಳಗಾಗಿ ವಿವರವಾದ ವರದಿ ಸಲ್ಲಿಸಲಿದ್ದಾರೆ. ಎಲ್ಲವೂ ಆನ್‌ಲೈನ್ ಮೂಲಕವೇ ನಡೆಯಲಿದ್ದು, ಯಾವುದೇ ಪ್ರಭಾವಕ್ಕೆ ಅವಕಾಶವಿರುವುದಿಲ್ಲ ಎಂದು ಹೇಳಿದರು.

10 ಸಾವಿರ ಭಾರತ್ ಜೋಡೋ ಯುವಕರ ಸಂಘ ಸ್ಥಾಪನೆ: ರಾಜ್ಯದಲ್ಲಿ 10 ಸಾವಿರ ಭಾರತ್ ಜೋಡೋ ಯುವಕರ ಸಂಘ ಸ್ಥಾಪಿಸಲಾಗುವುದು. ಮೊದಲ ಹಂತದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಒಟ್ಟು 6 ಸಾವಿರ ಸಂಘಗಳನ್ನು ಸ್ಥಾಪಿಸಲಾಗುವುದು. ಇದು ಯುವಕರಲ್ಲಿ ಕ್ರೀಡಾ ನಾಯಕತ್ವ ಬೆಳೆಸುವ ಉದ್ದೇಶ ಹೊಂದಿದೆ. ಪ್ರತಿ ಸಂಘಕ್ಕೆ 10 ಲಕ್ಷ ರೂ. ಸಹಾಯಧನ ನೀಡಲಾಗುವುದು ಎಂದರು. ಪ್ರತಿ ಸಂಘದಲ್ಲಿ ಕನಿಷ್ಠ 150ರಿಂದ 200 ಯುವಕರಿರುತ್ತಾರೆ. ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು, ನಾಟಕಗಳು, ನಾಯಕತ್ವದ ಗುಣಗಳನ್ನು ಬೆಳೆಸುವುದು ಮತ್ತು ಸಾಮಾಜಿಕ ಸಾಮರಸ್ಯ ಕಾಪಾಡುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ವಿದ್ಯುತ್ ಹಾಗೂ ನೀರು ಸಂಪರ್ಕ

2,500 ಚದರ ಅಡಿ ವಿಸ್ತೀರ್ಣದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುತ್ತೇವೆ. ಈ ಮೊದಲು ಒಸಿ, ಸಿಸಿ ಇಲ್ಲದೆ ವಿದ್ಯುತ್ ಸಂಪರ್ಕ ಸಿಗುತ್ತಿರಲಿಲ್ಲ. ಈಗ ಅದಕ್ಕೆ ರಿಲೀಫ್ ಕೊಡಲು ಮುಂದಾಗಿದ್ದೇವೆ ಎಂದರು.

ಡಾಂಬರೀಕರಣಕ್ಕೆ ಒತ್ತು

ಬೆಂಗಳೂರು ನಗರ ಪ್ರದೇಶದಲ್ಲಿ (ಜಿಬಿಎ, ಬಿಡಿ ವ್ಯಾಪ್ತಿಯಲ್ಲಿ) ರಸ್ತೆಗೆ ಡಾಂಬರೀಕರಣ ಮಾಡಲು 2 ಸಾವಿರ ಕೋಟಿ ರೂ.ಗಳನ್ನು ಹಣ ಬಿಡುಗಡೆ ಮಾಡಲು ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಮುಂದಿನ 3 ರಿಂದ 4 ತಿಂಗಳಲ್ಲಿ ಈ ಕೆಲಸವನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ವಿವರಿಸಿದರು.

ಬಿ ನಿಂದ ಎ ಖಾತೆಗೆ ಪರಿವರ್ತನೆ ರಾಜ್ಯಾದ್ಯಂತ ವಿಸ್ತರಣೆ

ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದ್ದ ಬಿ ಖಾತೆಯಿಂದ ಎ ಖಾತೆಗೆ ಪರಿವರ್ತನೆ ಮಾಡಿಕೊಳ್ಳುವ ಸೌಲಭ್ಯವನ್ನು ರಾಜ್ಯಾದ್ಯಂತ ವಿಸ್ತರಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಅರ್ಹ ಆಸ್ತಿಗಳ ದಾಖಲೆಗಳನ್ನು ಸರಿಪಡಿಸುವುದು. ಇದು ಸರ್ಕಾರದ ಭೂ ಗ್ಯಾರಂಟಿ (ಆರನೇ ಗ್ಯಾರಂಟಿ) ಯೋಜನೆಯಾಗಿದೆ. ಇದರಿಂದ ಸಾರ್ವಜನಿಕರು ಬ್ಯಾಂಕ್ ಲೋನ್ ಪಡೆಯಲು, ಮಕ್ಕಳಿಗೆ ಆಸ್ತಿ ಹಂಚಲು ಅಥವಾ ಇತರ ಕಾರ್ಯಗಳಿಗೆ ಅಧಿಕೃತ ದಾಖಲೆಗಳನ್ನು ಹೊಂದಲು ಸುಲಭವಾಗುತ್ತದೆ ಎಂದು ತಿಳಿಸಿದರು.

10 ವಿದೇಶಿಯರು ಸೇರಿ 21 ಜನ ಸಜೀವ ದಹನ

ಪುಟ 0 ➜ಗಾಯಗೊಂಡವರಲ್ಲಿ ಹಲವರ ಸ್ಥಿತಿ ಗಂಭೀರವಾಗಿದೆ.

ಅಕ್ರಮ ಕಾರ್ಯಾಚರಣೆ: ದಿಲ್ಲಿ ಸರ್ಕಾರದ ಬೆಡ್ ಆ್ಯಂಡ್ ಬ್ರೇಕ್‌ಫಾಸ್ಟ್ ನೀತಿಯಲ್ಲಿ ಕೇವಲ ಆರು ಕೊಠಡಿಗಳಿಗೆ ಮಾತ್ರ ಅನುಮತಿ ಇದ್ದರೂ, ಹೋಟೆಲ್‌ನಲ್ಲಿ ಬೇಸ್‌ಮೆಂಟ್ ಮತ್ತು ಮೇಲಿನ ಮಹಡಿಗಳಲ್ಲಿ ಅನಧಿಕೃತ ಕೊಠಡಿಗಳನ್ನು ನಿರ್ಮಿಸಿ ಒಟ್ಟು 25 ಕೊಠಡಿಗಳನ್ನು ನಡೆಸಲಾಗುತ್ತಿತ್ತು. ಕಟ್ಟಡದ ಎತ್ತರ 15 ಮೀಟರ್‌ಗಿಂತ ಹೆಚ್ಚಿದ್ದರಿಂದ ಅಗ್ನಿಶಾಮಕ ಸುರಕ್ಷತಾ ಅನುಮತಿ ಕಡ್ಡಾಯವಾಗಿತ್ತು. ಆದರೆ, ದಿಲ್ಲಿ ಅಗ್ನಿಶಾಮಕ ದಳಕ್ಕೆ ಯಾವುದೇ ಎನ್‌ಒಸಿ ಅರ್ಜಿ ಸಲ್ಲಿಕೆಯಾಗಿರಲಿಲ್ಲ.

ನರಹತ್ಯೆ ಆರೋಪದಲ್ಲಿ ಪ್ರಕರಣ: ಕಟ್ಟಡದ ಮಾಲೀಕ ಲವ್‌ಕೇಶ್, ಪರವಾನಗಿ ಹೊಂದಿರುವ ಜೈ ಮಿಶ್ರಾ ಮತ್ತು ಹೋಟೆಲ್ ಮಾಲೀಕ ಲೋಕೇಶ್ ಬಜಾಜ್ ವಿರುದ್ಧ ದಿಲ್ಲಿ ಪೊಲೀಸರು ನರಹತ್ಯೆ ಆರೋಪದಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ಸದ್ಯಕ್ಕೆ ಯಾರನ್ನೂ ಬಂಧಿಸಿಲ್ಲವಾದರೂ, ಶಂಕಿತರು ಪರಾರಿಯಾಗುವುದನ್ನು ತಡೆಯಲು ರೈಲ್ವೆ ಮತ್ತು ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ.

ಸಂತ್ರಸ್ತರ ವಿವರ ಮತ್ತು ಪರಿಹಾರ: ಮ್ಯಾಕ್ಸ್ ಆಸ್ಪತ್ರೆ 39 ರೋಗಿಗಳನ್ನು ದಾಖಲಿಸಿಕೊಂಡಿದ್ದು, ಅವರಲ್ಲಿ 15 ಜನರನ್ನು ಐಸಿಯುಗೆ ಸೇರಿಸಲಾಗಿದೆ. ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಎಐಐಎಂಎಸ್) 13 ರೋಗಿಗಳನ್ನು ದಾಖಲಿಸಿಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ, ಮೃತರ ಕುಟುಂಬದವರಿಗೆ ತಲಾ 2 ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 50,000 ರೂಪಾಯಿಗಳ ಪರಿಹಾರ ಘೋಷಿಸಿದ್ದಾರೆ.

ಮಮತಾ ಪಕ್ಷದಲ್ಲಿ ಐತಿಹಾಸಿಕ ವಿಭಜನೆ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ನಡೆದ ಮಹತ್ವದ ಬೆಳವಣಿಗೆಯೊಂದರಲ್ಲಿ, 28 ವರ್ಷಗಳ ಇತಿಹಾಸ ಹೊಂದಿರುವ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದಲ್ಲಿ ಮೊದಲ ಬಾರಿಗೆ ಬಿರುಕು ಮೂಡಿದೆ. ಪಕ್ಷದಿಂದ ಉಚ್ಚಾಟನೆಗೊಂಡಿದ್ದ ರಿತಬ್ರತಾ ಬ್ಯಾನರ್ಜಿ ಅವರಿಗೆ 58 ಬಂಡಾಯ ಶಾಸಕರ ಬೆಂಬಲ ದೊರೆತಿದ್ದು, ಅವರನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ (ಎಲ್‌ಒಪಿ) ಆಯ್ಕೆ ಮಾಡಲಾಗಿದೆ. ಈ ಆಯ್ಕೆಯನ್ನು ವಿಧಾನಸಭಾಧ್ಯಕ್ಷ ರಥೀಂದ್ರ ಬೋಸ್ ಅಂಗೀಕರಿಸಿದ್ದು, ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷ ಗಂಭೀರ ಆಂತರಿಕ ಸಂಕಷ್ಟಕ್ಕೆ ಸಿಲುಕಿದೆ.

ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಸೋಲು ಕಂಡ ಬಳಿಕ ಪಕ್ಷದೊಳಗಿನ ಅಸಮಾಧಾನ ಸ್ಫೋಟಗೊಂಡಿದೆ. ರಿತಬ್ರತಾ ಬ್ಯಾನರ್ಜಿ ಮತ್ತು ಸಂದೀಪನ್ ಸಾಹಾ ನೇತೃತ್ವದ ಬಂಡಾಯ ಗುಂಪು 58 ಶಾಸಕರ ಬೆಂಬಲ ಪತ್ರಗಳನ್ನು ಸ್ಪೀಕರ್‌ಗೆ ಸಲ್ಲಿಸಿತ್ತು. ಇದು ಪಕ್ಷ ವಿಭಜನೆಗೆ ಅಗತ್ಯವಿರುವ ಮೂರರಲ್ಲಿ ಎರಡು ಭಾಗದ ಸಂಖ್ಯಾಬಲವನ್ನು ಮೀರಿದೆ.

ನಾವು ಟಿಎಂಸಿ ಚಿಹ್ನೆಯ ಮೇಲೆ ಗೆದ್ದ 58 ಶಾಸಕರು. ವಿಧಾನಸಭೆಯಲ್ಲಿ ನಾವೇ ನಿಜವಾದ ಟಿಎಂಸಿ ಎಂದು ರಿತಬ್ರತಾ ಬ್ಯಾನರ್ಜಿ ಘೋಷಿಸಿದರು. ಆದರೆ ಅವರು ಮಮತಾ ಬ್ಯಾನರ್ಜಿಯವರ ನಾಯಕತ್ವವನ್ನು ಒಪ್ಪಿಕೊಂಡು, ಅಭಿಷೇಕ್ ಬ್ಯಾನರ್ಜಿಯವರ ಅಧಿಕಾರವನ್ನು ಮಾತ್ರ ತಿರಸ್ಕರಿಸಿದ್ದಾರೆ. ಮಮತಾ ನಮ್ಮ ನಾಯಕರು, ಆದರೆ ಅಭಿಷೇಕ್ ಅವರನ್ನು ನಾವು ಒಪ್ಪುವುದಿಲ್ಲ ಎಂದು ಬಂಡಾಯ ಗುಂಪಿನ ನಾಯಕರು ತಿಳಿಸಿದ್ದಾರೆ. ಬಂಡಾಯ ಗುಂಪು ರಿತಬ್ರತಾ ಬ್ಯಾನರ್ಜಿ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ, ಅಖ್ರುಜ್ಜಮಾನರನ್ನು ಮುಖ್ಯ ಸಚೇತಕರನ್ನಾಗಿ ನೇಮಿಸಿದೆ. ಜಾವೇದ್ ಅಹ್ಮದ್ ಖಾನ್, ಸಂದೀಪನ್ ಸಾಹಾ, ಸಬೀನಾ ಯಾಸ್ಮಿನ್ ಹಾಗೂ ಶಿಯುಲಿ ಸಾಹಾ ಅವರನ್ನು ಉಪನಾಯಕರನ್ನಾಗಿ ಘೋಷಿಸಲಾಗಿದೆ.

ಟಿಎಂಸಿ ಸಮಿತಿಗಳ ವಿಸರ್ಜನೆ: ಈ ಬೆಳವಣಿಗೆಯಿಂದ ಬೆಚ್ಚಿಬಿದ್ದ ಟಿಎಂಸಿ ನಾಯಕತ್ವವು ರಾಜ್ಯದ ಎಲ್ಲಾ ಪಕ್ಷ ಸಮಿತಿಗಳು ಮತ್ತು ಇತರ ಸಂಘಟನೆಗಳನ್ನು ತಕ್ಷಣದಿಂದಲೇ ವಿಸರ್ಜಿಸಿದೆ. ಪಕ್ಷದ ಸಂಘಟನೆ ಹಾಗೂ ಕಾರ್ಯವೈಖರಿಯನ್ನು ಮರುಪರಿಶೀಲಿಸಿ ಹೊಸ ಸಮಿತಿಗಳನ್ನು ರಚಿಸುವುದಾಗಿ ಪ್ರಕಟಿಸಿದೆ.

ಬಿ.ಕೆ.ಹರಿಪ್ರಸಾದ್‌ಗೆ ಕೆಪಿಸಿಸಿ ಅಧ್ಯಕ್ಷ ಪಟ್ಟ

ಪುಟ 0 ➜ಕಾಂಗ್ರೆಸ್ ವರಿಷ್ಠರ ಅಂಗಳದಲ್ಲಿ ಜಾತಿ ಲೆಕ್ಕಾಚಾರದ ಚರ್ಚೆ ನಡೆದಿತ್ತು. ಸದ್ಯ ಜಾತಿ ಕಾಂಬಿನೇಶನ್ ಆಧಾರದ ಮೇಲೆ ಅಧ್ಯಕ್ಷರನ್ನು ಆಯ್ಕೆ ಮಾಡಲು ಹೈಕಮಾಂಡ್ ಚಿಂತನೆ ನಡೆಸಿತ್ತು. ರಾಜ್ಯದಲ್ಲಿ ಅಹಿಂದ ನಾಯಕರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿರುವ ಹೈಕಮಾಂಡ್, ಈಗ ಕೆಪಿಸಿಸಿ ಪೀಠದಲ್ಲಿ ಅಹಿಂದ ನಾಯಕರಿಗೇ ಮಣೆ ಹಾಕುವ ಲೆಕ್ಕಾಚಾರ ಹಾಕಿತ್ತು. ಈ ಹಿನ್ನೆಲೆಯಲ್ಲಿ ಮೂಲ ಕಾಂಗ್ರೆಸಿಗ ಹಾಗೂ ಹೈಕಮಾಂಡ್‌ಗೆ ಆಪ್ತರಾಗಿರುವ ಹಿಂದುಳಿದ ವರ್ಗದ ಪ್ರಮುಖ ಮುಖಂಡ ಬಿ.ಕೆ.ಹರಿಪ್ರಸಾದ್‌ಗೆ ಮಣೆ ಹಾಕಲು ಎಐಸಿಸಿ ತೀರ್ಮಾನ ಮಾಡಿದೆ. ಬಿ.ಕೆ.ಹರಿಪ್ರಸಾದ್ ಈಡಿಗ ಸಮುದಾಯದವರಾಗಿದ್ದು, ಅಹಿಂದ ಸಮುದಾಯದವರನ್ನು ಗಮನದಲ್ಲಿಟ್ಟುಕೊಂಡು ಹರಿಪ್ರಸಾದ್‌ಗೆ ಮಣೆ ಹಾಕಿದೆ.

ಕಾರ್ಯಾಧ್ಯಕ್ಷರ ನೇಮಕ: ಒಬ್ಬರು ಅಧ್ಯಕ್ಷರ ಜತೆಗೆ 2ರಿಂದ 3 ಕಾರ್ಯಾಧ್ಯಕ್ಷರನ್ನು ನೇಮಿಸಲು ಗಂಭೀರ ಚಿಂತನೆ ನಡೆದಿದೆ. ಆ ಮೂಲಕ ಜಾತಿ ಲೆಕ್ಕಾಚಾರ ಸರಿದೂಗಿಸಿ, ಎಲ್ಲ ಸಮುದಾಯಗಳಿಗೂ ಆದ್ಯತೆ ನೀಡಿದಂತಾಗುತ್ತದೆ ಎಂಬುದು ಕೈ ನಾಯಕರ ಯೋಚನೆಯಾಗಿದೆ. ಸಂಘಟನಾ, ವಾಕ್‌ಚಾತುರ್ಯ ಹೊಂದಿರುವ ಬಿ.ಕೆ.ಹರಿಪ್ರಸಾದ್, ರಾಜ್ಯ ರಾಜಕಾರಣದ ಬಗ್ಗೆ ಸಾಕಷ್ಟು ಅನುಭವ ಹೊಂದಿದ್ದಾರೆ. ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ಉಸ್ತುವಾರಿಯಾಗಿ ಹೊಣೆ ಹೊತ್ತಿದ್ದ ಅವರು, ಪಕ್ಷ ಸಂಘಟನೆಗೆ ಕಾರ್ಯತಂತ್ರ ರೂಪಿಸಿದ್ದರು.

ಸ.ಶಾಲೆಗಳಲ್ಲಿ ವಾಣಿಜ್ಯ ಚಿತ್ರೀಕರಣಕ್ಕೆ ನಿರ್ಬಂಧ

• **ಬೆಂಗಳೂರು:** ಸರ್ಕಾರಿ ಶಾಲೆಗಳ ಶೈಕ್ಷಣಿಕ ವಾತಾವರಣ, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಗೌಪ್ಯತೆಯನ್ನು ಕಾಪಾಡುವ ಉದ್ದೇಶದಿಂದ ಶಾಲಾ ಆವರಣಗಳಲ್ಲಿ ಚಲನಚಿತ್ರ, ಧಾರಾವಾಹಿ, ಕಿರುಚಿತ್ರ, ಸಾಕ್ಷ್ಯಚಿತ್ರ ಹಾಗೂ ಸಾಮಾಜಿಕ ಜಾಲತಾಣಗಳಿಗಾಗಿ ನಡೆಯುವ ವಾಣಿಜ್ಯಿಕ ಚಿತ್ರೀಕರಣಕ್ಕೆ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ನಿರ್ಬಂಧ ಹೇರಿದೆ.

ಶಾಲೆಗಳು ಶಿಕ್ಷಣದ ಕೇಂದ್ರಗಳಾಗಿದ್ದು, ವಿದ್ಯಾರ್ಥಿಗಳ ಕಲಿಕೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾದ ವಾತಾವರಣವನ್ನು ಒದಗಿಸಬೇಕಾಗಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕ ಜಾಲತಾಣಗಳ ಪ್ರಭಾವ ಹೆಚ್ಚಿದ ಹಿನ್ನೆಲೆಯಲ್ಲಿ ಶಾಲಾ ಆವರಣಗಳನ್ನು ಚಿತ್ರೀಕರಣ ಮತ್ತು ರೀಲ್ಸ್ ನಿರ್ಮಾಣಕ್ಕಾಗಿ ಬಳಸುವ ಪ್ರವೃತ್ತಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ರೀತಿಯ ಅಡ್ಡಿ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಶಿಕ್ಷಣ ಇಲಾಖೆಯ ಅಧಿಕಾರಿಗಳ ಪ್ರಕಾರ, ತರಗತಿಗಳು ನಡೆಯುವ ಸಮಯದಲ್ಲಿ ಚಿತ್ರೀಕರಣ ನಡೆಸುವುದರಿಂದ ವಿದ್ಯಾರ್ಥಿಗಳ ಏಕಾಗ್ರತೆಗೆ ಧಕ್ಕೆಯಾಗುತ್ತದೆ. ಇದಲ್ಲದೆ, ಶಾಲಾ ಆವರಣದಲ್ಲಿ ಚಿತ್ರೀಕರಣ ನಡೆಯುವ ವೇಳೆ ವಿದ್ಯಾರ್ಥಿಗಳು ತಿಳಿಯದೆ ದೃಶ್ಯಗಳಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆಗಳಿವೆ. ಇಂತಹ ಚಿತ್ರಗಳು ಅಥವಾ ವಿಡಿಯೊಗಳು ನಂತರ ವಿವಿಧ ಡಿಜಿಟಲ್ ವೇದಿಕೆಗಳಲ್ಲಿ ಬಳಕೆಯಾಗುವ ಮೂಲಕ ವಿದ್ಯಾರ್ಥಿಗಳ ವೈಯಕ್ತಿಕ ಗೌಪ್ಯತೆಗೆ ಧಕ್ಕೆ ಉಂಟಾಗಬಹುದು ಎಂಬ ಆತಂಕವನ್ನು ಸರ್ಕಾರ ವ್ಯಕ್ತಪಡಿಸಿದೆ.

ಕಿರುಸುದ್ದಿ

ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲಿ: ಸಿದ್ದರಾಮಯ್ಯ

• **ಬೆಂಗಳೂರು:** ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಹಾಗೂ ಹೊಸ ಸಚಿವ ಸಂಪುಟದ ಸದಸ್ಯರಿಗೆ ಅಭಿನಂದನೆ ತಿಳಿಸಿರುವ ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು, ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕವನ್ನು ಶಾಂತಿ, ಸಮೃದ್ಧಿ ಹಾಗೂ ಸೌಹಾರ್ದತೆಯ ನಾಡನ್ನಾಗಿ ಕಟ್ಟಲು, ರಾಜ್ಯದ ಪ್ರತಿಯೊಬ್ಬರಿಗೂ ನ್ಯಾಯ, ಸ್ವಾತಂತ್ರ್ಯ ಹಾಗೂ ಸುರಕ್ಷತೆ ಒದಗಿಸಲು ಪ್ರಾಮಾಣಿಕ ಶ್ರಮಿಸಿದ ಆತ್ಮಸಂತೃಪ್ತಿ ನನಗಿದೆ. ಗ್ಯಾರಂಟಿ ಯೋಜನೆಗಳನ್ನು ಒಳಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಜತೆಗೆ ಸಾಮಾಜಿಕ ನ್ಯಾಯವನ್ನು ಅನುಷ್ಠಾನಕ್ಕೆ ಕೊಟ್ಟು ಕರ್ನಾಟಕ ಅಭಿವೃದ್ಧಿಯ ಹೊಸ ಮಾದರಿಯನ್ನು ಕಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ನೂತನ ಮುಖ್ಯಮಂತ್ರಿಗಳು ಹಾಗೂ ಸಚಿವರು ಎಲ್ಲರೂ ಒಗ್ಗೂಡಿ ಕರ್ನಾಟಕವನ್ನು ಇದೇ ಮಾದರಿಯ ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲಿ ಎಂದು ಆಶಿಸಿದ್ದಾರೆ.



ಎಚ್ಡಿಡಿ, ಬಿಎಸ್‌ವೈ ಆಶೀರ್ವಾದ ಪಡೆದ ಡಿಕೆಶಿ



• **ಬೆಂಗಳೂರು:** ಡಿ.ಕೆ ಶಿವಕುಮಾರ್ ಪಾಲಿಗೆ ಶುಭಗಳಿಗೆ ಕೂಡಿ ಬಂದಿದ್ದು, ಬುಧವಾರ ರಾಜಕೀಯ ಜೀವನದ ಹೊಸ ಅಧ್ಯಾಯ ಆರಂಭಿಸಿರುವ ಅವರು, ಬುಧವಾರ ರಾಜ್ಯದ ಹಿರಿಯ ರಾಜಕಾರಣಿಗಳಾದ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಮತ್ತು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದಿರುವುದು ವಿಶೇಷವಾಗಿದೆ. ಮಂಗಳವಾರ ತಡರಾತ್ರಿ ದಿಲ್ಲಿಯಿಂದ ಬೆಂಗಳೂರಿಗೆ ಆಗಮಿಸಿದ ಅವರು ಬುಧವಾರ ಬೆಳಗ್ಗೆ ಕಾವೇರಿ ನಿವಾಸಕ್ಕೆ ತೆರಳಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಆರ್ಶಿವಾದ ಪಡೆದುಕೊಂಡ ನಂತರ ದೇವೇಗೌಡರ ನಿವಾಸಕ್ಕೆ ತೆರಳಿದ ಡಿ.ಕೆ. ಶಿವಕುಮಾರ್ ಅವರು, ಹೂಗುಚ್ಛ ನೀಡಿ ಆಶೀರ್ವಾದ ಪಡೆದುಕೊಂಡರು, ಈ ವೇಳೆ ದೇವೇಗೌಡರು ಶುಭ ಹಾರೈಸಿ ಸನ್ಮಾನಿಸಿದರು. ಇದರ ಜತೆಗೆ ಡಾಲರ್ಸ್ ಕಾಲೋನಿಯಲ್ಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರ ಧವಳಗಿರಿ ನಿವಾಸಕ್ಕೂ ಭೇಟಿ ನೀಡಿದ ಅವರು, ದೇವರ ಮನೆ ಪ್ರವೇಶಿಸಿ ನಮಸ್ಕರಿ, ಯಡಿಯೂರಪ್ಪ ಅವರ ಆಶೀರ್ವಾದ ಪಡೆದುಕೊಂಡರು. ಇದಕ್ಕೂ ಮೊದಲು ಡಾ. ಜಿ. ಪರಮೇಶ್ವರ ಅವರು ಶಿವಕುಮಾರ್ ಅವರ ಸದಾಶಿವನಗರ ನಿವಾಸಕ್ಕೆ ಭೇಟಿ ನೀಡಿ ಅಭಿನಂದಿಸಿದರು. ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕಾವೇರಿ ನಿವಾಸಕ್ಕೆ ತೆರಳಿದ ಸಿಎಂ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅವರ ಆಶೀರ್ವಾದ ಪಡೆದರು.

ವಿಧಾನ ಪರಿಷತ್‌ಗೆ ಅಭ್ಯರ್ಥಿಗಳ ಆಯ್ಕೆ

• **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಗೆ ಕಾಂಗ್ರೆಸ್ ತನ್ನ 4 ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ಬಿ.ಕೆ ಹರಿಪ್ರಸಾದ್ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಜತೆಗೆ ಮೇಲ್ಮನೆಗೂ ಅವಕಾಶ ನೀಡಲಾಗಿದೆ. ಒಟ್ಟು ಖಾಲಿಯಾಗಲಿರುವ 7 ಸ್ಥಾನಗಳ ಪೈಕಿ 4 ಸ್ಥಾನಗಳು ಕಾಂಗ್ರೆಸ್‌ಗೆ ಸಿಗಲಿದ್ದು, ಈ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಕಾಂಗ್ರೆಸ್ ಹೈಕಮಾಂಡ್ ಆಯ್ಕೆ ಮಾಡಿದೆ. ಈಗಾಗಲೇ ಸದಸ್ಯರಿರುವ ಬಿ.ಕೆ. ಹರಿಪ್ರಸಾದ್ ಮತ್ತು ತಿಪ್ಪಣ್ಣ ಕಮನಕೂರು ಅವರಿಗೆ ಮತ್ತೊಮ್ಮೆ ಅವಕಾಶ ನೀಡಲಾಗಿದೆ. ಇನ್ನೂ ಪಿ.ವಿ ಮೋಹನ್ ಮತ್ತು ಶಿವಣ್ಣ ಮಳವಳ್ಳಿ ಅವರಿಗೆ ಅವಕಾಶ ನೀಡಲಾಗಿದೆ.

ಸಿಎಂ ಸಚಿವಾಲಯ ಸಿಬ್ಬಂದಿ ಬಿಡುಗಡೆ

• **ಬೆಂಗಳೂರು:** ಸಿದ್ದರಾಮಯ್ಯ ಅವರ ಮುಖ್ಯಮಂತ್ರಿ ಸಚಿವಾಲಯ, ಸಲಹೆಗಾರರ ಆಪ್ತ ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಬಿಡುಗಡೆ ಮಾಡಲಾಗಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ನೀಡಿದ್ದರಿಂದ ಮುಖ್ಯಮಂತ್ರಿಯವರ ಸಚಿವಾಲಯ ಮುಖ್ಯಮಂತ್ರಿಯವರ ಸಲಹೆಗಾರರ ಆಪ್ತ ಶಾಖೆಗಳಲ್ಲಿ ಸ್ಥಳ ನಿಯುಕ್ತಿ, ನಿಯೋಜನೆ, ಒಪ್ಪಂದ ಹಾಗೂ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರನ್ನು ಬಿಡುಗಡೆಗೊಳಿಸಲಾಗಿದೆ.

ಉಪ ಮುಖ್ಯಮಂತ್ರಿಯಾಗಿ ಜಿ.ಪರಮೇಶ್ವರ್, ಸಚಿವರಾಗಿ ಯತೀಂದ್ರ ಸಿದ್ದರಾಮಯ್ಯ, ಖಾದರ್ ಪ್ರಮಾಣ

ರಾಜ್ಯದಲ್ಲಿ ಶಿವಕುಮಾರ್ ಶಕೆ...

ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್, ಅವರ ಸಂಪುಟಕ್ಕೆ 13 ಜನ ಶಾಸಕರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇವರಲ್ಲಿ ಡಾ. ಜಿ.ಪರಮೇಶ್ವರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಉಳಿದಂತೆ ವಿಧಾನಸಭಾಧ್ಯಕ್ಷರಾಗಿದ್ದ ಯು.ಟಿ.ಖಾದರ್ ಹಾಗೂ ಇದೇ ಮೊದಲ ಬಾರಿಗೆ ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಡಾ. ಜಿ. ಪರಮೇಶ್ವರ



ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಡಾ. ಜಿ. ಪರಮೇಶ್ವರ ಅವರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅವರು ಕೊರಟಗೆರೆ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. 1992–1994ರಲ್ಲಿ ಎಂ. ವೀರಪ್ಪ ಮೊಯ್ಲಿ ಅವರ ಸರ್ಕಾರದಲ್ಲಿ ರೇಷ್ಮೆ ರಾಜ್ಯ ಸಚಿವರಾಗಿದ್ದರು. 1999ರಲ್ಲಿ ಎಸ್. ಎಂ. ಕೃಷ್ಣ ಅವರ ಸರ್ಕಾರದಲ್ಲಿ ಉನ್ನತ ಶಿಕ್ಷಣ ಸಚಿವರಾಗಿ (ಸ್ವತಂತ್ರ ನಿರ್ವಹಣೆ) ಕಾರ್ಯ ನಿರ್ವಹಿಸಿದ್ದಾರೆ. ಅವರದೇ ಸರ್ಕಾರದಲ್ಲಿ 2001ರವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಬಳಿಕ 2004ವರೆಗೆ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರಾಗಿದ್ದರು. 2003ರಿಂದ ವಾರ್ತಾ ಮತ್ತು ಪ್ರಚಾರ ಸಚಿವರಾಗಿದ್ದರು. 2013ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು. 2016ರಿಂದ 2017ರವರೆಗೆ ವಿಧಾನ ಪರಿಷತ್ತಿನ ಸಭಾ ನಾಯಕರಾಗಿದ್ದರು. 2018ರಲ್ಲಿ ಕುಮಾರಸ್ವಾಮಿ ಸಂಪುಟದಲ್ಲಿ ಗೃಹ ಸಚಿವರಾಗಿದ್ದು, 2023ರಲ್ಲಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿಯೂ ಗೃಹ ಸಚಿವರಾಗಿದ್ದರು.

ಈಶ್ವರ ಖಂಡ್ರೆ



ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಈಶ್ವರ ಖಂಡ್ರೆ ಅವರು 2008ರಲ್ಲಿ ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಯನ್ನು ಪ್ರವೇಶಿಸಿದರು. ಅವರು 2016ರಿಂದ 2018ರವರೆಗೆ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಪೌರಾಡಳಿತ ಮತ್ತು ಸಾರ್ವಜನಿಕ ಉದ್ಯಮಗಳ ರಾಜ್ಯ ಸಚಿವರಾಗಿದ್ದರು.

ಯು.ಟಿ. ಖಾದರ್



ಮಂಗಳೂರು ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಯು.ಟಿ. ಖಾದರ್ ಅವರು ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸೇರ್ಪಡೆಯಾಗಿದ್ದಾರೆ. ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಅವರು 2023ರಲ್ಲಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ವಿಧಾನಸಭೆಯ ಸಭಾಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದರು. ತಂದೆ ಹಾಜಿ ಯು.ಟಿ. ಫರೀದ್ ಅವರ ನಿಧನದ ನಂತರ 2007ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಗೆದ್ದು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು. 2013ರಿಂದ 2016ರವರೆಗೆ ಸಿದ್ದರಾಮಯ್ಯ ಅವರ ಮೊದಲ ಸಂಪುಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿದ್ದರು. 2018ರಲ್ಲಿ ಕುಮಾರಸ್ವಾಮಿ ಅವರ ಸಂಪುಟದಲ್ಲಿ ನಗರಾಭಿವೃದ್ಧಿ ಮತ್ತು ವಸತಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.



ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ ಮೊದಲ ಬಾರಿಗೆ ವಿಧಾನಸೌಧಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರು ಉತ್ತರ ದ್ವಾರದ ಮೆಟ್ಟಿಲುಗಳಿಗೆ ನಮಸ್ಕರಿಸಿ ವಿಧಾನ ಸೌಧ ಪ್ರವೇಶಿಸಿದರು.

ಪ್ರಿಯಾಂಕ್ ಖರ್ಗೆ



ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅವರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅವರು ಚಿತ್ತಾಪುರ ಕ್ಷೇತ್ರದಿಂದ ಮೂರು ಬಾರಿ ವಿಧಾನಸಭೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. 2016ರಿಂದ 2018ರವರೆಗೆ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಐಟಿ-ಬಿಟಿ ಹಾಗೂ ವಿಜ್ಞಾನ ಮತ್ತುತಂತ್ರಜ್ಞಾನ ರಾಜ್ಯ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. 2018ರಲ್ಲಿ ಕುಮಾರಸ್ವಾಮಿ ಸಂಪುಟದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿರಾಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಐಟಿ ಮತ್ತು ಬಿಟಿ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

ಯತೀಂದ್ರ ಸಿದ್ದರಾಮಯ್ಯ



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ ಯತೀಂದ್ರ ಸಿದ್ದರಾಮಯ್ಯ ಅವರೂ ಡಿ.ಕೆ. ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಪ್ರಸ್ತುತ ವಿಧಾನ ಪರಿಷತ್ ಸದಸ್ಯರಾಗಿರುವ ಅವರು 2018ರಲ್ಲಿ ವರುಣಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಯತೀಂದ್ರ ಸಿದ್ದರಾಮಯ್ಯ ಅವರು ವೃತ್ತಿಯಲ್ಲಿ ವೈದ್ಯರಾಗಿದ್ದಾರೆ.

ಸೋನಿಯಾ ಶುಭಾಶಯ

ಕಾಂಗ್ರೆಸ್ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಅವರು ಮಧ್ಯಾಹ್ನ ಡಿ.ಕೆ ಶಿವಕುಮಾರ್ ಅವರಿಗೆ ದೂರವಾಣಿ ಕರೆ ಮಾಡಿ ಶುಭ ಹಾರೈಸಿದರು. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಿರಿ. ಕರ್ನಾಟಕವನ್ನು ಯಶಸ್ವಿಯಾಗಿ ಮುನ್ನಡೆಸುತ್ತೀರಿ ಎಂಬ ಅದಮ್ಯ ವಿಶ್ವಾಸ ನನಗಿದೆ. ಹೊಸ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ. ಮತ್ತಷ್ಟು ಯಶಸ್ಸು ನಿಮ್ಮದಾಗಲಿ ಎಂದು ಶುಭಾಶಯ ಹೇಳಿದರು.

ಕೆ.ಎಚ್. ಮುನಿಯಪ್ಪ



ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಕೆ.ಎಚ್. ಮುನಿಯಪ್ಪ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ದೇವನಹಳ್ಳಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಅವರು ಕಳೆದ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಕೋಲಾರ ಲೋಕಸಭಾ ಕ್ಷೇತ್ರದಿಂದ ಏಳು ಬಾರಿ ಸಂಸದರಾಗಿರುವ ಅವರು ಕ್ಯಾಬಿನೆಟ್ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು 2004–2009ರವರೆಗೆ ಮನಮೋಹನ್ ಸಿಂಗ್ ಮೊದಲ ಸಂಪುಟದಲ್ಲಿ ರಸ್ತೆ, ಸಾರಿಗೆ ಮತ್ತು ಹೆದ್ದಾರಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. 2009–12ರಲ್ಲಿ ಸಿಂಗ್ ಸರ್ಕಾರದಲ್ಲಿ ರೈಲ್ವೇ ರಾಜ್ಯ ಸಚಿವರಾಗಿದ್ದರು. 2012–2014ರವರೆಗೆ ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವ (ಸ್ವತಂತ್ರ ನಿರ್ವಹಣೆ) ರಾಗಿ ಕೆಲಸ ಮಾಡಿದ್ದರು.

ಕೃಷ್ಣ ಬೈರೇಗೌಡ



ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಕೃಷ್ಣ ಬೈರೇಗೌಡ ಅವರು 2003ರಲ್ಲಿ ರಾಜಕೀಯ ಜೀವನ ಪ್ರಾರಂಭಿಸಿದರು. ತಂದೆಯ ನಿಧನದಿಂದ ತೆರವಾದ ವೇಮಗಲ್ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ವಿಜಯ ಸಾಧಿಸಿದರು. 2008ರಲ್ಲಿ ಬ್ಯಾಟರಾಯನಪುರ ಕ್ಷೇತ್ರದಿಂದ ಶಾಸಕರಾದರು. 2013ರಲ್ಲಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಕೃಷಿ ಸಚಿವರಾಗಿದ್ದರು. 2018ರಲ್ಲಿ ಕುಮಾರಸ್ವಾಮಿ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಂಪುಟದಲ್ಲಿ ಕಂದಾಯ ಇಲಾಖೆ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಇಲಾಖೆಯಲ್ಲಿ ಅನೇಕ ಸುಧಾರಣೆಗಳನ್ನು ತಂದಿದ್ದಾರೆ.

ಬೈರತಿ ಸುರೇಶ್ ಸಚಿವ



ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಶಾಸಕ ಬೈರತಿ ಸುರೇಶ್ ಕ್ಯಾಬಿನೆಟ್ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 2012ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗುವ ಮೂಲಕ ರಾಜಕೀಯ ಜೀವನ ಪ್ರಾರಂಭಿಸಿದರು. 2018ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪರಿಷತ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೆಬ್ಬಾಳದಿಂದ ಶಾಸಕರಾಗಿ ಆಯ್ಕೆಯಾದರು. 2023ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಬೆಂಗಳೂರು ಹೊರತುಪಡಿಸಿ ನಗರಾಭಿವೃದ್ಧಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಗಣ್ಯರ ಶುಭ ಹಾರೈಕೆ

ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಗಣ್ಯರು ಶುಭ ಹಾರೈಸಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಎಚ್.ಡಿ ಕುಮಾರಸ್ವಾಮಿ, ತಮಿಳುನಾಡು ಮುಖ್ಯಮಂತ್ರಿ ವಿಜಯ್ ಜೋಸೆಫ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಮತ್ತು ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಹಲವು ಗಣ್ಯರು ಶುಭ ಹಾರೈಸಿದ್ದಾರೆ.

ಡಾ. ಶರಣಪ್ರಕಾಶ ಪಾಟೀಲ್



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಡಾ. ಶರಣ ಪ್ರಕಾಶ ಪಾಟೀಲ್ ಅವರು ಸೇಡಂ ವಿಧಾನಸಭಾ ಕ್ಷೇತ್ರವನ್ನು ನಾಲ್ಕನೇ ಬಾರಿಗೆ ಪ್ರತಿನಿಧಿಸುತ್ತಿದ್ದಾರೆ. 2013ರಲ್ಲಿ ಸಿದ್ದರಾಮಯ್ಯ ನೇತೃತ್ವದ ಮೊದಲ ಸಚಿವ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಚಿವ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಸಚಿರಾಗಿ ಕರ್ತವ್ಯ ನಿರ್ವಹಿಸಿದ್ದರು.

ಸತೀಶ್ ಜಾರಕಿಹೊಳಿ



ಸತೀಶ್ ಜಾರಕಿಹೊಳಿ ಅವರು ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸ್ಥಾನ ಪಡೆದಿದ್ದು, ತಮ್ಮ 30 ವರ್ಷಗಳ ರಾಜಕೀಯ ಜೀವನದಲ್ಲಿ ಐದು ಬಾರಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 2004–05ರಲ್ಲಿ ಧರಂ ಸಿಂಗ್ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಮೊದಲ ಬಾರಿಗೆ ಜವಳಿ ಖಾತೆ ಸಚಿವರಾಗಿದ್ದರು. 2013–16ರಲ್ಲಿ ಸಿದ್ದರಾಮಯ್ಯ ಅವರ ಮೊದಲ ಸಂಪುಟದಲ್ಲಿ ಅಬಕಾರಿ ಮತ್ತು ಸಣ್ಣ ಕೈಗಾರಿಕೆಗಳ ಸಚಿವರಾಗಿ ಸೇವೆ ಸಲ್ಲಿಸಿದ್ದರು. 2018–19ರಲ್ಲಿ ಕುಮಾರಸ್ವಾಮಿ ಸಂಪುಟದಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರಾಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಂಪುಟದಲ್ಲಿ ಲೋಕೋಪಯೋಗಿ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಯಮಕನಮರಡಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಕೆ.ಜೆ. ಜಾರ್ಜ್



ಐದು ದಶಕಗಳಿಗೂ ಹೆಚ್ಚು ಕಾಲ ರಾಜಕೀಯ ಜೀವನದಲ್ಲಿರುವ ಕೆ.ಜೆ. ಜಾರ್ಜ್ ಅವರು ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 1989–91ರಲ್ಲಿ ವೀರೇಂದ್ರ ಪಾಟೀಲ್ ಅವರ ಸರ್ಕಾರದಲ್ಲಿ ಸಾರಿಗೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗಳ ರಾಜ್ಯ ಸಚಿವರಾಗಿದ್ದರು. 1991ರಲ್ಲಿ ಎಸ್. ಬಂಗಾರಪ್ಪ ಅವರ ಸಂಪುಟದಲ್ಲಿ ವಸತಿ ಮತ್ತು ನಗರಾಭಿವೃದ್ಧಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಬಳಿಕ 2013ರಲ್ಲಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಗೃಹ ಸಚಿವರಾಗಿದ್ದರು. 2015–18ರವರೆಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದರು. 2018ರಲ್ಲಿ ಕುಮಾರಸ್ವಾಮಿ ಅವರ ಸಂಪುಟದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರಾಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಂಪುಟದಲ್ಲಿ ಇಂಧನ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

ಎಂ.ಬಿ. ಪಾಟೀಲ್




ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಎಂ.ಬಿ. ಪಾಟೀಲ್ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 1991ರಲ್ಲಿ ರಾಜಕೀಯ ಜೀವನ ಪ್ರಾರಂಭಿಸಿದ ಅವರು ಐದನೇ ಬಾರಿಗೆ ಶಾಸಕರಾಗಿದ್ದಾರೆ. ಪ್ರಸ್ತುತ ಬಬಲೇಶ್ವರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. 2013ರಲ್ಲಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಜಲಸಂಪನ್ಮೂಲ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. 2018ರಲ್ಲಿ ಕುಮಾರಸ್ವಾಮಿ ಅವರ ಸಂಪುಟದಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. 2023ರಲ್ಲಿ ಮತ್ತೆ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಖಾತೆ ನಿರ್ವಹಿಸಿದ್ದಾರೆ.

ರಾಮಲಿಂಗಾ ರೆಡ್ಡಿ



ಎಂಟು ಬಾರಿ ಶಾಸಕರಾಗಿರುವ ರಾಮಲಿಂಗಾರೆಡ್ಡಿ ಅವರು ಡಿ.ಕೆ. ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಐದು ದಶಕಗಳಿಗೂ ಹೆಚ್ಚು ಕಾಲ ರಾಜಕಾರಣದಲ್ಲಿರುವ ಅವರು ಮೊದಲು ಜಯನಗರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಪ್ರಸಕ್ತ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. 2013ರಿಂದ 2017ರವರೆಗೆ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಸಾರಿಗೆ ಸಚಿವರಾಗಿದ್ದರು. ಬಳಿಕ ಗೃಹ ವ್ಯವಹಾರಗಳ ರಾಜ್ಯ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದರು.



ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದೇನೆ

ಮುಖ್ಯಮಂತ್ರಿಯಾಗಿ ರಾಜ್ಯದ ಏಳು ಕೋಟಿ ಜನತೆಯ ಸೇವೆ ಮಾಡಲು ಒದಗಿ ಬಂದಿರುವ ಈ ಅವಕಾಶ ನನ್ನ ಬದುಕಿನ ಭಾಗ್ಯ ಎಂದು ವಿನೀತನಾಗಿ ಸ್ವೀಕರಿಸಿದ್ದೇನೆ.

ಮನೆ ಮಗನಂತೆ ಹರಸಿ, ಹಾರೈಸಿ. ರಾಜಕೀಯ ಕ್ಷೇತ್ರದಲ್ಲಿ ಈ ಹಂತದ ವರೆಗೆ ನನ್ನನ್ನು ಬೆಳೆಸಿದ ಜನತಾ ಜನಾರ್ಧನರಿಗೆ ಕಾಯಾ ವಾಚಾ ಮನಸಾ ನನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು, ಜನರ ಸೇವೆ ಮಾಡುತ್ತೇನೆ ಎಂದು ನಾನು ವಿನಯಪೂರ್ವಕವಾಗಿ ವಾಗ್ದಾನ ಮಾಡುತ್ತೇನೆ.

ರಾಜ್ಯದ ಜನತೆಗೆ ನಮ್ಮ ಸರ್ಕಾರ ಮತ್ತು ಹೊಸ ಸಾರಥಿಯಾಗಿ ಬಂದಿರುವ ನನ್ನ ಬಗ್ಗೆ ಬಹಳ ನಿರೀಕ್ಷೆಗಳಿವೆ ಎನ್ನುವುದು ನನಗೆ ಗೊತ್ತಿದೆ. ಇಂದು ಕರ್ನಾಟಕ ಜಗಮೆಚ್ಚುತ್ತಿರುವ ಹೆಮ್ಮೆಯ ರಾಜ್ಯವಾಗಿದೆ. ಅಭಿವೃದ್ಧಿ ಪಥದಲ್ಲಿರುವ ಕರ್ನಾಟಕವನ್ನು ಸಮೃದ್ಧ, ಸ್ವಾವಲಂಬಿ ಮತ್ತು ಸ್ವಾಭಿಮಾನಿ ರಾಜ್ಯವನ್ನಾಗಿ ರೂಪಿಸಬೇಕೆಂಬ ಕನಸು ನನ್ನದು. ಅದನ್ನು ನನಸು ಮಾಡಲು ವಿಶ್ವಾಸಪೂರ್ವಕವಾಗಿ ಸಹಕಾರ ನೀಡಬೇಕೆಂದು ಏಳು ಕೋಟಿ ಕನ್ನಡಿಗರಲ್ಲಿ ಬೊಗಸೆಯೊಡ್ಡಿ ಕೇಳಿಕೊಳ್ಳುತ್ತಿದ್ದೇನೆ.

ಪಕ್ಷದ ಮೇಲಿನ ನಿಷ್ಠೆ ಮತ್ತು ಜನಸೇವೆ ಮಾಡುವ ನನ್ನ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟು ಮುಖ್ಯಮಂತ್ರಿಯಾಗಿ ಸೇವೆಗೈಯ್ಯುವ ಅವಕಾಶ ನೀಡಿದ ಕಾಂಗ್ರೆಸ್ ಪಕ್ಷಕ್ಕೆ, ನನ್ನ ಮೇಲೆ ವಿಶ್ವಾಸ ಇಟ್ಟು ತಮ್ಮ ನಾಯಕನಾಗಿ ಆಯ್ಕೆ ಮಾಡಿರುವ ಶಾಸಕ ಮಿತ್ರರಿಗೆ ನಾನು ಆಭಾರಿಯಾಗಿದ್ದೇನೆ.

ಮತ್ತೊಮ್ಮೆ ತಮ್ಮೆಲ್ಲರಿಗೆ ಹೃದಯಪೂರ್ವಕ ಧನ್ಯವಾದಗಳು. ನಿಮ್ಮೆಲ್ಲರ ಪ್ರೀತಿ–ವಿಶ್ವಾಸ ಸದಾ ನನ್ನ ಮೇಲಿರಲಿ.

ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಮಧ್ಯ ಕರ್ನಾಟಕಕ್ಕಿಲ್ಲ ಸಚಿವ ಸ್ಥಾನ

▸ ವಾದಿರಾಜ್ ಕಮರೂರು

• **ಶಿವಮೊಗ್ಗ:** ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೊದಲ ಹಂತದ ಸಂಪುಟದಲ್ಲಿ ಮಧ್ಯ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಯಾರಿಗೂ ಮಂತ್ರಿ ಸ್ಥಾನ ಸಿಕ್ಕಿಲ್ಲ.

ಸಿದ್ದರಾಮಯ್ಯ ಸರ್ಕಾರದಲ್ಲಿ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಸ್.ಎಸ್. ಮಲ್ಲಿಕಾರ್ಜುನ್, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸೊರಬದ ಶಾಸಕ ಮಧು ಬಂಗಾರಪ್ಪ ಪುನಃ ಸಚಿವರಾಗಲು ಪ್ರಯತ್ನಿಸಿದ್ದರು. ಮತ್ತೊಂದೆಡೆ ಹಿರಿಯ ಶಾಸಕರಾಗಿರುವ ಭದ್ರಾವತಿಯ ಬಿ.ಕೆ. ಸಂಗಮೇಶ್ವರ ಮತ್ತು ಸಾಗರದ ಬೇಳೂರು ಗೋಪಾಲಕೃಷ್ಣ ಕೂಡ ಲಾಬಿ ನಡೆಸಿದ್ದರು. ಅತ್ತ ದಾವಣಗೆರೆಯಲ್ಲಿ ಮೊನ್ನೆ ಮೊನ್ನೆ ಶಾಸಕರಾಗಿರುವ ಸಮರ್ಥ್ ಅವಕಾಶ ಸಿಕ್ಕರೆ ಸಚಿವ ಸ್ಥಾನ ನಿಭಾಯಿಸುವೆ ಎಂದು ಹೇಳಿಕೆ ನೀಡಿ ಹುಬ್ಬೇರುವಂತೆ ಮಾಡಿದ್ದರೆ, ಹೊನ್ನಾಳಿಯ ಶಾಸಕ ಡಿ.ಜಿ. ಶಾಂತನಗೌಡ ಪಕ್ಷ ಈ ಬಾರಿಯಾದರೂ ತಮ್ಮ ಹಿರಿತನವನ್ನು ಗುರುತಿಸುವುದೇ ಎಂದು ಕಾದುನೋಡುವ ತಂತ್ರ ಅನುಸರಿಸಿದ್ದಾರೆ.

ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಿ. ಸುಧಾಕರ್ ನಿಧನರಾಗಿರುವ ಕಾರಣ ಜಿಲ್ಲೆಯ ಹಿರಿಯ ಶಾಸಕ ಚಳ್ಳಕೆರೆಯ ರಘುಮೂರ್ತಿ ಸಚಿವರಾಗಲು ಬಯಸಿದ್ದರು. ಮೊಳಕಾಲ್ಮೂರಿನ ಎನ್.ವೈ. ಗೋಪಾಲಕೃಷ್ಣ ಕೂಡ ತಮ್ಮ ಆಕಾಂಕ್ಷೆಯನ್ನು ಪಕ್ಷದೊಳಗೆ ಹೇಳಿಕೊಂಡಿದ್ದರು.

ಇನ್ನು ಕಳೆದ ಮೂರು ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಸಚಿವ ಸ್ಥಾನವೇ ಸಿಕ್ಕಿರಲಿಲ್ಲ. ಕಾರಣ ತರೀಕೆರೆ ಶಾಸಕ ಜಿ.ಹೆಚ್. ಶ್ರೀನಿವಾಸ್ ಮತ್ತು ಶೃಂಗೇರಿಯ ರಾಜೇಗೌಡ ಹೊರತು ಉಳಿದ ಎಲ್ಲ ಕಾಂಗ್ರೆಸ್ ಶಾಸಕರು ಮೊದಲ ಬಾರಿಗೆ ಆಯ್ಕೆಯಾದವರು. ಹೀಗಾಗಿ ಶ್ರೀನಿವಾಸ್ ಆಕಾಂಕ್ಷಿಯಾಗಿದ್ದರೆ, ಡಿಕೆಶಿ ಕುಟುಂಬಕ್ಕೆ ಆತ್ಮೀಯರಾಗಿರುವ ರಾಜೇಗೌಡಗೆ ಲಕ್ ಕುದುರಲಿದೆ ಎಂದೇ ಕ್ಷೇತ್ರದ ಜನತೆ ಭಾವಿಸಿದ್ದರು.

ಆದರೆ ಡಿ.ಕೆ. ಶಿವಕುಮಾರ್ ಹೈಕಮಾಂಡ್ ಪಟ್ಟಿಗೆ ಮೊದಲ ಹಂತದಲ್ಲಿ ಮನ್ನಣೆ ನೀಡಿದಂತಿದೆ. ಪರಿಣಾಮ ಎರಡನೇ ಹಂತದ ವಿಸ್ತರಣೆಯವರೆಗೂ ಈ ಜಿಲ್ಲೆಗಳ ಸಚಿವಾಕಾಂಕ್ಷಿಗಳು ಸಂಪುಟ ಸೇರಲು ಕಸರತ್ತು ನಡೆಸಬೇಕಾಗಿದೆ. ಅದೃಷ್ಟ ಯಾರ ಪಾಲಿಗಿದೆ ಎಂಬುದು ಕೂಡ ಕುತೂಹಲವಾಗಿಯೇ ಉಳಿದಿದೆ.

ಸಿಎಂ ನಡೆಗೆ ಪೇಜಾವರಶ್ರೀ ಬೆಂಬಲ



• **ಉಡುಪಿ:** ಸರಕಾರವನ್ನು ಮುನ್ನಡೆಸುವಾಗ ಸಮಾಜದ ಎಲ್ಲಾ ನಾಗರಿಕರ ವಿಶ್ವಾಸವನ್ನು ಗಳಿಸುವುದು ಅತ್ಯಂತ ಮುಖ್ಯವಾಗುತ್ತದೆ. ಅಧಿಕಾರ ನಮ್ಮ ಕೈಯಲ್ಲಿದ್ದಾಗಲೂ ಸಮಾಜದ ಸರ್ವ ವರ್ಗಗಳ ನಂಬಿಕೆ ಯನ್ನು ಗಳಿಸಿಕೊಳ್ಳದಿದ್ದರೆ ಅನೇಕ ವಿವಾದ ಗಳು ತಲೆದೋರುವ ಪ್ರಸಂಗಗಳು ಎದುರಾಗುತ್ತವೆ. ಸಮಾಜದ ಯಾವುದೇ ಒಂದು ವರ್ಗದಲ್ಲಿ ಅಭದ್ರತೆ ಅಥವಾ ಭಯದ ವಾತಾವರಣ ನಿರ್ಮಾಣವಾದರೆ, ಅದರಿಂದ ಅಶಾಂತಿ ಉಂಟಾಗುವ ಸಂಭವವಿರುತ್ತದೆ ಎಂದು ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟಿದ್ದಾರೆ.

ನೂತನ ಸಿಎಂ ಪ್ರಮಾಣ ವಚನ ಸ್ವೀಕಾರ ಸಮಾರಂಭದ ಹಿನ್ನೆಲೆಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಶ್ರೀಗಳು, ಹೊಸ ಸರಕಾರದ ನಿಲುವಿಗೆ ತಮ್ಮ ಸಕಾರಾತ್ಮಕ ಬೆಂಬಲವನ್ನು ವ್ಯಕ್ತಪಡಿಸಿದರು.

ಸರ್ವಧರ್ಮ ಸಮಭಾವದ ಸಂದೇಶ: ನಮ್ಮ ನೂತನ ಮುಖ್ಯಮಂತ್ರಿಗಳು ತಾವು ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿಯೇ ಸರ್ವ ಧರ್ಮಗಳ ಹಾಗೂ ಧಾರ್ಮಿಕ ಮುಖಂಡರನ್ನು ಮುಂಚೂಣಿಯಲ್ಲಿಟ್ಟುಕೊಂಡು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಆ ಮೂಲಕ ತಾವು ಇಡೀ ಸಮಾಜದ ಎಲ್ಲಾ ಧರ್ಮಗಳನ್ನು ಸಮಭಾವದಿಂದ ಕಾಣುತ್ತೇವೆ ಎಂಬ ಅತ್ಯಂತ ಶ್ರೇಷ್ಠ ಹಾಗೂ ಸೌಹಾರ್ದಯುತ ಸಂದೇಶವನ್ನು ನೀಡುತ್ತಿದ್ದಾರೆ.

ನೂತನ ಮುಖ್ಯಮಂತ್ರಿಗಳ ಈ ಉತ್ತಮವಾದ ನಡೆಯನ್ನು ಬೆಂಬಲಿಸುವುದು ನಮ್ಮೆಲ್ಲರ ಕರ್ತವ್ಯ ಎಂಬ ನೆರಳಿನಲ್ಲಿಯೇ ನಾವು ಕೂಡ ಈ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಶಾಂತಿ, ಭದ್ರತೆಗೆ ಶ್ರೀಕೃಷ್ಣನ ಅನುಗ್ರಹವಿರಲಿ: ನೂತನ ಮುಖ್ಯಮಂತ್ರಿಗಳಿಗೆ ಸಮಾಜವನ್ನು ಇದೇ ರೀತಿಯಾಗಿ ಎಲ್ಲರನ್ನೂ ಒಟ್ಟಿಗೆ ಸೇರಿಸಿಕೊಂಡು ಮುನ್ನಡೆಸುವ ಶಕ್ತಿ ಸಿಗಲಿ. ನಾಡಿನಲ್ಲಿ ಸದಾ ಶಾಂತಿ, ಭದ್ರತೆ ಹಾಗೂ ಸಮೃದ್ಧಿ ಉಂಟಾಗುವಂತೆ ಸರಕಾರವನ್ನು ಮುನ್ನಡೆಸಲು ಅವರಿಗೆ ಉಡುಪಿ ಶ್ರೀಕೃಷ್ಣನ ಹಾಗೂ ಶ್ರೀರಾಮಚಂದ್ರ ದೇವರ ಅನುಗ್ರಹ ಮತ್ತು ರಕ್ಷಣೆ ಸದಾ ಇರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾ, ಎಲ್ಲರಿಗೂ ಮಂಗಳವನ್ನು ಹಾರೈಸುತ್ತೇನೆ ಎಂದು ಪೇಜಾವರ ಶ್ರೀಗಳು ತಮ್ಮ ಆಶೀರ್ವಚನದಲ್ಲಿ ನುಡಿದರು.



ಸಿಎಂ ಶಿವಕುಮಾರ್ ಗಾಂಧಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಸಿಎಂ ಎಸಿಎಸ್ ಆಗಿ ತುಷಾರ್ ಗಿರಿನಾಥ್

• **ಬೆಂಗಳೂರು:** ಡಿ.ಕೆ. ಶಿವಕುಮಾರ್ ಸಿಎಂ ಆಗುತ್ತಿದ್ದಂತೆ ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಅವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಅಂಜುಂ ಪರ್ವೇಜ್ ಅವರನ್ನು ವರ್ಗಾವಣೆಗೊಳಿಸಿ, ಆ ಸ್ಥಾನಕ್ಕೆ ನಗರಾಭಿವೃದ್ಧಿ ಹಾಗೂ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ತುಷಾರ್ ಗಿರಿನಾಥ್ ಅವರನ್ನು ನೇಮಕ ಮಾಡಲಾಗಿದೆ. ಮುಖ್ಯಮಂತ್ರಿಗಳ ಕಾರ್ಯದರ್ಶಿಯಾಗಿದ್ದ ಬಿ.ಬಿ. ಕಾವೇರಿ ಅವರನ್ನು ವರ್ಗಾವಣೆಗೊಳಿಸಿ ಅವರ ಜಾಗಕ್ಕೆ ರಾಜೇಂದ್ರ ಚೋಳನ್ ಅವರನ್ನು ನೇಮಕ ಮಾಡಲಾಗಿದೆ.

ಆರ್ಥಿಕ ಸಲಹೆಗಾರರ ನೇಮಕ: ನಿವೃತ್ತ ಐಎಎಸ್ ಅಧಿಕಾರಿ ಎಲ್.ಕೆ. ಅತೀಕ್ ಅವರನ್ನು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾಗಿ ನೇಮಕಗೊಳಿಸಲಾಗಿದೆ. ಎಲ್.ಕೆ. ಅತೀಕ್ ಅವರು ಈ ಹಿಂದೆ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

ಸಂಪಾದಕೀಯ

ಅಗ್ನಿ ದುರಂತಗಳು: ನಿರ್ಲಕ್ಷ್ಯ ಸಲ್ಲದು

ದಿಲ್ಲಿಯ ಮಾಳವೀಯ ನಗರ ಪ್ರದೇಶದಲ್ಲಿರುವ ಹೋಟೆಲೊಂದರಲ್ಲಿ ಭೀಕರ ಅಗ್ನಿ ಅನಾಹುತ ಸಂಭವಿಸಿ ವಿದೇಶಿಯರೂ ಸೇರಿದಂತೆ 20ಕ್ಕೂ ಅಧಿಕ ಮಂದಿ ಸಾವಿಗೀಡಾಗಿರುವುದು ಅತ್ಯಂತ ಮನಕಲಕುವ ದುರಂತ. ದುರಂತದಲ್ಲಿ 40ಕ್ಕೂ ಅಧಿಕ ಮಂದಿಯನ್ನು ರಕ್ಷಿಸಲಾಗಿದೆಯಾದರೂ ಅವರಲ್ಲಿ ಕೆಲವರು ಗಂಭೀರ ಸುಟ್ಟ ಗಾಯಗಳನ್ನು ಪಡೆದಿದ್ದಾರೆ. ಇನ್ನು ಕೆಲವರು ಬೆಂಕಿಯಿಂದ ರಕ್ಷಿಸಿಕೊಳ್ಳಲು ಹೋಟೆಲ್ ಮಹಡಿಯಿಂದ ಕೆಳಗೆ ಹಾಕಿ ಗಾಯಗೊಂಡ ಘಟನೆಯೂ ನಡೆದಿದೆ. ಇದು ದಿಲ್ಲಿಯಲ್ಲಿ ದಶಕಗಳ ಹಿಂದೆ ನಡೆದ ಉಪಹಾರ್ ಸಿನಿಮಾ ಮಂದಿರದ



ಅಗ್ನಿದುರಂತವೂ ಸೇರಿದಂತೆ ಹಲವಾರು ಅಗ್ನಿ ದುರಂತಗಳ ಕಹಿನೆನಪುಗಳನ್ನು ಮತ್ತೊಮ್ಮೆ ಕೆದಕಿದೆ.

ಇಂತಹ ಅಗ್ನಿದುರಂತಗಳು ಆಕಸ್ಮಿಕವಾದರೂ ಬಹುತೇಕ ಬಾರಿ ಮಾನವ ಪ್ರಮಾದಗಳೇ ಇದಕ್ಕೆ ಕಾರಣವಾಗಿರುತ್ತವೆ ಎನ್ನುವುದು ಸುಳ್ಳಲ್ಲ. ಆದರಲ್ಲಿಯೂ ಅಗ್ನಿದುರಂತದಲ್ಲಿ ಸಾವುನೋವುಗಳು ಹೆಚ್ಚಾಗಲಂತೂ ಮಾನವನ ದುರಾಶೆ, ನೀತಿನಿಯಮಗಳ ಉಲ್ಲಂಘನೆ, ಆಡಳಿತದ ನಿರ್ಲಕ್ಷ್ಯ ಮೊದಲಾದವು ಪ್ರಮುಖ ಕಾರಣಗಳಾಗಿರುತ್ತವೆ. ಪ್ರಸಕ್ತ ಮಾಳವೀಯ ನಗರದ ಹೋಟೆಲ್ ದುರಂತದಲ್ಲೂ ಇದೇ ಅಂಶಗಳು ಪ್ರಧಾನವಾಗಿ ಎದ್ದು ಕಾಣುತ್ತಿರುವುದು ದುರ್ದೈವ. ಉಪಹಾರ ಮತ್ತು ವಿರಾಮ ಪಡೆಯಲಷ್ಟೇ ಈ ಹೋಟೆಲ್‌ಗೆ ಅನುಮತಿ ನೀಡಲಾಗಿದ್ದು, ಆರು ಕೊಠಡಿಗಳಿಗಷ್ಟೇ ಪರವಾನಿಗೆ ನೀಡಲಾಗಿತ್ತು. ಆದರೆ ಅಲ್ಲಿ 25 ಕೊಠಡಿಗಳನ್ನು ಪರವಾನಿಗೆರಹಿತವಾಗಿ ಕಟ್ಟಲಾಗಿತ್ತು. ಅಷ್ಟು ದೊಡ್ಡ ಕಟ್ಟಡಕ್ಕೆ ಕೇವಲ ಒಂದು ನಿರ್ಗಮನ ದ್ವಾರವಿದ್ದು, ಅಗ್ನಿಶಾಮಕ ವಾಹನಗಳು ಆಗಮಿಸಲು ಅಗತ್ಯವಾಗಿರುವ ಸೂಕ್ತ ಸ್ಥಳಾವಕಾಶವನ್ನೂ ಬಿಟ್ಟಿರಲಿಲ್ಲ. ಇವೆಲ್ಲವೂ ಆಡಳಿತದ ಕಣ್ಣು ತಪ್ಪಿಸಿ ನಡೆದಿರಲಾರದು. ಸ್ಥಳೀಯಾಡಳಿತವು ಇವನ್ನು ಕಂಡೂ ಕಾಣದಂತೆ ವರ್ತಿಸಿರುವ ಹಾಗೂ ಅದಕ್ಕಾಗಿ ಸೂಕ್ತ 'ಪ್ರತಿಫಲ' ಪಡೆದಿರುವ ಸಾಧ್ಯತೆಗಳೂ ಇವೆ. ಬಹುತೇಕ ಪ್ರಕರಣಗಳಲ್ಲಿ ನಡೆಯುವುದು ಇದೇರೀತಿ. ಕಟ್ಟಡ ನಿರ್ಮಾಣದಲ್ಲಂತೂ ಇಂತಹ ನಿಯಮೋಲ್ಲಂಘನೆಗಳು ಸಾಕಷ್ಟು ನಡೆಯುತ್ತವೆ. ಅಗ್ನಿದುರಂತ ತಡೆಗೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ನಿಯಮವಿದ್ದರೂ ಅದನ್ನು ಕಟ್ಟಡ ನಿರ್ಮಾಣದ ವೇಳೆ ಪಾಲಿಸುವುದು ಕಡಿಮೆಯೆ.

ಇದೇವೇಳೆ, ಇತ್ತೀಚಿನ ತಿಂಗಳುಗಳಲ್ಲಿ ಹಲವಾರು ಅಗ್ನಿದುರಂತಗಳು ನಡೆದಿರುವ ಹಿನ್ನೆಲೆಯಲ್ಲಿ ಈ ಕುರಿತಂತೆಯೂ ಹೆಚ್ಚಿನ ತನಿಖೆ ನಡೆಯುವ ಅಗತ್ಯವಿದೆ. ರೈಲುಗಳಲ್ಲಿ ಇತ್ತೀಚೆಗೆ ಬೆನ್ನುಬೆನ್ನಿಗೇ ನಡೆದ ಕೆಲವು ಅಗ್ನಿ ಆಕಸ್ಮಿಕಗಳಲ್ಲಿ ವಿಧ್ವಂಸಕರ ಕೈವಾಡವಿರುವುದನ್ನು ಬಳಿಕ ರೈಲ್ವೆ ಇಲಾಖೆ ಪತ್ತೆ ಹಚ್ಚಿತ್ತು. ಅದೇರೀತಿ, ಇನ್ನಿತರ ಅಗ್ನಿ ದುರಂತಗಳಲ್ಲೂ ವಿಧ್ವಂಸಕರ ಕೈವಾಡವಿದೆಯೇ ಎಂಬ ಬಗ್ಗೆ ತನಿಖೆ ನಡೆಸಬೇಕಾಗಿದೆ. ದೇಶದ ಶಾಂತಿ, ಸುವ್ಯವಸ್ಥೆಯನ್ನು ಕೆಡಿಸಲು ದುಷ್ಟ ಶಕ್ತಿಗಳು ಸಕ್ರಿಯವಾಗಿರುವ ಹಿನ್ನೆಲೆಯಲ್ಲಿ ಈ ಆಯಾಮದಲ್ಲೂ ತನಿಖೆ ನಡೆಯುವುದು ಅವಶ್ಯವಾಗಿದೆ.

ತುಪ್ಪವು ನಾಲಗೆಗೆ ಅಂಟುವುದಿಲ್ಲ

ಆಜ್ಞಂ ಕರ್ಮಾಣಿ ಲಿಂಪಂತಿ ತಜ್ಞಂ ಕರ್ಮ ನ ಲಿಂಪತಿ।
ಲಿಪ್ಯತೇ ರಸನೈವೈಕಾ ಸರ್ಪಿಷಾ ನ ತಥಾ ಕರಃ ॥

ಅಜ್ಞನನ್ನು ಕರ್ಮಗಳು ಅಂಟುವವು. ಬಲ್ಲವನನ್ನು ಕರ್ಮಗಳು ಅಂಟುವುದಿಲ್ಲ. ತುಪ್ಪವು ಕೈಗೆ ಅಂಟಿಕೊಂಡ ಹಾಗೆ ನಾಲಗೆಗೆ ಮಾತ್ರ ಅಂಟುವುದಿಲ್ಲ -ಎಂಬುದು ಶ್ಲೋಕಾರ್ಥ



ತುಪ್ಪ ಗೊತ್ತಿಲ್ಲದವರಿಲ್ಲ. ತುಪ್ಪವನ್ನು ತಿಂದಿರದವರು ಇಲ್ಲ. ನಮ್ಮ ಭಾರತೀಯ ಪರಂಪರೆಯಲ್ಲಿ ತುಪ್ಪಕ್ಕೆ ಮಹತ್ವದ ಸ್ಥಾನವಿದೆ ಎಂಬುದನ್ನು 'ಘೃತೇನ ವರ್ಧತೇ ಬುದ್ಧಿಃ' ಎಂಬ ಪ್ರಸಿದ್ಧ ಸೂಕ್ತಿ ತಿಳಿಸುತ್ತದೆ. 'ಘೃತಮಾಯುಃ ಘೃತಂ ಜ್ಯೋತಿಃ' ಎಂಬುದು ಪ್ರಸಿದ್ಧವಾದ ಇನ್ನೊಂದು ಲೋಕೋಕ್ತಿ. ತುಪ್ಪವೇ ಆಯಸ್ಸು, ತುಪ್ಪವೇ ಬೆಳಕು ಎಂಬುದು ಇದರ ಅರ್ಥ. ಆಯುಷ್ಯ ವೃದ್ಧಿಗಾಗಿ, ಆರೋಗ್ಯಪೂರ್ಣ ಬದುಕಿಗಾಗಿ ತುಪ್ಪವನ್ನು ತಿನ್ನಬೇಕು ಎಂಬುದು ಲಾಗಾಯ್ತಿನಿಂದಲೂ ಪ್ರಚಲಿತದಲ್ಲಿರುವ ಮಾತು. ಶುದ್ಧವಾದ ಬೆಳಕು, ಆರೋಗ್ಯಪೂರ್ಣ ವಾತಾವರಣ ಮನೆಯಲ್ಲಿರಬೇಕು ಎಂದು ನಾವು ಬಯಸುವುದಾದರೆ ಮನೆಯಲ್ಲಿ ತುಪ್ಪದ ದೀಪ ಬೆಳಗಿಸಬೇಕು ಎಂಬ ಪರಿಪಾಠವಿದೆ. ದೇವರ ಮುಂದೆ ತುಪ್ಪದ ದೀಪ ಹಚ್ಚುವುದು ಸರ್ವ ಶ್ರೇಷ್ಠ. ತುಪ್ಪದ ದೀಪ ಹಚ್ಚುತ್ತೇನೆ ಎಂದು ಹರಕೆ ಹೇಳುವವರಿದ್ದಾರೆ.

ಆಯುರ್ವೇದದ ದೃಷ್ಟಿಯಲ್ಲಿಯೂ ತುಪ್ಪ ಅತ್ಯಂತ ಮಹತ್ವದ್ದು. ಬೇರೆ ಬೇರೆ ರೋಗಗಳಿಗೆ ಆಯುರ್ವೇದದಲ್ಲಿ ಹೇಳುವ ಘೃತ ದಿವ್ಯೌಷಧಿ.

ಅಡುಗೆಯಲ್ಲಿಯೂ ಇದರ ಸ್ಥಾನ ಮಹತ್ವದ್ದು. ಶುದ್ಧ ತುಪ್ಪದಲ್ಲಿ ಮಾಡಿದ್ದು, ತುಪ್ಪದ ಒಗ್ಗರಣೆ, ಊಟದಲ್ಲಿ ಮೇಲಿನಿಂದ ತುಪ್ಪ ಬಳಸುವುದು ಇವೆಲ್ಲವೂ ರುಚಿಯನ್ನು ಇಮ್ಮಡಿಗೊಳಿಸುತ್ತದೆ. ಹೋಮಾದಿಗಳಲ್ಲಿ ಆಜ್ಯಾಹುತಿ ಶ್ರೇಷ್ಠ. ಒಟ್ಟಿನಲ್ಲಿ ತುಪ್ಪ ಮನುಕುಲದ ಅವಿಭಾಜ್ಯ ಅಂಗವೆಂದರೂ ತಪ್ಪಾಗಲಾರದು.

ತುಪ್ಪದ ವಿಶೇಷ ಗುಣವೆಂದರೆ ಕೈಗೆ ಅಂಟಿಕೊಳ್ಳುವುದು. ಕೈಗೆ ಅಂಟಿದರೆ ಸುಲಭದಲ್ಲಿ ಜಿಡ್ಡಿನ ಅಂಶ ಹೋಗುವುದಿಲ್ಲ. ಸ್ವಲ್ಪವೇ ತಾಗಿದರೂ ಆ ಜಿಡ್ಡಿನ ಅಂಶವನ್ನು ತೊಳೆದುಕೊಳ್ಳಲು ಸಾಬೂನು ಇತ್ಯಾದಿ ಬಳಸಬೇಕು. ಆಶ್ಚರ್ಯವೆಂದರೆ ತುಪ್ಪವೆಂದೂ ನಾಲಿಗೆಗೆ ಅಂಟಿಕೊಳ್ಳದು. ಎಷ್ಟೇ ತುಪ್ಪ ತಿಂದರೂ ಸಣ್ಣ ಕುರುಹು ಕೂಡಾ ನಾಲಿಗೆಯಲ್ಲಿರುವುದಿಲ್ಲ. ಇದು ಘೃತ ವೈಶಿಷ್ಟ್ಯ.

ಈ ಗುಣ ಧರ್ಮವನ್ನು ದೃಷ್ಟಾಂತವಾಗಿರಿಸಿ ಕವಿಯು ಕರ್ಮವಾಗಿ ವ್ಯಾಖ್ಯಾನಿಸುತ್ತಾನೆ ಕೈಗೆ ತುಪ್ಪವು ಅಂಟುವಂತೆ ಕರ್ಮವು ಅಜ್ಞರಿಗೆ ಅಂಟಿಕೊಳ್ಳುತ್ತದೆ. ನಾಲಿಗೆಗೆ ಅಂಟದಿರುವಂತೆ ತಜ್ಞರನ್ನು ಕರ್ಮವು ಅಂಟುವುದಿಲ್ಲ ಎಂಬುದಾಗಿ.

ಯಾವುದೇ ಕೆಲಸವನ್ನು ಮಾಡುವಾಗಲೂ ಪ್ರಾಮಾಣಿಕವಾಗಿ ಜಾಗೃತೆಯಿಂದ ಮಾಡಬೇಕು. ಯಾವುದೇ ದೋಷವಾಗದಂತೆ, ಆಕ್ಷೇಪಕ್ಕೆ ಈಡಾಗದಂತೆ ಕರ್ತವ್ಯವನ್ನು ನಿರ್ವಹಿಸಬೇಕು. ನಾಲಿಗೆಗೆ ತುಪ್ಪ ಅಂಟದ ತೆರದಲ್ಲಿ ಕರ್ಮಕ್ಕೆ ಅಂಟಿಕೊಳ್ಳಬಾರದು. ಬಲ್ಲವರು ಅಥವಾ ತಜ್ಞರು ಇದೇ ರೀತಿ ಬದುಕುತ್ತಾರೆ. ಇದೇ ರೀತಿ ಬದುಕನ್ನು ಕಟ್ಟಿಕೊಳ್ಳಬೇಕು. ಅಜ್ಞರು ಕರ್ಮದಲ್ಲಿ ತೊಡಗಿದರೆ ಕರ್ಮವನ್ನು ಬದುಕಿನುದ್ದಕ್ಕೂ ಅಂಟಿಸಿಕೊಳ್ಳುತ್ತಾರೆ. ಆಕ್ಷೇಪಕ್ಕೂ, ಆರೋಪಕ್ಕೂ ಈಡಾಗುತ್ತಾರೆ. ನೀರಿನಲ್ಲಿಯೇ ಇದ್ದರೂ ಕಮಲದ ಎಲೆ ನೀರನ್ನು ಅಂಟಿಸಿಕೊಳ್ಳದಿರುವಂತೆ, ಮಳೆ ಹನಿ ಬಿದ್ದರೂ ಕೆಸುವಿನ ಎಲೆ ಅಂಟಿಸಿಕೊಳ್ಳದಂತೆ ಕರ್ಮವನ್ನು ಮಾಡುತ್ತಾ, ಅದಕ್ಕೆ ಅಂಟಿಕೊಳ್ಳದೆ ಪ್ರಾಮಾಣಿಕವಾಗಿ ತಜ್ಞರೆನಿಸಿಕೊಳ್ಳಬೇಕೇ ವಿನಾ ಮೈ-ಮನಗಳನ್ನು ಗಬ್ಬೆಬ್ಬಿಸಿಕೊಳ್ಳುವ ಅಜ್ಞರಾಗಬಾರದು. ಇದನ್ನು ಕವಿ ಘೃತದ ದೃಷ್ಟಾಂತದೊಂದಿಗೆ ನಿರೂಪಿಸಿದ್ದಾನೆ.

ಎಐ ಯುಗದಲ್ಲಿ ಭಾರತೀಯ ಭಾಷೆಗಳ ಭವಿಷ್ಯ



ಕೃತಕ ಬುದ್ಧಿಮತ್ತೆ ಇಂದು ಕೇವಲ ತಂತ್ರಜ್ಞಾನದ ಪದವಲ್ಲ. ಅದು ನಮ್ಮ ಬದುಕಿನ ರೀತಿ, ಕೆಲಸದ ವಿಧಾನ ಮತ್ತು ಜ್ಞಾನದ ಪ್ರವಾಹವನ್ನೇ ಮರುರೂಪಿಸುತ್ತಿರುವ ಮಹಾಶಕ್ತಿ ಎಂದರೆ ತಪ್ಪಾಗಲಾರದು. ಕೈಗಾರಿಕೆ, ಶಿಕ್ಷಣ, ಆರೋಗ್ಯ, ಕೃಷಿ, ಮಾಧ್ಯಮ ಮತ್ತು ಆಡಳಿತ ಸೇರಿದಂತೆ ಎಲ್ಲ ಕ್ಷೇತ್ರಗಳ ಮೇಲೂ ಅದರ ಪ್ರಭಾವ ಆಳವಾಗಿ ಬೀಳುತ್ತಿದೆ. ಇಂತಹ ಸಮಯದಲ್ಲಿ ಭಾರತದಂತಹ ಬಹುಭಾಷಿಕ ದೇಶದ ಮುಂದೆ ಒಂದು ಅತ್ಯಂತ ಮಹತ್ವದ ಪ್ರಶ್ನೆ ನಿಂತಿದೆ. ಎಐ ಯುಗದಲ್ಲಿ ಭಾರತೀಯ ಭಾಷೆಗಳ ಭವಿಷ್ಯ ಯಾವ ದಿಕ್ಕಿಗೆ ಸಾಗಲಿದೆ? ಕನ್ನಡ ಸೇರಿದಂತೆ ನಮ್ಮ ಭಾಷೆಗಳು ಈ ಹೊಸ ತಂತ್ರಜ್ಞಾನ ಅಲೆಯೊಂದಿಗೆ ಬೆಳೆದು ಬಲವಾಗಲಿವೆಯೇ ಅಥವಾ ಕ್ರಮೇಣ ಅಂಚಿಗೆ ಸರಿಯಲಿವೆಯೇ? ಇದು ಸದ್ಯಕ್ಕೆ ಎದ್ದಿರುವ ಪ್ರಶ್ನೆ.

ಹಿಂದೊಂದು ಕಾಲದಲ್ಲಿ ತಂತ್ರಜ್ಞಾನ ಅರ್ಥವಾಗಬೇಕಾದರೆ, ಇಂಗ್ಲಿಷ್ ಭಾಷೆ ಬೇಕೇ ಬೇಕು ಎಂಬಂತೆ ಆಲೋಚನೆ ಇತ್ತು. ಕಂಪ್ಯೂಟರ್ ಬಳಸುವುದರಿಂದ ಹಿಡಿದು ಅಂತರ್ಜಾಲದಲ್ಲಿ ಮಾಹಿತಿ ಹುಡುಕುವ ತನಕ, ಡಿಜಿಟಲ್ ಜಗತ್ತಿನ ಬಹುತೇಕ ಬಾಗಿಲುಗಳು ಇಂಗ್ಲಿಷ್ ಮೂಲಕವೇ ತೆರೆಯುತ್ತವೆ ಎಂಬ ಸ್ಥಿತಿ ಇತ್ತು. ಇದರ ಪರಿಣಾಮವಾಗಿ ಭಾರತೀಯ ಭಾಷೆಗಳು, ವಿಶೇಷವಾಗಿ ಪ್ರಾದೇಶಿಕ ಭಾಷೆಗಳು, ತಂತ್ರಜ್ಞಾನ ಕ್ಷೇತ್ರದಲ್ಲಿ ಹಿಂಬದಿಗೆ ಸರಿದವು. ಆದರೆ ಕಳೆದ ಕೆಲವು ವರ್ಷಗಳಲ್ಲಿ ಈ ಚಿತ್ರಣ ಗಮನಾರ್ಹವಾಗಿ ಬದಲಾಗಿದೆ. ಭಾಷಾಮಾದರಿಗಳು, ಧ್ವನಿ ಗುರುತಿಸುವ ವ್ಯವಸ್ಥೆಗಳು, ಸ್ವಯಂ ಅನುವಾದ ಸಾಧನಗಳು ಮತ್ತು ಸಂವಾದಾತ್ಮಕ ಎಐ ವೇದಿಕೆಗಳು ಸ್ಥಳೀಯ ಭಾಷೆಗಳಿಗೆ ಹೊಸ ಅವಕಾಶಗಳನ್ನು ನೀಡಲು ಆರಂಭಿಸಿವೆ. ಇದರಿಂದ ಡಿಜಿಟಲ್ ಪ್ರವೇಶ ಇಂಗ್ಲಿಷ್ ಬಲ್ಲವರಿಗಷ್ಟೇ ಸೀಮಿತವಿಲ್ಲ ಎಂಬ ನಂಬಿಕೆ ಬಲಪಡುತ್ತಿದೆ.

ಇಂದು ಕನ್ನಡದಲ್ಲೇ ಪ್ರಶ್ನೆ ಕೇಳಿ ಉತ್ತರ ಪಡೆಯುವುದು ಸಾಧ್ಯವಾಗಿದೆ. ಕನ್ನಡದಲ್ಲೇ ಲೇಖನ ಬರೆಯಬಹುದು, ಪತ್ರವನ್ನು ಅನುವಾದಿಸಬಹುದು, ಪ್ರಸ್ತುತಿಗಳು ಮತ್ತು ಭಾಷಣಗಳನ್ನು ಸಿದ್ಧಪಡಿಸಬಹುದು. ಗ್ರಾಮೀಣ ರೈತನು ತನ್ನ ನೆಲದ ಸಮಸ್ಯೆಗೆ ತನ್ನ ಭಾಷೆಯಲ್ಲೇ ಕೃಷಿ ಸಲಹೆ ಪಡೆದುಕೊಳ್ಳಬಹುದು. ವಿದ್ಯಾರ್ಥಿಯೊಬ್ಬ ಕಷ್ಟವಾದ ಇಂಗ್ಲಿಷ್ ವಿಷಯವನ್ನು ಕನ್ನಡದಲ್ಲಿ ಅರ್ಥಮಾಡಿಕೊಳ್ಳಬಹುದು. ಸಾಮಾನ್ಯ ನಾಗರಿಕನಿಗೆ ಸರ್ಕಾರಿ ಸೇವೆಗಳು, ಆರೋಗ್ಯ ಮಾಹಿತಿ ಮತ್ತು ಶಿಕ್ಷಣ ಸಂಬಂಧಿತ ನೆರವು ಸ್ಥಳೀಯ ಭಾಷೆಯಲ್ಲೇ ತಲುಪಬಹುದು. ತಂತ್ರಜ್ಞಾನವು ಜನರಿಗೆ ನಿಜವಾದ ಅರ್ಥದಲ್ಲಿ ಉಪಯುಕ್ತವಾಗುವುದಾದರೆ ಅದು ಅವರ ಭಾಷೆಯಲ್ಲಿ ಮಾತನಾಡಬೇಕು. ಈ ಅರ್ಥದಲ್ಲಿ ಎಐ ಭಾಷೆ ಪ್ರಜಾಪ್ರಭುತ್ವಕ್ಕೆ ಹೊಸ ಬಾಗಿಲು ತೆರೆದಿದೆ.

ಎಐ ಭಾರತೀಯ ಭಾಷೆಗಳ ಬೆಳವಣಿಗೆಗೆ ಒಂದು ಅಪರೂಪದ ಐತಿಹಾಸಿಕ ಅವಕಾಶವನ್ನೂ ಒದಗಿಸಿದೆ. ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿರುವ ಪುಸ್ತಕಗಳು, ಪತ್ರಿಕೆಗಳು, ಸಂಶೋಧನಾ ಕೃತಿಗಳು, ಶಾಸನಗಳು, ಜನಪದ ಸಾಹಿತ್ಯ ಮತ್ತು ಸಾಂಸ್ಕೃತಿಕ ದಾಖಲೆಗಳು ಈಗ ವೇಗವಾಗಿ ಡಿಜಿಟಲ್ ರೂಪಕ್ಕೆ ಬರುತ್ತಿವೆ. ಹಿಂದೆ ಕೆಲವೇ ವಾಚನಾಲಯಗಳಲ್ಲಿ ಸೀಮಿತವಾಗಿದ್ದ ಜ್ಞಾನಸಂಪತ್ತು ಇಂದು ಬಹು ಜನರಿಗೆ ತಲುಪುವ ಅವಕಾಶ ಪಡೆಯುತ್ತಿದೆ. ಇದು ಕೇವಲ ಭಾಷೆಯನ್ನು ಉಳಿಸುವ ಕಾರ್ಯವಲ್ಲ, ಅದರಲ್ಲಿರುವ ಜ್ಞಾನವನ್ನು ಹೊಸ ಪೀಳಿಗೆಗಳಿಗೆ ಜೀವಂತವಾಗಿ ಸಾಗಿಸುವ ಪ್ರಕ್ರಿಯೆಯಾಗಿದೆ.

ಭಾರತದಲ್ಲಿ ಭಾಷಾ ತಂತ್ರಜ್ಞಾನದ ಬೆಳವಣಿಗೆಯಲ್ಲಿ ಸರ್ಕಾರದ ಪಾತ್ರವೂ ನಿರ್ಣಾಯಕವಾಗಿದೆ. ಡಿಜಿಟಲ್ ಇಂಡಿಯಾ ಮುಂತಾದ ಯೋಜನೆಗಳು ಭಾರತೀಯ ಭಾಷೆಗಳನ್ನು ತಂತ್ರಜ್ಞಾನದ ಕೇಂದ್ರವಲಯಕ್ಕೆ ತರಬೇಕೆಂಬ ಆಶಯವನ್ನು ಹೊತ್ತಿವೆ. ಆದರೆ ಉದ್ದೇಶ ಘೋಷಿಸುವುದಷ್ಟೇ ಸಾಕಾಗುವುದಿಲ್ಲ. ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಖಾಸಗಿ ತಂತ್ರಜ್ಞಾನ ಕಂಪನಿಗಳು, ಪ್ರಕಾಶಕರು ಮತ್ತು ಭಾಷಾ ತಜ್ಞರು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಸಮೃದ್ಧ ಭಾಷಾ ಸಂಪನ್ಮೂಲಗಳು ನಿರ್ಮಾಣವಾಗುತ್ತವೆ. ನಿಘಂಟುಗಳು, ಪಠ್ಯ ಸಂಗ್ರಹಗಳು, ಧ್ವನಿ ಡೇಟಾ ಮತ್ತು ವಿವಿಧ ಬಳಕೆಯ ಉದಾಹರಣೆಗಳನ್ನು ವ್ಯವಸ್ಥಿತವಾಗಿ ನಿರ್ಮಿಸುವುದು ಭಾಷಾಭವಿಷ್ಯದ ದೃಢ ನೆಲೆಯಲ್ಲಿ ಒಂದಾಗಿದೆ.

ಭಾರತದ ಭಾಷಾ ವೈವಿಧ್ಯತೆ ಜಗತ್ತಿನಲ್ಲಿ ಅಪರೂಪದ ಸಂಪತ್ತಾಗಿದೆ. ಸಂವಿಧಾನ ಮಾನ್ಯತೆ ನೀಡಿರುವ ಭಾಷೆಗಳ ಜೊತೆಗೆ ಅನೇಕ ಉಪ ಭಾಷೆಗಳು, ಪ್ರಾದೇಶಿಕ ಉಚ್ಚಾರಣೆಗಳು ಮತ್ತು ಸ್ಥಳೀಯ ಅಭಿವ್ಯಕ್ತಿಗಳು ನಮ್ಮ ಸಾಂಸ್ಕೃತಿಕ ಜೀವಂತಿಕೆಯನ್ನು ಪ್ರತಿನಿಧಿಸುತ್ತವೆ. ಇಂತಹ ವೈವಿಧ್ಯಪೂರ್ಣ ಪರಿಸರದಲ್ಲಿ ಎಐ ಅಭಿವೃದ್ಧಿಪಡಿಸುವುದು ಸುಲಭವಲ್ಲ. ಆದರೆ ಇದೇ ಸಂಕೀರ್ಣತೆ ಭಾರತವನ್ನು ಜಾಗತಿಕ ಮಟ್ಟದಲ್ಲಿ ಬಹುಭಾಷಿಕ ತಂತ್ರಜ್ಞಾನ ಅಭಿವೃದ್ಧಿಯ ಮುಂಚೂಣಿ ರಾಷ್ಟ್ರವನ್ನಾಗಿ ರೂಪಿಸುವ ಸಾಮರ್ಥ್ಯವನ್ನು ಹೊಂದಿದೆ. ಅನೇಕ ಭಾಷೆಗಳ ನಡುವೆ ಸುಗಮವಾಗಿ ಕಾರ್ಯನಿರ್ವಹಿಸಬಲ್ಲ ಎಐ ಮಾದರಿಗಳು ಕೇವಲ ಭಾರತಕ್ಕಲ್ಲ, ಜಗತ್ತಿನ ಇತರ ಬಹುಭಾಷಿಕ ಸಮಾಜಗಳಿಗೂ ದಾರಿ ದೀಪವಾಗಬಹುದು.

ಸದ್ಯ ಭಾಷೆಗಳಿಗೆ ಒಂದಷ್ಟು ಸವಾಲುಗಳೂ ಎದ್ದಿವೆ ಅಂದರೆ, ಮಹತ್ವದ ಸವಾಲು ಡೇಟಾದ ಕೊರತೆ. ಎಐ ಯಾವುದೇ ಭಾಷೆಯನ್ನು ಅರ್ಥಮಾಡಿಕೊಳ್ಳುವುದು ಅದಕ್ಕೆ ಲಭ್ಯವಿರುವ ವಿಷಯದ ಆಧಾರದ ಮೇಲೆ. ಇಂಗ್ಲಿಷ್ ಭಾಷೆಯಲ್ಲಿ ಅಪಾರ ಪ್ರಮಾಣದ ಡಿಜಿಟಲ್ ವಿಷಯ ಲಭ್ಯವಿರುವುದರಿಂದ ಅದರ ಅಭಿವೃದ್ಧಿ ವೇಗವಾಗಿ ಸಾಗುತ್ತದೆ. ಆದರೆ ಕನ್ನಡ ಸೇರಿದಂತೆ ಅನೇಕ ಭಾರತೀಯ ಭಾಷೆಗಳಲ್ಲಿ ಗುಣಮಟ್ಟದ ಪಠ್ಯ, ಸಂಶೋಧನೆ, ಧ್ವನಿ ಮತ್ತು ಸಂವಾದ ಡೇಟಾ ಇನ್ನೂ ಸಮರ್ಪಕ ಪ್ರಮಾಣದಲ್ಲಿ ಲಭ್ಯವಿಲ್ಲ. ಈ ಕೊರತೆಯನ್ನು ನೀಗಿಸದೆ ಭಾಷಾ ತಂತ್ರಜ್ಞಾನವನ್ನು ಸಮಾನತೆಯ ದೃಷ್ಟಿಯಿಂದ ಬೆಳೆಸಲು ಸಾಧ್ಯವಿಲ್ಲ. ಇಲ್ಲದಿದ್ದರೆ ತಂತ್ರಜ್ಞಾನದ ಪ್ರಗತಿಯಲ್ಲಿಯೂ ಭಾಷಾ ಅಸಮಾನತೆ ಮುಂದುವರಿಯುವ ಅಪಾಯ ಹೆಚ್ಚುತ್ತದೆ.

ಇಂದಿನ ಮಕ್ಕಳು ಮತ್ತು ಯುವಜನರು ಡಿಜಿಟಲ್ ಜಗತ್ತಿನಲ್ಲೇ ಬೆಳೆಯುತ್ತಿದ್ದಾರೆ. ಅವರ ಕಲಿಕೆ, ಮನರಂಜನೆ, ಸಂವಹನ ಮತ್ತು ಅಭಿವ್ಯಕ್ತಿ ಹೆಚ್ಚಾಗಿ ಮೊಬೈಲ್ ಮತ್ತು ಇಂಟರ್ನೆಟ್ ಮೂಲಕವೇ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಸೇರಿದಂತೆ ಭಾರತೀಯ ಭಾಷೆಗಳಲ್ಲಿ ಆಕರ್ಷಕ, ಸಮಕಾಲೀನ ಮತ್ತು ಗುಣಮಟ್ಟದ ಡಿಜಿಟಲ್ ವಿಷಯಗಳನ್ನು ನಿರ್ಮಿಸುವುದು ಅತ್ಯಗತ್ಯ. ಇಂಥ ಸಂದರ್ಭದಲ್ಲಿ ಮಾಧ್ಯಮಗಳು, ಪ್ರಕಾಶಕರು, ಲೇಖಕರು ಮತ್ತು ಶಿಕ್ಷಕರ ಪಾತ್ರ ಇನ್ನಷ್ಟು ದೊಡ್ಡದಾಗುತ್ತದೆ. ಇಂದು ಅಂತರ್ಜಾಲದಲ್ಲಿ ಪ್ರಕಟವಾಗುವ ವಿಷಯವೇ ನಾಳೆಯ ಎಐಗೆ ಕಲಿಕೆಯ ಆಧಾರವಾಗುತ್ತದೆ. ಆದ್ದರಿಂದ ಕನ್ನಡದಲ್ಲಿ ಹೆಚ್ಚು ಗುಣಮಟ್ಟದ, ಪರಿಶುದ್ಧ ಮತ್ತು ವೈವಿಧ್ಯಮಯ ಡಿಜಿಟಲ್ ವಿಷಯ ಸೃಷ್ಟಿಯಾಗುವುದು ಅತ್ಯಗತ್ಯ. ನಮ್ಮ ಭಾಷೆಯಲ್ಲಿನ ಸಮೃದ್ಧ ವಿಷಯ ಹೆಚ್ಚಿದಷ್ಟೂ ಎಐ ಕೂಡ ಕನ್ನಡವನ್ನು ಹೆಚ್ಚು ಸರಿಯಾಗಿ ಅರ್ಥಮಾಡಿಕೊಳ್ಳಲು ಮತ್ತು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಾಗುತ್ತದೆ. ಭಾಷೆಯ ಭವಿಷ್ಯವನ್ನು ಕೇವಲ ತಂತ್ರಜ್ಞಾನ ಕಂಪನಿಗಳ ಕೈಗೆ ಬಿಡದೆ, ಸಮಾಜವೇ ಅದರ ನಿರ್ಮಾಣದಲ್ಲಿ ಭಾಗವಹಿಸಬೇಕು.

ಶಿಕ್ಷಣ ಕ್ಷೇತ್ರದಲ್ಲಿ ಎಐ ಹೊಸ ದಿಕ್ಕುಗಳನ್ನುತೆರೆದಿದೆ. ಸ್ಥಳೀಯ ಭಾಷೆಗಳಲ್ಲಿ ಗುಣಮಟ್ಟದ ಪಠ್ಯವಸ್ತುಗಳನ್ನು ಸಿದ್ಧಪಡಿಸುವುದು, ವಿದ್ಯಾರ್ಥಿಗಳ ಕಲಿಕೆಯ ವೇಗಕ್ಕೆ ತಕ್ಕಂತೆ ವೈಯಕ್ತಿಕ ಸಹಾಯ ಒದಗಿಸುವುದು ಮತ್ತು ಕಠಿಣ ವಿಷಯಗಳನ್ನು ಸರಳ ಭಾಷೆಯಲ್ಲಿ ಅರ್ಥಮಾಡಿಕೊಡುವುದು ಈಗ ಸಾಧ್ಯವಾಗುತ್ತಿದೆ. ಮಾತೃಭಾಷಾಶಿಕ್ಷಣದ ಮಹತ್ವವನ್ನು ಪುನಃ ಒತ್ತಿ ಹೇಳುತ್ತಿರುವ ಈ ಸಂದರ್ಭದಲ್ಲಿ ಎಐ ಒಂದು ಪರಿಣಾಮಕಾರಿ ಸಹಾಯಕ ಸಾಧನವಾಗಿ ಬೆಳೆಯುವ ಸಾಮರ್ಥ್ಯ ಹೊಂದಿದೆ. ಆದರೆ ಅದನ್ನು ಸರಿಯಾಗಿ ಬಳಸಲು ಶಿಕ್ಷಕರ ಮಾರ್ಗದರ್ಶನ ಮತ್ತು ವಿಷಯದ ಗುಣಮಟ್ಟ ಎರಡೂ ಅವಶ್ಯಕ.

ಆದರೂ ತಂತ್ರಜ್ಞಾನವನ್ನು ಅಂತಿಮ ಪರಿಹಾರವೆಂದು ಭಾವಿಸುವುದು ತಪ್ಪು. ಭಾಷೆಯನ್ನು ಉಳಿಸುವುದು ಮತ್ತು ಬೆಳೆಸುವುದು ಕೇವಲ ಯಂತ್ರಗಳ ಹೊಣೆಗಾರಿಕೆಯಾಗುವುದಿಲ್ಲ. ಅದು ಸಮಾಜದ, ಶಿಕ್ಷಣ ಸಂಸ್ಥೆಗಳ, ಮಾಧ್ಯಮಗಳ, ಸರ್ಕಾರದ ಮತ್ತು ಪ್ರತಿಯೊಬ್ಬ ಭಾಷಾಭಿಮಾನಿಯ ಸಹಭಾಗಿತ್ವದಿಂದ ಮಾತ್ರ ಸಾಧ್ಯ. ಮನೆಗಳಲ್ಲಿ, ಶಾಲೆಗಳಲ್ಲಿ, ಕಚೇರಿಗಳಲ್ಲಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಭಾಷೆಯ ಬಳಕೆ ಕುಂಠಿತವಾದರೆ ಅತ್ಯಾಧುನಿಕ ಎಐ ಕೂಡ ಆ ಭಾಷೆಯ ಜೀವಂತಿಕೆಯನ್ನು ಉಳಿಸಲು ಸಾಧ್ಯವಿಲ್ಲ. ಆದ್ದರಿಂದ ತಂತ್ರಜ್ಞಾನದ ಜೊತೆಗೆ ಮಾನವ ಬದ್ಧತೆಯೂ ಅನಿವಾರ್ಯವಾಗಿದೆ.

ಭಾರತವು ಜಗತ್ತಿನ ಅತ್ಯಂತ ಶ್ರೀಮಂತ ಭಾಷಾವೈವಿಧ್ಯತೆಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಒಂದು. ಈ ವೈವಿಧ್ಯತೆ ನಮ್ಮ ಸಾಂಸ್ಕೃತಿಕ ಶಕ್ತಿ, ಬೌದ್ಧಿಕ ಪರಂಪರೆ ಮತ್ತು ಸಾಮಾಜಿಕ ಚೈತನ್ಯದ ಗುರುತು. ಎಐ ಯುಗದಲ್ಲಿ ಈ ಭಾಷೆಗಳನ್ನು ಕೇವಲ ಸಂರಕ್ಷಿಸಬೇಕೆಂಬ ಮಟ್ಟದಲ್ಲಿ ನಿಲ್ಲುವುದು ಸಾಕಾಗುವುದಿಲ್ಲ. ಅವನ್ನು ಜ್ಞಾನಸೃಷ್ಟಿಯ, ಸಂಶೋಧನೆಯ, ನವೋದ್ಯಮದ ಮತ್ತು ಸಾರ್ವಜನಿಕ ಸಂವಾದದ ಪ್ರಬಲ ಮಾಧ್ಯಮಗಳನ್ನಾಗಿ ರೂಪಿಸುವ ಅಗತ್ಯ ಇದೆ. ಆಗ ಮಾತ್ರ ಭಾಷೆಗಳು ಭೂತಕಾಲದ ಸ್ಮಾರಕಗಳಾಗದೇ ಭವಿಷ್ಯದ ಸಾಧನಗಳಾಗುತ್ತವೆ.

ಕೊನೆಗೆ ಹೇಳುವುದಾದರೆ, ಎಐ ಯುಗದಲ್ಲಿ ಕನ್ನಡ ಉಳಿಯುತ್ತದೆಯೇ ಎಂಬ ಪ್ರಶ್ನೆ ಈಗ ಅಪ್ರಸ್ತುತ. ಕನ್ನಡ ಉಳಿಯುವುದು ಖಚಿತ. ಆದರೆ ಅದು ಡಿಜಿಟಲ್ ಜಗತ್ತಿನಲ್ಲಿ ನಾಯಕತ್ವ ವಹಿಸುತ್ತದೆಯೇ, ಜ್ಞಾನ ಸೃಷ್ಟಿಯ ಭಾಷೆಯಾಗುತ್ತದೆಯೇ ಮತ್ತು ಹೊಸ ತಲೆಮಾರಿನ ಚಿಂತನೆಯ ಮಾಧ್ಯಮವಾಗುತ್ತದೆಯೇ ಎಂಬುದೇ ನಮ್ಮ ಮುಂದಿರುವ ನಿಜವಾದ ಸವಾಲು. ಅದಕ್ಕೆ ಉತ್ತರವನ್ನು ನಾವು ಇಂದು ತೆಗೆದುಕೊಳ್ಳುವ ನಿರ್ಧಾರಗಳೇ ನಿರ್ಧರಿಸಲಿವೆ.

ತಂತ್ರಜ್ಞಾನವು ಭಾಷೆಯ ಪ್ರತಿಸ್ಪರ್ಧಿಯಲ್ಲ. ಅದು ಸರಿಯಾಗಿ ಬಳಸಿದರೆ ಭಾಷೆಯ ಅತ್ಯಂತ ಶಕ್ತಿಶಾಲಿ ಸಹಯೋಗಿಯಾಗಬಹುದು. ಭಾರತೀಯ ಭಾಷೆಗಳ ಭವಿಷ್ಯವನ್ನು ನಿರ್ಧರಿಸುವುದು ಯಂತ್ರಗಳಲ್ಲ. ಅವುಗಳನ್ನು ಬಳಸುವ ನಮ್ಮ ದೃಷ್ಟಿಕೋನ ಮತ್ತು ಬದ್ಧತೆಯೇ ಆಗಿದೆ.

ಮಾರ್ಕ್ಸಿಸ್ಟ್ ಇತಿಹಾಸಕಾರರ ಏಕಸ್ವಾಮ್ಯ ಮುರಿಯುತ್ತಿದೆ

ಸದಾನಂದ ಹೆಗ್ಡೆ



ತಥಾಕಥಿತ 'ಖ್ಯಾತ' ಇತಿಹಾಸಕಾರರಾದ ರೋಮಿಲಾ ಥಾಪರ್ ತಮ್ಮ ಒಂದು ವಿಡಿಯೋದಲ್ಲಿ "ಪತಂಜಲಿಯು ಬ್ರಾಹ್ಮಣರು ಮತ್ತು ಶ್ರಮಣರ ನಡುವಿನ ಸಂಬಂಧವು ಹಾವು ಮುಂಗುಸಿಯಂತಿದೆ ಎಂಬುದಾಗಿ ಬಣ್ಣಿಸಿದ್ದಾನೆ" ಎಂದು ಹೇಳಿರುವುದು ವೈರಲ್ ಆಗಿದೆ. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಸಂಘರ್ಷ ನಡೆಯುತ್ತಿತ್ತು ಎಂದು ಬಿಂಬಿಸುವ ಮಾರ್ಕ್ಸಿಸ್ಟ್ ಇತಿಹಾಸಕಾರರ ಚಾಳಿಗೆ ಥಾಪರ್ ಅವರ ಈ ಹೇಳಿಕೆಯೂ ಒಂದು ಸೂಕ್ತ ನಿದರ್ಶನ. ಆದರೆ 'ಪತಂಜಲಿಯ ಮಹಾಭಾಷ್ಯದಲ್ಲಿ ಎಲ್ಲಿಯೂ ಇಂತಹ ವರ್ಣನೆ ಕಾಣಲು ಸಿಗುವುದೇ ಇಲ್ಲ. ಅವರ ಗ್ರಂಥದಲ್ಲಿ ಕೇವಲ ಒಂದು ಬಾರಿ ಮಾತ್ರ ಬ್ರಾಹ್ಮಣ ಮತ್ತು ಶ್ರಮಣರ ಉಲ್ಲೇಖ ಬರುತ್ತದೆ. ಆದರೆ ಅಲ್ಲಿಯೂ ಹಾವು-ಮುಂಗುಸಿಯ ಪ್ರಸ್ತಾವನೆ ಇಲ್ಲ' ಎಂಬುದಾಗಿ ಖ್ಯಾತ ಲೇಖಕರೊಬ್ಬರು ವಿವರಿಸುತ್ತಾರೆ. ಥಾಪರ್ ಇದೇ ಬ್ರಾಹ್ಮಣ- ಶ್ರಮಣರ ಸಂಘರ್ಷದ ಹೋಲಿಕೆಯನ್ನು ತಮ್ಮ ಇನ್ನೂ ಎರಡು ಪುಸ್ತಕಗಳಲ್ಲಿ ನೀಡಿದ್ದಿದೆ.

ಇದು ಕೆಲವು 'ಖ್ಯಾತನಾಮ' ಇತಿಹಾಸಕಾರರು ವಾಸ್ತವಿಕ ಸಂಗತಿಗಳನ್ನು ಹೇಗೆ ತಿರುಚುತ್ತಾರೆ ಎಂಬುದಕ್ಕೆ ನಿದರ್ಶನ. ದುರಂತವೆಂದರೆ ಇತರ ಇತಿಹಾಸಕಾರರನ್ನು ವಿಮರ್ಶೆಗೆ ಒಳಪಡಿಸುವ ನಮ್ಮ ಶಿಕ್ಷಣವೇತ್ತರರು ಇಂತಹ 'ಖ್ಯಾತನಾಮ' ಇತಿಹಾಸಕಾರರನ್ನು ಪರಾಮರ್ಶೆಗೆ ಒಳಪಡಿಸುವುದಿಲ್ಲ. ಅವರು ಹೇಳಿದ್ದೆಲ್ಲ ಕುರುಡಾಗಿ ನಂಬಲಾಗುತ್ತದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂತಹ ಕೆಲವೇ ಕೆಲವು ಮಾರ್ಕ್ಸಿಸ್ಟ್ ಇತಿಹಾಸಕಾರರೇ ದೇಶದ ಇತಿಹಾಸವನ್ನು ರೂಪಿಸಿದ್ದರು. ದಶಕಗಳ ಕಾಲ ಅವರದೇ ಆಧಿಪತ್ಯವಿತ್ತು. ಸಾಂಸ್ಥಿಕವಾಗಿಯೂ ಅತ್ಯಂತ ಪ್ರಭಾವ ಹೊಂದಿದ್ದರು. ಪಠ್ಯಪುಸ್ತಕ ಬರೆಯುತ್ತಿದ್ದುದು ಅವರೇ. ಕಾಲೇಜು ಮತ್ತು ವಿಶ್ವವಿದ್ಯಾಲಯದ ಇಲಾಖೆಗಳಲ್ಲೂ ಅವರದೇ ಪಾರಮ್ಯ. ಮಾಧ್ಯಮಗಳಲ್ಲೂ ಅವರಿಗಷ್ಟೇ ಪ್ರಾಶಸ್ತ್ಯ. 'ನೈಜ, ಗಂಭೀರ ಇತಿಹಾಸಕಾರರು' ಯಾರು ಎಂಬುದನ್ನು ಕೂಡಾ ಅವರೇ ನಿರ್ಧರಿಸುತ್ತಿದ್ದರು. ವಿಪರ್ಯಾಸವೆಂದರೆ ತಮ್ಮನ್ನು ತಾವು 'ವೈಜ್ಞಾನಿಕ ಇತಿಹಾಸ'ದ ಸಂರಕ್ಷಕರು ಎಂದು ಹೇಳಿಕೊಳ್ಳುವ ಇವರು ತಾವು ಮಾತ್ರ ಯಾವುದೇ ಪರಾಮರ್ಶೆಗೆ ಒಳಪಡದ ರೀತಿಯಲ್ಲಿ ತಮ್ಮ ಸುತ್ತ ಕೋಟೆ ಕಟ್ಟಿಕೊಂಡಿದ್ದರು.

ಆದರೆ ಆ ಕೋಟೆಯೀಗ ಒಡೆದಿದೆ. ಅವರು ಮಂಡಿಸಿದ ಇತಿಹಾಸದ ಸತ್ಯಾಸತ್ಯತೆಯನ್ನು ಈಗ ಪರೀಕ್ಷೆಗೆ ಒಡ್ಡಲಾಗುತ್ತಿದೆ. ತಮ್ಮ ಇತ್ತೀಚಿನ ಪುಸ್ತಕವೊಂದರಲ್ಲಿ ಥಾಪರ್ ಅವರು "ಇತಿಹಾಸಕಾರರಲ್ಲದವರು ಈಗ ಜನಾಭಿಪ್ರಾಯ ರೂಪಿಸುತ್ತಿದ್ದಾರೆ. ವೃತ್ತಿಪರ ಇತಿಹಾಸಕಾರರ ಅಭಿಪ್ರಾಯಕ್ಕೆ ವಿರುದ್ಧವಾದ ಚಿತ್ರಣವನ್ನು ಅವರು ಮಂಡಿಸುತ್ತಿದ್ದು ಅದನ್ನು ಬೆಂಬಲಿಸಲಾಗುತ್ತಿದೆ" ಎಂದು ಕೊರಗಿದ್ದಾರೆ. "ಹಿಂದೆಲ್ಲಾ ಇತಿಹಾಸದ ಸ್ಕಾಲರ್‌ಶಿಪ್ ಅನರ್ಹರಾದವರಿಗೆ ಸಿಗುತ್ತಿರಲಿಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಇತಿಹಾಸ ಪಂಡಿತರು ಸಂಶೋಧಿಸಿದ ವಿಷಯವನ್ನು ಇತ್ತೀಚಿನ ಕೆಲವು ಹೊಸ ಇತಿಹಾಸಕಾರರು ವಿರೋಧಿಸುತ್ತಿದ್ದಾರೆ" ಎಂದು ತಮ್ಮ ಹತಾಶೆ ಮತ್ತು ಅಸಹನೆಯನ್ನು ಕಕ್ಕಿದ್ದಾರೆ. ಅಂತೂ ಮಾರ್ಕ್ಸಿಸ್ಟ್ ಇತಿಹಾಸಕಾರರ ಬೌದ್ಧಿಕ ಪ್ರಭುತ್ವಕ್ಕೆ ಸವಾಲು ಒದಗಿದೆಯೆಂಬುದನ್ನು ಅವರೇ ಒಪ್ಪಿಕೊಂಡಂತಾಗಿದೆ. ಇತಿಹಾಸದ ಮೇಲೆ ಅವರ ಏಕಸ್ವಾಮ್ಯ ಕಳಚಿಕೊಳ್ಳುತ್ತಿದೆ. ಇದುವೇ ಈ ಎಡಪಂಥೀಯ ಇತಿಹಾಸಕಾರರಿಗೆ ಅಸಹನೆ ಹಾಗೂ ಆತಂಕ ಸೃಷ್ಟಿಸಿರುವುದು.

ಈ ಖ್ಯಾತ ಇತಿಹಾಸಕಾರರು ಈವರೆಗೆ ಉತ್ತರದಾಯಿತ್ವದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ಅವರನ್ನು ಪ್ರಶ್ನಿಸುವವರಾರೂ ಇರಲಿಲ್ಲ. ರಾಮಜನ್ಮಭೂಮಿ ಪ್ರಕರಣವು ಅಲಹಾಬಾದ್ ಹೈಕೋರ್ಟಿನಲ್ಲಿ ವಿಚಾರಣೆಗೆ ಬಂದಾಗ ಇಂತಹ ಕೆಲವು ಖ್ಯಾತ ಇತಿಹಾಸಕಾರರ ಬಣ್ಣ ಬಯಲಾಯಿತು. 'ತಜ್ಞ ಸಾಕ್ಷಿಗಳು' ಎಂಬ ನೆಲೆಯಲ್ಲಿ ಕಟಕಟೆಯಲ್ಲಿ ನಿಂತ ಈ ಇತಿಹಾಸಕಾರರ ಪೊಳ್ಳುತನ ಜಗಜ್ಜಾಹೀರಾಯಿತು. ಕ್ಲಾಸ್‌ರೂಂಗಳಲ್ಲಿ, ಸೆಮಿನಾರ್‌ಗಳಲ್ಲಿ ನಿರರ್ಗಳವಾಗಿ ಇತಿಹಾಸದ ಬಗ್ಗೆ ಮಾತನಾಡುವ ಇವರು ಅಯೋಧ್ಯೆಗೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಲಯದ ಕಟಕಟೆಯಲ್ಲಿ ಪಾಟೀಸವಾಲಿಗೆ ಈಡಾದಾಗ ಅವರ ಬೌದ್ಧಿಕ ದಿವಾಳಿತನ ಬಹಿರಂಗವಾಯಿತು.

ಪ್ರೊ. ಸುರೇಶ್ಚಂದ್ರ ಮಿಶ್ರಾ ಎಂಬವರು ಲಿಪಿಕಾರರಾಗಿ ಒಬ್ಬ ಪರಿಣತರಂತೆ ನ್ಯಾಯಾಲಯಕ್ಕೆ ಆಗಮಿಸಿದ್ದರು. ಅಯೋಧ್ಯೆಯ ವಿವಾದಾಸ್ಪದ ಕಟ್ಟಡದಲ್ಲಿ ಕಂಡುಬಂದ ಲಿಪಿಗಳು ಅರೇಬಿಕ್ ಎಂದು ವಿಚಾರಣೆ ವೇಳೆ ನುಡಿದರು. ಪಾಟೀಸವಾಲಿಗೆ ಒಳಪಡಿಸಿದಾಗ ಅವರು ಅದು ಪರ್ಶಿಯನ್ ಲಿಪಿಗಳು ಎಂದು ಮಾತು ಬದಲಿಸಿದರು. ಬಳಿಕವಂತೂ ತನಗೆ ಪರ್ಶಿಯನ್ ಭಾಷೆಯಾಗಲೀ ಅರೇಬಿಕ್ ಭಾಷೆಯಾಗಲೀ ತಿಳಿದೇ ಇಲ್ಲ ಎಂದು ಒಪ್ಪಿಕೊಂಡರು. ನಂತರವಂತೂ ಪ್ರೊ. ಮಿಶ್ರಾ ಇನ್ನಷ್ಟು ನಗೆಪಾಟಲಿಗೀಡಾಗುವ ಪ್ರತಿಪಾದನೆ ಸಲ್ಲಿಸಿದರು. ಅಯೋಧ್ಯೆಯ ಈ ಲಿಪಿಗಳು ಬಾಬರ್‌ನಾಮಾ ಪುಸ್ತಕದಲ್ಲಿ ಕಂಡುಬಂದುದಕ್ಕೆ ಹೋಲಿಕೆಯಾಗುತ್ತದೆ ಹಾಗೂ ತಾನು ಬಾಬರ್‌ನಾಮಾ ಪುಸ್ತಕವನ್ನು ವಿವಾದಿತ ಕಟ್ಟಡದೊಳಕ್ಕೆ ಕೊಂಡೊಯ್ದು ಅದನ್ನು ತುಲನೆ ಮಾಡಿ ನೋಡಿದ್ದಾಗಿ ಹೇಳಿದರು. ವಿವಾದಿತ ಕಟ್ಟಡದೊಳಗೆ ಏನನ್ನೂ ಕೊಂಡೊಯ್ಯಲು ಅವಕಾಶ ಇಲ್ಲವಲ್ಲ ಎಂದು ವಕೀಲರು ನುಡಿದಾಗ ತಮ್ಮ ಹೇಳಿಕೆಯನ್ನು ಮತ್ತೆ ಬದಲಿಸಿದರು. ತಾನು ತನ್ನ ಸ್ಮರಣ ಶಕ್ತಿಯ ಮೂಲಕ ಈ ಲಿಪಿಗಳನ್ನು ತುಲನೆ ಮಾಡಿದ್ದಾಗಿ ಹೇಳಿದರು. ಇದನ್ನು ಕೇಳಿದ ನ್ಯಾಯಾಧೀಶರೇ, ಮೊದಲೊಮ್ಮೆ ತನಗೆ ಪರ್ಷಿಯನ್ ಅಥವಾ ಅರೇಬಿಕ್ ಭಾಷೆ ತಿಳಿದೇ ಇಲ್ಲ ಎಂದು ಹೇಳಿದ ಮಿಶ್ರಾ ಈಗ ತಮಗೆ ಅದ್ಭುತ ಸ್ಮರಣ ಶಕ್ತಿಯಿದೆ ಎಂಬಂತೆ ಮಾತನಾಡುತ್ತಿರುವುದು ಆಶ್ಚರ್ಯಕರ ಎಂದು ಉದ್ಗಾರ ಎತ್ತಿದರು.

ಬಳಿಕ ಬಂದವರು ಪುರಾತತ್ವಜ್ಞ ಸೂರಜ್ ಭಾನ್. ಸಾರ್ವಜನಿಕ ಸಂವಾದಗಳಲ್ಲಿ, ಚರ್ಚೆಗಳಲ್ಲಿ ಪ್ರಖರವಾಗಿ ವಾದ ಮಂಡಿಸುವ ಇವರೂ ಶಿಕ್ಷಣ ವಲಯದಲ್ಲಿ ಖ್ಯಾತನಾಮರು. ಆದರೆ ನ್ಯಾಯಾಲಯದಲ್ಲಿ ಅವರ ಹುಳುಕು ಬಯಲಾಯಿತು. ಸಂಸ್ಕೃತದಲ್ಲಿ ಪದವಿ ಪಡೆದಿರುವ ಹೊರತಾಗಿಯೂ ತಾನು ಸಂಸ್ಕೃತವನ್ನು ಓದಲು ಅಥವಾ ಬರೆಯಲು ಅಸಮರ್ಥ ಎಂಬುದನ್ನು ಒಪ್ಪಿಕೊಂಡರು. "ಸೂರಜ್ ಭಾನ್ ತಾವು ಬರೆದ ಹಲವಾರು ಪುಸ್ತಕಗಳಲ್ಲಿ ಅಯೋಧ್ಯೆ ಕಟ್ಟಡದ ಮೇಲಿರುವ ಬರಹಗಳನ್ನು ಓದಿರುವುದಾಗಿ ಹಾಗೂ ಅದನ್ನು ತುಲನೆ ಮಾಡಿರುವುದಾಗಿ ಬರೆದಿದ್ದಾರೆ. ಆದರೆ ಅವರು ಇದಾವುದನ್ನೂ ಓದಿಲ್ಲವೆಂಬುದು ಸ್ಪಷ್ಟವಾಗುತ್ತದೆ" ಎಂದು ನ್ಯಾಯಮೂರ್ತಿ ಅಭಿಪ್ರಾಯಿಸಿದರು. ಮತ್ತೋರ್ವ ಸಾಕ್ಷಿಯಾಗಿ ಕೋರ್ಟಿಗೆ ಬಂದಿದ್ದ ಪ್ರೊ. ಸುವಿರಾ ಜೈಸ್ವಾಲ್ ತಾನು ಅಯೋಧ್ಯೆ ವಿವಾದಕ್ಕೆ ಪ್ರಮುಖ ಮೂಲವಾಗಿರುವ ಬಾಬರ್‌ನಾಮಾವನ್ನು ಓದಿಯೇ ಇಲ್ಲವೆಂಬುದನ್ನು ಒಪ್ಪಿಕೊಂಡರು. ಮತ್ತೋರ್ವ 'ತಜ್ಞ ಸಾಕ್ಷಿ' ಪ್ರೊ. ಶಿರಿನ್ ಮುಸಾವಿ ತಾನು ವಿವಾದಿತ ಪ್ರದೇಶವನ್ನು ಪರಿಶೀಲಿಸಲು ಅಯೋಧ್ಯೆಗೆ ಈವರೆಗೆ ಭೇಟಿ ನೀಡಿಯೇ ಇಲ್ಲವೆಂಬ ಸತ್ಯವನ್ನು ಒಪ್ಪಿಕೊಂಡರು. ಇತಿಹಾಸಕಾರರು ಸ್ಥಳಾಧ್ಯಯನ ಮಾಡುವ ಅಗತ್ಯವೇ ಇಲ್ಲವೆಂಬುದು ಆಕೆಯ ವಿಚಿತ್ರ ನಿಲುವು.

ಇಂತಹ ಇತಿಹಾಸಕಾರರನ್ನು ನಮ್ಮ ದೇಶದ ಖ್ಯಾತನಾಮ ಇತಿಹಾಸಕಾರರಾದ ರೋಮಿಲಾ ಥಾಪರ್, ಆರ್.ಎಸ್. ಶರ್ಮಾ, ಡಿ.ಎನ್.ಝಾ. ಮತ್ತು ಇರ್ಫಾನ್ ಹಬೀಬ್ ಮುಂತಾದವರು ಬೆಂಬಲಿಸುತ್ತಾರೆ ಮತ್ತು ಪ್ರೋತ್ಸಾಹಿಸುತ್ತಾರೆ. ಕುತೂಹಲಕಾರಿ ವಿಷಯವೆಂದರೆ ಈ ಎರಡನೇ ದರ್ಜೆ ಇತಿಹಾಸಕಾರರು ಅಯೋಧ್ಯೆ ವಿವಾದದಲ್ಲಿ ಬಾಬರಿ ಮಸೀದಿ ಪರವಾಗಿ ಕೋರ್ಟಿಗೆ ಹಾಜರಾದರೆ, ಮೇಲಿನ ಖ್ಯಾತನಾಮ ಇತಿಹಾಸಕಾರರು ಅಂತಹ ಹೊಣೆಗಾರಿಕೆಯಿಂದ ಮೆಲ್ಲಗೆ ಜಾರಿಕೊಂಡರು. ಬಹುಶಃ ಅವರಿಗೇ ತಮ್ಮ ಇತಿಹಾಸದ ಪೊಳ್ಳುತನದ ಅರಿವಿತ್ತು. ನ್ಯಾಯಾಲಯದಲ್ಲಿ ಪಾಟೀಸವಾಲಿನ ಮುಂದೆ ತಮ್ಮ ವಾದ ನಿಲ್ಲದೆಂಬ ಅರಿವಿತ್ತು. ಅವರಿಗೆ ತಮ್ಮ ಸುಳ್ಳುಗಳನ್ನು ಹೇಳುತ್ತಾ ಹೋಗುವುದೇ ಗೊತ್ತು ಹೊರತು, ಸಾರ್ವಜನಿಕವಾಗಿ ಇತರರಿಂದ ಪ್ರಶ್ನೆಗಳನ್ನು ಎದುರಿಸಿ ಅನುಭವವಿಲ್ಲವಲ್ಲ.

ಈ ಖ್ಯಾತ ಇತಿಹಾಸಕಾರರ ವೈರುಧ್ಯವೂ ಇಲ್ಲಿ ಸ್ಪಷ್ಟವಾಗಿದೆ. ಇತರ ಇತಿಹಾಸಕಾರರು ಸಾಕ್ಷ್ಯಾಧಾರವಿಲ್ಲದೆ ಮಾತನಾಡುತ್ತಾರೆ ಎಂದು ಆರೋಪಿಸುವ ಇವರೇ ನಿಜವಾಗಿ ಸಾಕ್ಷ್ಯಾಧಾರವಿಲ್ಲದೆ ಇತಿಹಾಸ ಬರೆದವರು. ಕೆಲವಾರು ದಶಕಗಳಿಂದ ಈ ಇತಿಹಾಸಕಾರರನ್ನು ಯಾರೂ ಪ್ರಶ್ನಿಸುವವರಿರಲಿಲ್ಲ. ಅವರು ಬರೆದುದೇ ಅಂತಿಮ ಸತ್ಯ ಎಂಬಂತಾಗಿತ್ತು. ಅವರು ಪ್ರತಿಪಾದಿಸಿದ ಇತಿಹಾಸವನ್ನು ಪರಾಮರ್ಶಿಸುವುದು ಬಹಳ ದೊಡ್ಡ ಅಪಚಾರ ಎಂಬಂತೆ ಪರಿಗಣಿಸಲಾಗುತ್ತಿತ್ತು. ಆದರೀಗ ಕಾಲ ಬದಲಾಗಿದೆ. ಅವರು ಬರೆದ ಇತಿಹಾಸದ ಲೋಪಗಳು, ತಾರತಮ್ಯಗಳು ಬೆಳಕಿಗೆ ಬರತೊಡಗಿವೆ. ಭಾರತದ ನೈಜ ಇತಿಹಾಸದ ಅನಾವರಣವು ಈಗ ಆಗತೊಡಗಿದೆ. ಜನರಿಗೆ ಸತ್ಯದ ಅರಿವಾಗತೊಡಗಿದೆ.

ಬಾಲ್ಯವನ್ನು ಪರದೆಗಳ ಕೈಗೆ ಒಪ್ಪಿಸುವ ಮುನ್ನ...

ದೇವಿತಾ ಸಿ ಸುಬ್ಬಯ್ಯ



ಇಂದಿನ ಸಮಾಜದಲ್ಲಿ ಮಕ್ಕಳ ಬಾಲ್ಯ ಮೌನವಾಗಿ ಒಂದು ಅಪಾಯಕಾರಿ ಬದಲಾವಣೆಯೊಳಗೆ ಜಾರುತ್ತಿದೆ. ಕೆಲ ವರ್ಷಗಳ ಹಿಂದೆ ಬಾಲ್ಯವೆಂದರೆ ಬೀದಿಯ ಆಟ, ಪುಸ್ತಕಗಳ ಓದು, ಶಾಲೆಯ ಸ್ನೇಹ, ಮನೆಯ ಮಾತುಕತೆ ಮತ್ತು ಕುಟುಂಬದ ಮಮತೆ. ಆದರೆ ಇಂದು ಆ ಜಾಗವನ್ನು ಸ್ಮಾರ್ಟ್‌ಫೋನ್, ರೀಲ್ಸ್ ಮತ್ತು ಸೋಷಿಯಲ್ ಮೀಡಿಯಾ ಆಕ್ರಮಿಸಿಕೊಂಡಿವೆ. ಈಗ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುತ್ತಿರುವುದು ಕೇವಲ ಮನೆ ಮತ್ತು ಶಾಲೆಯಲ್ಲ. ಅಲ್ಗೋರಿದಮ್‌ಗಳು, ಪರದೆ ಮತ್ತು ಡಿಜಿಟಲ್ ಜಗತ್ತೂ ಆಗಿದೆ. ಇದು ಕೇವಲ ತಂತ್ರಜ್ಞಾನದ ಬೆಳವಣಿಗೆಯಲ್ಲ; ಸಮಾಜದ ಮೌಲ್ಯ ವ್ಯವಸ್ಥೆಯಲ್ಲೇ ನಡೆಯುತ್ತಿರುವ ಗಂಭೀರ ಬದಲಾವಣೆ.

ಇಂದು ಎರಡು ವರ್ಷದ ಮಗು ಮೊಬೈಲ್‌ನಲ್ಲಿ ವಿಡಿಯೊ ಸ್ಕ್ರೋಲ್ ಮಾಡುತ್ತಿದೆ. ಐದನೇ ತರಗತಿಯ ಮಕ್ಕಳು ರೀಲ್ಸ್ ತಯಾರಿಸುತ್ತಿದ್ದಾರೆ. ಹದಿಹರೆಯದ ವಿದ್ಯಾರ್ಥಿಗಳು ತಮ್ಮ ಆತ್ಮವಿಶ್ವಾಸವನ್ನು 'ಲೈಕ್ಸ್' ಮತ್ತು 'ಫಾಲೋವರ್ಸ್' ಸಂಖ್ಯೆಯಲ್ಲಿ ಅಳೆಯುತ್ತಿದ್ದಾರೆ. ಮಾಹಿತಿಯ ಪ್ರವಾಹ ಹೆಚ್ಚಿದರೂ, ಭಾವನಾತ್ಮಕ ಪ್ರೌಢಿಮೆ ಅದೇ ವೇಗದಲ್ಲಿ ಬೆಳೆಯುತ್ತಿಲ್ಲ. ಪರಿಣಾಮವಾಗಿ ಸಹನೆ ಕುಸಿಯುತ್ತಿದೆ, ತಕ್ಷಣ ಪ್ರತಿಕ್ರಿಯಿಸುವ ಸ್ವಭಾವ ಹೆಚ್ಚುತ್ತಿದೆ, "ನನ್ನ ಮಾತೇ ಸರಿ" ಎನ್ನುವ ಅಹಂ ಮನೋಭಾವ ಗಾಢವಾಗುತ್ತಿದೆ.

ಶಾಲೆಗಳಲ್ಲಿ ಶಿಕ್ಷಕರು ಈಗ ಸ್ಪಷ್ಟವಾಗಿ ಗಮನಿಸುತ್ತಿರುವ ದೊಡ್ಡ ಸಮಸ್ಯೆ ಮಕ್ಕಳ ಗಮನ ಕೇಂದ್ರೀಕರಣ ಸಾಮರ್ಥ್ಯದ ಕುಸಿತ. ಕೇವಲ 30 ಸೆಕೆಂಡ್‌ಗಳ ರೀಲ್ಸ್‌ಗೆ ಒಗ್ಗಿಕೊಂಡ ಮನಸ್ಸಿಗೆ ಒಂದು ಗಂಟೆಯ ಪಾಠ ಕಠಿಣವಾಗುತ್ತಿದೆ. ತಡರಾತ್ರಿವರೆಗೆ ಮೊಬೈಲ್ ಬಳಸಿ, ನಿದ್ರಾಹೀನತೆಯೊಂದಿಗೆ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಇದು ಕೇವಲ ಅಭ್ಯಾಸದ ಸಮಸ್ಯೆಯಲ್ಲ; ಮಾನಸಿಕ ಆರೋಗ್ಯದ ಎಚ್ಚರಿಕೆಯ ಗಂಟೆ. ಇದಕ್ಕಿಂತ ಆತಂಕಕಾರಿ ಸಂಗತಿ ಎಂದರೆ, ಸೋಷಿಯಲ್ ಮೀಡಿಯಾ ಮಕ್ಕಳಲ್ಲಿ ಅಕಾಲಿಕ ಪ್ರೌಢತೆಯನ್ನು ಹುಟ್ಟುಹಾಕುತ್ತಿದೆ. ಫ್ಯಾಷನ್, ದುಬಾರಿ ಜೀವನಶೈಲಿ, ಸಂಬಂಧಗಳು ಮತ್ತು ಅತಿಯಾದ ಸ್ವಾತಂತ್ರ್ಯವನ್ನು ಮಕ್ಕಳು ವಯಸ್ಸಿಗಿಂತ ಬೇಗ ಅನುಕರಿಸಲು ಆರಂಭಿಸಿದ್ದಾರೆ. ಒಂದು ಫೋಟೋಗೆ ಕಡಿಮೆ ಲೈಕ್ಸ್ ಬಂದರೂ ಮನಸ್ಸಿಗೆ ಹೊಡೆತವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಸಂದರ್ಭಗಳಲ್ಲಿ ಮೊಬೈಲ್ ಬಳಕೆ ಕಡಿಮೆ ಮಾಡಲು ಹೇಳಿದ ಪೋಷಕರ ಮೇಲೆಯೇ ಮಕ್ಕಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದು ಕೇವಲ ಶಿಸ್ತಿನ ಸಮಸ್ಯೆಯಲ್ಲ, ಪರದೆ ಮೇಲಿನ ಮಾನಸಿಕ ಅವಲಂಬನೆಯ ಸಂಕೇತ. ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳ ದೈಹಿಕ ಆರೋಗ್ಯದ ಮೇಲೂ ಪರಿಣಾಮಗಳು ಕಾಣಿಸುತ್ತಿವೆ. ಹೊರಾಂಗಣ ಆಟಗಳು ಕಡಿಮೆಯಾಗುತ್ತಿರುವುದರಿಂದ ದೈಹಿಕ ಚಟುವಟಿಕೆ ಕುಸಿಯುತ್ತಿದೆ. ಕಣ್ಣಿನ ಸಮಸ್ಯೆ, ಬೆನ್ನುನೋವು, ತೂಕ ಹೆಚ್ಚಳ ಮತ್ತು ನಿದ್ರಾ ವ್ಯತ್ಯಯಗಳು ಈಗ ಚಿಕ್ಕ ವಯಸ್ಸಿನಲ್ಲೇ ಕಾಣಿಸುತ್ತಿವೆ. ವೈದ್ಯರು ಮತ್ತು ಮನೋವೈದ್ಯರು ಮಕ್ಕಳಲ್ಲಿ ಆತಂಕ, ಏಕಾಂತ ಭಾವನೆ ಮತ್ತು ಕೋಪದ ಪ್ರಮಾಣ ಹೆಚ್ಚುತ್ತಿರುವುದನ್ನು ಸೂಚಿಸುತ್ತಿದ್ದಾರೆ. ಸಾವಿರಾರು ಆನ್‌ಲೈನ್ ಸ್ನೇಹಿತರಿದ್ದರೂ, ಮನದ ಮಾತು ಹೇಳಿಕೊಳ್ಳುವ ನಿಜವಾದ ಸ್ನೇಹಿತರ ಕೊರತೆ ಮಕ್ಕಳನ್ನು ಒಳಗೊಳಗೆ

> ನಾಳಿನ ಸಮಾಜವನ್ನು ರೂಪಿಸುವ ಶಕ್ತಿಯನ್ನು ಯಾರು ಮುನ್ನಡೆಸುತ್ತಾರೆ? ಪೋಷಕರಾ, ಸಮಾಜವಾ, ಅಥವಾ ಅಲ್ಗೋರಿದಮ್‌ಗಳಾ? ಎಂಬುದರ ಮೇಲೆ ಮುಂದಿನ ಪೀಳಿಗೆಯ ಭವಿಷ್ಯ ನಿರ್ಧಾರವಾಗಲಿದೆ.



ಖಾಲಿಯಾಗಿಸುತ್ತಿದೆ.

ಇನ್ನೊಂದು ಗಂಭೀರ ಅಂಶ ಎಂದರೆ, ಡಿಜಿಟಲ್ ಜಗತ್ತು ಮಕ್ಕಳನ್ನು ಅತಿವೇಗದ ಹೋಲಿಕೆಯ ಬದುಕಿಗೆ ತಳ್ಳುತ್ತಿದೆ. ಯಾರು ಹೆಚ್ಚು ಸುಂದರ? ಯಾರಿಗೆ ಹೆಚ್ಚು ಫಾಲೋವರ್ಸ್? ಯಾರು ಹೆಚ್ಚು ಸ್ಟೈಲಿಶ್? ಎಂಬ ಸ್ಪರ್ಧೆಯಲ್ಲಿ ಮಕ್ಕಳು ತಮ್ಮ ಸ್ವಾಭಾವಿಕ ವ್ಯಕ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಕಾಣುವ ಕೃತಕ 'ಪರಿಪೂರ್ಣ ಜೀವನ' ಮಕ್ಕಳ ಮನಸ್ಸಿನಲ್ಲಿ ಅಸಮಾಧಾನ ಮತ್ತು ಹೀನಭಾವನೆ ಹುಟ್ಟುಹಾಕುತ್ತಿದೆ. ಇದು ಭವಿಷ್ಯದಲ್ಲಿ ಮಾನಸಿಕ ಆರೋಗ್ಯದ ದೊಡ್ಡ ಸಂಕಷ್ಟಕ್ಕೆ ಕಾರಣವಾಗುವ ಸಾಧ್ಯತೆ ಇದೆ. ಹಿಂದೆ ಮಕ್ಕಳಿಗೆ ತಾಯಿ-ತಂದೆಯರೇ ಆದರ್ಶರಾಗಿದ್ದರು. ಆದರೆ ಇಂದು ಆ ಜಾಗವನ್ನು ಇನ್‌ಫ್ಲುಯೆನ್ಸರ್‌ಗಳು ಆಕ್ರಮಿಸಿದ್ದಾರೆ. ಮಕ್ಕಳು ಮನೆಯವರ ಮಾತಿಗಿಂತ ಯೂಟ್ಯೂಬರ್‌ಗಳ ಮಾತಿಗೆ ಹೆಚ್ಚು ಪ್ರಭಾವಿತರಾಗುತ್ತಿದ್ದಾರೆ. ಇದು ಕುಟುಂಬದೊಳಗಿನ ಸಂವಹನ ಕುಸಿಯುತ್ತಿರುವ ಅತ್ಯಂತ ಗಂಭೀರ ಸೂಚನೆ. ಆದರೆ ಇದರ ಸಂಪೂರ್ಣ ಹೊಣೆ ಮಕ್ಕಳ ಮೇಲಾಗಲಿ ಅಥವಾ ತಂತ್ರಜ್ಞಾನದ ಮೇಲಾಗಲಿ ಹಾಕುವುದು ಸರಿಯಲ್ಲ. ಇಂದಿನ ಪೋಷಕರ ಜೀವನಶೈಲಿಯೂ ಇದಕ್ಕೆ ಸಮಾನವಾಗಿ ಕಾರಣವಾಗಿದೆ. ಉದ್ಯೋಗದ ಒತ್ತಡ, ಸಮಯದ ಕೊರತೆ ಮತ್ತು ನ್ಯೂಕ್ಲಿಯರ್ ಕುಟುಂಬ ವ್ಯವಸ್ಥೆಯ ನಡುವೆ ಮೊಬೈಲ್ ಒಂದು 'ಡಿಜಿಟಲ್ ಬೇಬಿ ಸಿಟ್ಟರ್' ಆಗಿ ಪರಿಣಮಿಸಿದೆ. ಮಗುವನ್ನು ಶಾಂತವಾಗಿರಿಸಲು, ಊಟ ಮಾಡಿಸಲು ಅಥವಾ ಅಳು ನಿಲ್ಲಿಸಲು ಮೊಬೈಲ್ ಕೊಡುವುದು ಈಗ ಸಾಮಾನ್ಯ ದೃಶ್ಯ. ಹೀಗಾಗಿ ಸಮಸ್ಯೆ ಕೇವಲ ಮಕ್ಕಳದಲ್ಲ, ಇಡೀ ಸಮಾಜದ ಜೀವನಶೈಲಿಯಲ್ಲಿದೆ.

ಈ ಸಂದರ್ಭದಲ್ಲಿ ಮಕ್ಕಳ ಮೇಲೆ ಕಠಿಣ ನಿಯಂತ್ರಣ ಹೇರುವುದಕ್ಕಿಂತ, ಅವರನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಅಗತ್ಯ. ಇಂದಿನ ಮಕ್ಕಳಿಗೆ ಆದೇಶಕ್ಕಿಂತ ಸಂವಾದ ಬೇಕಾಗಿದೆ. "ಮೊಬೈಲ್ ಬೇಡ" ಎನ್ನುವುದಕ್ಕಿಂತ "ಏನು ನೋಡುತ್ತಿದ್ದೀಯ?" ಎಂದು ಕೇಳುವ ಸಂಬಂಧ ಬೆಳೆಯಬೇಕು. ಕುಟುಂಬದಲ್ಲಿ ಪರದೆರಹಿತ ಸಮಯ, ಒಟ್ಟಿಗೆ ಊಟ, ಹೊರಾಂಗಣ ಆಟಗಳು ಮತ್ತು ನೇರ ಮಾತುಕತೆ ಮತ್ತೆ ಮರಳಬೇಕಾಗಿದೆ. ಶಾಲೆಗಳಲ್ಲೂ ಡಿಜಿಟಲ್ ಜಾಗೃತಿಯ ಕುರಿತು ಶಿಕ್ಷಣ ನೀಡುವುದು ಕಾಲದ ಅಗತ್ಯವಾಗಿದೆ. ತಂತ್ರಜ್ಞಾನದಿಂದ ಮಕ್ಕಳನ್ನು ಸಂಪೂರ್ಣ ದೂರ ಇಡುವುದು ಅಸಾಧ್ಯ. ಆದರೆ ಅದರ ಬಳಕೆಗೆ ಮಿತಿ, ಜವಾಬ್ದಾರಿ ಮತ್ತು ಮೌಲ್ಯಗಳನ್ನು ಕಲಿಸುವುದು ಸಾಧ್ಯ. ಯಾಕೆಂದರೆ ಇಂದು ಮಕ್ಕಳ ಕೈಯಲ್ಲಿರುವ ಮೊಬೈಲ್ ಕೇವಲ ಸಾಧನವಲ್ಲ, ಅದು ನಾಳಿನ ಸಮಾಜದ ಸ್ವಭಾವವನ್ನು ರೂಪಿಸುವ ಶಕ್ತಿ. ಆ ಶಕ್ತಿಯನ್ನು ಯಾರು ಮುನ್ನಡೆಸುತ್ತಾರೆ? ಪೋಷಕರಾ, ಸಮಾಜವಾ, ಅಥವಾ ಅಲ್ಗೋರಿದಮ್‌ಗಳಾ? ಎಂಬುದರ ಮೇಲೆ ಮುಂದಿನ ಪೀಳಿಗೆಯ ಭವಿಷ್ಯ ನಿರ್ಧಾರವಾಗಲಿದೆ. ಬಾಲ್ಯವನ್ನು ಪರದೆಗಳ ಕೈಗೆ ಸಂಪೂರ್ಣ ಒಪ್ಪಿಸುವ ಮುನ್ನ ಸಮಾಜ ಒಂದು ಕ್ಷಣ ನಿಂತು ಯೋಚಿಸಬೇಕಾದ ಸಮಯ ಈಗಲೇ ಬಂದಿದೆ.

ಕದನ ವಿರಾಮ ನಡುವೆಯೂ ಇರಾನ್ ದಾಳಿ

ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚಳ

ದುಬೈ: ಕದನ ವಿರಾಮ ಜಾರಿಯಲ್ಲಿದ್ದರೂ ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆ ಮತ್ತೆ ಉಲ್ಬಣಗೊಂಡಿದೆ. ಇರಾನ್ ಡ್ರೋನ್ ದಾಳಿಯಿಂದ ಕುವೈತ್‌ನ ಪ್ರಮುಖ ವಿಮಾನ ನಿಲ್ದಾಣದ ಟರ್ಮಿನಲ್ ಕಟ್ಟಡಕ್ಕೆ ಭಾರೀ ಹಾನಿಯಾಗಿದ್ದು, ಭಾರತೀಯನೋರ್ವ ಮೃತಪಟ್ಟಿದ್ದಾನೆ. ಇತರೆ ಹಲವರು ಗಾಯಗೊಂಡಿದ್ದಾರೆ. ಇದರಿಂದ ಕುವೈತ್ ಸರ್ಕಾರ ಕೆಲಕಾಲ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿತ್ತು.

ಇರಾನ್ ಬೆಂಬಲಿತ ಮಾಧ್ಯಮಗಳ ಪ್ರಕಾರ, ಅಮೆರಿಕ ಹಾಗೂ ಇಸ್ರೇಲ್ ಜತೆಗಿನ ಯುದ್ಧಕ್ಕೆ ಸಂಬಂಧಿಸಿದ ಕದನ ವಿರಾಮ ವಿಸ್ತರಣೆ ಕುರಿತ ಮಧ್ಯಸ್ಥರೊಂದಿಗೆ ಇರಾನ್ ಸಂಪರ್ಕವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಲೆಬನಾನ್‌ನಲ್ಲಿ ಇಸ್ರೇಲ್ ಮತ್ತು ಹೆಜ್ಬುಲ್ಲಾ ನಡುವಿನ ಘರ್ಷಣೆ ನಿಲ್ಲಿಸಿದ ಬಳಿಕವೇ ಮುಂದಿನ ಮಾತುಕತೆಗೆ ಮರಳುವುದಾಗಿ ಟೆಹ್ರಾನ್ ಹೇಳಿದೆ. ಆದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ವರದಿಗಳನ್ನು ತಳ್ಳಿಹಾಕಿದ್ದು, ಮಾತುಕತೆಗಳು ನಿರಂತರವಾಗಿ ನಡೆಯುತ್ತಿವೆ ಎಂದಿದ್ದಾರೆ.ಪರ್ಷಿಯನ್ ಕೊಲ್ಲಿಯಲ್ಲಿನ ಈ ಹೊಸ ದಾಳಿ-ಪ್ರತಿದಾಳಿಗಳು ಮಧ್ಯಪ್ರಾಚ್ಯದ ಸ್ಥಿರತೆಗೆ ಮತ್ತೊಮ್ಮೆ ಸವಾಲು ಎಸೆದಿವೆ.

ಲೆಬನಾನ್ ಯುದ್ಧ ಹೊಸ ತಲೆನೋವು: ಇಸ್ರೇಲ್ ಸೇನೆ ಲೆಬನಾನ್ ಒಳ ಪ್ರವೇಶಿಸಿದ್ದು, ಹೆಜ್ಬುಲ್ಲಾ ರಾಕೆಟ್ ಮತ್ತು ಡ್ರೋನ್ ದಾಳಿಗಳನ್ನು ಮುಂದುವರಿಸಿದೆ. ಅಧಿಕೃತವಾಗಿ ಕದನ ವಿರಾಮ ಜಾರಿಯಲ್ಲಿದ್ದರೂ ಎರಡೂ ಕಡೆಯ ದಾಳಿನಿಂತಿಲ್ಲ.

ಟ್ರಂಪ್-ನೆತನ್ಯಾಹು ವಾಗ್ವಾದ: ಲೆಬನಾನ್ ಯುದ್ಧದಿಂದ ಇರಾನ್ ಜತೆಗಿನ ಒಪ್ಪಂದ ಪ್ರಕ್ರಿಯೆ ವಿಳಂಬವಾಗುತ್ತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಟ್ರಂಪ್, ದೂರವಾಣಿ ಸಂಭಾಷಣೆಯಲ್ಲಿ ನೆತನ್ಯಾಹು ಅವರನ್ನು ಹುಚ್ಚ ಎಂದು ಕರೆದಿದ್ದ ವರದಿಯನ್ನು ಪರೋಕ್ಷವಾಗಿ ದೃಢಪಡಿಸಿದ್ದಾರೆ. ಆದಾಗ್ಯೂ, ತಮ್ಮ ಮತ್ತು ನೆತನ್ಯಾಹು ನಡುವಿನ ಸಂಬಂಧ ಉತ್ತಮವಾಗಿಯೇ ಇದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.



ಭಾರತೀಯನ ಸಾವು

ಇನ್ನು ಕುವೈತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಭಾರತೀಯ ಪ್ರಜೆಯೊಬ್ಬರು ಮೃತಪಟ್ಟಿದ್ದಾರೆ ಎಂದು ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಬುಧವಾರ ಖಚಿತಪಡಿಸಿದೆ. ಮೃತರ ಕುಟುಂಬ ಮತ್ತು ಘಟನೆಯಲ್ಲಿ ಗಾಯಗೊಂಡವರಿಗೆ ಸಾಧ್ಯವಿರುವ ಎಲ್ಲ ಬೆಂಬಲ ಮತ್ತು ಸಹಾಯವನ್ನು ನೀಡಲು ಮಿಷನ್ ಕುವೈತ್ ಅಧಿಕಾರಿಗಳೊಂದಿಗೆ ನಿಕಟವಾಗಿ ಸಮನ್ವಯ ಸಾಧಿಸುತ್ತಿದೆ ಎಂದು ರಾಯಭಾರ ಕಚೇರಿ ಹೇಳಿದೆ.

ಜೆಟ್ ತೈಲ ಹೊರೆ ತಗ್ಗಿಸಲು 10,000 ಕೋಟಿ ರೂ. ನಿಧಿ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಮುಂದುವರಿದಿರುವ ಉದ್ವಿಗ್ನತೆಯಿಂದ ಏರಿಕೆಯಾಗಿರುವ ವಿಮಾನ ಇಂಧನ (ಎಟಿಎಫ್) ಬೆಲೆಗಳ ಹೊರೆ ಕಡಿಮೆ ಮಾಡಲು ಕೇಂದ್ರ ಸಚಿವ ಸಂಪುಟ ಬುಧವಾರ 10,000 ಕೋಟಿ ರೂ. ಮೊತ್ತದ ಎಟಿಎಫ್ ದರ ಸ್ಥಿರೀಕರಣ ನಿಧಿಗೆ ಅನುಮೋದನೆ ನೀಡಿದೆ.

ಈ ಯೋಜನೆಯಲ್ಲಿ ತೈಲ ಮಾರುಕಟ್ಟೆ ಕಂಪನಿಗಳಿಗೆ(ಒಎಂಸಿ) ಬಡ್ಡಿರಹಿತ ಮುಂಗಡ ಹಣ ನೀಡಲಾಗುವುದು. ಇದರ ಮೂಲಕ ದೇಶೀಯ ಹಾಗೂ ಅಂತಾರಾಷ್ಟ್ರೀಯ ಸೇವೆಗಳನ್ನು ನಡೆಸುವ ಭಾರತೀಯ ವಿಮಾನಯಾನ ಸಂಸ್ಥೆಗಳಿಗೆ ನಿಗದಿತ ದರದಲ್ಲಿ ಇಂಧನ ಪೂರೈಕೆ ಮಾಡಲಾಗುತ್ತದೆ. ದೇಶೀಯ ವಿಮಾನಗಳಿಗಾಗಿ ಎಟಿಎಫ್ ದರವನ್ನು ಪ್ರತಿ ಲೀಟರ್‌ಗೆ 75.60ರೂ.ಗೆ ಮಿತಿಗೊಳಿಸಲಾಗಿದೆ.

ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, ಮಾರ್ಚ್‌ನಲ್ಲಿ ಲೀಟರ್‌ಗೆ 60.5 ರೂ. ಇದ್ದ ಅಂತಾರಾಷ್ಟ್ರೀಯ ಎಟಿಎಫ್ ಬೆಲೆ ಮೇನಲ್ಲಿ 142 ರೂ.ಗೆ ಏರಿಕೆಯಾಗಿದೆ ಎಂದರು.

ಇತರೆ ತೀರ್ಮಾನಗಳು

- ದಿಲ್ಲಿ-ಎನ್‌ಸಿಆರ್‌ನಲ್ಲಿ ವಾಯು ಮಾಲೀನ್ಯ ನಿಯಂತ್ರ ಯೋಜನೆಗೆ 9585 ಕೋಟಿ ರೂ.
- ಮಧ್ಯಪ್ರದೇಶದಲ್ಲಿ ಹೆದ್ದಾರಿ ಯೋಜನೆಗಳಿಗೆ 4,415 ಕೋಟಿ ರೂ.
- ಒಡಿಶಾದಲ್ಲಿ ಹೊಸ ಕರಾವಳಿ ರಾಮೇಶ್ವರ- ಪರದೀಪ್ ಹೆದ್ದಾರಿ ನಿರ್ಮಾಣಕ್ಕೆ 8,300 ಕೋಟಿ ರೂ.



ರೋಜಿಲಾ ಸುರಂಗ ಮಾರ್ಗದ ಭೂಗತ ಜೋಡಣೆ ಜೂನ್ 9ಕ್ಕೆ ಪೂರ್ಣ

ಗಡಿ ಭದ್ರತೆಗೆ ಬಲ

ಚೀನಾ ಮತ್ತು ಪಾಕಿಸ್ತಾನದೊಂದಿಗೆ ಸೂಕ್ಷ್ಮ ಗಡಿ ಹಂಚಿಕೊಂಡಿರುವ ಲಡಾಖ್‌ಗೆ ಚಳಿಗಾಲದಲ್ಲಿ ಸಂಪರ್ಕ ಕಡಿತಗೊಳ್ಳುತ್ತಿತ್ತು. ಈ ಸುರಂಗದಿಂದಾಗಿ ಇನ್ಮುಂದೆ ಸೇನಾ ಸಿಬ್ಬಂದಿ, ಭಾರೀ ರಕ್ಷಣಾ ಉಪಕರಣಗಳು ಹಾಗೂ ತುರ್ತು ಸೇವೆಗಳ ಅಡೆತಡೆಯಿಲ್ಲದ ಚಲನೆ ಸಾಧ್ಯವಾಗಲಿದೆ.

ಲಡಾಖ್ ಟು ಕಾಶ್ಮೀರ ಸರ್ವಋತು ಸಂಪರ್ಕ

ಕಾರ್ಯತಂತ್ರದ ದೃಷ್ಟಿಯಿಂದ ಅತ್ಯಂತ ನಿರ್ಣಾಯಕ ಎನಿಸಿರುವ ಝೋಜಿಲಾ ಸುರಂಗ ಮಾರ್ಗ, ಜೂನ್ 9 ರಂದು ತನ್ನ ಅಂತಿಮ ಭೂಗತ ಜೋಡಣೆಯ ಮೈಲಿಗಲ್ಲನ್ನು ಸಾಧಿಸಲಿದ್ದು, ಕಾಶ್ಮೀರ ಮತ್ತು ಲಡಾಖ್ ನಡುವೆ ನಿರಂತರವಾದ ಸರ್ವಋತು ಸಂಪರ್ಕ ಕಲ್ಪಿಸಲಿದೆ. ಮುಖ್ಯ ಸುರಂಗದ ಎರಡೂ ತುದಿಗಳನ್ನು ಜೋಡಿಸುವ ಅಂತಿಮ ಬ್ಲಾಸ್ಟಿಂಗ್ ಪ್ರಕ್ರಿಯೆ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲಿದೆ.

ತಾಂತ್ರಿಕ ವಿಧಾನ, ಸೌಲಭ್ಯ

ಸುರಂಗದ ಪಶ್ಚಿಮ ಮತ್ತು ಪೂರ್ವದ ಪ್ರವೇಶ ದ್ವಾರಗಳಿಂದ ಉತ್ಖನನ ನಡೆಸಲು ಇಂಜಿನಿಯರ್‌ಗಳು ನ್ಯೂ ಆಸ್ಟ್ರಿಯನ್ ಟನೆಲಿಂಗ್ ಮೆಥಡ್(ಎನ್‌ಎಟಿಎಂ) ತಂತ್ರಜ್ಞಾನ ಬಳಸಿದ್ದಾರೆ. ಸುರಕ್ಷತೆಯ ದೃಷ್ಟಿಯಿಂದ ಈ ಆಧುನಿಕ ಸುರಂಗದಲ್ಲಿ ಪ್ರತಿ 750 ಮೀಟರ್‌ಗಳ ಅಂತರದಲ್ಲಿ ಲೇ-ಬೈಗಳನ್ನು(ವಾಹನ ನಿಲುಗಡೆ ತಾಣ), ಗಾಳಿಯ ಸಂಚಾರವನ್ನು ಸುಗಮಗೊಳಿಸಲು ಮೂರು ಬೃಹತ್ ವೆಂಟಿಲೇಶನ್ ಶಾಫ್ಟ್‌ಗಳನ್ನು ಅಳವಡಿಸಲಾಗಿದೆ.

ಹಿನ್ನೆಲೆ ಮತ್ತು ಇತಿಹಾಸ

ಪ್ರಧಾನಿ ಮೋದಿ, ಮೇ 2018ರಲ್ಲಿ ಈ ಮಹತ್ವಾಕಾಂಕ್ಷೆಯ ಯೋಜನೆಗೆ ಚಾಲನೆ ನೀಡಿದ್ದರು. 2020ರಲ್ಲಿ ಕಾಮಗಾರಿಯ ಗುತ್ತಿಗೆಯನ್ನು ಎಂಇಐಎಲ್ ಸಂಸ್ಥೆಗೆ ವಹಿಸಲಾಯಿತು. ಆದರೆ, ಕೆಲವು ಪ್ರತಿಕೂಲ ಪರಿಸ್ಥಿತಿಗಳಿಂ ದಾಗಿ ಆರಂಭಿಕ ಹಂತದಲ್ಲಿ ಅಡೆತಡೆಗಳನ್ನು ಎದುರಿಸಿದ ಯೋಜನೆ, ಅಂತಿಮವಾಗಿ 2021ರಲ್ಲಿ ಕಾಮಗಾರಿ ಪ್ರಾರಂಭಿಸಿತು.

ಮೂಲಸೌಕರ್ಯದ ವೇಗವರ್ಧನೆ

ಕೇಂದ್ರ ಸರ್ಕಾರ ದೇಶದ ವಾಯುವ್ಯ ಗಡಿ ಭಾಗಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಯನ್ನು ಚುರುಕುಗೊಳಿಸುತ್ತಿದ್ದು, ದೂರದ ಪ್ರದೇಶಗಳನ್ನು ದೇಶದ ಇತರ ಭಾಗಗಳೊಂದಿಗೆ ಸಾಮಾಜಿಕ- ಸಾಂಸ್ಕೃತಿಕವಾಗಿ ಸಂಯೋಜಿಸಲು ಮತ್ತು ಸಂಪರ್ಕವನ್ನು ಸುಧಾರಿಸಲು ಗಮನ ಹರಿಸಿದೆ. ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದಲ್ಲಿ 19 ಸುರಂಗಗಳನ್ನು ನಿರ್ಮಿಸುವ ಪ್ರಮುಖ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಸುರಂಗದ ವಿಸ್ತೀರ್ಣ

ಶ್ರೀನಗರ-ಲೇಹ್ ರಾಷ್ಟ್ರೀಯ ಹೆದ್ದಾರಿಯ ಝೋಜಿಲಾ ಪಾಸ್‌ನಲ್ಲಿ 13.15 ಕಿಲೋಮೀಟರ್ ಉದ್ದದ ಈ ಬೃಹತ್ ಮೂಲಸೌಕರ್ಯವನ್ನು ನಿರ್ಮಿಸಲಾಗುತ್ತಿದೆ. ಸಮುದ್ರ ಮಟ್ಟದಿಂದ 11,578 ಅಡಿ ಎತ್ತರದಲ್ಲಿರುವ ಈ ಸುರಂಗ, ಪೂರ್ಣಗೊಂಡ ನಂತರ ಭಾರತದ ಅತಿ ಉದ್ದದ ರಸ್ತೆ ಸುರಂಗ ಮತ್ತು ಏಷ್ಯಾದ ಅತಿ ಉದ್ದದ ದ್ವಿಮುಖ ಸುರಂಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಮೇಘಾ ಇಂಜಿನಿಯರಿಂಗ್ (ಎಂಇಐಎಲ್) ಸಂಸ್ಥೆ ಒಟ್ಟು 6,808.69 ಕೋಟಿ ರೂ.ಗಳ ಮಂಜೂರಾದ ವೆಚ್ಚದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ.

ಆಯಕಟ್ಟಿನ, ಆರ್ಥಿಕ ಮಹತ್ವ

ಈ ಸುರಂಗದ ಪೂರ್ಣಗೊಳ್ಳುವಿಕೆಯಿಂದಾಗಿ ಪ್ರತಿ ವರ್ಷ ಹಿಮಪಾತ ಹಾಗೂ ಭೂಕುಸಿತದ ಭೀತಿಯಿಂದಾಗಿ ತಿಂಗಳುಗಟ್ಟಲೆ ಮುಚ್ಚಲ್ಪಡುತ್ತಿದ್ದ ಝೋಜಿಲಾ ಪಾಸ್‌ನ ಅವಲಂಬನೆ ತಪ್ಪಲಿದೆ. ಇದರ ಪರಿಣಾಮವಾಗಿ ಪ್ರಸ್ತುತ ಇರುವ ಮೂರು ಗಂಟೆಗಳ ಪ್ರಯಾಣದ ಅವಧಿ ಕೇವಲ 15 ನಿಮಿಷಗಳಿಗೆ ಇಳಿಕೆಯಾಗಲಿದೆ. ಈ ಬದಲಾವಣೆ, ನಾಗರಿಕ ಸಾರಿಗೆ, ರಕ್ಷಣಾ ಇಲಾಖೆಯ ಸಾಗಣೆಕೆ, ಪ್ರವಾಸೋದ್ಯಮ ಹಾಗೂ ಲಡಾಖ್ ಮತ್ತು ಗಂದರ್ಬಲ್ ಪ್ರದೇಶಗಳ ಆರ್ಥಿಕತೆಗೆ ಭಾರೀ ಉತ್ತೇಜನ ನೀಡಲಿದೆ. ಚಳಿಗಾಲದ ದ್ವೀಪದಂತಾಗುತ್ತಿದ್ದ ಈ ಪ್ರದೇಶದ ಸಮಸ್ಯೆಗಳಿಗೆ ಇದು ಶಾಶ್ವತ ಪರಿಹಾರ ಎಂದು ಸೋನಾಮಾರ್ಗ್ ಮತ್ತು ಡ್ರಾಸ್ ಭಾಗದ ಸ್ಥಳೀಯರು ಹರ್ಷ ವ್ಯಕ್ತಪಡಿಸಿದ್ದಾರೆ. ಗಡಿ ಮತ್ತು ಹಿಮಾಲಯದ ಉನ್ನತ ಪ್ರದೇಶಗಳಲ್ಲಿ ಮೂಲಸೌಕರ್ಯವನ್ನು ಬಲಪಡಿಸಲು ಕೇಂದ್ರ ಸರ್ಕಾರ ಆದ್ಯತೆ ನೀಡುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯಿಂದಾಗಿ ಲಡಾಖ್ ಕಳೆದ ಒಂದು ದಶಕದಲ್ಲಿ ಅಭೂತಪೂರ್ವ ಪ್ರಗತಿ ಕಂಡಿದೆ, ಎಂದು ಲೇಹ್ ಎಲ್‌ಎಎಚ್‌ಡಿಸಿಯ ಮಾಜಿ ಮುಖ್ಯ ಕಾರ್ಯನಿರ್ವಾಹಕ ಕೌನ್ಸಿಲರ್ ತಾಶಿ ಗ್ಯಾಲ್ಸನ್ ತಿಳಿಸಿದ್ದಾರೆ.

ಮೂಲಸೌಕರ್ಯ ಮತ್ತು ಕಾಲಮಿತಿ

ಈ ಯೋಜನೆ ಗಂದರ್ಬಲ್ ಜಿಲ್ಲೆಯ ಬಾಲ್ಟಾಲ್ ಅನ್ನು ಕಾರ್ಗಿಲ್‌ನ ಡ್ರಾಸ್‌ನಲ್ಲಿರುವ ಮಿನಾಮಾರ್ಗ್‌ಗೆ ನೇರವಾಗಿ ಸಂಪರ್ಕಿಸುತ್ತದೆ. ಕಾಶ್ಮೀರ ಮತ್ತು ಲಡಾಖ್ ಎರಡೂ ಕಡೆಯಿಂದ ಕಾರ್ಯನಿರ್ವಹಿಸುತ್ತಿರುವ ಭೂಗತ ಇಂಜಿನಿಯರ್‌ಗಳ ತಂಡಗಳು ಜೂನ್ ಎರಡನೇ ವಾರದಲ್ಲಿ ಸುರಂಗದ ಮಧ್ಯಭಾಗದಲ್ಲಿ ಪರಸ್ಪರ ಭೇಟಿಯಾಗಲಿವೆ. ಈ ಜೋಡಣೆಯ ನಂತರ ಲೈನಿಂಗ್, ವೆಂಟಿಲೇಶನ್ ಸೇರಿದಂತೆ ಇತರೆ ಅಂತಿಮ ಹಂತದ ಕಾಮಗಾರಿಗಳನ್ನು ಚುರುಕುಗೊಳಿಸಲಾಗುವುದು. ಫೆಬ್ರವರಿ 2028ರ ವೇಳೆಗೆ ಸುರಂಗ ಪೂರ್ಣ ಪ್ರಮಾಣದಲ್ಲಿ ಸಾರ್ವಜನಿಕ ಸಂಚಾರಕ್ಕೆ ಮುಕ್ತವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮಯ ಮತ್ತು ಇಂಧನ ಉಳಿತಾಯ

ಈ ಮಾರ್ಗ ಲಡಾಖ್‌ಗೆ ಸರ್ವಋತು ಸಂಪರ್ಕ ಒದಗಿಸಲಿದ್ದು, ಪ್ರಾದೇಶಿಕ ಸಂಚಾರವನ್ನು ಸುಗಮಗೊಳಿಸುತ್ತದೆ. ಸದ್ಯ ಜೊಜಿಲ್ಲಾ ಪಾಸ್ ದಾಟಲು ಸುಮಾರು ಮೂರು ಗಂಟೆಗಳ ಕಾಲ ಬೇಕಾಗುತ್ತಿದ್ದು, ಸುರಂಗದ ನಿರ್ಮಾಣದ ನಂತರ ಈ ಪ್ರಯಾಣದ ಅವಧಿ ಕೇವಲ 30 ನಿಮಿಷಗಳಿಗೆ ಇಳಿಕೆಯಾಗಲಿದೆ. ಈ ಸಮಯದ ಉಳಿತಾಯ, ಪ್ರಯಾಣಿಕರ ಸೌಕರ್ಯವನ್ನು ಹೆಚ್ಚಿಸುವುದಲ್ಲದೆ, ಗಣನೀಯ ಪ್ರಮಾಣದ ಇಂಧನ ಉಳಿಸಲಿದ್ದು ಪರಿಸರಕ್ಕೂ ಪೂರಕವಾಗಲಿದೆ.





ಕಠಿಣ ಭೂಪ್ರದೇಶ- ಇಂಜಿನಿಯರಿಂಗ್ ಸಾಧನೆ

ಝೋಜಿಲಾ ಸುರಂಗ ಯೋಜನೆ, ಅತ್ಯಂತ ಕಠಿಣ ಹವಾಮಾನ ಮತ್ತು ಭೌಗೋಳಿಕ ಸವಾಲುಗಳನ್ನು ಮೀರಿ ಸಾಧಿಸಿದ ಒಂದು ನಿಜವಾದ ಇಂಜಿನಿಯರಿಂಗ್ ಅದ್ಭುತ. ಈ ಯೋಜನೆಯ ಯಶಸ್ವಿ ಪೂರ್ಣಗೊಳ್ಳುವಿಕೆ, ಸ್ಥಳೀಯ ಜನರ ದೈನಂದಿನ ಜೀವನಮಟ್ಟವನ್ನು ಸುಧಾರಿಸುವುದಲ್ಲದೆ, ಗಡಿ ಪ್ರದೇಶದಲ್ಲಿ ಭಾರತದ ವ್ಯೂಹಾತ್ಮಕ ಸ್ಥಾನವನ್ನು ಬಲಪಡಿಸುತ್ತದೆ. ಇದು ರಾಷ್ಟ್ರೀಯ ರಕ್ಷಣೆಗೆ ಪ್ರಮುಖ ಕೊಡುಗೆ ನೀಡುವ ಮೂಲಕ ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನ ಒಟ್ಟಾರೆ ಅಭಿವೃದ್ಧಿಗೆ ಮುನ್ನುಡಿ ಬರೆಯಲಿದೆ.

ಕಿರುಸುದ್ದಿ

ಮರುಮೌಲ್ಯಮಾಪನಕ್ಕೆ 44,000 ಅರ್ಜಿ ಸಲ್ಲಿಕೆ

ಹೊಸದಿಲ್ಲಿ: ಸುಮಾರು 44,000 ವಿದ್ಯಾರ್ಥಿಗಳು ಬೋರ್ಡ್ ಪರೀಕ್ಷೆಗಳ ಉತ್ತರ ಪತ್ರಿಕೆ ಪರಿಶೀಲನೆ(ವೆರಿಫಿಕೇಶನ್) ಮತ್ತು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ(ಸಿಬಿಎಸ್‌ಇ) ತಿಳಿಸಿದೆ. ಉತ್ತರ ಪತ್ರಿಕೆಗಳ ಪರಿಶೀಲನೆ ಮತ್ತು ಮರುಮೌಲ್ಯಮಾಪನಕ್ಕಾಗಿ ಆನ್‌ಲೈನ್ ಪೋರ್ಟಲ್ ಒಟ್ಟು 43,980 ಅರ್ಜಿಗಳನ್ನು ಸ್ವೀಕರಿಸಿದೆ ಎಂದು ಮಂಡಳಿ ತಿಳಿಸಿದೆ. ಬುಧವಾರ 12 ಗಂಟೆಯವರೆಗೆ ಪೋರ್ಟಲ್ ಪರಿಶೀಲನೆಗಾಗಿ 4,924 ಅರ್ಜಿಗಳನ್ನು ಮತ್ತು ಮರುಮೌಲ್ಯಮಾಪನಕ್ಕಾಗಿ 39,056 ಅರ್ಜಿಗಳನ್ನು (ಒಟ್ಟು 43,980) ಸ್ವೀಕರಿಸಿದೆ ಎಂದು ಸಿಬಿಎಸ್‌ಇ ಎಕ್ಸ್ ಪೋಸ್ಟ್ ನಲ್ಲಿ ತಿಳಿಸಿದೆ.

ರಷ್ಯಾ ತೈಲ ಟರ್ಮಿನಲ್‌ಗೆ ಉಕ್ರೇನ್ ಡ್ರೋನ್ ದಾಳಿ

ಕೀವ್: ಉಕ್ರೇನ್‌ನ ದೂರಗಾಮಿ ಡ್ರೋನ್‌ಗಳು ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್ ನಗರದ ತೈಲ ಟರ್ಮಿನಲ್ ಮೇಲೆ ದಾಳಿ ನಡೆಸಿವೆ. 1,000 ಕಿಮೀಗೂ ಹೆಚ್ಚು ದೂರ ಹಾರಿದ ಡ್ರೋನ್‌ಗಳು ಗುರಿ ತಲುಪಿದ್ದು, ಬಂದರು ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿದೆ. ರಷ್ಯಾದ ಪ್ರತಿಷ್ಠಿತ ಆರ್ಥಿಕ ಸಮಾವೇಶ ನಡೆಯುತ್ತಿರುವ ವೇಳೆ ಈ ದಾಳಿ ನಡೆದಿರುವುದು ಅಧ್ಯಕ್ಷ ಪುಟಿನ್ ಅವರಿಗೆ ಮುಜುಗರ ಉಂಟುಮಾಡಿದೆ. ಉಕ್ರೇನ್ ಡ್ರೋನ್‌ಗಳು ಕ್ರೋನ್ಸ್ಟಾಡ್ ನೌಕಾನೆಲೆ ಹಾಗೂ ಶಸ್ತ್ರಾಸ್ತ್ರ ಉತ್ಪಾದನಾ ಘಟಕಗಳ ಮೇಲೂ ದಾಳಿ ನಡೆಸಿವೆ. ಇದಕ್ಕೆ ಪ್ರತಿಯಾಗಿ ರಷ್ಯಾ, 198 ಡ್ರೋನ್‌ಗಳನ್ನು ಉಕ್ರೇನ್ ಮೇಲೆ ಹಾರಿಸಿದ್ದು, ಹೆಚ್ಚಿನವುಗಳನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ತಿಳಿಸಿದೆ.

ಭಾರತ-ಬಾಂಗ್ಲಾ ಆಂತರಿಕ ಭದ್ರತೆ ಕುರಿತ ಚರ್ಚೆ ಶೀಘ್ರ

ಹೊಸದಿಲ್ಲಿ: ಭಾರತ ಮತ್ತು ಬಾಂಗ್ಲಾದೇಶದ ಗಡಿ ಕಾವಲು ಪಡೆಗಳ ಮುಖ್ಯಸ್ಥರ ನಡುವಿನ ಮುಂಬರುವ ಸಭೆಯಲ್ಲಿ ದೇಶದ ಆಂತರಿಕ ಭದ್ರತೆ ಕುರಿತು ಚರ್ಚೆ ನಡೆಯಲಿದೆ. ಬಾಂಗ್ಲಾದೇಶದ ಪ್ರಜೆಗಳು ತನ್ನ ಪಡೆಗಳು ಮತ್ತು ಭಾರತೀಯ ನಾಗರಿಕರ ಮೇಲೆ ದಾಳಿ ಮಾಡುವುದು, ಗಡಿಯೊಳಗೆ ಅಪರಾಧಿಗಳ ಪ್ರವೇಶವನ್ನು ತಡೆಯುವುದು ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಗುವುದು ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಬುಧವಾರ ತಿಳಿಸಿದೆ. ಬಿಎಸ್‌ಎಫ್ ಮತ್ತು ಬಾರ್ಡರ್ ಗಾರ್ಡ್ ಬಾಂಗ್ಲಾದೇಶ (ಬಿಜಿಬಿ) ನಡುವಿನ ದ್ವೈವಾರ್ಷಿಕ ಮಹಾನಿರ್ದೇಶಕ ಮಟ್ಟದ ಗಡಿ ಸಮನ್ವಯ ಸಮ್ಮೇಳನದ 57ನೇ ಆವೃತ್ತಿ ಲೋಧಿ ರಸ್ತೆಯಲ್ಲಿರುವ ಬಿಎಸ್‌ಎಫ್ ಪ್ರಧಾನ ಕಚೇರಿಯಲ್ಲಿ ಜೂ.8ರಿಂದ 11ರವರೆಗೆ ನಡೆಯಲಿದೆ.

ಅಕ್ರಮ ಮಸೀದಿ: ಪಾಕ್‌ಗೆ ಜಪಾನ್‌ನಲ್ಲಿ ಮುಜುಗರ

ಟೋಕಿಯೋ: ಜಪಾನ್‌ನ ಕವಾಗೋಯ್ ನಗರದಲ್ಲಿ ಅಕ್ರಮವಾಗಿ ನಿರ್ಮಿಸಲಾದ ಮಸೀದಿ ಪಾಕಿಸ್ತಾನಕ್ಕೆ ಭಾರೀ ಮುಜುಗರ ತಂದಿದೆ. ಪಾನ್‌ನಲ್ಲಿನ ಪಾಕಿಸ್ತಾನದ ರಾಯಭಾರಿ ಅಬ್ದುಲ್ ಹಮೀದ್ ಅವರ ಸಮ್ಮುಖದಲ್ಲಿ ಏಪ್ರಿಲ್‌ನಲ್ಲಿ ಉದ್ಘಾಟಿಸಲಾದ ಈ ಮಸೀದಿಯನ್ನು ಜಪಾನಿನ ಕಾನೂನಿನಲ್ಲಿ ಅಗತ್ಯವಾದ ಅನುಮತಿಗಳಿಲ್ಲದೆ ನಿರ್ಮಿಸಲಾಗಿದ್ದು, ಇದೀಗ ಅದನ್ನು ನೆಲ ಸಮಗೊಳಿಸುವ ಭೀತಿ ಎದುರಾಗಿದೆ.

ನಗರದ ಪುರಸಭೆಯ ಆಡಳಿತ ಕೇಂದ್ರವಾದ ಕವಾಗೋಯ್ ಸಿಟಿ ಹಾಲ್, ಅಕ್ರಮವಾಗಿ ನಿರ್ಮಿಸಲಾದ ಮಸೀದಿಯ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ.

ಮಸೀದಿಯನ್ನು ನಗರ ಅಭಿವೃದ್ಧಿ ನಿಯಂತ್ರಣ ಪ್ರದೇಶದಲ್ಲಿ ನಿರ್ಮಿಸಲಾಗಿದ್ದು, ನಗರ ಯೋಜನಾ ಕಾಯ್ದೆಯಲ್ಲಿ ನಿರ್ದಿಷ್ಟ ಅನುಮತಿಗಳನ್ನು ಪಡೆಯದೆ ನಿರ್ಮಿಸಿರುವುದನ್ನು ನಿಷೇಧಿಸಲಾಗಿದೆ ಎಂದು ಸಿಟಿ ಹಾಲ್‌ನ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮಸೀದಿಯನ್ನು ಕೆಡವಲು ಸಂಬಂಧಿತ ಪಕ್ಷಗಳಿಂದಲೂ ಅಧಿಕಾರಿಗಳು ವಿನಂತಿಗಳನ್ನು ಸ್ವೀಕರಿಸಿದ್ದಾರೆ.

ಸಿಟಿ ಹಾಲ್ ಹೇಳಿಕೆಯ ಪ್ರಕಾರ, ಈ ಪ್ರಸ್ತಾಪವನ್ನು ಪರಿಶೀಲನೆಗೆ ಸ್ವೀಕರಿಸಲಾಗಿದೆ.

ಮಸೀದಿಯನ್ನು ಅಕ್ರಮವಾಗಿ ನಿರ್ಮಿಸಲಾಗಿದೆ ಎಂದು ತಿಳಿದುಬಂದ ಬೆನ್ನಲ್ಲೇ ಟೋಕಿಯೊದಲ್ಲಿರುವ ಪಾಕಿಸ್ತಾನದ ರಾಯಭಾರ ಕಚೇರಿಯು ಅಸಹಾಯಕ ಪರಿಸ್ಥಿಯಲ್ಲಿದೆ.

ಜಪಾನಿನ ಕಾನೂನುಗಳನ್ನು ಉಲ್ಲಂಘಿಸುವ ಯೋಜನೆಗಳೊಂದಿಗೆ ತನಗೆ ಯಾವುದೇ ಸಂಬಂಧವಿಲ್ಲ ಎಂದು ಅದು ಸ್ಪಷ್ಟಪಡಿಸಿದೆ.

ಟಿಟಿಡಿ ತುಪ್ಪ ಕಲಬೆರಕೆ: ಡೇರಿಗಳಲ್ಲಿ ಇಡಿ ಶೋಧ

ಹೈದರಾಬಾದ್: ಟಿಟಿಡಿ ತುಪ್ಪ ಕಲಬೆರಕೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು(ಇಡಿ) ಬುಧವಾರ ಡೆಹ್ರಾಡೂನ್, ದಿಲ್ಲಿ, ತಮಿಳುನಾಡಿನ ದಿಂಡಿಗಲ್, ಆಂಧ್ರಪ್ರದೇಶದ ಗುಂಟೂರು ಮತ್ತು ಮುಂಬೈ ಸೇರಿದಂತೆ 15 ಸ್ಥಳಗಳಲ್ಲಿ ಶೋಧ ನಡೆಸಿದೆ. ದಿಂಡಿಗಲ್‌ನಲ್ಲಿರುವ ಎ ಆರ್ ಡೇರಿ ಫುಡ್ ಪ್ರೈವೇಟ್ ಲಿಮಿಟೆಡ್, ಅಹಲ್ಯಾ ನಗರದ ಮಾಲ್ಗಂಗಾ ಮಿಲ್ಕ್ ಅಂಡ್ ಅಗ್ರೋ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ರೂರ್ಕಿಯ ಭೋಲೆ ಬಾಬಾ ಆರ್ಗ್ಯಾನಿಕ್ ಡೇರಿ ಮಿಲ್ಕ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರ ವಸತಿ ಮತ್ತು ಕಚೇರಿಗಳಲ್ಲಿ ಶೋಧ ನಡೆಸಲಾಗಿದೆ ಎಂದು ಇಡಿ ಹೇಳಿದೆ.

ಶೋಧ ಕಾರ್ಯಾಚರಣೆ ವೇಳೆ, 60 ಲಕ್ಷ ರೂ. ನಗದು ವಶಪಡಿಸಿಕೊಳ್ಳಲಾಗಿದೆ. ದಾಳಿಗಳು ಆರೋಪಿಗಳು ಮತ್ತು ಅವರ ಕುಟುಂಬ ಸದಸ್ಯರ ಹೆಸರಿನಲ್ಲಿದ್ದ ಹಲವಾರು ಸ್ಥಿರ ಆಸ್ತಿಗಳ ವಿವರಗಳ ಹೊರತಾಗಿ, 45 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಗಳಲ್ಲಿ ಅಪರಾಧದ ಆದಾಯ(ಪಿಒಸಿ) ಹೂಡಿಕೆಗಳ ಬಗ್ಗೆಯೂ ಒಳಗೊಂಡಿತ್ತು. ಎಆರ್ ಡೇರಿ ಫುಡ್ ಮತ್ತು ಇತರರ ವಿರುದ್ಧ ದಾಖಲಾದ ಎಫ್ಐಆರ್ ಆಧಾರದ ಮೇಲೆ 2002ರ ಪಿಎಂಎಲ್‌ಎ ಅನ್ವಯ ಇಡಿ ತನಿಖೆ ನಡೆಸುತ್ತಿದೆ.

ಆರೋಪಿಗಳು ತಿರುಮಲ ತಿರುಪತಿ ದೇವಸ್ಥಾನದ ಕೆಲವು ಅಧಿಕಾರಿಗಳೊಂದಿಗೆ ಪಿತೂರಿಯಲ್ಲಿ ನಂಬಿಕೆ ದ್ರೋಹ, ವಂಚನೆ ಮತ್ತು ಕಲಬೆರಕೆಯ ತುಪ್ಪವನ್ನು ಪೂರೈಸುವ ಮೂಲಕ ದೇವಾಲಯಕ್ಕೆ ಭಾರೀ ನಷ್ಟವನ್ನುಂಟು ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

4ನೇ ಎಸ್-400 ತುಕಡಿ ಸುದರ್ಶನ ಚಕ್ರಕ್ಕೆ ಬಲ

ಹೊಸದಿಲ್ಲಿ: ಭಾರತವು ರಷ್ಯಾದಿಂದ ಎಸ್-400 ಸುದರ್ಶನ ವಾಯುರಕ್ಷಣಾ ವ್ಯವಸ್ಥೆಯ 4ನೇ ತುಕಡಿಯನ್ನು ಸ್ವೀಕರಿಸಿದ್ದು, ಈ ಮೂಲಕ ದೇಶದ ಅಭೇದ್ಯ ಸುರಕ್ಷಾ ವ್ಯವಸ್ಥೆಯಾದ ಸುದರ್ಶನ ಚಕ್ರಕ್ಕೆ ಇನ್ನಷ್ಟು ಬಲ ಬಂದಂತಾಗಿದೆ.

ಮೂಲಗಳ ಪ್ರಕಾರ, ಕೆಲವೇ ದಿನಗಳ ಹಿಂದೆ ದೀರ್ಘದೂರ ವ್ಯಾಪ್ತಿಯ ಎಸ್-400ನ 4ನೇ ತುಕಡಿ ರಷ್ಯಾದಿಂದ ಭಾರತಕ್ಕೆ ಬಂದಿದೆ. ಶೀಘ್ರವೇ ಇದನ್ನು ಕಾರ್ಯಾಚರಣೆ ಪ್ರದೇಶವೊಂದರಲ್ಲಿ ನಿಯೋಜಿಸಲಾಗುವುದು. 2018ರ ಒಪ್ಪಂದದಂತೆ, 5.43 ಬಿ.ಡಾ. ವೆಚ್ಚದಲ್ಲಿ ರಷ್ಯಾದಿಂದ 5 ಎಸ್-400 ತುಕಡಿಗಳನ್ನು ಪಡೆಯಲು ನಿರ್ಧರಿಸಲಾಗಿತ್ತು. 5ನೇ ತುಕಡಿ ಕೆಲವೇ ತಿಂಗಳಲ್ಲಿ ಆಗಮಿಸಲಿದೆ.

ಎಸ್-400 ಬಹುಸ್ತರಗಳ ವಾಯುರಕ್ಷಣಾ ವ್ಯವಸ್ಥೆಯಾಗಿದ್ದು, ಏಕಕಾಲದಲ್ಲಿ 100ಕ್ಕೂ ಅಧಿಕ ದಾಳಿಗಳನ್ನು ತಡೆದು ಧ್ವಂಸಗೊಳಿಸುವ ಸಾಮರ್ಥ್ಯ ಹೊಂದಿದೆ. ಆಪರೇಷನ್ ಸಿಂದೂರ್ ವೇಳೆ ಈ ವಾಯುರಕ್ಷಣಾ ವ್ಯವಸ್ಥೆ ಪಾಕಿಸ್ತಾನದ ಎಲ್ಲ ದಾಳಿಗಳನ್ನೂ ಪೂರ್ಣವಾಗಿ ತಡೆದು ಧ್ವಂಸಗೊಳಿಸುವಲ್ಲಿ ಶಕ್ತವಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಪಾಕಿಸ್ತಾನದ ಬಹು ಬೆಲೆಯ ವಿಚಕ್ಷಣಾ ವಿಮಾನವನ್ನು 300 ಕಿಮೀ ದೂರದಲ್ಲೇ ನಾಶಗೊಳಿಸಿತ್ತು. ಇದು ಡ್ರೋನ್, ಯುದ್ಧ ವಿಮಾನಗಳು, ಉತ್‌ಕ್ಷೇಪಕ ಕ್ಷಿಪಣಿ ಬೆದರಿಕೆಗಳನ್ನು ಸಮರ್ಥವಾಗಿ ಹತ್ತಿಕ್ಕಬಲ್ಲ ರಕ್ಷಣಾ ವ್ಯವಸ್ಥೆಯೆಂದೇ ಪರಿಗಣಿತವಾಗಿದೆ.

ಸ್ವದೇಶಿ ಕುಶ ಯೋಜನೆ: ಇದೇ ವೇಳೆ ಭಾರತವು ಸ್ವದೇಶಿ ಕುಶ ವಾಯುರಕ್ಷಣಾ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸುತ್ತಿದ್ದು, ಇದು ಜಾಗತಿಕ ವ್ಯವಸ್ಥೆಗೆ ಸಮಬಲವಾಗಿ ದೀರ್ಘವ್ಯಾಪ್ತಿಯ ತಡೆ ಸಾಮರ್ಥ್ಯದ ಯೋಜನೆಯಾಗಿದೆ.

ಚಿನ್ನ ಮಾರಾಟ ಕೇವಲ ವದಂತಿ ಎಂದ ಆರ್‌ಬಿಐ

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕ್ ಚಿನ್ನ ಮಾರಾಟ ಮಾಡಿದೆ ಎಂಬ ವರದಿಗಳನ್ನು ಬುಧವಾರ ನಿರಾಕರಿಸಿರುವ ಆರ್‌ಬಿಐ, ತನ್ನ ಭೌತಿಕ ಚಿನ್ನದ ದಾಸ್ತಾನಿನಲ್ಲಿ(880.52 ಟನ್) ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದೆ. ಪಶ್ಚಿಮ ಏಷ್ಯಾ ಸಂಘರ್ಷದ ಸಂದರ್ಭದಲ್ಲಿ ವಿದೇಶಿ ವಿನಿಮಯ ಮೀಸಲನ್ನು ರಕ್ಷಿಸಲು ಆರ್‌ಬಿಐ ಸುಮಾರು 12 ಬಿಲಿಯನ್ ಡಾಲರ್ ಮೌಲ್ಯದ ಚಿನ್ನವನ್ನು ಮಾರಾಟ ಮಾಡಿರಬಹುದು ಎಂಬ ವರದಿಗಳ ಬೆನ್ನಲ್ಲೇ ಕೇಂದ್ರ ಬ್ಯಾಂಕ್ ಈ ಸ್ಪಷ್ಟೀಕರಣ ನೀಡಿದೆ. ಭಾರತದ ವಿದೇಶಿ ವಿನಿಮಯ ಮೀಸಲಿನಲ್ಲಿ ಚಿನ್ನದ ಪಾಲು 2026ರ ಮೇ 22ರ ವೇಳೆಗೆ ಶೇ.16.85ಕ್ಕೆ ಏರಿದೆ. ಮಾರ್ಚ್ 31, 2026ರಲ್ಲಿದ್ದ ಒಟ್ಟು 880.52 ಮೆಟ್ರಿಕ್ ಟನ್‌ಗಳಲ್ಲಿ, ವಿತರಣಾ ಇಲಾಖೆ(ಇಶ್ಯೂ ಡಿಪಾರ್ಟ್‌ಮೆಂಟ್) 312.32 ಮೆಟ್ರಿಕ್ ಟನ್ ಹೊಂದಿದ್ದರೆ, ಬ್ಯಾಂಕಿಂಗ್ ಇಲಾಖೆ 568.20 ಮೆಟ್ರಿಕ್ ಟನ್ ಚಿನ್ನವನ್ನು ಹೊಂದಿದೆ.


ಮಾಜಿ ಮಾವೋವಾದಿಗಳ ಕಿರಾಣಿ ಅಂಗಡಿಗೆ ಛತ್ತೀಸ್‌ಗಢ ಸಿಎಂ ಭೇಟಿ

ಪರಿವರ್ತನಾ ಜೀವನ ಕಂಡು ಸಂತಸ

ಬಿಜಾಪುರ: ಪರಿವರ್ತನೆ ಜೀವನ ನಡೆಸಿದರೇ ಜೀವನದಲ್ಲಿ ಎಲ್ಲೆಡೆ ಮನ್ನಣೆ ದೊರಕುವುತ್ತದೆ ಎಂಬುದಕ್ಕೆ ಹಲವು ನಿದರ್ಶಗಳಿವೆ. ಇದಕ್ಕೆ ಸಾಕ್ಷಿ ಎಂಬಂತೆ ಮಾವೋವಾದಿ ಜೀವನದಿಂದ ಹೊರಬಂದು ಇಂದು ನ್ಯಾಯಯುತ ಜೀವನ ನಡೆಸುತ್ತಿರುವ ದಂಪತಿ ಉದಾಹರಣೆಯಾಗಿದ್ದಾರೆ. ಮಾವೋವಾದಿ ಜೀವನದಿಂದ ಹೊರಬಂದ ಮಾಜಿ ನಕ್ಸಲರ ಜೀವನ ರಾಜ್ಯದಲ್ಲಿ ಹೇಗೆ ಪರಿವರ್ತನೆ ಕಂಡಿದೆ ಎಂಬ ನಿಟ್ಟಿನಲ್ಲಿ ರಾಜ್ಯದ ಮುಖ್ಯಮಂತ್ರಿ ವಿಷ್ಣು ದೇವ್ ಸಾಯಿ ಸುಶಾಸನ್ ತಿಹಾರ್‌ನಲ್ಲಿ ನಡೆಸಿದ ಜನಸಂಪರ್ಕ ಕಾರ್ಯಕ್ರಮ ಅಪರೂಪದ ಸನ್ನಿವೇಶಕ್ಕೆ ಸಾಕ್ಷಿಯಾಗಿದೆ.

ಬಿಜಾಪುರದ ಕೊಂಡಪಲ್ಲಿ ಗ್ರಾಮದಲ್ಲಿ ಕಿರಾಣಿ ಅಂಗಡಿ ನಡೆಸುತ್ತಿರುವ ಮಾಜಿ ನಕ್ಸಲ್ ದಂಪತಿ ಮಾಸಾ ತಮೋ ಮತ್ತು ಜಯಮೋತಿಯವರ ಅಂಗಡಿಗೆ ಸಿಎಂ ಸಾಯಿ ಅವರು ಅಚ್ಚರಿ ಭೇಟಿ ನೀಡಿದ್ದಾರೆ. ಈ ಭೇಟಿ ದಂಪತಿಗೆ ಅಚ್ಚರಿ ಮೂಡಿಸಿದರೆ, ಸಿಎಂಗೆ ಖುಷಿ ತಂದಿದೆ. ಈ ಸಂವಾದವು ದಂಪತಿಯ ಸಮಾಜದ ಮುಖ್ಯವಾಹಿನಿಗೆ ಮರಳುವ ಗಮನಾರ್ಹ ಪ್ರಯಾಣವನ್ನು ಪ್ರದರ್ಶಿಸಿದ್ದು ಮಾತ್ರವಲ್ಲದೆ, ಶಾಂತಿ, ಅಭಿವೃದ್ಧಿ ಮತ್ತು ಪುನರ್‌ವಸತಿ ಉತ್ತೇಜಿಸುವ ಪ್ರಯತ್ನಗಳು ಜೀವನವನ್ನು ಸ್ಥಿರವಾಗಿ ಬದಲಾಯಿಸುತ್ತಿರುವ ವಿಶಾಲವಾದ ಪರಿವರ್ತನೆಯನ್ನು ಪ್ರತಿಬಿಂಬಿಸುತ್ತದೆ.

ಹಿಂಸಾಚಾರದಲ್ಲಿ ಭವಿಷ್ಯವಿಲ್ಲ: ಮಾವೋವಾದಿಗಳಾಗಿ ಮುಂದುವರಿದಲ್ಲಿ ಅದು ನಮ್ಮೊಂದಿಗೆ ಕೊನೆಗೊಳ್ಳುವುದಿಲ್ಲ, ಅದು ತಲೆಮಾರುಗಳವರೆಗೆ ಮುಂದುವರಿಯುತ್ತದೆ ಎಂಬುದನ್ನು ಅರಿತ ಅವರು ಆ ಜೀವನಕ್ಕೆ ವಿದಾಯ ಹೇಳಿ ಹೊಸ ಜೀವನ ನಡೆಸಲು ಪ್ರಾರಂಭಿಸಿದ್ದಾರೆ. 2025ರ ಅಕ್ಟೋಬರ್‌ನಲ್ಲಿ ಶರಣಾಗಲು ನಿರ್ಧರಿಸಿದ ದಂಪತಿ, ಅದರಂತೆ ಸಮಾಜದ ಮುಖ್ಯವಾಹಿನಿಗೆ ಬಂದರು.




ದಂಪತಿ ಜೀವನ ಕತೆಗೆ ಕಿವಿಯಾದ ಸಿಎಂ

ಸಿಎಂ ಕಿರಾಣಿ ಅಂಗಡಿಗೆ ಭೇಟಿ ನೀಡಿದ್ದಲ್ಲದೇ ದಂಪತಿಯ ಭರವಸೆಯ ಕಥೆಗೆ ಕಿವಿಯಾಗಿದ್ದಾರೆ. ಇದರ ಜತೆಗೆ ಒಂದು ಬಾಟಲಿ ನೀರನ್ನು ಖರೀದಿಸಿದ್ದಾರೆ. ಅದೇ ರೀತಿ ದಂಪತಿಗಳೊಂದಿಗೆ ಆತ್ಮೀಯ ಸಂಭಾಷಣೆಯಲ್ಲಿ ತೊಡಗಿ, ಅವರ ಹೋರಾಟ, ಶರಣಾಗತಿ ಮತ್ತು ನವೀಕರಣದ ಕಥೆ ಕೇಳಿ ಖುಷಿಯಾಗಿದ್ದಾರೆ.

ರಾಹುಲ್ ಗಾಂಧಿಗೆ ಅನುಭವ ಇಲ್ಲ : ರಾಮಚಂದ್ರ ಗುಹಾ

ತೈಲ ಬಿಕ್ಕಟ್ಟು, ಯುದ್ಧ ನಿರ್ವಹಣೆ ಮೋದಿಯವರಿಂದ ಮಾತ್ರ ಸಾಧ್ಯ

ಬೆಂಗಳೂರು: ನನಗಿಂತ ಹೆಚ್ಚು ಮೋದಿ-ಬಿಜೆಪಿಯನ್ನು ದ್ವೇಷಿಸುವವರು ಇರಲಾರರು. ಆದರೆ, ಇಂಧನ ಬಿಕ್ಕಟ್ಟು ಅಥವಾ ಯುದ್ಧದಂತಹ ಸನ್ನಿವೇಶವನ್ನು ಪ್ರಧಾನಿ ನರೇಂದ್ರ ಮೋದಿಯವರಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಿರ್ವಹಿಸಲಾರರು ಎಂಬುದಾಗಿ ಎಡಪಂಥೀಯ ಇತಿಹಾಸಕಾರ ಹಾಗೂ ರಾಜಕೀಯ ವಿಶ್ಲೇಷಕ ರಾಮಚಂದ್ರ ಗುಹಾ ಅಭಿಪ್ರಾಯಪಟ್ಟಿರುವುದೀಗ ವ್ಯಾಪಕ ಚರ್ಚೆಗೆ ಕಾರಣವಾಗಿದೆ.



ರಾಹುಲ್ ಗಾಂಧಿಗೆ, ಅವರ ತಂದೆ, ಅಜ್ಜಿ, ಮುತ್ತಜ್ಜ ಪ್ರಧಾನಿಯಾಗಿದ್ದರು ಎಂಬುದನ್ನು ಹೊರತುಪಡಿಸಿ ಬೇರಾವುದೇ ಯಾವುದೇ ಅರ್ಹತೆ ಇಲ್ಲ ಎಂಬುದಾಗಿ ಅವರು ಹೇಳಿದ್ದಾರೆ. ಈ ಹಿಂದೆ ರಾಮಚಂದ್ರ ಗುಹಾ ಅವರು ಕಾಂಗ್ರೆಸಿನ ಅತ್ಯಂತ ನಿಕಟವರ್ತಿಯಾಗಿದ್ದವರು ಎಂಬುದಿಲ್ಲಿ ಉಲ್ಲೇಖನೀಯ. ಈ ಹಿಂದಿನ ಆಪರೇಷನ್ ಸಿಂದೂರ್ ಮತ್ತು ಈಗ ಮಧ್ಯಪ್ರಾಚ್ಯ ಯುದ್ಧದಿಂದ ಉಂಟಾಗಿರುವ ವಿಷಮ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಗುಹಾ ಹೇಳಿಕೆ ಕಾಂಗ್ರೆಸಿಗೆ ತೀವ್ರ ಮುಜುಗರವನ್ನುಂಟು ಮಾಡಿದೆ.

ರಾಹುಲ್ ಕಾಂಗ್ರೆಸ್‌ಗೆ ಹೊರೆ: ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಕಾಂಗ್ರೆಸ್‌ಗೆ ಒಂದು ಹೊರೆಯಾಗಿದ್ದಾರೆ. ಕಾಂಗ್ರೆಸಿನ ಕೆಲಸ ಒಂದು ಕುಟುಂಬ ಸಂಸ್ಥೆಯಂತಿದೆ ಎಂದಿರುವ ಗುಹಾ ಅವರು, ರಾಹುಲ್‌ಗೆ 'ಗುರುತ್ವದ ಕೊರತೆ' ಇದೆ ಎನ್ನುವ ಮೂಲಕ ಗಾಂಧಿಯ ನಾಯಕತ್ವದ ಶೈಲಿಯನ್ನು ಪ್ರಶ್ನಿಸಿದ್ದಾರೆ. ನೆಹರೂ -ಗಾಂಧಿ ಕುಟುಂಬಕ್ಕೆ ನಿಕಟರಾಗಿದ್ದ ರಾಮಚಂದ್ರ ಗುಹಾ ಅವರಂತಹವರೇ ರಾಹುಲ್ ಗಾಂಧಿ ನಾಯಕತ್ವದ ಬಗ್ಗೆ ಪ್ರಶ್ನೆಗಳನ್ನೆತ್ತಿರುವುದು ಗಮನಾರ್ಹವಾಗಿದೆ.

ಕಿರುಸುದ್ದಿ

ಶಾಲಾ ಪ್ರಾರಂಭೋತ್ಸವ

ಏಮಾಜೆ ಕಿ.ಪ್ರಾ.ಶಾಲೆ

ಬಂಟ್ವಾಳ: ಹೊಸ ಕನಸುಗಳೊಂದಿಗೆ ಹೊಸ ಶೈಕ್ಷಣಿಕ ವರ್ಷವನ್ನು ಆರಂಭಿಸಿರುವ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ನೆಟ್ಲಮುಡ್ನೂರು ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ಗೋವಿಂದರಾಜ್ ಹೇಳಿದರು. ಅವರು ಸೋಮವಾರ ಶಾಲಾ ಧ್ವಜವನ್ನು ಹಾರಿಸುವುದರೊಂದಿಗೆ ದ.ಕ.ಜಿ.ಪಂ. ಕಿ.ಪ್ರಾ.ಶಾಲೆ ಏಮಾಜೆಯ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಅಂಗವಾಗಿ ವಿದ್ಯಾ ಮಾತೆ ಶಾರದೆಗೆ ಉದ್ಯಮಿ ಸದಾಶಿವಶೆಟ್ಟಿ ಮಾಣಿ ದೀಪವನ್ನು ಬೆಳಗುವುದರೊಂದಿಗೆ, ಎಲ್. ಕೆ.ಜಿ ಹಾಗೂ ಒಂದನೇ ತರಗತಿಗೆ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸವನ್ನು ಕೈಗೊಂಡು ವಿದ್ಯಾರ್ಥಿಗಳನ್ನು ಹೊಸ ಶೈಕ್ಷಣಿಕ ವರ್ಷಕ್ಕೆ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷರಾದ ಮಲ್ಲಿಕಾ ಗಣೇಶ್ ಆಚಾರ್ಯ, ಉಪಾಧ್ಯಕ್ಷರಾದ ಹರೀಶ್ ಕುಲಾಲ್, ಸಮಿತಾ ಡಿ. ಪೂಜಾರಿ, ಧನಂಜಯ ಗೌಡ ಮತ್ತಿತರರು ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕಿ ಡಾ. ತ್ರಿವೇಣಿ ರಮೇಶ್ ಸ್ವಾಗತಿಸಿ, ಸಹ ಶಿಕ್ಷಕ ಉದಯ್ಚಂದ್ರ ಕೆ. ಎಸ್. ವಂದಿಸಿದರು. ಶಿಕ್ಷಕಿ ಅಕ್ಷತಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ಐಸಮ್ಮ ಸಹಕರಿಸಿದರು.

ವಂಡ್ಸೆಯ ಸರಕಾರಿ ಶಾಲೆ

ಕುಂದಾಪುರ: ವಂಡ್ಸೆಯ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026– 27ನೇ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವವನ್ನು ಅರ್ಥಪೂರ್ಣವಾಗಿ ಸೋಮವಾರ ನಡೆಸಲಾಯಿತು. ಶಾಲಾವರಣವನ್ನು ಬೆಲೂನುಗಳಿಂದ ಅಲಂಕರಿಸಲಾಗಿತ್ತು. ಶಾಲಾ ಆವರಣದಿಂದ ಪುಷ್ಪವೃಷ್ಟಿ ಮೂಲಕ ಶಿಕ್ಷಕರು, ಗಣ್ಯರು, ಪೋಷಕರು ಮಕ್ಕಳನ್ನು ತರಗತಿಗೆ ಸ್ವಾಗತಿಸಿದರು. ಬಳಿಕ ನಡೆದ ಶಾಲಾ ಪ್ರಾರಂಭೋತ್ಸವ ಹಾಗೂ ಪೋಷಕರ ಸಭೆ ಕಾರ್ಯಕ್ರಮವನ್ನು ಮೂಕಾಂಬಿಕಾ ಚಾರಿಟೆಬಲ್ ಟ್ರಸ್ಟ್ ಕಾರ್ಯದರ್ಶಿ ಉದಯಕುಮಾರ ಶೆಟ್ಟಿ ಉದ್ಘಾಟಿಸಿದರು. ಎಸ್.ಡಿ.ಎಂ.ಸಿ ಉಪಾಧ್ಯಕ್ಷ ನಾಗೇಂದ್ರ ಉಡುಪ ಅಧ್ಯಕ್ಷತೆ ವಹಿಸಿದ್ದರು. ಸರಕಾರದಿಂದ ಕೊಡಮಾಡುವ ಪಠ್ಯ ಪುಸ್ತಕ ಹಾಗೂ ಮೂಕಾಂಬಿಕಾ ಚಾರಿಟೆಬಲ್ ಟ್ರಸ್ಟ್ ಮೂಲಕ ನೀಡುವ ಪುಸ್ತಕಗಳನ್ನು ಮೂಕಾಂಬಿಕಾ ಚಾರಿಟೆಬಲ್ ಟ್ರಸ್ಟ್ ಖಜಾಂಚಿ ಜಿ.ಶ್ರೀಧರ ಶೆಟ್ಟಿ ವಿತರಿಸಿ ಶುಭ ಹಾರೈಸಿದರು. ಸರಕಾರಿ ನೌಕರರ ಸಂಘದ ಪ್ರತಿನಿಧಿ ಪ್ರತಾಪ ಕುಮಾರ್ ಶೆಟ್ಟಿ, ಎಸ್.ಡಿ.ಎಂ.ಸಿ ಸದಸ್ಯರು, ಅಧ್ಯಾಪಕರು ಉಪಸ್ಥಿತರಿದ್ದರು. ಶಿಕ್ಷಕಿ ನಾಗವೇಣಿ ಸ್ವಾಗತಿಸಿದರು. ಪ್ರಭಾರ ಮುಖ್ಯಶಿಕ್ಷಕ ಸೋಮರಾಯ ಜನ್ನು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಎಸ್.ಡಿ.ಎಂ.ಸಿ ಸದಸ್ಯೆ ಆಶಾರಾಣಿ ಅನಿಸಿಕೆ ಹಂಚಿಕೊಂಡರು. ಶಿಕ್ಷಕ ಸುಧಾಕರ ಮರಕಾಲ ವಂದಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ರಾಜು ಎನ್. ಕಾರ್ಯಕ್ರಮ ನಿರ್ವಹಿಸಿದರು.

ಚಾರ ಗ್ರಾಮದ ಗಾಂಧಿನಗರ ಸರಕಾರಿ ಶಾಲೆ

ಹೆಬ್ರಿ: ಕರ್ನಾಟಕ ಸರಕಾರ ಶಾಲಾ ಶಿಕ್ಷಣಮತ್ತು ಸಾಕ್ಷರತಾ ಇಲಾಖೆಯ ಸುತ್ತೋಲೆಯಂತೆ ಚಾರ ಗ್ರಾಮದ ಗಾಂಧಿನಗರ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಪ್ರಾರಂಭೋತ್ಸವ ಮತ್ತು ಮಹಾ ಪೋಷಕ ಶಿಕ್ಷಕರ ಸಭೆಯು ಸೋಮವಾರ ನಡೆಯಿತು. 'ಉತ್ತಮ ಕಲಿಕೆ ಉತ್ತಮ ಭವಿಷ್ಯ' ಧ್ಯೇಯವಾಕ್ಯದೊಂದಿಗೆ ಶಾಲಾ ತರಗತಿಗಳುಆರಂಭಗೊಂಡುಮಕ್ಕಳನ್ನು ಶಾಲೆಗೆ ಪೋಷಕರು ಸೇರ್ಪಡೆಗೊಳಿಸಿದರು. ಶಾಲೆಯಲ್ಲಿ ನಡೆದ ಆರಂಭೋತ್ಸವ ಸಭೆಯಲ್ಲಿ ಮಕ್ಕಳಿಗೆ ಉಚಿತಪಠ್ಯ ಪುಸ್ತಕ, ಸಮವಸ್ತ್ರ ವಿತರಣೆ ಮಾಡಲಾಯಿತು. ವೇದಿಕೆಯಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಚಂದ್ರ ಆಚಾರ್, ಚಾರ ಗ್ರಾ.ಪಂ ನಿಕಟಪೂರ್ವ ಸದಸ್ಯ ದಾನಿ ಕೃಷ್ಣನಾಯ್ಕ್, ಉಪಾಧ್ಯಕ್ಷ ನಳಿನಿ ಆನಂದ ಸೇರಿಗಾರ್, ಅಲಯನ್ಸ್ ಕ್ಲಬ್ ಅಧ್ಯಕ್ಷ ಬಾಲಚಂದ್ರ.ಎಂ ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕ ಉಮಾಶಂಕರ್ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಸಹ ಶಿಕ್ಷಕಿ ರತ್ನಾವತಿ ನಾಯಕ್ ನಿರೂಪಿಸಿ, ಸಹಶಿಕ್ಷಕಿ ವಸಂತಿ ವಂದಿಸಿದರು.

ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ

ಮುಲ್ಕಿ: ಕವತ್ತಾರು ಗೌತಮಬುದ್ಧ ನಗರ ಅಂಬೇಡ್ಕರ್ ಭವನ ಸಮಿತಿ ವತಿಯಿಂದ ಕವತ್ತಾರು ಗ್ರಾಮದ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣಾ ಕಾರ್ಯಕ್ರಮ ಮತ್ತು ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗೆ ಸನ್ಮಾನ ಮತ್ತು ಜಾಗೃತಿ ಕಾರ್ಯಕ್ರಮ ನಡೆಯಿತು. ಭವನ ಸಮಿತಿಯ ಅಧ್ಯಕ್ಷ ಭಾಸ್ಕರ್ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಮಾಡಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ತಮ್ಮ ಸಮುದಾಯದ ಅಭಿವೃದ್ಧಿಗೆ ಶ್ರಮ ವಹಿಸಬೇಕು ಎಂದರು. ಸಮುದಾಯದ ಹಿರಿಯರು, ಮಾರ್ಗದರ್ಶಕರು, ಹೋರಾಟಗಾರ ಶೇಖರ್ ಹೆಜ್ಮಾಡಿ, ಮಾತನಾಡಿ ಡಾ.ಅಂಬೇಡ್ಕರ್‌ರ ಆದರ್ಶ ಜೀವನ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಲು ಕರೆ ನೀಡಿದರು. ವೇದಿಕೆಯಲ್ಲಿ ಸುಧಾಕರ್ ನಂಬಿಯರ್. ಉಪಾಧ್ಯಕ್ಷ ರಾದ ಸಂದೀಪ್, ಗಂಗಾಧರ್ ಭವನ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು. ಸಂಘಟನಾ ಕಾರ್ಯದರ್ಶಿ ನಿತೇಶ್ ಸ್ವಾಗತಿಸಿದರು, ರಮಾನಂದ್ ಕಾರ್ಯಕ್ರಮ ನಿರೂಪಿಸಿದರು.



ಜಿಲ್ಲಾ ಆಡಳಿತ, ದ.ಕ. ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಬೆಳ್ಳಾರೆ ಗ್ರಾಮದಲ್ಲಿ ಎಂಡೋಸಲ್ಫಾನ್ ಸಂತ್ರಸ್ತರ ಪುನರ್ವಸತಿ ಪಾಲನಾ ಕೇಂದ್ರವನ್ನು ಉದ್ಭವ್ ಶೈಕ್ಷಣಿಕ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಬೆಂಗಳೂರು ನಿರ್ವಹಣೆಗಾಗಿ ಸರ್ಕಾರ ನೀಡಿದ್ದು, ಸೋಮವಾರ ವೈದ್ಯ ಡಾ. ಕಿರಣ್ ಮತ್ತು ಉದ್ಭವ್ ಸಂಸ್ಥೆ ಸಂಪಾಜೆ ಪಿಎಚ್‌ಸಿ ಆಡಳಿತಾಧಿಕಾರಿ ಪಿ. ಮಲ್ಲಿಕಾರ್ಜುನ ಉದ್ಘಾಟಿಸಿದರು. ಮಕ್ಕಳ ಪೋಷಕರು, ಪಾಲನಾ ಕೇಂದ್ರದ ಮ್ಯಾನೇಜರ್ ಶರ್ಮಿಳ, ವಿಶೇಷ ಪರಿಣಿತ ಶಿಕ್ಷಕರು ಹಾಗೂ ಸವಿತಾ, ಮುಸ್ಕಾನ್, ಕ್ರಾಫ್ಟ್ ಟೀಚರ್ ಕಾವ್ಯ ಹಾಗೂ ಸಹಾಯಕರು ಮತ್ತು ಆಸ್ಪತ್ರೆ ಸಿಬ್ಬಂದಿ ವರ್ಗ ಜೊತೆಗೆ ಮಾಧವ ತಡಗಜೆ, ಪ್ರೇಮ್ ಬೆಳ್ಳಾರೆ ಮತ್ತಿತರರು ಭಾಗವಹಿಸಿದ್ದರು.

ಐನ್ ಮನೆಗಳಿಗೆ ದುಬಾರಿ ಕಂದಾಯದ ಹೊರೆ : ವಿನಾಯಿತಿ ನೀಡಲು ಮನವಿ

ಮಡಿಕೇರಿ: ಕಂದಾಯ ನಿಗದಿ ನೆಪದಲ್ಲಿ ಕೊಡವರ ಐನ್ ಮನೆಗಳ ಮೇಲೆ ಗ್ರಾಮ ಪಂಚಾಯ್ತಿಯಿಂದ ಮನಸೋ ಇಚ್ಛೆ ಕಂದಾಯ ವಿಧಿಸುತ್ತಿರುವ ಕುರಿತು ದೂರುಗಳು ಬಂದಿದ್ದು, ಇದನ್ನು ತಕ್ಷಣವೇ ಪರಿಷ್ಕರಿಸಿ ಕೊಡಗಿನಲ್ಲಿರುವ ಐನ್ ಮನೆಗಳಿಗೆ ಸಂಪೂರ್ಣ ಕಂದಾಯ ವಿನಾಯಿತಿ ನೀಡಬೇಕೆಂದು ಯುನೈಟೆಡ್ ಕೊಡವ ಆರ್ಗನೈಝೇಷನ್ (ಯುಕೊ) ಆಗ್ರಹಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಂಘಟನೆಯ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ ಅವರು, ಕೊಡಗಿನಲ್ಲಿರುವ ಐನ್ ಮನೆಗಳು ಕೊಡವರ ಪ್ರತಿ ಒಕ್ಕಕ್ಕೆ ಸಂಬಂಧಿಸಿದ ಕುಲದೈವ, ಕಾರೋಣರ ದೈವ ನೆಲೆಯಾಗಿದ್ದು, ಇದಕ್ಕೆ ಶತಮಾನಗಳ ಹಿನ್ನಲೆಯಿದೆ. ಅವಿಭಕ್ತ ಕುಟುಂಬ ಪದ್ಧತಿಯನ್ನು ಅನುಸರಿಸುತ್ತಿದ್ದ ಕೊಡವರ ಹಿರಿಯರು ಶತಮಾನಗಳ ಹಿಂದೆಯೇ ಅಂದಿನ ಅವಶ್ಯಕತೆಗಳಿಗನುಗುಣವಾಗಿ, ಬೃಹತ್ ಗಾತ್ರದ ಐನ್ ಮನೆಗಳನ್ನು ನಿರ್ಮಿಸಿಕೊಂಡಿದ್ದರು. ಆ ಮೂಲಕ ಕೌಟುಂಬಿಕ ಆರಾಧನೆಗಳು ಹಾಗೂ ಆಚರಣೆಗಳನ್ನು ಐನ್ ಮನೆಗಳಲ್ಲೇ ತಲತಲಾಂತರಗಳಿಂದ ಇದುವರೆಗೂ ನಡೆಸಿಕೊಂಡು ಬರಲಾಗುತ್ತಿದೆ. ಇದೀಗ ಆಯಾ ಕುಲಕ್ಕೆ ಸಂಬಂಧಿಸಿದ ಒಂದು ಕುಟುಂಬ ಐನ್ ಮನೆಗಳಲ್ಲಿ ವಾಸ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಇನ್ನು ಕೆಲವು ಐನ್ ಮನೆಗಳಲ್ಲಿ ಯಾರೂ ವಾಸಿಸದೇ ಬೀಗ ಹಾಕಿ ಇಟ್ಟಿರುವ ಪರಿಸ್ಥಿತಿಗಳೂ ಇದೆ. ಈ ಐನ್ ಮನೆಗಳು ಸಮಸ್ತ ಕುಲಕ್ಕೆ ಸಂಬಂಧಿಸಿದ ದೇವ ನೆಲೆಯಾಗಿದ್ದು, ಇಂದಿನ ಪರಿಸ್ಥಿತಿಯಲ್ಲಿ ಐನ್ ಮನೆಗಳನ್ನು ನಿರ್ವಹಿಸಿಕೊಂಡು ಹೋಗುವುದೇ ಬಹುದೊಡ್ಡ ಸವಾಲಾಗಿದೆ. ಹೀಗಿರುವಾಗ ಸ್ಥಳೀಯ ಸಂಸ್ಥೆಗಳು ಈ ರೀತಿಯಾಗಿ ದುಬಾರಿ ಕಂದಾಯ ವಿಧಿಸಲು ಮುಂದಾಗಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ಬಲವಂತವಾಗಿ ಕಂದಾಯವನ್ನು ವಸೂಲಿ ಮಾಡಲು ಮುಂದಾದಲ್ಲಿ ತೀವ್ರತರದ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದೂ ಮಂಜು ಚಿಣ್ಣಪ್ಪ ಎಚ್ಚರಿಕೆ ನೀಡಿದ್ದಾರೆ.

ಜೂನ್ 20ರಿಂದ ಉಡುಪಿ ಜಿಲ್ಲೆಯಲ್ಲಿ ಆರಂಭ : ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಮಾಹಿತಿ

ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ

ಉಡುಪಿ: ಉಡುಪಿ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಜೂನ್ 20ರಿಂದ ಅಧಿಕೃತವಾಗಿ ಆರಂಭಗೊಳ್ಳಲಿದ್ದು, ಅಕ್ಟೋಬರ್ 7ರಂದು ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಜಿಲ್ಲಾಧಿಕಾರಿ ಸ್ವರೂಪಾ ಟಿ. ಕೆ. ತಿಳಿಸಿದ್ದಾರೆ. ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ವಿವರಣೆ ನೀಡಿದ ಅವರು, ಯಾವುದೇ ಒಬ್ಬ ಅರ್ಹ ಮತದಾರನನ್ನು ಪಟ್ಟಿಯಿಂದ ಕೈಬಿಡದಂತೆ ಹಾಗೂ ಯಾವುದೇ ಅನರ್ಹ ವ್ಯಕ್ತಿಯನ್ನು ಪಟ್ಟಿಗೆ ಸೇರಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದೇ ಈ ಬಾರಿಯ ಎಸ್‌ಐಆರ್ ಪ್ರಕ್ರಿಯೆಯ ಮುಖ್ಯ ಗುರಿಯಾಗಿದೆ ಎಂದರು.



ವಯೋಮಾನದ ಆಧಾರದಲ್ಲಿ ದಾಖಲೆಗಳ ಸಲ್ಲಿಕೆ ಕಡ್ಡಾಯ

2002ರ ಎಸ್‌ಐಆರ್ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಅಥವಾ ಡೇಟಾಬೇಸ್‌ಗೆ ವಿವರಗಳು ಹೊಂದಿಕೆಯಾಗದ ಮತದಾರರಿಗೆ ಇಆರ್‌ಒ ಮೂಲಕ ನೋಟೀಸ್ ನೀಡಲಾಗುತ್ತದೆ. ಇಂತಹ ಸಂದರ್ಭದಲ್ಲಿ 1987ರ ಜುಲೈ 1ಕ್ಕಿಂತ ಮೊದಲು ಭಾರತದಲ್ಲಿ ಜನಿಸಿದ ಮತದಾರರು ತಮ್ಮ ಜನ್ಮ ದಿನಾಂಕ ಹಾಗೂ ಜನ್ಮ ಸ್ಥಳದ ದಾಖಲೆಯನ್ನು ಒದಗಿಸಬೇಕಾಗುತ್ತದೆ. ಇನ್ನು 1987ರ ಜುಲೈ 1ರಿಂದ 2004ರ ಡಿಸೆಂಬರ್ 2ರ ನಡುವೆ ಭಾರತದಲ್ಲಿ ಜನಿಸಿದವರಾಗಿದ್ದರೆ, ತಮ್ಮ ಜನ್ಮ ದಿನಾಂಕ ಮತ್ತು ಜನ್ಮ ಸ್ಥಳದ ದಾಖಲೆಯೊಂದಿಗೆ ಪೋಷಕರ (ತಂದೆ ಅಥವಾ ತಾಯಿ) ಜನ್ಮ ದಿನಾಂಕ ಹಾಗೂ ಜನ್ಮ ಸ್ಥಳದ ದಾಖಲೆಗಳನ್ನು ಒದಗಿಸುವುದು ಕಡ್ಡಾಯವಾಗಿದೆ. 2004ರ ಡಿಸೆಂಬರ್ 2ರ ನಂತರ ಭಾರತದಲ್ಲಿ ಜನಿಸಿದವರಾಗಿದ್ದರೆ, ತಮ್ಮ ಜನ್ಮ ದಾಖಲೆಗಳೊಂದಿಗೆ ತಂದೆ ಮತ್ತು ತಾಯಿ ಇಬ್ಬರ ಜನ್ಮ ದಿನಾಂಕ ಹಾಗೂ ಜನ್ಮ ಸ್ಥಳದ ದಾಖಲೆಗಳನ್ನು ಒದಗಿಸಬೇಕಾಗುತ್ತದೆ. ಒಂದು ವೇಳೆ ಪೋಷಕರು ಭಾರತೀಯರಲ್ಲದಿದ್ದರೆ ಪಾಸ್‌ಪೋರ್ಟ್ ಅಥವಾ ವೀಸಾ ಪ್ರತಿಯನ್ನು, ಭಾರತದ ಹೊರಗೆ ಜನಿಸಿದ್ದರೆ ಜನನ ನೋಂದಣಿ ಪುರಾವೆಯನ್ನು ಮತ್ತು ನೋಂದಣಿ ಮೂಲಕ ಭಾರತೀಯ ಪೌರತ್ವ ಪಡೆದಿದ್ದರೆ ಅದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

ಪರಿಷ್ಕರಣೆಯ ಸಮಗ್ರ ವೇಳಾಪಟ್ಟಿ

ಈ ಮಹತ್ವದ ಪ್ರಕ್ರಿಯೆಯು ಜೂನ್ 20 ರಿಂದ 29ರ ವರೆಗೆ ಪೂರ್ವ ತಯಾರಿ, ಅಧಿಕಾರಿಗಳ ತರಬೇತಿ ಹಾಗೂ ನಮೂನೆಗಳ ಮುದ್ರಣ ಕಾರ್ಯದೊಂದಿಗೆ ಆರಂಭವಾಗಲಿದ್ದು, ಜೂನ್ 30 ರಿಂದ ಜುಲೈ 27 ರವರೆಗೆ ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಜುಲೈ 29 ರಂದು ಮತಗಟ್ಟೆಗಳ ಪುನರ್ ವಿಂಗಡಣೆ ಪ್ರಕ್ರಿಯೆ ನಡೆಯಲಿದ್ದು, ಆಗಸ್ಟ್ 5 ರಂದು ಮತದಾರರ ಕರಡು ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲಾಗುತ್ತದೆ. ಆಗಸ್ಟ್ 5 ರಿಂದ ಸೆಪ್ಟೆಂಬರ್ 4ರ ವರೆಗೆ ಸಾರ್ವಜನಿಕರಿಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವಿದ್ದು, ಆಗಸ್ಟ್ 5 ರಿಂದ ಅಕ್ಟೋಬರ್ 3ರ ಅವಧಿಯಲ್ಲಿ ಸ್ವೀಕೃತವಾದ ಎಲ್ಲಾ ಸೂಚನೆ, ಹಕ್ಕು ಹಾಗೂ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಲಿದ್ದಾರೆ. ಅಂತಿಮವಾಗಿ ಅಕ್ಟೋಬರ್ 7 ರಂದು ಮತದಾರರ ಪರಿಷ್ಕೃತ ಅಂತಿಮ ಪಟ್ಟಿಯನ್ನು ಜಿಲ್ಲಾದ್ಯಂತ ಬಿಡುಗಡೆ ಮಾಡಲಾಗುವುದು.

ಮನೆ ಮನೆಗೆ ಬಿಎಲ್‌ಒ ಭೇಟಿ ಮತ್ತು ನಮೂನೆ ಸಲ್ಲಿಕೆ

ನಿಗದಿತ ತರಬೇತಿಯ ಬಳಿಕ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಪ್ರತಿಯೊಂದು ಮನೆಗೆ ಭೇಟಿ ನೀಡಲಿದ್ದು, ಆಯಾ ಭಾಗದ ಮತದಾರರ ಪಟ್ಟಿಯಲ್ಲಿರುವ ಪ್ರತಿಯೊಬ್ಬರಿಗೂ ಪೂರ್ವ ಮುದ್ರಿತ ವಿವರಗಳುಳ್ಳ ಗಣತಿ ನಮೂನೆಯನ್ನು ದ್ವಿಪ್ರತಿಯಲ್ಲಿ ವಿತರಿಸಿ, ಅದನ್ನು ಭರ್ತಿ ಮಾಡಲು ಅಗತ್ಯ ಮಾರ್ಗದರ್ಶನ ನೀಡಲಿದ್ದಾರೆ. ಅಧಿಕಾರಿಗಳು ಪ್ರತಿಯೊಂದು ಮನೆಗೆ ಕನಿಷ್ಠ ಮೂರು ಬಾರಿ ಭೇಟಿ ನೀಡಿ ಸ್ಲಿಪ್‌ನಲ್ಲಿ ವಿವರಗಳನ್ನು ದಾಖಲಿಸಿಕೊಳ್ಳಲಿದ್ದು, ಪ್ರತಿಯೊಬ್ಬ ಮತದಾರನು ಈ ಗಣತಿ ನಮೂನೆಯನ್ನು ಬಿಎಲ್‌ಒಗಳಿಗೆ ಕಡ್ಡಾಯವಾಗಿ ಸಲ್ಲಿಸಬೇಕಿರುತ್ತದೆ. ಬೂತ್ ಮಟ್ಟದ ಅಧಿಕಾರಿಗಳು ಮತದಾರರಿಂದ ಭರ್ತಿ ಮಾಡಿದ ಗಣತಿ ನಮೂನೆ ಹಾಗೂ ಅಗತ್ಯ ದಾಖಲೆಯ ಒಂದು ಪ್ರತಿಯನ್ನು ಪಡೆದು, ಇನ್ನೊಂದು ಪ್ರತಿಯಲ್ಲಿ ಸ್ವೀಕೃತಿಯನ್ನು ನೀಡಲಿದ್ದಾರೆ. ಇದಲ್ಲದೆ, ಮತದಾರರು ಭರ್ತಿ ಮಾಡಿದ ನಮೂನೆಗಳನ್ನು ಅಗತ್ಯ ದಾಖಲೆಗಳೊಂದಿಗೆ ಆನ್‌ಲೈನ್‌ನಲ್ಲಿಯೂ ನೇರವಾಗಿ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಅಗತ್ಯವಿರುವ ಅಧಿಕೃತ ದಾಖಲೆಗಳ ವಿವರ

ಮತದಾರರ ಪಟ್ಟಿಯ ಪರಿಷ್ಕರಣೆಗೆ ಸಾರ್ವಜನಿಕರು ಒದಗಿಸಬಹುದಾದ ಪ್ರಮುಖ ದಾಖಲೆಗಳಲ್ಲಿ ಉದ್ಯೋಗಿಗಳು ಅಥವಾ ಪಿಂಚಣಿದಾರರಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಸಾರ್ವಜನಿಕ ಉದ್ಯಮ ಸಂಸ್ಥೆಗಳು ನೀಡಿದ ಗುರುತುಪತ್ರ ಮತ್ತು ಪಿಂಚಣಿ ಆದೇಶಗಳು ಸೇರಿವೆ. ಇದರೊಂದಿಗೆ 1987ರ ಜುಲೈ 1ರ ಮುನ್ನ ಕೇಂದ್ರ ಸರ್ಕಾರ, ಸ್ಥಳೀಯ ಸಂಸ್ಥೆಗಳು, ಬ್ಯಾಂಕುಗಳು, ಅಂಚೆ ಕಚೇರಿಗಳು ಹಾಗೂ ಪಿಎಸ್‌ಗಳು ನೀಡಿದ ಗುರುತಿನ ಚೀಟಿ ಅಥವಾ ಪ್ರಮಾಣಪತ್ರ ಸಹಿತ ದಾಖಲೆಗಳು, ಅಧಿಕೃತ ಜನನ ಪ್ರಮಾಣಪತ್ರ, ಪಾಸ್‌ಪೋರ್ಟ್, ಮೆಟ್ರಿಕ್ಯುಲೇಶನ್ ಅಥವಾ ಶಿಕ್ಷಣ ಪ್ರಮಾಣ ಪತ್ರಗಳು, ಪರ್ಮನೆಂಟ್ ರೆಸಿಡೆನ್ಸ್ ಸರ್ಟಿಫಿಕೇಟ್, ಅರಣ್ಯ ಹಕ್ಕು ಪ್ರಮಾಣಪತ್ರ, ಒಬಿಸಿ, ಎಸ್‌ಸಿ, ಎಸ್‌ಟಿ ಅಥವಾ ಯಾವುದೇ ಅಧಿಕೃತ ಜಾತಿ ಪ್ರಮಾಣಪತ್ರಗಳು, ರಾಷ್ಟ್ರೀಯ ನಾಗರಿಕರ ನೋಂದಣಿ ಪತ್ರ, ಸರ್ಕಾರ ನಿರ್ವಹಿಸುವ ಕುಟುಂಬ ದಾಖಲೆಗಳು ಹಾಗೂ ಸರ್ಕಾರದಿಂದ ಮಂಜೂರಾದ ಯಾವುದೇ ನಿವೇಶನ ಅಥವಾ ಮನೆ ಮಂಜೂರಾತಿ ಪತ್ರಗಳನ್ನು ಪುರಾವೆಯಾಗಿ ಬಳಸಬಹುದಾಗಿದೆ.

'ಲೋಕ ಗೆಂದಿನ ಗಾಂಧಿಯೆರ್' ದ್ವಿತೀಯ ಮುದ್ರಣ ಬಿಡುಗಡೆ

ಅಧ್ಯಯನಶೀಲತೆ ಗಾಂಧಿ ಆದರ್ಶ



ಮಂಗಳೂರು: ಅನುಭವದ, ಅಧ್ಯಯನದ ಮತ್ತು ಆವಿಷ್ಕಾರ ಮನೋಭಾವದ ಕಾರಣದಿಂದಾಗಿಯೇ ಗಾಂಧಿ ಅವರು ಸತ್ಯದ ಹುಡುಕಾಟವನ್ನು ನಿರಂತರವಾಗಿ ನಡೆಸಿದ್ದರು, ಈ ಕಾರಣಕ್ಕಾಗಿ ಗಾಂಧಿ ಎಲ್ಲಾ ಕಾಲದಲ್ಲೂ ಆದರ್ಶವಾಗುತ್ತಾರೆ ಮತ್ತು ಅಗತ್ಯವಾಗುತ್ತಾರೆ ಎಂದು ರಂಗಕರ್ಮಿ ಪ್ರಸಾದ್ ರಕ್ಷಿದಿಯವರು ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮತ್ತು ಮಹಾತ್ಮ ಗಾಂಧಿ ಶಾಂತಿ ಪ್ರತಿಷ್ಠಾನ ಜಂಟಿಯಾಗಿ ಬಾವುಟ ಗುಡ್ಡೆಯ ಪ್ರತಿಷ್ಠಾನದ ಸಭಾಂಗಣದಲ್ಲಿ ಆಯೋಜಿಸಿದ 'ಲೋಕ ಗೆಂದಿನ ಗಾಂಧಿಯೆರ್' ಪುಸ್ತಕದ ಎರಡನೇಯ ಮುದ್ರಣದ ಕೃತಿ ಬಿಡುಗಡೆ ಹಾಗೂ 'ಮಹಾತ್ಮರ ಮನನ' ಸರಣಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಡಾ. ಉದಯ ಕುಮಾರ್ ಇರ್ವತ್ತೂರು ಅವರು ಬರೆದ 'ಲೋಕ ಗೆಂದಿನ ಗಾಂಧಿಯೆರ್' ಪುಸ್ತಕದ ಪುನರ್ ಮುದ್ರಣದ ಕೃತಿಯನ್ನು ತುಳು ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅವರು ಬಿಡುಗಡೆಗೊಳಿಸಿದರು.

ಗಾಂಧಿ ಚಿಂತನಾ ಸಂವಾದ ಕಾರ್ಯಕ್ರಮವನ್ನು ಲೇಖಕ ಅರವಿಂದ ಚೊಕ್ಕಾಡಿಯವರು ನಡೆಸಿಕೊಟ್ಟರು. ಪ್ರತಿಷ್ಠಾನದ ಉಪಾಧ್ಯಕ್ಷರಾದ ಬಿ. ಪ್ರಭಾಕರಶ್ರೀಯಾನ್ ಅವರು ಅಧ್ಯಕ್ಷತೆ ವಹಿಸಿದ್ದರು. ತುಳು ಸಾಹಿತ್ಯ ಅಕಾಡೆಮಿಯ ಸದಸ್ಯ ಸಂಚಾಲಕ ಉದ್ಯಾವರ ನಾಗೇಶ್ ಕುಮಾರ್ ಉಪಸ್ಥಿತರಿದ್ದರು. ಗಾಂಧಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಇಸ್ಮಾಯಿಲ್ ಎನ್. ಸ್ವಾಗತಿಸಿದರು. ಪ್ರತಿಷ್ಠಾನದ ಜೊತೆ ಕಾರ್ಯದರ್ಶಿ ಕಲ್ಲೂರು ನಾಗೇಶ್ ಕಾರ್ಯಕ್ರಮ ನಿರ್ವಹಿಸಿದರು. ಪ್ರೇಮ್ ಕುಮಾರ್ ವಂದಿಸಿದರು.

ಕಟೀಲು ಶಿವಳ್ಳಿ ಸಭಾದಿಂದ ಪ್ರತಿಭಾ ಪುರಸ್ಕಾರ, ದಾನಿಗೆ ಸನ್ಮಾನ



ಕಿನ್ನಿಗೋಳಿ: ಪ್ರತಿಭೆ ಮತ್ತು ಪ್ರಯತ್ನದಿಂದ ಸಾಧನೆಯೆಡೆಗೆ ಸಾಗಬೇಕು. ಸಾಧಕರನ್ನು ಗೌರವಿಸುವ, ಅನುಸರಿಸುವ ಗುಣ ನಮ್ಮಲ್ಲಿರಬೇಕು ಎಂದು ಕಟೀಲು ದೇಗುಲದ ಅರ್ಚಕ ಶ್ರೀಹರಿ ನಾರಾಯಣದಾಸ ಆಸ್ರಣ್ಣ ಹೇಳಿದರು.

ಅವರು ಶಿಬರೂರು ಕೈಯೂರು ಶ್ರೀ ಗುರುರಾಘವೇಂದ್ರ ಸನ್ನಿಧಿಯಲ್ಲಿ ನಡೆದ ಕಟೀಲು ವಲಯ ಶಿವಳ್ಳಿ ಸಭಾ ಹಾಗೂ ಗುರುರಾಘವೇಂದ್ರ ಭಜನಾ ಮಂಡಳಿ ಟ್ರಸ್ಟ್ ವತಿಯಿಂದ ಆಯೋಜಿಸಲಾದ ಭಜನಾ ಮಂಗಲೋತ್ಸವದ ಸಂದರ್ಭ ಪ್ರತಿಭಾ ಪುರಸ್ಕಾರ ಹಾಗೂ ಸಂಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪಿಯುಸಿ, ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಪಡೆದ ಶಿವಮನ್ಯು ಭಟ್, ಪ್ರಜ್ಞಾ ಪಿ. ರಾವ್, ಅನ್ವಿತಾ ಉಡುಪ, ಎಸ್. ಕೇಶವ ಭಟ್, ಚ್ಯವನ ಉಡುಪ, ಶ್ರೀಲಕ್ಷ್ಮೀ ಎ. ಉಡುಪ, ಜಿ. ಅಪೂರ್ವ, ಹರಿಪ್ರಿಯ ಭಟ್ ಇವರನ್ನು ಅಭಿನಂದಿಸಲಾಯಿತು. ಉದ್ಯಮ, ಸಮಾಜಸೇವೆ, ಧಾರ್ಮಿಕ ಕೊಡುಗೆಗಳಿಂದ ಜನಪ್ರಿಯರಾದ ಕೋಡು ಶ್ರೀನಿವಾಸ ಭಟ್ ಅವರನ್ನು ಸಂಮಾನಿಸಲಾಯಿತು. ವಿವಿಧ ಭಜನಾ ಮಂಡಳಿಗಳಿಂದ ಭಜನೆ ನಡೆಯಿತು.

ಕಟೀಲು ದೇಗುಲದ ಅರ್ಚಕ ಅನಂತ ಆಸ್ರಣ್ಣ, ಇನ್ನಾ ಭಾರ್ಗವ ಟ್ರಸ್ಟ್‌ನ ರಾಜ ಭಟ್, ಬಜಪೆ ರಾಘವೇಂದ್ರ ಆಚಾರ್ಯ, ವಾಸುದೇವ ಭಟ್, ಸುಧಾ ಆಚಾರ್ಯ, ಧಾರ್ಮಿಕ ಪರಿಷತ್ ಸದಸ್ಯ ಕೋರ್ಯಾರ್ ಸುಬ್ರಹ್ಮಣ್ಯ ಆಚಾರ್, ಶಿವಳ್ಳಿ ಸಭಾದ ಅನಂತಪದ್ಮನಾಭ ಆಚಾರ್ಯ, ರಾಮಚಂದ್ರ ಉಡುಪ, ಅನಂತ ಭಟ್ ಕುಲ್ಲಂಗಾಲ ಮುಂತಾದವರಿದ್ದರು. ಸುಪ್ರಿಯಾ ಆಚಾರ್ಯ ಪ್ರಾರ್ಥಿಸಿದರು. ಹಂಸನಿ ಉಡುಪ ಸಂಮಾನಿತರ ವಿವರ ನೀಡಿದರು. ವಸಂತಿ ಕೇಶವ ಭಟ್ ನಿರೂಪಿಸಿದರು.

ನಡೂರಿನ ರತ್ನಶೀಲ ಶಿಕ್ಷಣ ಸಂಸ್ಥೆ ಗ್ರ್ಯಾವಿಟಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ

ಶಾಲಾ ಹೊಸ ಯೋಜನೆಗಳ ಬಗ್ಗೆ ಪೋಷಕರಿಗೆ ಮಾಹಿತಿ

ಬ್ರಹ್ಮಾವರ: ನಡೂರಿನ ರತ್ನಶೀಲ ಶಿಕ್ಷಣ ಸಂಸ್ಥೆ ಗ್ರ್ಯಾವಿಟಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಈ ಬಾರಿಯ ಶೈಕ್ಷಣಿಕ ವರ್ಷದ ಪ್ರಥಮ ಪಾಲಕರ ಸಭೆ ಜರಗಿತು.

ಇದೇ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಮನೋಹರ್ ಹೆಗ್ಡೆ ಮಾತನಾಡಿ, ವಿದ್ಯಾರ್ಥಿಗಳ ದೈಹಿಕ ಮತ್ತು ಮನೋ ವಿಕಾಸಕ್ಕಾಗಿ ಹೊಸ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಈ ಬಗ್ಗೆ ಪೋಷಕರ ಸಹಕಾರ ಕೋರಿದರು.



ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ

ಪ್ರತೀ ವಿದ್ಯಾರ್ಥಿಯ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಿ ಉನ್ನತೀಕರಿಸುವುದರ ಜೊತೆಗೆ, ವಿಶೇಷವಾಗಿ 5 ಮತ್ತು 6ನೇ ತರಗತಿಯ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲ ಭೂತ ತರಬೇತಿಯನ್ನು ನೀಡಲಾಗುವುದು. ವಿದ್ಯಾರ್ಥಿಗಳಿಗೆ ಭವಿಷ್ಯದ ದೃಷ್ಟಿಯಿಂದ 'ಕರಿಯರ್ ಗೈಡೆನ್ಸ್' (ವೃತ್ತಿ ಮಾರ್ಗದರ್ಶನ) ಹಾಗೂ ದೈಹಿಕ ಬೆಳವಣಿಗೆಗಾಗಿ ವಿಶೇಷ 'ಕ್ರಿಕೆಟ್ ಕೋಚಿಂಗ್' ತರಗತಿಗಳನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು. ಈ ಎರಡೂ ಹೊಸ ಯೋಜನೆ ಗಳಿಗೆ ಪೋಷಕರು ಸಕಾರಾತ್ಮಕವಾಗಿ ಸ್ಪಂದಿಸಿ ಅಭಿನಂದಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದ ಕೋಟೇಶ್ವರದ ಚಿರಂತನ ಶಿಕ್ಷಣ ಸಂಸ್ಥೆಯ ಸ್ಥಾಪಕಾಧ್ಯಕರಾದ ಡಾ. ಚಿಂತನಾ ರಾಜೇಶ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಒತ್ತಡ, ಸಮಯ ಪ್ರಜ್ಞೆ , ಮಾತಿನ ದಾಟಿ , ಜಾಲತಾಣದ ಯುಗದಲ್ಲಿ ಹಿರಿಯರಿಗೆ ಗೌರವ, ಹಾಗೂ ಸಮತೋಲಿತ ಮನಸ್ಸಿನಿಂದ ಶಿಕ್ಷಣದಲ್ಲಿ ಯಶಸ್ಸು ಸಾಽಸುವುದರ ಬಗ್ಗೆ ಮಾಹಿತಿ ನೀಡಿದರು.

ಸ್ಪರ್ಧಾ ಸಾರಥಿ ಕೆಎಎಸ್ ಅಕಾಡೆಮಿಯ ಸ್ಥಾಪಕಾಧ್ಯಕ್ಷ ಆದರ್ಶ ಶೆಟ್ಟಿ ಕೆಲ ಮಾತನಾಡಿ, ಶಿಕ್ಷಣದ ನಂತರದ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲೇ ಸಿದ್ಧರಾಗಬೇಕೆಂದು ತಿಳಿಸಿದರು. ವಿವಿಧ ಸ್ಪರ್ಧಾತ್ಮಕ ತರಬೇತಿಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯದರ್ಶಿ ಪಾವನಎಂ.ಹೆಗ್ಡೆ, ವಿಭಾಗೀಯ ಮುಖ್ಯಸ್ಥೆಯರಾದ ಸಂಗೀತಾ ಅಡಿಗ ಹಾಗೂ ಸರಸ್ವತಿ ಉಪಸ್ಥಿತರಿದ್ದರು.

ಗೋಣಿಕೊಪ್ಪದಲ್ಲಿ ಮಾವು ಮೇಳ

ಮಡಿಕೇರಿ: ಕೊಡಗು ಜಿಲ್ಲಾ ಹಾಪ್ ಕಾಮ್ಸ್ ಆಶ್ರಯದಲ್ಲಿ ಇದೇ ಮೊದಲ ಬಾರಿಗೆ ಗೋಣಿಕೊಪ್ಪ ಸುತ್ತಮುತ್ತಲಿನ ಸಾರ್ವಜನಿಕರ ಬೇಡಿಕೆಯ ಮೇರೆಗೆ ಗೋಣಿಕೊಪ್ಪದಲ್ಲಿ ಜೂನ್ 5 ರಿಂದ 7 ರವರೆಗೆ 3 ದಿನಗಳ ಕಾಲ ಮಾವು ಮೇಳ ನಡೆಯಲಿದೆ. ಜೂನ್ 5 ರಂದು ಬೆಳಗ್ಗೆ 11 ಗಂಟೆಗೆ ಗೋಣಿಕೊಪ್ಪದ ಬಸ್ಸು ನಿಲ್ದಾಣ ಸಮೀಪದ ಗ್ರಾಮ ಪಂಚಾಯ್ತಿ ಮಳಿಗೆಯಲ್ಲಿ ಮೇಳದ ಉದ್ಘಾಟನೆ ನಡೆಯಲಿದೆ. ನೈಸರ್ಗಿಕವಾಗಿ ಮಾಗಿಸಿದ ಕಾರ್ಬೈಡ್ ಮುಕ್ತ ಹಣ್ಣುಗಳನ್ನು ರೈತರಿಂದ ಗ್ರಾಹಕರಿಗೆ ಸುಲಭವಾಗಿ ಸಿಗುವಂತೆ ಮಾಡುವುದು ಹಾಗೂ ಮಾವು ಪ್ರಿಯರಿಗೆ ಉತ್ತಮ ದರ್ಜೆಯ ಹಣ್ಣುಗಳು ಸಿಗುವಂತೆ ಮಾಡುವುದು ಈ ಮಾವು ಮೇಳದ ಮೂಲ ಉದ್ದೇಶವಾಗಿದೆ ಎಂದು ಕೊಡಗು ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಬಿದ್ದಾಟಂಡ ರಮೇಶ್ ಚಂಗಪ್ಪ ಅವರು ತಿಳಿಸಿದ್ದಾರೆ.

ನೇರ ನೇಮಕಾತಿ ಅಧಿಸೂಚನೆ

ಭಾರತ ಸರ್ಕಾರದ ಕಾರ್ಪೊರೇಟ್ ಅಫೇರ್ಸ್ ಸಚಿವಾಲಯದ ಅಡಿಯಲ್ಲಿ ನೋಂದಾಯಿತ ದಕ್ಷಿಣ ಕನ್ನಡ ಬೆಳೆಗಾರರ ಸಾವಯವ ಸಂಯುಕ್ತ ರೈತ ಉತ್ಪಾದಕ ಕಂಪನಿ ಲಿಮಿಟೆಡ್ ಸಂಸ್ಥೆಯಲ್ಲಿ ಬೆಂಗಳೂರು, ಹಾಸನ, ಮೈಸೂರು, ಶಿವಮೊಗ್ಗ, ಮಂಗಳೂರು ಮೂಡಬಿದ್ರೆ, ಕುಂದಾಪುರ, ಸುರತ್ಕಲ್, ಕಾರ್ಕಳ ಹಾಗೂ ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಆರಂಭವಾಗಲಿರುವ ಶಾಖೆಗಳಲ್ಲಿ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹುದ್ದೆಗಳು : ಮ್ಯಾನೇಜರ್, ಸಹಾಯಕ ಮ್ಯಾನೇಜರ್ ಕ್ಯಾಶ್ ಅಧಿಕಾರಿ, ಸಾಲ ಅಧಿಕಾರಿ, ಗ್ರಾಹಕ ಸೇವಾ ಅಧಿಕಾರಿ, ಫೀಲ್ಡ್ ಕಲೆಕ್ಷನ್ ಅಧಿಕಾರಿ

ಒಟ್ಟು ಹುದ್ದೆಗಳು: 65

ವೇತನ: ರೂ. 18,500 ರಿಂದ ರೂ. 45000 (ಅರ್ಹತೆ/ಅನುಭವ ಆಧಾರಿತ ವೇತನ)

ಸೌಲಭ್ಯಗಳು: ESI, PF

ಅರ್ಹತಾ ಪ್ರದೇಶ : ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಹುದ್ದೆಗಳಿಗೆ ಆಯ್ಕೆಯ ಕೊನೆಯ ದಿನಾಂಕ: 20-06-2026

ಸಂಪರ್ಕಿಸಿ : ಎಸ್. ಸತೀಶ್ ನಾಯಕ್ +919980496533/9448627226

ಪುತ್ತೂರು ಮಾರುಕಟ್ಟೆ ಧಾರಣೆ

03-06-2026

ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	415 - 460
ಚೋಲ್ ಅಡಿಕೆ	515 - 540
ಡಬಲ್ ಚೋಲ್	515 - 540
ಹೊಸ ಪಠೋರ	340 - 390
ಹಳೆ ಪಠೋರ	360 - 390
ಹೊಸ ಉಳ್ಳಿ	140 - 285
ಹಳೆ ಉಳ್ಳಿ	130 - 285
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	245 - 275
ಹಳೆ ಕರಿಗೋಟು	245 - 275
ಹಸಿ ಕೊಕ್ಕೋ	70 - 105
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	257.00
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	148.00
ಸ್ಕ್ರಾಪ್ 2	140.00

ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಕಾರ್ಕಳ ಇವರ ನ್ಯಾಯಾಲಯದಲ್ಲಿ

MISE CASE NO.: 107/2026

ಇವರೊಳಗೆ:
ಶ್ರೀಮತಿ ಪದ್ಮಶ್ರೀ ...ಅರ್ಜಿದಾರರು
-ಮತ್ತು-
ಜನನ ಮತ್ತು ಮರಣಗಳ ನೋಂದಣಾಧಿಕಾರಿ, ತಹಸೀಲ್ದಾರ್, ಕಾರ್ಕಳ ...ಎದುರುದಾರರು

ಸಾರ್ವಜನಿಕ ಪ್ರಕಟಣೆ

ಈ ಮೇಲಿನ ಪ್ರಕರಣದಲ್ಲಿ ಅರ್ಜಿದಾರರ ತಾಯಿಯ ಸಹೋದರರಾದ ಶ್ರೀ **ಭೋಜರಾಜ ಭಂಡಾರಿಯವರು ದಿನಾಂಕ:02.10.1980**ರಂದು ಕಾರ್ಕಳ ತಾಲೂಕು, ರೆಂಜಾಳ ಗ್ರಾಮದ, ಭಂಡಾರಿಬೆಟ್ಟು ಮನೆ ಎಂಬಲ್ಲಿ ಮೃತಪಟ್ಟಿದ್ದಾಗಿಯೂ ಮತ್ತು ಈ ಬಾಬ್ತು ಎದುರುದಾರರ ಕಾರ್ಯವ್ಯಾಪ್ತಿಗೊಳಪಟ್ಟ ರೆಂಜಾಳ ಗ್ರಾಮದ ಮರಣ ನೋಂದಣಿ ವಹಿಯಲ್ಲಿ ತಡ ದಾಖಲು ಮಾಡುವರೇ ವಿಳಂಬ ವಿನಾಯಿತಿ ಕೋರಿ ಮಾನ್ಯ ನ್ಯಾಯಾಲಯಕ್ಕೆ ಈ ಮೇಲಿನಂತೆ ಜನನ-ಮರಣ ನೋಂದಣಿ ಕಾಯಿದೆ ಕಲಂ 13(3) ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಈ ವಿಷಯದ ಬಗ್ಗೆ ಯಾರದಾದರೂ ತಕರಾರು ಯಾ ಆಕ್ಷೇಪಣೆಗಳಿದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ **ದಿನಾಂಕ: 20.07.2026ರಂದು ಪೂರ್ವಾಹ್ನ 11.00 ಗಂಟೆ** ಸಮಯಕ್ಕೆ ವೈಯಕ್ತಿಕವಾಗಿ ಯಾ ವಕೀಲರ ಮೂಲಕ ಹಾಜರಾಗತಕ್ಕದ್ದು.

(ನ್ಯಾಯಲಯದ ಆದೇಶದ ಮೇರೆಗೆ)
ಸಹಿ/-ಶಿರಸ್ತೇದಾರರು
ಮಾನ್ಯ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಕಾರ್ಕಳ
ಸಹಿ/- ಜಿ. ಮುರಲೀಧರ್ ಭಟ್
ಅರ್ಜಿದಾರರ ಪರ ವಕೀಲರು

ಕರ್ನಾಟಕ ಸರಕಾರ– ಧಾರ್ಮಿಕ ದತ್ತಿ ಇಲಾಖೆ
ಶ್ರೀ ಅನಂತ ಪದ್ಮನಾಭ ದೇವಸ್ಥಾನ, ಕುಡುಪು ಮಂಗಳೂರು ದ.ಕ.ಜಿಲ್ಲೆ
ದೂರವಾಣಿ : 0824-2262587 / 8088322157

ಕೆಎಪಿಟಿ/ಕೊಟೇಶನ್/6/2026-27 ದಿನಾಂಕ : 02.06.2026

ಕೊಟೇಷನ್ ಪ್ರಕಟಣೆ

ಶ್ರೀ ದೇವಾಲಯಕ್ಕೆ ದಿನಾಂಕ 01.07.2026 ರಿಂದ 30.06.2027 ರ 1 ವರ್ಷದ ಅವಧಿಗೆ ಅಗತ್ಯ ಸಾಮಾಗ್ರಿಗಳಾದ **1] ಪ್ರಸಾದ ಕವರು, 2]ಕಂಪ್ಯೂಟರ್, ಸೇವಾ ರಶೀದಿ, 3] ಕರ್ಪೂರ ಕಟ್ಟಿಗೆ, 4]ಅಡಿಕೆ ಹಾಳೇ ತಟ್ಟೆ, 5] ಕದಳೀ ಬಾಳೇಹಣ್ಣು 6] ಆರತಿ ಬತ್ತಿ 7] ಪ್ಲಾಸ್ಟಿಕ್ ಪೌಚ್ ರೋಲ್‌ಗಳು ಮತ್ತು 8] ಫಿನೈಲ್, ಸೋಪ್ ಆಯಿಲ್ ಬ್ಲೀಚಿಂಗ್ ಪೌಡರ್**ಗಳನ್ನು ಸರಬರಾಜು ಮಾಡುವ ಬಗ್ಗೆ ಅಧಿಕೃತ ಸರಬರಾಜುದಾರರಿಂದ ಷರತ್ತುಗಳಿಗೆ ಒಳಪಟ್ಟು ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಆಸಕ್ತರು ಕೊಟೇಷನ್‌ಗಳನ್ನು **ದಿನಾಂಕ 20.06.2026 ರ ಸಂಜೆ 5.00 ಗಂಟೆ**ಯ ಒಳಗಡೆ ಸಲ್ಲಿಸಬೇಕು. ಕೊಟೇಷನುಗಳನ್ನು **ಅದೇ ದಿನ ಸಂಜೆ 6.00ಕ್ಕೆ ಅಥವಾ ನಂತರ** ನಿಗದಿಗೊಳಿಸಬಹುದಾದ ದಿನಾಂಕದಂದು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ದೇವಾಲಯದ ಕಛೇರಿ ಸಮಯದಲ್ಲಿ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/- ಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನೀಯರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.8/ಪಂ.ರಾ.ಇಂ/ವಿ.ಹಾ/ಪಿ.ಬಿ-1&2/ಟೆಂಡರ/2026-27/1174 ದಿನಾಂಕ : 02-06-2026

ಇ-ಟೆಂಡರ್ ಪ್ರಕಟಣೆ

ದಿನಾಂಕ : 01-06-2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿ ಇಂಡೆಂಟ್ ಸಂಖ್ಯೆ 26562, 23441/CALL-3, 20599/CALL-2, 20614/CALL-2SC, 24666/CALL-2Cat-IIA, 26598/CALL-2,(1ನೇ, 2ನೇ & 3ನೇ ಕರೆ) ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **10-06-2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬಸೈಟ್ http://www.kppp.karnatak.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತರಾಜ ಇಂಜಿನೀಯರಿಂಗ್ ವಿಭಾಗ, ಹಾವೇರಿ

ವಾಸಾಸಂಇ/ಹಾವೇರಿ/ಕೆಎಸ್ಎಂಸಿಎ/130/2026-27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ,
ನಂ.6 ಹೇಮಾವತಿ ಎಡದಂಡೆ ನಾಲಾ ವಿಭಾಗ,
ಕಾವೇರಿ ನೀರಾವರಿ ನಿಗಮ ನಿಯಮಿತ, ಪಾಂಡವಪುರ. ಮಂಡ್ಯ ಜಿಲ್ಲೆ.

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಸಂ:02/2026-27 ದಿನಾಂಕ:02.06.2026. – (ದ್ವಿ ಲಕೋಟೆ ಪದ್ಧತಿ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರ ಪರವಾಗಿ ಹಾಗೂ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆ ಇಲ್ಲಿ ನೋಂದಾಯಿಸಿರುವ 4ನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಿಂದ (ದ್ವಿ ಲಕೋಟೆ ಪದ್ಧತಿಯಲ್ಲಿ) 16.37 ಲಕ್ಷ ಮೊತ್ತದ 1 ಕಾಮಗಾರಿಗೆ KC4 ಅನ್ವಯ ಐಟಂವಾರು (KPPP ಪೋರ್ಟಲ್ ಮೂಲಕ ಮಾತ್ರ) ಅಲ್ಪಾವಧಿ ಟೆಂಡರನ್ನು ಕರೆಯಲಾಗಿದೆ. ಅಂದಾಜು ಮೊತ್ತ , ಮುಂಗಡ ಠೇವಣಿ (ಇ.ಎಂ.ಡಿ) ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು, ಸೂಚನೆಗಳು ಮತ್ತು ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ http://kppp.karnataka.gov.in ಪೋರ್ಟಲ್‌ನಲ್ಲಿ ದಿ:02.06.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ನಂ.06, ಹೇ.ಎ.ದ.ನಾಲಾ.ವಿಭಾಗ, ಕಾ.ನೀ.ನಿ.ನಿ, ಪಾಂಡವಪುರ

ವಾಸಾಸಂಇ/ಒಸನಿ-ಮಂ/ಕೆಎಸ್ಎಂಸಿಎ/168/2025-26

PUBLIC NOTICE

My client **Repco Home Finance Limited**, having its office at Mangalore Branch 2nd Floor, Conark Centre, Kadri Road, Kadri, Mangalore-575003 is intending to finance **MR. MOHAMMAD MUSTHAF**, aged about 39 years, S/o. G Achabba, residing at #1-64/1, Subhas Road, Bada, Uchila, Udupi, Karnataka-574117, for the purchase of the schedule property from **MRS. INDIRA**, aged about 66 years, C/o. Somanatha, residing at 19-10-762/15, Poonam Galleria, Pandeshwar, Near Police Station, Mangalore, Dakshina Kannada, Karnataka- 575001. Hence it is here by cautioned that if any person/s or any bank/financial institution have any valid claim/ objections in respect of the schedule property, the same may be intimated to the undersigned within 7 days from the date of publication of this notice.

SCHEDULE "A" PROPERTY
DESCRIPTION OF THE FROPERTY

All that piece and parcel of Non-agricultural immovable property held on warg right situated at Attavar Village, falling within 19th Cantonment ward of Mangalore Taluk and within the registration jurisdiction of the office of the Sub-Registrar, Mangalore City, Dakshina Kannada District, Karnataka State, comprised in:

Item No.	R.S No.	T.S No.	Kissam	Extent (A-C)	Portion
1.	341	216/1	Converted	0-06.48	Whole Sub-Division
2.	341	216/2	Converted	0-01.74	Whole Sub-Division
3.	341	216/4	Converted	0-13.00	Whole Sub-Division
4.	342-1	217/1A1 Old 217/1A)	Converted	0-06.00	Whole Sub-Division
5.	341	216/3	Converted	0-07.00	Northern
			Total	0-34.22	

COMMON BOUNDARIES: North: Survey Line and T.S. No 216/1A5, **South:** Survey Line and T.S. No 216/5 and 217/1A, **East:** Road, **West:** Road.

What is conveyed with the Schedule "B" apartment is 2.65% of undivided right in the Schedule "A" property.

SCHEDULE "B" (DESCRIPTION OF THE APARTMENT)

All that Residential Apartment No. 203, Block 'A', bearing D. No. 19-10- 762/15, having super built-up area of 1000 sq. ft. (92.90 sq. mtrs.), situated on the Second Floor of the multi-storied residential apartment building known as **"POONAM GALLERIA"**, opposite to Forum Fiza Mall, Pandeshwar, Mangaluru, constructed in the Schedule "A" property, together with the proportionate undivided right, title and interest in the common areas, common amenities and common facilities of the said apartment building, and along with 2.65% (two point six five per cent) undivided right, title and interest in the Schedule "A" property.
(Property ID No: 19_DN8020HG_2_5-3/1)

Place: Mangalore
Date: 03-06-2026

Sd/-, Sahana R.K., Advocate and Notary, 1st Floor, "Vijayashree Chambers", Karangalpady, Mangalore-03. Mob.: 9880031618

ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ, ಕೊಡಗು ಜಿಲ್ಲೆ
ಸಿ.ಆರ್.ಎಂ.ಸಿ. ನಂ.: 139/2026

ಅರ್ಜಿದಾರರು:
ಶ್ರೀಮತಿ ಲಲಿತ .ಕೆ.ಎಲ್
ವಿರುದ್ಧ
ಎದುರುದಾರರು:
ತಹಶೀಲ್ದಾರರು ಮಡಿಕೇರಿ ಮತ್ತು ಇತರರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಮೇಲಿನ ಕೇಸಿನ ಅರ್ಜಿದಾರರ ಮಾವ ದಿವಂಗತ **ಕೆ.ಎಸ್. ರಾಮಯ್ಯ** ಇವರು **ದಿನಾಂಕ 01/01/1975** ರಂದು 1ನೇ ಮೊಣ್ಣಂಗೇರಿ ಗ್ರಾಮ, ಗಾಳಿಬೀಡು ಅಂಚೆ ಮಡಿಕೇರಿ ತಾಲೂಕು ಕೊಡಗು ಜಿಲ್ಲೆಯ ನಿವಾಸದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ **ದಿನಾಂಕ:23-06-2026 ರಂದು ಬೆಳಿಗ್ಗೆ 11.00 ಗಂಟೆಗೆ** ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಡಿಕೇರಿ, ಕೊಡಗು ಜಿಲ್ಲೆ
ಸಹಿ/- ಭಾನುಪ್ರಕಾಶ ಪಿ.ಟಿ.
ಅರ್ಜಿದಾರರ ಪರ ವಕೀಲರು
ಮಡಿಕೇರಿ
30-05-2026

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ
ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್,
ರೇಷ್ಮೆ ಇಲಾಖೆ, ಅಲ್-ಅಮೀನ ಮೆಡಿಕಲ್ ಕಾಲೇಜ ಹತ್ತಿರ
ತೊರವಿ ರಸ್ತೆ, ವಿಜಯಪುರ. ದೂರವಾಣಿ ಸಂ:08352-200066,
ಇ-ಮೇಲ್:ddsbjp.sericulture@gmail.com

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ಜಿಲ್ಲೆಯ ರೇಷ್ಮೆ ಇಲಾಖೆಯ 03 ತಾಲ್ಲೂಕಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ವಾಹನ ಚಾಲಕ ಸಮೇತ ಬಾಡಿಗೆ ಆಧಾರದ ವಾಹನವನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಸಲ್ಲಿಸಲು ದಿನಾಂಕಗಳ ವಿವರ ಈ ಕೆಳಗಿನಂತಿದೆ.

1) **ಟೆಂಡರ ವಿವರ:** ರೇಷ್ಮೆ ಇಲಾಖೆಯ 03 ತಾಲ್ಲೂಕುಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ವಾಹನ ಚಾಲಕ ಸಮೇತ ಬಾಡಿಗೆ ಆಧಾರದ ವಾಹನವನ್ನು ಟೆಂಡರ್ ಪ್ರಕಟಣೆ 2) **ಟೆಂಡರ್ ಸಂಖ್ಯೆ** SD/2026-27/SE0309 ದಿನಾಂಕ:- 02.06.2026 3) ಇ-ಪೋರ್ಟಲನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ:- 02.06.2026.** 4) **ಕಛೇರಿ ವಿಳಾಸ:-** ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್ ವಿಜಯಪುರ, ರೇಷ್ಮೆ ಇಲಾಖೆ ಅಲ್-ಅಮೀನ ಮೆಡಿಕಲ್ ಕಾಲೇಜ ಹತ್ತಿರ ತೊರವಿ ರಸ್ತೆ ವಿಜಯಪುರ-586108 5) ಟೆಂಡರ್ ಡೌನ್‌ಲೋಡ್ ಮಾಡಲು ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ & ಸಮಯ 17.06.2026 ಸಂಜೆ 17.00 ಗಂಟೆ** 6) ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಮೊತ್ತ : ಟೆಂಡರ್ ಡಾಕ್ಯೂಮೆಂಟನಲ್ಲಿ ತಿಳಿಸಿರುವಂತೆ 7) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ & ಸಮಯ:-19.06.2026 ಬೆ:- 11.00 ಗಂಟೆಗೆ** 8) ಆರ್ಥಿಕ ಬಿಡ್ ತೆರೆಯುವ **ದಿನಾಂಕ:- 20.06.2026 ಬೆ: 11.30** ಗಂಟೆಗೆ (ತಾತ್ಕಾಲಿಕ ವೇಳಾಪಟ್ಟಿ ಬದಲಾವಣೆಗೆ ಒಳಪಟ್ಟಿದೆ). ಆಸಕ್ತರು " ಇ-ಪೋರ್ಟಲ್" ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/- ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ, ವಿಜಯಪುರ

ವಾಸಾಸಂಇ/ವಿಜಯಪುರ/126/ಕೆಎಸ್ಎಂಸಿಎ/2026-27

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ, ಆಡಳಿತ ಕಚೇರಿ: ಮೂಡುಶೆಡ್ಡೆ, ಮಂಗಳೂರು-575028,
ದೂರವಾಣಿ: 0824-2263565 ವೆಬ್‌ಸೈಟ್: https://pilikula.karnataka.gov.in

ಸಂಖ್ಯೆ: ಪಿಡಿಎ.(1)ಸಿಆರ್.21/PDA -Tender/ 2025-26 ದಿನಾಂಕ: 01.06.2026

ಟೆಂಡರ್ ಪ್ರಕಟಣೆ

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಈ ಕೆಳಗಿನಂತೆ ಕಾಮಗಾರಿಗಳ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ (excluding GST)	ಟೆಂಡರ್ ಶುಲ್ಕ (ರೂ.)	ಇಎಂಡಿ ಮೊತ್ತ (ರೂ.)
1	Re-construction of collapsed boundary wall near Pargola & Stall No.3 and construction of new water pond in Sambar Deer, Tiger enclosure etc. in Biological Park.	3.98	1,770.00	10,000.00
2	Replacing old PVC roof sheet of White Bellied Sea Eagle, Tree Duck, Silver Pheasant, Golden Pheasant enclosures in Biological Park.	3.89	1,770.00	9,800.00
3	Providing and fixing AC compressor at Pilikula Planetarium.	1.48	885.00	3,700.00

ಟೆಂಡರ್ ದಾಖಲೆ ನೀಡುವ ದಿನಾಂಕ: 08.06.2026 10.00 A.M. ರಿಂದ 16.06.2026 ಸಂಜೆ 3.30 ಗಂಟೆಯವರೆಗೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 16.06.2026 ಸಂಜೆ 5.00 ಗಂಟೆಯವರೆಗೆ, ಪೂರ್ಣಗೊಳಿಸುವ ಅವಧಿ: 1 month: ಅರ್ಹತೆ: PWD Class IV and above Civil contractors, ಹೆಚ್ಚಿನ ವಿವರಗಳಿಗಾಗಿ ಮೇಲಿನ ದೂರವಾಣಿ ಮೂಲಕ ಪಡೆಯಬಹುದು.

ಸಹಿ/-, ಆಯುಕ್ತರು

DIPR/DK/KSMCA/312/26-27 dt.03.06.2026

ಕರ್ಣಾಟಕ ಬ್ಯಾಂಕ್ ಲಿಮಿಟೆಡ್

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

(ನೋಂದಾಯಿತ ಮತ್ತು ಪ್ರಧಾನ ಕಚೇರಿ: ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು-575 002)
ಕಂಪನಿ ಗುರುತು ಸಂಖ್ಯೆ : L85110KA1924PLC001128 ಇ-ಮೇಲ್ : investor.grievance@ktk.bank.in
ಕಂಪನಿ ಜಾಲತಾಣ : https://karnatakabank.bank.in ಫೋನ್ ನಂ. : 0824-2228222

ನೋಟೀಸು (ಬ್ಯಾಂಕಿನ ಷೇರುದಾರರ ಗಮನಕ್ಕಾಗಿ)

ಈ ಮೂಲಕ ಬ್ಯಾಂಕಿನ ಷೇರುದಾರರಿಗೆ ತಿಳಿಯಪಡಿಸುವುದೇನೆಂದರೆ, ಕಂಪನಿ ಕಾಯ್ದೆ 2013ರ ಸೆಕ್ಷನ್ 124(6) ಮತ್ತು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ ನಿಯಮಗಳು, 2016ರ (IEPF Rules) ನಿಬಂಧನೆಗಳಿಗೆ ಅನುಗುಣವಾಗಿ ಸತತ ಏಳು ವರ್ಷದ ಅವಧಿಗೆ ಪಾವತಿಯಾಗದೆ ಉಳಿದಿರುವ ಲಾಭಾಂಶವನ್ನು, ಸಂಬಂಧಪಟ್ಟ ಷೇರುಗಳೊಂದಿಗೆ, IEPFಗೆ ವರ್ಗಾವಣೆ ಮಾಡುವುದು ಕಡ್ಡಾಯವಾಗಿರುತ್ತದೆ.

ಈ ವಿಷಯದ ಕುರಿತಾಗಿ, ಹಣಕಾಸು ವರ್ಷ 2025-26ರಲ್ಲಿ IEPFಗೆ ವರ್ಗಾಯಿಸಲಾಗುವ ಡಿವಿಡೆಂಡ್ ಮತ್ತು ಷೇರುಗಳ ಬಗೆಗಿನ ಮಾಹಿತಿಯನ್ನು ಸಂಬಂಧಪಟ್ಟ ಷೇರುದಾರರಿಗೆ ದಿನಾಂಕ 30.05.2026 ಪತ್ರದ ಮೂಲಕ ತಿಳಿಸಲಾಗಿದೆ. ಅದಲ್ಲದೆ ಇದಕ್ಕೆ ಸಂಬಂಧಪಟ್ಟ ಷೇರುದಾರರ ಮಾಹಿತಿಯನ್ನು ಬ್ಯಾಂಕಿನ ಜಾಲತಾಣ https://www.karnatakabank.bank.in/dividend-refund-search ನಲ್ಲಿ ಕೂಡ ಪ್ರಕಟಿಸಲಾಗಿದೆ. ಈ ವಿವರಗಳನ್ನು ಷೇರುದಾರರು ಪರಿಶೀಲಿಸಿ, ಪಾವತಿಯಾಗದೆ ಉಳಿದಿರುವ ಲಾಭಾಂಶವನ್ನು 31.07.2026 ರ ಮುಂಚಿತವಾಗಿ ಪಡೆಯಬೇಕಾಗಿ ಈ ಮೂಲಕ ಕೋರುತ್ತೇವೆ.

ಈ ಮೇಲೆ ಉಲ್ಲೇಖಿಸಿದ ಷೇರುಗಳು ಭೌತಿಕ ರೂಪದಲ್ಲಿದ್ದರೆ, IEPF ನಿಯಮಗಳ ಪ್ರಕಾರ ಅಂತಹ ಷೇರುಗಳಿಗೆ, ಷೇರು ಪ್ರಮಾಣಪತ್ರಗಳನ್ನು ನೀಡಿ, ಆ ಷೇರುಗಳನ್ನು ವಿದ್ಯುನ್ಮಾನದ ರೂಪದಲ್ಲಿ (Demat) IEPFಗೆ ವರ್ಗಾವಣೆ ಮಾಡಲಾಗುತ್ತದೆ. ಆನಂತರದಲ್ಲಿ, ಅಂತಹ ಷೇರುಗಳ ಮೂಲ ಷೇರು ಪ್ರಮಾಣಪತ್ರಗಳನ್ನು ಅಮಾನ್ಯವೆಂದು ಪರಿಗಣಿಸಲಾಗುತ್ತದೆ. ಅದಲ್ಲದೆ, ಷೇರುಗಳನ್ನು IEPFಗೆ ವರ್ಗಾವಣೆ ಮಾಡುವ ಸಲುವಾಗಿ ಷೇರು ಪ್ರಮಾಣ ಪತ್ರಗಳ ನೀಡಿಕೆಗೆ ಸಂಬಂಧಿಸಿದಂತೆ, ಬ್ಯಾಂಕ್ ತನ್ನ ಜಾಲತಾಣದಲ್ಲಿ ಕೊಡಮಾಡಿರುವ ವಿವರಗಳು ಈ ವಿಷಯದ ಕುರಿತಾದ ಪೂರ್ಣಪ್ರಮಾಣದ ನೋಟಿಸು ಎಂದು ಪರಿಗಣಿಸಲಾಗುತ್ತದೆ.

ಈ ಸಂಬಂಧ ಡಿವಿಡೆಂಡ್ ಪಾವತಿಯನ್ನು ಕೋರಿ ಷೇರುದಾರರು ಸಲ್ಲಿಸುವ ಯಾವುದೇ ಮನವಿಯು (ಸೂಕ್ತ ದಾಖಲೆಗಳೊಂದಿಗೆ) 31.07.2026 ರ ಒಳಗಾಗಿ ಬ್ಯಾಂಕಿಗೆ/ ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣಾ ಏಜೆಂಟ್ (RTA) ತಲುಪದೇ ಇದ್ದ ಪಕ್ಷದಲ್ಲಿ ಈ ಪ್ರಕಟಣೆಯನ್ನೇ ಅಂತಿಮ ನೋಟೀಸು ಎಂಬುದಾಗಿ ಪರಿಗಣಿಸಿ ಅಂತಹ ಡಿವಿಡೆಂಡ್ ಮತ್ತು ಷೇರುಗಳನ್ನು ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ IEPFಗೆ ವರ್ಗಾಯಿಸಲಾಗುತ್ತದೆ.

ಈ ರೀತಿ IEPFಗೆ ವರ್ಗಾವಣೆಯಾದ ಡಿವಿಡೆಂಡ್ ಮತ್ತು ಷೇರುಗಳನ್ನು ಹಿಂಪಡೆಯಲು IEPF ನಿಯಮಗಳ ಪ್ರಕಾರ ಷೇರುದಾರರು IEPF-5 ಅರ್ಜಿಯನ್ನು MCA ಪೋರ್ಟಲ್‌ನಲ್ಲಿ https://www.mca.gov.in/ ಸಲ್ಲಿಸಬಹುದು. ವಿವರಗಳಿಗಾಗಿ https://www.iepf.gov.in/ ಜಾಲತಾಣವನ್ನು ಸಂಪರ್ಕಿಸಬಹುದು.

ಡಿವಿಡೆಂಡ್ ಪಾವತಿಗಾಗಿ ಅಥವಾ ಹೆಚ್ಚಿನ ಮಾಹಿತಿಗಾಗಿ ಶೇರುದಾರರು ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣಾ ಏಜೆಂಟ್-ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್- ನಂಬರ್-30, ರಮಣ ರೆಸಿಡೆನ್ಸಿ, ನಾಲ್ಕನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003 ಇವರನ್ನು ಸಂಪರ್ಕಿಸಬಹುದು. (ದೂ. ಸಂಖ್ಯೆ: 080-23460815-18, ಇ-ಮೇಲ್: irg@integratedindia.in.)

ದಿನಾಂಕ: 03.06.2026
ಸ್ಥಳ : ಮಂಗಳೂರು

ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ನ ಪರವಾಗಿ
ಶಾಮ್ ಕೆ.
ಕಂಪನಿ ಕಾರ್ಯದರ್ಶಿ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ, ಇಲಾಖೆ ಶಿರಸಿ ವಿಭಾಗ ಶಿರಸಿ

ಕ್ರಸಂ: ಪಿಬಿ/KRDCL/ಅಧಿಸೂಚನೆ: 2026-27/00666 ದಿನಾಂಕ: 27.05.2026

ಇ-ಟೆಂಡರ್ ಅಧಿಸೂಚನೆ IFT-KW-4
ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ-ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ-ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. (ಒಟ್ಟು 2 ಕಾಮಗಾರಿ)

1. ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 03-06-2026 (16.00 ಗಂಟೆವರೆಗೆ) 2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 04-06-2026 (16.00 ಗಂಟೆವರೆಗೆ) 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05-06-2026 (16.30 ಗಂಟೆಗೆ) 4. ಆರ್ಥಿಕ ಬಿಡ್ ತೆರೆಯುವ ದಿನಾಂಕ: 06-06-2026 (16.00 ಗಂಟೆಗೆ)

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಶಿರಸಿ(ಉತ್ತರ ಕನ್ನಡ ಜಿಲ್ಲೆ)

DIPR/KWR/KSMCA/174/26-27 dt. 01.06.2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268
E.Mail : eepwdgad@gmail.com

ನಂ:ಕಾನಿಇಂಗಃಲೋಇ:ಪಿಬಿ- 1,4:ವಿವಿಧ: 2026-27/753
ದಿನಾಂಕ : 02-06-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **872.00** ಲಕ್ಷ ಮೊತ್ತದಲ್ಲಿ ಒಟ್ಟು 08 ಕಾಮಗಾರಿಗೆ (ಕನಿಷ್ಠ ಮೊತ್ತ ರೂ: **2.00** ಲಕ್ಷ ಹಾಗೂ ಗರಿಷ್ಠ ಮೊತ್ತ ರೂ: **200.00** ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ-1, 3, ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 : 35978, 36031, 35880, 33032/call-2, 32763-SC/call-2, 32773-SC/call-2, 32784 Category-2A/call-2

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **08-06-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **10-06-2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **11-06-2026.** ಆರ್ಥಿಕ ಬಿಡ್ ತೆರೆಯುವ ದಿನಾಂಕ : **12-06-2026.**

Work Indent No : Part-2 : 36229

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **20-06-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **22-06-2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್/ಆರ್ಥಿಕ ಬಿಡ್ ತೆರೆಯುವ ದಿನಾಂಕ : **23-06-2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್ಎಂಸಿಎ/98/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-55) ಡ್ರಾ ಜೂನ್ 3ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DF 494191 (MOOVATTUPUZHA)

Consolation Prize Rs.5,000/-
DA 494191 DB 494191 DC 494191 DD 494191
DE 494191 DG 494191 DH 494191 DJ 494191
DK 494191 DL 494191 DM 494191

2nd Prize Rs.30,00,000/- [30 Lakhs]
DE 592758 (PATHANAMTHITTA)

3rd Prize Rs.5,00,000/- [5 Lakhs]
DB 703913 (PALAKKAD)

FOR THE TICKETS ENDING WITH THE FOLLOWING NUMBERS

4th Prize Rs.5,000/-
0800 1233 2022 3053 3113 3871 4117 4233 4309 4449
4575 5128 5580 5736 7933 8038 9816 9887 9963

5th Prize Rs.2,000/-
1090 1986 2183 4190 8369 8819

6th Prize Rs.1,000/-
0648 1077 1829 1857 2075 2342 2653 2702 3940 4508
4690 4879 5268 6156 6525 6701 6785 7125 7238 7308
8234 8899 9024 9383 9909

7th Prize Rs.500/-
0045 0102 0120 0235 0295 0350 0442 0578 0625 0740
0805 0827 1153 1163 1210 1442 1609 1628 1750 1805
1951 2242 2597 2610 2777 2837 3019 3071 3135 3234
3505 3597 3727 3777 3865 3972 3990 4094 4109 4234
4372 4424 4597 4657 5120 5266 5850 5868 5954 5996
6131 6392 6458 6573 6663 6808 6874 6923 6926 7068
7070 7124 7429 7773 8146 8177 8250 8519 8806 9062
9180 9203 9279 9771 9895 9942

8th Prize Rs.200/-
0197 0203 0332 0700 0811 0923 0985 1022 1070 1199
1371 1463 1716 1763 2163 2383 2466 2918 3127 3224
3252 3369 3476 3568 3606 3615 3700 3718 3879 3945
3953 3971 4074 4077 4223 4264 4493 4603 4609 4659
4810 4820 4841 4923 4929 4960 5050 5100 5242 5445
5516 5557 5614 5643 5775 5777 6025 6269 6326 6549
6582 6627 6659 6686 6756 6853 6887 7121 7287 7731
7823 7873 7960 7977 8011 8092 8120 8557 8598 8634
8661 8683 8687 8706 8929 8959 9085 9235 9257 9374
9604 9680 9807 9817 9901 9961

9th Prize Rs.100/-
0383 0609 0659 0796 0833 0849 0941 1059 1128 1176
1261 1372 1416 1471 1611 1615 1662 1855 1892 1913
2044 2186 2270 2303 2414 2511 2516 2553 2567 2579
2651 2762 2858 2873 2933 2969 2982 3035 3090 3124
3203 3205 3215 3284 3292 3331 3341 3417 3578 3747
3816 3874 3924 3995 4096 4104 4288 4330 4388 4389
4470 4513 4516 4595 4747 4903 5137 5236 5290 5337
5456 5473 5636 5660 5753 5859 5884 5925 6236 6351
6425 6508 6564 6617 6676 6705 6737 6738 6846 6855
6904 6994 6999 7000 7081 7085 7352 7381 7425 7512
7581 7623 7714 7770 7889 7894 8091 8152 8204 8292
8305 8522 8670 8740 8773 8864 8951 8977 9044 9081
9106 9255 9265 9272 9318 9322 9518 9528 9572 9619
9641 9822 9848 9885 9891 9897 9916 9975

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ-1&2/ಇ-ಟೆಂಡರ್ ಪ್ರಕಟಣೆ/2026-27/528 ದಿನಾಂಕ:03-06-2026

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-2,3 & 4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025-26ನೇ ಸಾಲಿನ ಕೆ.ಕೆ.ಆರ.ಡಿ.ಬಿ ಅಡಿಯಲ್ಲಿ ಯಾದಗಿರಿ ತಾಲೂಕಿನ (1)36181, ಶಹಾಪುರ ತಾಲೂಕಿನ (1) 35311/2ನೇ ಕರೆ ಹಾಗೂ ಸುರಪುರ ತಾಲೂಕಿನ (1)35967, ಒಟ್ಟು 3 (ಮೂರು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. 2) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.50.00 ಲಕ್ಷಗಳು ಹಾಗೂ ಗರಿಷ್ಠ ರೂ:500.00 ಲಕ್ಷಗಳು 3) **ಗುತ್ತಿಗೆದಾರರ ಅರ್ಹತೆ ವಿವರ:**ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು 4) **ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ. 5) **ಪ್ರೀ ಬಿಡ್ ಮೀಟಿಂಗ್ ದಿನಾಂಕ:** 06.06.2026 (11.30 ಗಂಟೆ ನಂತರ)(ಕೆಡಬ್ಲ್ಯೂ-4ರ ಕಾಮಗಾರಿಗಳಿಗೆ ಮಾತ್ರ) 6) **ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 09.06.2026 (17.30 ಗಂಟೆವರೆಗೆ) 7) **ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 12.06.2026 (16.00 ಗಂಟೆವರೆಗೆ) 8) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 15.06.2026 (11.30 ಗಂಟೆ ನಂತರ) 9) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 17.06.2026 (11.30 ಗಂಟೆ ನಂತರ) 10) **ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) **ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/98/ಕೆ.ಎಸ್.ಎಂ.ಸಿ.&ಎ/2026-27

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ : ಉನಸ:ಬಿ2:ಸಿಆರ್:2026-27 ದಿನಾಂಕ: 03.06.2026

ಟೆಂಡರು ಪ್ರಕಟಣೆ

2026-27ನೇ ಸಾಲಿನ ನಗರಸಭಾ ನಿಧಿಯಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ನಿಗದಿತ ನಮೂನೆಯಲ್ಲಿ ಪ್ರತ್ಯೇಕ ಮೊಹರಾದ ಐಟಂವಾರು ಟೆಂಡರನ್ನು ನಗರಸಭೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದ್ದು, ದಿನಾಂಕ: 17.06.2026ರಂದು ಸಂಜೆ 4.00 ಗಂಟೆಯವರೆಗೆ ಅರ್ಜಿ ಸಲ್ಲಿಸುವುದು. ದಿನಾಂಕ 18.06.2026ರಂದು ಸಂಜೆ 4.00 ಗಂಟೆವರೆಗೆ ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಹೊಂದಿದವರು ಟೆಂಡರನ್ನು ಸ್ವೀಕರಿಸಲಿರುವರು. ಬಂದಿರುವ ಟೆಂಡರನ್ನು ದಿನಾಂಕ: 19.06.2026ರಂದು ರಂದು ಸಂಜೆ 5.00 ಗಂಟೆಗೆ ಸರಿಯಾಗಿ ಅಥವಾ ಸೂಕ್ತ ದಿನದಂದು ಹಾಜರಿರುವ ಟೆಂಡರುದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಪಡೆದುಕೊಳ್ಳಬಹುದು.

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಇ.ಎಂ.ಡಿ.
1	ಅಜ್ಜರಕಾಡು ವಾರ್ಡಿನ ಬ್ರಹ್ಮಗಿರಿ ರಸ್ತೆಯಲ್ಲಿ ಮಳೆನೀರು ಸರಾಗವಾಗಿ ಹರಿಯಲು ಪಾದಚಾರಿ ಮಾರ್ಗದ ಕಾಂಕ್ರೀಟ್ ಕಟ್ಟಿಂಗ್ ಹಾಗೂ ಆಯ್ದ ಭಾಗದಲ್ಲಿ ಕಾಂಕ್ರೀಟ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ ಮತ್ತು ಕೊಡಂಕೂರು ವಾರ್ಡಿನ ರಾಜೀವನಗರ ಆಟೋರಿಕ್ಷಾ ನಿಲ್ದಾಣ ಬಳಿ ಕಾಂಕ್ರೀಟ್ ಚರಂಡಿ ರಚನೆ.	200000.00	5000.00
2	ಬಡಗುಬೆಟ್ಟು ವಾರ್ಡಿನ ಜಯಂತಿರವರ ಮನೆಯ ಹತ್ತಿರ ರಸ್ತೆ ಕಾಂಕ್ರೀಟೀಕರಣ ಹಾಗೂ ಕಾಂಕ್ರೀಟ್ ಚರಂಡಿ ರಚನೆ	495000.00	12375.00
3	ಪರ್ಕಳ ವಾರ್ಡಿನ ಸುರೇಶ್ ಕುಲಾಲ್ ಮನೆಯ ಎದುರು ರಸ್ತೆ ಕಾಂಕ್ರೀಟೀಕರಣ	495000.00	12375.00
4	ನಿಟ್ಟೂರು ವಾರ್ಡಿನ ಗರಡಿ ಹತ್ತಿರ ಉದಯ ಶೆಟ್ಟಿ ಮನೆ ಬಳಿ ರಸ್ತೆ ಅಭಿವೃದ್ಧಿ	500000.00	12500.00

1) ಟೆಂಡರು ನಮೂನೆ ಬೆಲೆ - ರೂ. 590.00 (ಜಿ.ಎಸ್.ಟಿ. ಸೇರಿ). 2) ಯಾವುದೇ ಟೆಂಡರನ್ನು ಯಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಕಾದಿರಿಸಲಾಗಿದೆ. 3) ಇ.ಎಂ.ಡಿ.ಯನ್ನು ಫಿಕ್ಸೆಡ್ ಡೆಪಾಸಿಟ್ ರಿಸಿಪ್ಟ್(FDR) ರೂಪದಲ್ಲಿ ಇರಿಸತಕ್ಕದ್ದು. ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇರಿಸದ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಪೌರಾಯುಕ್ತರು
ಉಡುಪಿ ನಗರಸಭೆ

ಕಿರುಸುದ್ದಿ

ಜೂ.8: ಕೇರಳ ಸ್ಟೇಟ್ ಪ್ರೈವೇಟ್ ಬಸ್ ಆಪರೇಟರ್ ಫೆಡರೇಶನ್ ನೇತೃತ್ವದಲ್ಲಿ ಮುಷ್ಕರ

ಕಾಸರಗೋಡು: ಸಾರ್ವಜನಿಕ ಸಾರಿಗೆ ವಲಯದಲ್ಲಿ ಸೇವೆ ನಡೆಸುವ ಖಾಸಗಿ ಬಸ್‌ಗಳಿಗೆ ಆವಶ್ಯಕವಾದ ಡೀಸೆಲ್‌ಗೆ ತೆರಿಗೆ ರಿಯಾಯಿತಿ ನೀಡಬೇಕು, ರಸ್ತೆ ತೆರಿಗೆಯನ್ನು ಸಂಪೂರ್ಣವಾಗಿ ಹೊರತುಪಡಿಸಿ ಖಾಸಗಿ ಬಸ್ ಉದ್ಯಮವನ್ನು ಸಂರಕ್ಷಿಸಬೇಕು, ಅನಿಯಂತ್ರಿತವಾದ ಡೀಸೆಲ್ ಬೆಲೆಯೇರಿಕೆಯನ್ನು ತಡೆಗಟ್ಟಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿರಿಸಿ ಕೇರಳ ಸ್ಟೇಟ್ ಪ್ರೈವೇಟ್ ಬಸ್ ಆಪರೇಟರ್ಸ್‌ಫೆಡರೇಶನ್‌ನ ನೇತೃತ್ವದಲ್ಲಿ ಕೇರಳ ರಾಜ್ಯದ ಎಲ್ಲಾ ಜಿಲ್ಲೆಗಳ ಕೇಂದ್ರ ಸರಕಾರಿ ಕಚೇರಿಗಳ ಮುಂಭಾಗದಲ್ಲಿ ಖಾಸಗಿ ಬಸ್ ಮಾಲಕರು ಜೂ.8ರಂದು ಬೃಹತ್ ಪ್ರತಿಭಟನಾ ಧರಣಿ ನಡೆಸಲಿದ್ದಾರೆ. ಅದರಂತೆ ಅಂದು ಬೆಳಗ್ಗೆ 10 ಗಂಟೆಗೆ ಕಾಸರಗೋಡು ಪ್ರಧಾನ ಅಂಚೆ ಕಚೇರಿ ಮುಂಭಾಗದಲ್ಲಿ ಪ್ರತಿಭಟನಾ ಧರಣಿಯನ್ನು ಆಯೋಜಿಸಲಾಗಿದೆ ಎಂದು ಫೆಡರೇಶನ್‌ನ ಕಾಸರಗೋಡು ಜಿಲ್ಲಾ ಪದಾಧಿಕಾರಿಗಳು ಬುಧವಾರ ಪ್ರೆಸ್ ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೇರಳ ಸರಕಾರದ ಅವೈಜ್ಞಾನಿಕವಾದ ಸಾರಿಗೆ ನೀತಿಯಿಂದಾಗಿ ರಾಜ್ಯದಲ್ಲಿ ಖಾಸಗಿ ಬಸ್‌ಗಳ ಸಂಖ್ಯೆ 8000ಕ್ಕೆ ಇಳಿದಿದೆ. ಅಲ್ಲದೆ ಈಗ ಇರುವ ಖಾಸಗಿ ಬಸ್‌ಗಳನ್ನು ಮುಂದಕ್ಕೆ ಕೊಂಡೊಯ್ಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ರಾಜ್ಯ ಸರಕಾರ ಇದನ್ನು ಉದ್ಯಮವಾಗಿ ಘೋಷಿಸಬೇಕು. ಬಸ್‌ಗಳಿಗೆ ಸಂಬಂಧಿಸಿದ ಬಿಡಿಭಾಗಗಳ ಬೆಲೆಯು ದಿನೇ ದಿನೇ ಹೆಚ್ಚುತ್ತಿದೆ. ಮತ್ತೊಂದೆಡೆ ಡಿಸೇಲ್ ಬೆಲೆಯು ವಿಪರೀತವಾಗಿ ಏರುತ್ತಿದೆ. ಇದರಿಂದ ವಿದ್ಯಾರ್ಥಿಗಳ ಬಸ್ ದರವನ್ನು 5 ರೂ.ಗೆ ಏರಿಸಬೇಕು ಎಂದು ಪದಾಧಿಕಾರಿಗಳು ರಾಜ್ಯ ಸರಕಾರವನ್ನು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಕೆ.ಗಿರೀಶ್, ಟಿ.ಲಕ್ಷ್ಮಣನ್, ಸಿ.ಎ.ಮುಹಮ್ಮದ್ ಕುಂಞಿ, ಪಿ.ಎ.ಮುಹಮ್ಮದ್ ಕುಂಞಿ ಉಪಸ್ಥಿತರಿದ್ದರು.

ಬಾವಿಗೆ ಬಿದ್ದ ದಂಪತಿಯ ರಕ್ಷಣೆ

ಉಡುಪಿ: ಆಕಸ್ಮಿಕವಾಗಿ ಬಾವಿಗೆ ಬಿದ್ದ ದಂಪತಿಯನ್ನು ರಕ್ಷಿಸಿದ ಘಟನೆ ಬುಧವಾರ ಬೆಳಗ್ಗೆ ಕೆಮ್ಮಣ್ಣು ಸರಕಾರಿ ಪದವಿ ಪೂರ್ವ ಕಾಲೇಜು ಸಮೀಪ ನಡೆದಿದೆ. ಕೆಮ್ಮಣ್ಣು ನಿವಾಸಿ ಗೋಪಾಲಕೃಷ್ಣ(65) ಹಾಗೂ ಶ್ಯಾಮಲಾ (60) ರಕ್ಷಿಸಲ್ಪಟ್ಟ ದಂಪತಿ. ಶ್ಯಾಮಲಾ ಮನೆ ಸಮೀಪದ ಬಾವಿಯ ಬಳಿ ಹೋದಾಗ ಆಕಸ್ಮಿಕವಾಗಿ ಬಾವಿಗೆ ಬಿದ್ದರೆನ್ನಲಾಗಿದೆ. ಇದನ್ನು ಗಮನಿಸಿದ ಅವರ ಪತಿ ಗೋಪಾಲಕೃಷ್ಣ ಪತ್ನಿಯನ್ನು ರಕ್ಷಿಸಲು ಬಾವಿಗೆ ಹಾರಿದರೆಂದು ತಿಳಿದುಬಂದಿದೆ. ಕೂಡಲೇ ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಈಶ್ವರ ಮಲ್ಪೆ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ, ಬಾವಿಗೆ ಬಿದ್ದ ದಂಪತಿಯನ್ನು ಹಗ್ಗದ ನೆರವಿನೊಂದಿಗೆ ಮೇಲಕ್ಕೆತ್ತಿದ್ದಾರೆ. ತೀವ್ರವಾಗಿ ಅಸ್ವಸ್ಥಗೊಂಡ ದಂಪತಿಯನ್ನು ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಮಲ್ಪೆ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದ್ದಾರೆ.

ಬಸ್ ಪ್ರಯಾಣಿಕಳ ಚಿನ್ನ, ನಗದು ಕಳವು

ಪುತ್ತೂರು: ಪುತ್ತೂರಿನಿಂದ ತಂಬುತ್ತಡ್ಕ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ಮಹಿಳೆಯೊಬ್ಬರ ಚಿನ್ನದ ಕರಿಮಣಿ ಸರ ಹಾಗೂ ಬ್ಯಾಗ್‌ನಲ್ಲಿದ್ದ ನಗದು ಕಳವು ಮಾಡಿರುವ ಕುರಿತು ಪೊಲೀಸ್ ದೂರು ನೀಡಲಾಗಿದೆ. ಆರ್ಯಾಪು ಗ್ರಾಮದ ಮಣಿಪದವು ನಿವಾಸಿ ಜಯಮ್ಮ ಎಸ್. ಅವರ 22 ಗ್ರಾಂ. ತೂಕದ ಕರಿಮಣಿ ಸರ ಮತ್ತು ಬ್ಯಾಗ್‌ನಲ್ಲಿದ್ದ ರೂ.5 ಸಾವಿರ ನಗದು ಕಳವಾಗಿದೆ. ಮೇ 30 ರಂದು ಪುತ್ತೂರು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ತಂಬುತ್ತಡ್ಕ ಹೋಗುವ ಬಸ್‌ನಲ್ಲಿ ಪ್ರಯಾಣಿಸಿದ್ದು, ಮಣಿಪದವು ಬಸ್ ನಿಲ್ದಾಣದಲ್ಲಿ ಬಸ್‌ನಿಂದ ಇಳಿದು ನೋಡಿದಾಗ ಕುತ್ತಿಗೆಯಲ್ಲಿದ್ದ 22 ಗ್ರಾಂ. ತೂಕದ ಚಿನ್ನದ ಕರಿಮಣಿ ಸರ ಕಳವಾಗಿತ್ತು. ಜೊತೆಗೆ ಬ್ಯಾಗ್ ಒಳಗೆ ಇಟ್ಟಿದ್ದ ರೂ.5 ಸಾವಿರವೂ ಕಳವಾಗಿತ್ತು ಎಂದು ಅವರು ನೀಡಿದ ದೂರಿನಂತೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಾಡಾನೆಗೆ ಬೆದರಿ ಓಡುವಾಗ ಬಿದ್ದು ವ್ಯಕ್ತಿಗೆ ಗಾಯ

ಮಡಿಕೇರಿ: ರಸ್ತೆ ಮಧ್ಯ ಏಕಾಏಕಿ ಎದುರಾದ ಕಾಡಾನೆಯಿಂದ ರಕ್ಷಿಸಿಕೊಳ್ಳಲು ಓಡುವ ಸಂದರ್ಭ ವ್ಯಕ್ತಿಯೊಬ್ಬರು ಬಿದ್ದು ಗಾಯಗೊಂಡಿರುವ ಘಟನೆ ಸಿದ್ದಾಪುರ ಸಮೀಪದ ಚೆನ್ನಯ್ಯನಕೋಟೆ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ. ಚೆನ್ನಯನಕೋಟೆ ಗ್ರಾಮದ ಖಾಸಗಿ ಶಾಲೆಯ ಸಮೀಪ ವಾಸವಿರುವ ಚಂದ್ರ (49) ಎಂಬವರು ಕೆಲಸದ ನಿಮಿತ್ತ ಪಟ್ಟಣಕ್ಕೆ ಹೋಗಿ ರಾತ್ರಿ ಮನೆಗೆ ಬರುವ ಸಂದರ್ಭ ರಸ್ತೆ ಮಧ್ಯದಲ್ಲಿ ಏಕಾಏಕಿ ಕಾಡಾನೆ ಎದುರಾಗಿದೆ. ಆನೆಯನ್ನು ಕಂಡು ಭಯದಿಂದ ಓಡುವ ಸಂದರ್ಭ ಕಾಲು ಜಾರಿ ಬಿದ್ದ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಈ ಸಂದರ್ಭ ಚಂದ್ರ ಕಿರುಚಿಕೊಂಡಾಗ ಸ್ಥಳೀಯರು ಬಂದು ಅವರನ್ನು ಗೋಣಿಕೊಪ್ಪಲುವಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ದಾಖಲಿಸಿದ್ದಾರೆ. ತಿತಿಮತಿ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಬಹರೈನ್ ರಾಷ್ಟ್ರದಲ್ಲಿರುವ ಕನ್ನಡ ಸಂಘದ ಆಶಾ ಪ್ರಕಾಶ್ ಶೆಟ್ಟಿ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಸತ್ಯನಾರಾಯಣ ಪೂಜಾ ಶುಭ ಕಾರ್ಯದಲ್ಲಿ ಮಂಗಳೂರಿನ ಯುವ ಕಲಾವಿದೆ ಶ್ರೀರಕ್ಷಾ ಎಸ್. ಹೆಚ್. ಪೂಜಾರಿ ಕೋಣಾಜೆ ಭಕ್ತಿ ಭಾವ ನಾದ ಕಾರ್ಯಕ್ರಮದಲ್ಲಿ ವೀಣಾ ವಾದನ ಮತ್ತು ಭಕ್ತಿ ಗಾಯನವನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಕನ್ನಡ ಸಂಘ ಬಹರೇನ್‌ನ ಅಧ್ಯಕ್ಷ ಅಜಿತ್ ಬಂಗೇರ, ಪ್ರಧಾನ ಕಾರ್ಯದರ್ಶಿ ರಾಮ್ ಪ್ರಸಾದ್ ಆಮೆನಡ್ಕ, ಕೋಶಾಧಿಕಾರಿ ಹರಿಣಿ ಉತ್ಕರ್ಷ ಶೆಟ್ಟಿ ಮತ್ತು ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜೂ. 7ರಿಂದ 13ರವರೆಗೆ ಕನ್ಯಾಡಿಯ ಶ್ರೀರಾಮ ಕ್ಷೇತ್ರದಲ್ಲಿ

ಅಖಂಡ ಹರಿನಾಮ ಸಪ್ತಾಹ

ಮಂಗಳೂರು: ಪಂಡರಪುರದ ಶ್ರೀ ಚೈತನ್ಯ ಸದ್ಗುರು ಹರಿಪ್ರಸಾದ ಶರದಸ್ವಾಮಿ ಶಿವೂರಕರ ನೇತೃತ್ವ ಮತ್ತು ಕನ್ಯಾಡಿಯ ಶ್ರೀ ಬ್ರಹ್ಮಾನಂದ ಸರಸ್ವತಿ ಮಹಾರಾಜ್ ಸ್ವಾಮೀಜಿ ಸಾನಿಧ್ಯದಲ್ಲಿ ಶ್ರೀ ಗ್ರಂಥರಾಜ ಜ್ಞಾನೇಶ್ವರಿಯ ಸಾಮುದಾಯಿಕ ಪಾರಾಯಣ ಹಾಗೂ ಅಖಂಡ ಹರಿನಾಮ ಸಪ್ತಾಹ ಜೂ. 7ರಿಂದ 13ರವರೆಗೆ ಧರ್ಮಸ್ಥಳದ ನಿತ್ಯಾನಂದ ನಗರ ಕನ್ಯಾಡಿಯ ಶ್ರೀರಾಮ ಕ್ಷೇತ್ರದಲ್ಲಿ ನಡೆಯಲಿದೆ.

ಜೂ. 7ರಂದು ಬೆಳಗ್ಗೆ 7 ಗಂಟೆಗೆ ಗ್ರಂಥರಾಜ ಜ್ಞಾನೇಶ್ವರೀ ಬಿಡುಗಡೆ ನಡೆಯಲಿದೆ. ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಮಹಾರಾಜ್ ಸ್ವಾಮೀಜಿ ದೀಪ ಪ್ರಜ್ವಲನೆ ಮಾಡುವರು. ಶ್ರೀ ಚೈತನ್ಯ ಸದ್ಗುರು ಹರಿಪ್ರಸಾದ ಶರದಸ್ವಾಮಿ ಶಿವೂರಕರ, ಶ್ರೀ ಚೈತನ್ಯ ಸದ್ಗುರು ಗೋಪಾಳ ಕಾಕಾ ಮಕಾಶೀರ ಭಾಗವಹಿಸುವರು. ಮಾಜಿ ಸಿಎಂ ಡಿ.ವಿ. ಸದಾನಂದ ಗೌಡ, ಆರ್‌ಎಸ್‌ಎಸ್ ಹಿರಿಯರಾದ ಡಾ.ಕಲ್ಲಡ್ಕ ಪ್ರಭಾಕರ ಭಟ್, ಪಿ.ಎಸ್. ಪ್ರಕಾಶ್, ಮಾಜಿ ಸಂಸದ ನಳಿನ್‌ಕುಮಾರ್ ಕಟೀಲು, ಜಿಲ್ಲೆಯ ಸಂಸದರು, ಶಾಸಕರು, ಮಾಜಿ ಸಚಿವರು, ಗಣ್ಯರು ಭಾಗವಹಿಸುವರು ಎಂದು ಶ್ರೀ ಚೈತನ್ಯ ಸದ್ಗುರು ಹರಿಪ್ರಸಾದ ಶರದಸ್ವಾಮಿ ಶಿವೂರಕರ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಂಡರಪುರ ಶ್ರೀ ಚೈತನ್ಯ ಸದ್ಗುರು ಶರದಸ್ವಾಮಿ ಹ. ಶಿವೂರಕರ ಬಹುಉದ್ದೇಶಿತ ಸಂಸ್ಥೆ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 11ರಿಂದ 1 ಗಂಟೆಯವರೆಗೆ ಸಾಮುದಾಯಿಕ ಪಾರಾಯಣ, ಸಂಜೆ 4.30ರಿಂದ 6 ಗಂಟೆಯವರೆಗೆ ಪ್ರವಚನ ಮತ್ತು ನಾಮಜಪ, ರಾತ್ರಿ 7ರಿಂದ 9 ಗಂಟೆಯವರೆಗೆ ಕೀರ್ತನೆ, ರಾತ್ರಿ 11ರಿಂದ 1 ಗಂಟೆಯವರೆಗೆ ಜಾಗರಣೆ ನಡೆಯಲಿದೆ. ಪಂಡರಪುರದ 720 ವರ್ಷಗಳ ಹಳೆಯ ವಾರ್ಖರಿ ಸಂಪ್ರದಾಯವನ್ನು ದಕ್ಷಿಣ ಭಾಗಗಳಿಗೆ ಪರಿಚಯ ಮಾಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ ಎಂದು ಅವರು ಹೇಳಿದರು.

ಪಾರಾಯಣ ಸೇವಾ ಸಮಿತಿಯ ಅಧ್ಯಕ್ಷ ಆರ್.ಟಿ. ಪಾಟೀಲ, ಉಪಾಧ್ಯಕ್ಷ ರಮೇಶ ಪಾ. ಆರಕೇರಿ, ಪಾಪು ಸಿಂಗ್ ರಜಪೂತ್, ಗೋಪಾಲ ರಾವ್, ತೇಜಪ್ಪ ಮಹರಾಜ್, ವಿನೋದ್‌ಕುಮಾರ್ ಕಾಸರಗೋಡು ಉಪಸ್ಥಿತರಿದ್ದರು.

ಪರಂಬೋಕು ತೋಡು ಹೂಳೆತ್ತುವ ವೇಳೆ ಶಾಕ್ | ಆತಂಕದಲ್ಲಿ ಸ್ಥಳೀಯ ನಾಗರಿಕರು

ಎರಡೇ ಅಡಿ ಆಳದಲ್ಲಿ ಗ್ಯಾಸ್ ಪೈಪ್‌ಲೈನ್!

ಕೈಕಂಬ: ಕಂದಾವರ ಗ್ರಾ.ಪಂ.ವ್ಯಾಪ್ತಿಯ ಬೈಲುಪೇಟೆ ಮಸೀದಿ ಬಳಿಯ ಪರಂಬೋಕು ತೋಡಿನ ಹೂಳೆತ್ತುವ ಸಂದರ್ಭದಲ್ಲಿ ಗ್ಯಾಸ್ ಸಾಗಟ ಮಾಡುವ ಪೈಪ್‌ಲೈನ್ ತೋಡಿನಲ್ಲಿ ಕೇವಲ ಎರಡು ಅಡಿಯಷ್ಟು ಆಳದಲ್ಲಿ ಅಳವಡಿಸಿರುವುದು ಪತ್ತೆಯಾಗಿದ್ದು ಸ್ಥಳೀಯರಲ್ಲಿ ಆತಂಕಕ್ಕೆ ಕಾರಣವಾಗಿದೆ. ಮಂಗಳೂರಿನಿಂದ ಹಾಸನದತ್ತ ಹಾದು ಹೋಗಿರುವ ಎಚ್‌ಪಿಸಿಎಲ್‌ನ ಎಲ್‌ಪಿಜಿ ಗ್ಯಾಸ್ ಪೂರೈಕೆಯ ಪೈಪ್‌ಲೈನ್ ತೋಡಿನೊಳಗೆ ಅಪಾಯದ ಮಟ್ಟದಲ್ಲಿರುವುದು ಬೆಳಕಿಗೆ ಬಂದಿದ್ದು, ಅಪಾಯಕಾರಿಯಾಗಿರುವ ಗ್ಯಾಸ್ ಪೈಪ್‌ಲೈನ್ ಭೂಮಿಯ ಆಳದಲ್ಲಿ ಅಳವಡಿಸದೆ ಕೇವಲ ಎರಡು ಅಡಿ ಆಳದಲ್ಲಿ ಹಾಕಿದ್ದು ಇದರಿಂದ ಅಪಾಯ ತಪ್ಪಿದ್ದಲ್ಲ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಬೈಲುಪೇಟೆ ಮಸೀದಿಯ ಪಕ್ಕದಿಂದ ಫಲ್ಗುಣಿ ನದಿ ಸೇರುವ ಬೃಹತ್ ಪರಂಬೋಕು ತೋಡಿನಲ್ಲಿ ಈ ಬಾರಿ ಭಾರೀ ಪ್ರಮಾಣದಲ್ಲಿ ಹೂಳು ತುಂಬಿದ್ದು, ಏತಮೊಗರು ದೊಡ್ಡಮನೆ ಹರೀಶ್ ಶೆಟ್ಟಿ ಎಂಬವರು ಸ್ವಯಂಪ್ರೇರಿತರಾಗಿ ಸ್ವಂತ ಖರ್ಚಿನಿಂದ ಜೆಸಿಬಿ ಮೂಲಕ ಹೂಳೆತ್ತುವ ಕಾರ್ಯ ನಡೆಸಿದ್ದಾರೆ. ಈ ವೇಳೆ ತೋಡಿನೊಳಗೆ ಅತಿ ಮೇಲ್ಮಟ್ಟದಲ್ಲಿ ಹಾದು ಹೋಗಿರುವ ಪೈಪ್ ಲೈನ್‌ಗೆ ಹಾನಿಯುಂಟಾಗಿದೆ. ಆವಾಗಲೇ ಎಚ್‌ಪಿಸಿಎಲ್ ಪೈಪ್‌ಲೈನ್ ಭೂಮಿಯ ಮೇಲ್ಭಾಗದಲ್ಲಿ(ಎರಡುವರೆ ಅಡಿ ಆಳ) ಹಾದು ಹೋಗಿರುವುದು ಬೆಳಕಿಗೆ ಬಂದಿದೆ ಎಂದು ಸ್ಥಳೀಯರು ಹೇಳಿದ್ದಾರೆ.



ಎಚ್‌ಪಿಸಿಎಲ್‌ನ ಎಲ್‌ಪಿಜಿ ಗ್ಯಾಸ್ ಪೂರೈಕೆಯ ಪೈಪ್‌ಲೈನ್ ತೋಡಿನೊಳಗೆ ಅಪಾಯದ ಮಟ್ಟದಲ್ಲಿ ಅಳವಡಿಸಿರುವುದು

ಇಲ್ಲೇ ಹತ್ತಿರದಲ್ಲಿ ಗೈಲ್ ಕಂಪೆನಿಯ ಪೈಪ್ ಲೈನ್ ಭೂಮಿಯಲ್ಲಿ 10 ಅಡಿ ಆಳದಲ್ಲಿ ಹಾದು ಹೋಗಿದೆ. ತೋಡಿನಲ್ಲಿ, ಎಚ್‌ಪಿಸಿಎಲ್ ಪೈಪ್‌ಲೈನ್ ಹತ್ತಿರದಲ್ಲೇ ಪೆಟ್ರೋನೆಟ್ ಕಂಪೆನಿಯ ಡೀಸೆಲ್ ಪೂರೈಕೆ ಪೈಪ್‌ಲೈನ್ ಹಾದು ಹೋಗಿದೆ. ಅದು ಆಳದಲ್ಲಿದೆ. ಎಚ್‌ಪಿಸಿಎಲ್ ಪೈಪ್‌ಲೈನ್ ಮಾತ್ರ ಕೇವಲ ಎರಡೂವರೆ ಅಡಿ ಆಳದಲ್ಲಿರುವುದರಿಂದ ಹೂಳೆತ್ತುವ ವೇಳೆ ಅನಾಹುತ ಸಂಭವಿಸಿದೆ. ಮುಂದಿನ ಬೇಸಗೆಯಲ್ಲಿ ಇಲ್ಲಿ ಕಂಪೆನಿಯು 10 ಅಡಿ ಆಳದಲ್ಲಿ ಪೈಪ್‌ಲೈನ್ ಅಳವಡಿಕೆಯೊಂದಿಗೆ ಸಿಮೆಂಟ್ ಹಾಸು ಸುರಕ್ಷತೆ ಒದಗಿಸಬೇಕು' ಎಂದು ಏತಮೊಗರು ದೊಡ್ಡಮನೆ ಹರೀಶ್ ಶೆಟ್ಟಿ ಒತ್ತಾಯಿಸಿದ್ದಾರೆ.

ಆದ್ಯಪಾಡಿ ಪಂಚಾಯತ್ ವ್ಯಾಪ್ತಿಯಲ್ಲಿರುವ ದೊಡ್ಡ ಪರಂಬೋಕು ತೋಡು ಇದಾಗಿದ್ದು, ಇದರಲ್ಲಿ ಮೂರು ಗ್ರಾಮಗಳ ನೀರು ಹರಿಯುತ್ತದೆ. ಕೃಷಿ ಪ್ರದೇಶವಾದ ಇಲ್ಲಿ ರೈತರು, ಗ್ರಾಮಸ್ಥರು ಮತ್ತು ಪಂಚಾಯತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಖಾಸಗಿ ಕಂಪೆನಿಗಳು ಏಕಾಏಕಿಯಾಗಿ ಯೋಜನೆ ಜಾರಿಗೊಳಿಸಿದರೆ ಭವಿಷ್ಯದಲ್ಲಿ ಅನಾಹುತ ನಿರೀಕ್ಷಿತ. ಜ್ವಲನಶೀಲ ಗ್ಯಾಸ್, ಪೆಟ್ರೋಲ್‌ನಂತಹ ಯೋಜನೆಯ ಪೈಪ್‌ಲೈನ್ ಕಾರ್ಯಗತದ ವೇಳೆ ನಿರ್ದಿಷ್ಟ ಮಾನದಂಡ ಹಾಗೂ ಸಂಪೂರ್ಣ ಸುರಕ್ಷತಾ ಕ್ರಮ ನಿರ್ಲಕ್ಷಿಸುವಂತಿಲ್ಲ. ಬೈಲುಪೇಟೆಯಲ್ಲಿ ಗ್ಯಾಸ್ ಪೈಪ್‌ಲೈನ್ ಕನಿಷ್ಠ 10 ಅಡಿ ಆಳದಲ್ಲಿ ಹಾದು ಹೋಗಬೇಕು. ಈ ಬಗ್ಗೆ ಶೀಘ್ರ ಕ್ರಮ ಜರುಗಿಸದೆ ಹೋದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ಅನಿವಾರ್ಯ ಎಂದು ಕಂದಾವರ ಗ್ರಾಪಂ ಮಾಜಿ ಅಧ್ಯಕ್ಷೆ ವಿಜಯಾ ಜಿ. ಸುವರ್ಣ ಹಾಗೂ ನಿಕಟಪೂರ್ವ ಸದಸ್ಯ ಜಿವನ್ ಮಲ್ಲಿ ಅವರು ಎಚ್ಚರಿಸಿದ್ದಾರೆ.

ಪಂಚಾಯತ್ ಸದಸ್ಯರು ಹಾಗೂ ಗ್ರಾಮಸ್ಥರ ದೂರಿನ ಮೇರೆಗೆ ಸ್ಥಳಕ್ಕಾಗಮಿಸಿದ ಎಚ್‌ಪಿಸಿಎಲ್‌ನ ಸುರಕ್ಷತಾ ಅಧಿಕಾರಿ ನಯನ್ ಪಾಲ್ ಅವರು ಸ್ಥಳೀಯರೊಂದಿಗೆ ಮಾತನಾಡಿ, ಸುಮಾರು 10 ವರ್ಷಗಳ ಹಿಂದೆ ಪೈಪ್‌ಲೈನ್ ಅಳವಡಿಸಲಾಗಿದೆ. ಈಗ ಇಲ್ಲಿನ ಭೌಗೋಳಿಕ ಪರಿಸರ ಬದಲಾಗಿದೆ. ಸದ್ಯ ಹಾನಿಗೀಡಾದ ಪೈಪ್‌ಲೈನ್ ದುರಸ್ತಿ ಕಾರ್ಯ ನಡೆಸಲಾಗುವುದು. ಇಲ್ಲಿ ಇನ್ನೂ ಆಳದಲ್ಲಿ ಪೈಪ್ ಲೈನ್ ಅಳವಡಿಸಲಾಗುವುದು ಮತ್ತು ಪೈಪ್‌ಲೈನ್‌ನ ಮೇಲ್ಗಡೆ ಸುರಕ್ಷತೆಗಾಗಿ ಕಾಂಕ್ರೀಟ್ ಹಾಸು ಅಳವಡಿಕೆ ಬಗ್ಗೆ ಕಂಪೆನಿಯ ಮೇಲಾಧಿಕಾರಿಗಳಿಗೆ ವರದಿ ಮಾಡುವೆ ಎಂದು ಭರವಸೆ ನೀಡಿದರು.

ತಪ್ಪಿದ ಭಾರೀ ಅನಾಹುತ

ಮೊನ್ನೆ ತೋಡಿನಲ್ಲಿ ಹೂಳೆತ್ತುವ ಕಾರ್ಯ ನಡೆಯುತ್ತಿದ್ದಾಗ ಪೈಪ್‌ಲೈನ್‌ಗೆ ಹಾನಿಯುಂಟಾಗಿದೆ. ಮಳೆಗಾಲದ ಸಿದ್ಧತೆ ಹಿನ್ನೆಲೆಯಲ್ಲಿ ಗ್ರಾಪಂ ಮಾಡಬೇಕಿದ್ದ ಕೆಲಸವನ್ನು ಸ್ಥಳೀಯ ಖಾಸಗಿ ವ್ಯಕ್ತಿ ಹರೀಶ್ ಶೆಟ್ಟಿಯವರು ಮಾಡಿದ್ದಾರೆ. ಅಂದು ಹತ್ತಿರದಲ್ಲಿ 'ಪೀಲಿ' ಗಿಡಗಳಿಗೆ ಬೆಂಕಿ ಹತ್ತಿಕೊಂಡಿತ್ತು. ಒಂದೊಮ್ಮೆ ಜೆಸಿಬಿ ಕೆಲಸ ಮಾಡುವ ವೇಳೆ ಹತ್ತಿರದಲ್ಲೇ ಇರುವ ಪೈಪ್‌ಲೈನ್ ಒಡೆದು ಹೋಗುತ್ತಿದ್ದರೆ ದೊಡ್ಡ ಮಟ್ಟದ ಬೆಂಕಿ ಅವಘಡ ಸಂಭವಿಸುತ್ತಿತ್ತು. ಅದೃಷ್ಟವಶಾತ್ ಯಾವುದೇ ದುರ್ಘಟನೆ ಸಂಭವಿಸಿಲ್ಲ ಎಂದು ಸ್ಥಳೀಯರು ಹೇಳಿದ್ದಾರೆ.

ಜೈಲಿನಲ್ಲಿ ಚೂರಿ ಇರಿತಕ್ಕೊಳಗಾಗಿದ್ದ ಯುವಕ ಚಿಕಿತ್ಸೆ ಫಲಿಸದೆ ಸಾವು

ಮಡಿಕೇರಿ: ನಗರದ ಹೊರವಲಯದ ಕರ್ಣಂಗೇರಿಯಲ್ಲಿರುವ ಜಿಲ್ಲಾ ಕಾರಾಗೃಹದಲ್ಲಿ ಎರಡು ದಿನಗಳ ಹಿಂದೆ ಚೂರಿ ಇರಿತಕ್ಕೊಳಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಾಗಿದ್ದ ವಿಚಾರಣಾಧೀನ ಖೈದಿ ಚಿಕಿತ್ಸೆ ಫಲಕಾರಿ ಯಾಗದೆ ಮಂಗಳವಾರ ರಾತ್ರಿ ಸಾವಿಗೀಡಾಗಿದ್ದಾನೆ.

ದಕ್ಷಿಣಕೊಡಗಿನ ಟಿ.ಶೆಟ್ಟಿಗೇರಿ ಗ್ರಾಮದ ನಿವಾಸಿಗಳಾದ ರವಿ ಹಾಗೂ ಇಂದ್ರಾವತಿ ದಂಪತಿಯ ಏಕೈಕ ಪುತ್ರನಾಗಿದ್ದ ಹೇಮಂತ್ (26) ಎಂಬಾತನೇ ತನ್ನ ಸಂಬಂಧಿ ರಾಜೇಶ್ ಎಂಬಾತನಿಂದ ಚೂರಿ ಇರಿತಕ್ಕೊಳಗಾಗಿ ಸಾವಿಗೀಡಾದ ವ್ಯಕ್ತಿ.

ಜಾಗದ ವಿವಾದ ಕೊಲೆಗೆ ಕಾರಣ: ರಾಜೇಶ್ ಹಾಗೂ ಹೇಮಂತ್ ಕುಟುಂಬದವರ ನಡುವೆ ಜಾಗದ ವಿವಾದಕ್ಕೆ ಸಂಬಂಧಿಸಿದಂತೆ ಆಗಾಗ ಘರ್ಷಣೆಗಳು ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಹೇಮಂತ್, ಆತನ ತಂದೆ, ತಾಯಿ, ಮಾವನ ವಿರುದ್ಧ ರಾಜೇಶನ ಸಹೋದರ ಗಣೇಶ್ ನೀಡಿದ ದೂರಿನ ಮೇರೆಗೆ ಶ್ರೀಮಂಗಲ ಪೊಲೀಸರು ಪ್ರಕರಣ ದಾಖಲಿಸಿ ನಾಲ್ವರನ್ನೂ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದರು.

ಹಿಂದೆ ಮನೆಗೆ ಬೆಂಕಿ ಇಟ್ಟ ಪ್ರಕರಣ ಹಾಗೂ ಜೀಪು ಮೂಲಕ ಕೊಲೆ ಮಾಡಲು ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜೇಶನ ಸಹೋದರ ಗಣೇಶ ಕೂಡಾ ಜೈಲು ವಾಸ ಅನುಭವಿಸಿ ಹೊರಬಂದಿದ್ದ ಎನ್ನಲಾಗಿದೆ.

ಕಳೆದ ಎರಡು ವರ್ಷಗಳ ಹಿಂದೆ ತನ್ನ ಅತ್ತೆಯನ್ನು ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಣೇಶನ ಸಹೋದರ ರಾಜೇಶ್ (36) ಜೈಲು ಪಾಲಾಗಿದ್ದು, ಆತನೇ ಇದೀಗ ಜೈಲಿನಲ್ಲಿ ಹೇಮಂತ್‌ನನ್ನು ಇರಿದು ಕೊಲೆ ಮಾಡಿದ ಆರೋಪಿಯಾಗಿದ್ದಾನೆ.

ಕುಟುಂಬಸ್ಥರ ಆರೋಪ

ಜೈಲಿನಲ್ಲಿ ಹೇಮಂತನನ್ನು ಹಾಗೂ ಅವರ ಕುಟುಂಬವನ್ನು ಮುಗಿಸಲು ಉಪಾಯ ನಡೆಸಿ, ತನ್ನ ಸಹೋದರ ಮಾಜಿ ಸೈನಿಕ ಗಣೇಶನ ಮೂಲಕ ದೂರು ದಾಖಲಿಸುವಂತೆ ಮಾಡಿದ ರಾಜೇಶ್, ಜೈಲಿನಲ್ಲಿ ಕೊಲೆ ಮಾಡುವ ಉದ್ದೇಶದಿಂದಲೇ ಹೇಮಂತ್‌ನಿಗೆ ಶರೀರದ ಬೇರೆಬೇರೆ ಭಾಗಗಳಿಗೆ ಎಂಟು ಬಾರಿ ಇರಿದಿದ್ದಾನೆ ಎಂದು ಮೃತನ ಕುಟುಂಬಸ್ಥರು ಆರೋಪಿಸಿದ್ದಾರೆ.

ಹೇಮಂತನ ತಂದೆ, ತಾಯಿ ಮಾವ ಇನ್ನೂ ಜೈಲಿನಲ್ಲಿದ್ದು, ಮೃತದೇಹವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ.

ಮೃತನ ಕುಟುಂಬದ ಇತರ ಸದಸ್ಯರು ಟಿ-ಶೆಟ್ಟಿಗೇರಿಗೆ ಮೃತ ದೇಹವನ್ನು ತಂದು ಅಂತಿಮ ಸಂಸ್ಕಾರ ನೆರವೇರಿಸಲಿರುವುದಾಗಿ ಹೇಳಲಾಗಿದೆ.

ಪೊಲೀಸರ ನಿರ್ಲಕ್ಷ್ಯ ಕಾರಣ

ಜಾಗದ ವಿವಾದಕ್ಕೆ ಸಂಬಂಧಿಸಿದಂತೆ ಒಂದೇ ಕುಟುಂಬದ ಸದಸ್ಯರ ನಡುವೆ ಕಳೆದ ಎರಡು ವರ್ಷಗಳಿಂದ ಹೊಡೆದಾಟ, ಕೊಲೆಗೆ ಯತ್ನ ನಡೆಯುತ್ತಲೇ ಬಂದಿದ್ದು, ಈ ಬಗ್ಗೆ ಸೂಕ್ತ ರೀತಿಯಲ್ಲಿ ತನಿಖೆ ನಡೆಸದೆ ಪೊಲೀಸರು ಏಕಾಏಕಿ ಮೊಕದ್ದಮೆ ದಾಖಲಿಸಿ ಹೇಮಂತ್ ಹಾಗೂ ಕುಟುಂಬದವರನ್ನು ಜೈಲಿಗೆ ಕಳುಹಿಸಿದ್ದೇ ಈ ಘಟನೆಗೆ ಕಾರಣ ಎಂಬ ಆರೋಪವೂ ಕೇಳಿಬಂದಿದೆ.

ತೆಂಕುತಿಟ್ಟು ಚಿಕ್ಕಮೇಳಗಳ ಒಕ್ಕೂಟದಿಂದ ಮಾರ್ಗಸೂಚಿ

ಈ ಬಾರಿ 50ಕ್ಕೂ ಹೆಚ್ಚು ಚಿಕ್ಕಮೇಳಗಳು

ಮಂಗಳೂರು: ತೆಂಕುತಿಟ್ಟು ಚಿಕ್ಕ ಮೇಳಗಳ ಒಕ್ಕೂಟ ದ.ಕ. ಜಿಲ್ಲೆ ಕೇಂದ್ರ ಸಮಿತಿ ನೇತೃತ್ವದಲ್ಲಿ ಈ ಬಾರಿ 50ಕ್ಕೂ ಹೆಚ್ಚು ಚಿಕ್ಕಮೇಳಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರದರ್ಶನ ನೀಡಲಿವೆ. ಕಟೀಲು ಬಳಿ ಬುಧವಾರ ಉದ್ಘಾಟನೆಗೊಂಡು ಮುಂದಿನ ತುಳಸಿ ಪೂಜೆವರೆಗೆ ಚಿಕ್ಕಮೇಳಗಳು ತಿರುಗಾಟ ನಡೆಸಲಿವೆ. ಪ್ರತಿ ಮನೆಯವರು ಒಕ್ಕೂಟದ ಪರವಾನಿಗೆ ಇದ್ದವರಿಗೆ ಮಾತ್ರ ಪ್ರದರ್ಶನಕ್ಕೆ ಅವಕಾಶ ನೀಡಿ ವ್ಯವಸಾಯಿ ಕಲಾವಿದರ ಬದುಕು ಹಸನಾಗುವಲ್ಲಿ ಸಹಕಾರ ನೀಡಬೇಕು ಎಂದು ತೆಂಕುತಿಟ್ಟು ಚಿಕ್ಕ ಮೇಳಗಳ ಒಕ್ಕೂಟ ದ.ಕ. ಜಿಲ್ಲೆ ಕೇಂದ್ರ ಸಮಿತಿಅಧ್ಯಕ್ಷ ಸರಪಾಡಿ ಅಶೋಕ ಶೆಟ್ಟಿ ವಿನಂತಿಸಿದರು.

ಕೆಲ ಚಿಕ್ಕಮೇಳಗಳು ಶಿಸ್ತು ಉಲ್ಲಂಘಿಸಿ ಅನಪೇಕ್ಷಿತ ಘಟನೆಗಳು ನಡೆದಿದ್ದವು. ಅಶಿಸ್ತು ಅಸಂಬದ್ಧ ನಡೆಯಬಾರದು ಎಂಬ ಉದ್ದೇಶದಿಂದ ಜಿಲ್ಲೆಯ ಎಲ್ಲ ಚಿಕ್ಕಮೇಳಗಳ ಮುಖಂಡರು ಹಾಗೂ ಕಲಾವಿದರನ್ನು ಒಂದೇ ರೀತಿಯ ನಿಯಮಾವಳಿಗೆ ಒಳಪಡಿಸಿ ಒಕ್ಕೂಟ ಕಾರ್ಯಾಚರಿಸುತ್ತಿದೆ. ಒಕ್ಕೂಟದ ಮೂಲಕ ಚಿಕ್ಕಮೇಳಗಳಿಗೆ, ಸಂಘಟಕರಿಗೆ ನಿಬಂಧನೆಗಳನ್ನು ರೂಪಿಸಲಾಗಿದೆ. ಎಲ್ಲ ಚಿಕ್ಕಮೇಳ ತಂಡಗಳು ಒಕ್ಕೂಟದಲ್ಲಿ ನೋಂದಣಿಗೊಂಡು ಒಕ್ಕೂಟದ ಅಧಿಕೃತ ಪರವಾನಿಗೆ ಪಡೆದು ತಿರುಗಾಟ ಮಾಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಒಕ್ಕೂಟದ ಪರವಾನಿಗೆ ಇದ್ದವರಿಗೆ ಮಾತ್ರ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಸಂಜೆ 6ರಿಂದ ರಾತ್ರಿ 10.30ರವರೆಗೆ ಕನ್ನಡ ಅಥವಾ ತುಳು ಭಾಷೆಯಲ್ಲಿ ಗರಿಷ್ಠ 20 ನಿಮಿಷ ಮೀರದ ಉತ್ತಮ ಸಂದೇಶ ಇರುವ ಸನ್ನಿವೇಶದ ಪ್ರದರ್ಶನ ನಡೆಯಲಿದೆ. ಒಂದೇ ಊರಿನಲ್ಲಿ ಎರಡೆರಡು ತಂಡ ಮನೆಗೆ ಭೇಟಿ ನೀಡುವಂತಿಲ್ಲ. ಇನ್ನೊಂದು ತಂಡ ನಿಮ್ಮಲ್ಲಿಗೆ ಬಂದರೆ ಅವಕಾಶ ನೀಡಬಾರದು. ಒಕ್ಕೂಟದ ಪದಾಧಿಕಾರಿಗಳು ಯಾವುದೇ ಚಿಕ್ಕ ಮೇಳದ ಫಲಾನುಭವಿಗಳು ಅಲ್ಲ. ಚಿಕ್ಕ ಮೇಳಗಳ ತಿರುಗಾಟದಲ್ಲಿ ಸಂಗ್ರಹ ಆದ ಸಂಪಾದನೆಯ ಒಂದು ಭಾಗ ಚಿಕ್ಕಮೇಳದ ಕಲಾವಿದರ ಸಂಕಷ್ಟ ನಿಧಿಯಾಗಿ ಠೇವಣಿ ಇಡಲಾಗುವುದು. ಚಿಕ್ಕಮೇಳಗಳು ಕರಪತ್ರದಲ್ಲಿ, ಮನೆಗಳಲ್ಲಿ ಇಂತಿಷ್ಟೇ ಹಣ ನೀಡಬೇಕು ಎಂಬ ಬೇಡಿಕೆ ಇರಿಸಬಾರದು. ಪ್ರತಿ ಮೇಳಗಳಿಗೆ ತಿರುಗಾಟಕ್ಕೆ ನಿರ್ದಿಷ್ಟ ಗ್ರಾಮ, ವಾರ್ಡ್‌ಗಳನ್ನು ಸೂಚಿಸಲಾಗಿದೆ ಎಂದರು.

ಒಕ್ಕೂಟ ಪ್ರಧಾನ ಕಾರ್ಯದರ್ಶಿ ಕುಮಾರ್ ಮಾಲೆಮಾರ್, ಉಪಾಧ್ಯಕ್ಷ ರಮೇಶ ಕುಲಶೇಖರ, ಶರತ್ ಪೂಜಾರಿ, ಸಂತೋಷ್ ಕಡ್ತಲ ಉಪಸ್ಥಿತರಿದ್ದರು.

ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು

ಹಿಂದೂ ಹಬ್ಬಗಳ ಸಂದರ್ಭ ಯಕ್ಷಗಾನ ವೇದಿಕೆಯ ಪ್ರದರ್ಶನ ಹೊರತುಪಡಿಸಿದ ಇತರ ಕಾರ್ಯಕ್ರಮಗಳಲ್ಲಿ ಯಕ್ಷಗಾನದ ವೇಷಭೂಷಣ ಧಾರಣೆ ಮಾಡಿ ಭಿಕ್ಷಾಟನೆ ಮಾಡುವುದನ್ನು ನಿಷೇಧಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು. ಅಂತಹ ವೇಷಭೂಷಣಗಳನ್ನು ಧಾರಣೆ ಮಾಡಿದ ವೇಷಧಾರಿಗಳನ್ನು ತಡೆದು ನಿಲ್ಲಿಸಿ ಸ್ಥಳೀಯ ಆರಕ್ಷಕ ಠಾಣೆಗೆ ತಿಳಿಸಬೇಕು, ಇಂತವರಿಗೆ ಯಾರೂ ಬಣ್ಣಹಚ್ಚಬಾರದು, ವೇಷಭೂಷಣ ಬಾಡಿಗೆಗೆ ನೀಡಬಾರದು ಎಂದು ಸರಪಾಡಿ ಅಶೋಕ ಶೆಟ್ಟಿ ಹೇಳಿದರು.

ತುರ್ತು ಸ್ಪಂದನೆಗೆ ಡಿಜಿಪಿ, ಜಿಲ್ಲಾಡಳಿತಕ್ಕೆ ಸಂಸದ ಕ್ಯಾ. ಚೌಟ ಪತ್ರ ಬರೆದು ಒತ್ತಾಯ

ಬಂದೂಕು ಲೈಸೆನ್ಸ್ ನವೀಕರಣ: ಕೃಷಿಕರಿಗೆ ತೊಂದರೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಕರು ವನ್ಯಜೀವಿಗಳ ಉಪಟಳದಿಂದ ತಮ್ಮ ಬೆಳೆ ರಕ್ಷಣೆಗೆ ಬಳಸುವ ಕೋವಿ/ಬಂದೂಕು ಪರವಾನಗಿ ನವೀಕರಣಕ್ಕೆ ಎದುರಿಸು ತ್ತಿರುವ ತೀವ್ರ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಬೇಕೆಂದು ಕೋರಿ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಜಿಲ್ಲಾಧಿಕಾರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.



ಇತ್ತೀಚಿನ ದಿನಗಳಲ್ಲಿ ಕೃಷಿಕರು ಕಾನೂನು ಪ್ರಕಾರ ಪಡೆದಿರುವ ಬಂದೂಕು ಪರವಾನಗಿಯ ನವೀಕರಣ ಅರ್ಜಿಗಳನ್ನು ಕಠಿಣ ನಿಯಮಗಳ ನೆಪವೊಡ್ಡಿ ಅಧಿಕಾರಿಗಳು ವ್ಯವಸ್ಥಿತವಾಗಿ ತಿರಸ್ಕರಿಸುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿಯಾಗಿದೆ. ಇದರಿಂದ ಕೃಷಿಕರು ಅದರಲ್ಲೂ ಕಾಡಿನಂಚಿನಲ್ಲಿರುವವರು ವಿವಿಧ ರೀತಿಯ ಗಂಭೀರ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಈ ಹಿಂದೆ ವಾಡಿಕೆಯಂತೆ, ಈ ಬೆಳೆ ರಕ್ಷಣಾ ಪರವಾನಗಿಗಳನ್ನು ವಾರ್ಷಿಕ ನವೀಕರಣ ಪ್ರಕ್ರಿಯೆಗೆ ಒಳಪಡಿಸಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಬಂದೂಕು ನವೀಕರಣ ಪ್ರಕ್ರಿಯೆಗಳಿಗೆ ತಡೆಯೊಡ್ಡುತ್ತಿರುವುದು ರೈತರನ್ನು ಅಸಹಾಯಕರನ್ನಾಗಿಸುತ್ತಿದೆ. ಹೀಗಾಗಿ ಈ ಸಮಸ್ಯೆಗೆ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸಿ ಸೂಕ್ತ ಪರಿಹಾರ ಒದಗಿಸಬೇಕೆಂದು ಸಂಸದರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ನಮ್ಮ ಭಾಗದ ರೈತರು ಕಷ್ಟಪಟ್ಟು ದುಡಿದ ಬೆಳೆಗಳನ್ನು ಕಾಡುಪ್ರಾಣಿಗಳಿಂದ ರಕ್ಷಿಸಲು ಹಲವು ದಶಕಗಳಿಂದ ಈ ಕೋವಿ ಪರವಾನಗಿ ಸೌಲಭ್ಯವನ್ನು ಅವಲಂಬಿಸಿದ್ದು, ಕಳೆದೊಂದು ವರ್ಷದಲ್ಲಿ 'ಕೃಷಿ ಭೂಮಿಗೆ ವನ್ಯಜೀವಿಗಳು ನುಗ್ಗಿಲ್ಲ ಅಥವಾ ಹಾನಿ ಮಾಡಿಲ್ಲ' ಎಂಬ ಕಾರಣ ನೀಡಿ ನೊಂದ ರೈತರ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿರುವ ಬಗ್ಗೆ ಸಂತ್ರಸ್ತರು ನನ್ನ ಗಮನಕ್ಕೆ ತಂದಿದ್ದಾರೆ. ಆದರೆ, ರೈತರ ಬಳಿ ಪರವಾನಗಿ ಹೊಂದಿದ ಬಂದೂಕು ಇರುವುದೇ ವನ್ಯಜೀವಿಗಳು ಕೃಷಿ ಭೂಮಿಗೆ ನುಗ್ಗದಂತೆ ತಡೆಯುವ ಪ್ರಮುಖ ಪ್ರತಿಬಂಧಕ ಶಕ್ತಿಯಾಗಿರುತ್ತದೆ. ಕಾಡುಪ್ರಾಣಿಗಳ ದಾಳಿಯು ತೀರಾ ಅನಿರೀಕ್ಷಿತವಾಗಿದ್ದು, ಅದನ್ನು ಮುಂಚಿತವಾಗಿ ಊಹಿಸುವುದು ಅಸಾಧ್ಯ. ಇಂತಹ ಪರಿಸ್ಥಿತಿಯಲ್ಲಿ ಬಂದೂಕು ಪರವಾನಗಿ ಇಲ್ಲದೆ ರೈತನೂ ಅಸಹಾಯಕನಾಗಿ ಕೈಕಟ್ಟಿ ಕುಳಿತರೆ, ಕಣ್ಣೆದುರೇ ಇಡೀ ಕೃಷಿ ನಾಶವಾಗಿ ಆತನ ಜೀವನೋಪಾಯವೇ ಬೀದಿಗೆ ಬೀಳುವ ಆತಂಕ ಎದುರಾಗುತ್ತದೆ ಎಂಬುದನ್ನು ಪತ್ರದಲ್ಲಿ ಜಿಲ್ಲಾಡಳಿತಕ್ಕೆ ಮನವರಿಕೆ ಮಾಡಿದ್ದಾರೆ.


ಬೆಳೆರಕ್ಷಣೆಗೆ ಬಂದೂಕು

ಕಾನೂನು ಪಾಲಿಸುವ ಮತ್ತು ಯಾವುದೇ ಅಪರಾಧ ಹಿನ್ನೆಲೆ ಇಲ್ಲದ ಕೃಷಿಕರು ಕೇವಲ ತಮ್ಮ ಆತ್ಮರಕ್ಷಣೆ ಹಾಗೂ ಬೆಳೆ ರಕ್ಷಣೆಗಾಗಿ ಮಾತ್ರ ಬಂದೂಕು ಹೊಂದಿರುತ್ತಾರೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಹೀಗಿರುವಾಗ ರೈತರ ಮೇಲೆ ಕಠಿಣ ನಿಬಂಧನೆಗಳನ್ನು ಹೇರದೆ, ಜಿಲ್ಲಾಡಳಿತವು ವಾಸ್ತವಿಕ ನೆಲೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಕಠಿಣ ನಿಯಮಗಳನ್ನು ಮರುಪರಿಶೀಲಿಸುವ ಜೊತೆಗೆ ಸರಳೀಕೃತಗೊಳಿಸಬೇಕು. ಗನ್ ಲೈಸೆನ್ಸ್ ನಿಯಮಗಳನ್ನು ಪಾಲಿಸುತ್ತಿರುವ ಅರ್ಹ ರೈತರ ಅರ್ಜಿಗಳನ್ನು ಯಾವುದೇ ಅಡೆತಡೆಯಿಲ್ಲದೆ, ಸುಲಭವಾಗಿ ನವೀಕರಿಸಿಕೊಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಆದೇಶಿಸಬೇಕೆಂದು ಸಂಸದರು ಜಿಲ್ಲಾಧಿಕಾರಿ ಅವರನ್ನು ಪತ್ರದ ಮೂಲಕ ಒತ್ತಾಯಿಸಿದ್ದಾರೆ. ಜೊತೆಗೆ ರೈತರ ಈ ಗಂಭೀರ ಸಮಸ್ಯೆಯನ್ನ ಡಿಜಿಪಿ, ಪಶ್ಚಿಮ ವಲಯ ಐಜಿಪಿ, ದ.ಕ. ಎಸ್ಪಿ ಹಾಗೂ ಮಂಗಳೂರು ನಗರ ಪೊಲೀಸ್ ಆಯುಕ್ತರ ಗಮನಕ್ಕೂ ತಂದಿದ್ದಾರೆ.

ರೈಲು ಪ್ರಯಾಣಿಕರ ಹಿತರಕ್ಷಣಾ ಸಮಿತಿಯ ಗಣೇಶ್ ಪುತ್ರನ್ ಆಕ್ರೋಶ

ರೈಲು ಪಯಣ ಅವಧಿ ಹೆಚ್ಚಾಯಿತು

ಕುಂದಾಪುರ : ಬೆಂಗಳೂರು- ಮಂಗಳೂರು ಸೆಂಟ್ರಲ್ ನಡುವೆ ವಂದೇ ಭಾರತ್ ರೈಲಿನ 8.40 ಗಂಟೆಗಳಷ್ಟು ಸುದೀರ್ಘ ಪ್ರಯಾಣದ ಅವಧಿಯ ವೇಳಾಪಟ್ಟಿ ತೀವ್ರ ನಿರಾಸೆ ಉಂಟು ಮಾಡಿದ್ದು, ಒಂದೊಮ್ಮೆ ಅಧಿಕೃತ ವೇಳಾಪಟ್ಟಿಯಲ್ಲೂ ರೈಲು ಮಂಗಳೂರಿಗೆ ಬರಲು 8.30 ಗಂಟೆ ನಿಗದಿಪಡಿಸಲಾಗಿದ್ದರೆ ಇದು ಅತ್ಯಂತ ನಿರಾಶಾಜನಕ ರೈಲಾಗಲಿದೆ ಎಂದು ಕುಂದಾಪುರ ರೈಲು ಪ್ರಯಾಣಿಕರ ಹಿತರಕ್ಷಣಾ ಸಮಿತಿಯ ಗಣೇಶ್ ಪುತ್ರನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಇದು ಪ್ರಾಯೋಗಿಕ ನೆಲೆಯಷ್ಟೇ ಇದ್ದು ರೈಲು ಅಧಿಕೃತವಾಗಿ ಸಂಚಾರ ಪ್ರಾರಂಭಿಸುವ ವೇಳೆ ವೇಗ ವರ್ಧನೆಯಾಗಬಹುದು ಎಂಬ ವಿಶ್ವಾಸವಿದೆ. ಮಂಗಳೂರು- ಬೆಂಗಳೂರು ನಡುವೆ ಹೆದ್ದಾರಿ ಪ್ರಯಾಣ 5 ಗಂಟೆಗಿಳಿಯುತ್ತಿರುವ ಈ ಹೊತ್ತಲ್ಲಿ ಬರೀ ಮಂಗಳೂರಿಗೇ ಇಷ್ಟು ಹೊತ್ತು ಈ ರೈಲು ಪಡೆದರೆ ಅದರಿಂದ ಕೊಂಕಣ ರೈಲ್ವೇ ಭಾಗದ ಉಡುಪಿ, ಕಾರವಾರಕ್ಕೆ ಯಾವ ಪ್ರಯೋಜನವೂ ಸಿಗದೇ ಇರುವ ಸಾಧ್ಯತೆ ಇದೆ. ಇಂತಹ ರೈಲನ್ನು ನಾವು ಸ್ಪಷ್ಟವಾಗಿ ತಿರಸ್ಕರಿಸುತಿದ್ದೇವೆ ಹಾಗೂ ಆ ರೈಲು ಮಂಗಳೂರಿಗೇ ಸೀಮಿತವಾಗಲಿ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂಸದರಿಗೆ ಪತ್ರ

ಮಂಗಳೂರು ಬೆಂಗಳೂರು ರೈಲು ಮಾರ್ಗದ ಘಾಟ್ ಭಾಗದ ಸಮಸ್ಯೆ ಪರಿಹಾರಕ್ಕೆ ಸತತವಾಗಿ ಮನವಿ ಮಾಡಲಾಗಿತ್ತು ಮತ್ತು ಕರಾವಳಿ ರೈಲು ಮಾರ್ಗ ಡಬಲ್ ಆಗಲು ಅಡ್ಡಿಯಾಗಿರುವ ಕೊಂಕಣ ಮಾರ್ಗದ ವಿಲೀನಕ್ಕೆ ಮನವಿ ಮಾಡಲಾಗಿತ್ತು. ಆದರೆ ಈ ಯಾವ ಅಭಿವೃದ್ಧಿಯನ್ನೂ ಮಾಡದೇ, ಕರಾವಳಿ ಭಾಗದವರಿಗೆ ಹೆಸರಿಗಷ್ಟೇ ವಂದೇ ಭಾರತ್ ಕೊಟ್ಟಂತಾಗಿದೆ. ಈ ರೈಲಿನಿಂದ ಯಾರಿಗೂ ಉಪಯೋಗವಿಲ್ಲ. ಪ್ರಸ್ತುತ ವಂದೇ ಭಾರತ್ ರೈಲನ್ನು ಮಂಗಳೂರಿಗೆ ಕೊನೆಗೊಳಿಸಿ ಕುಂದಾಪುರ ಕಾರವಾರಕ್ಕೆ ಹೊಸ ರಾತ್ರಿ ರೈಲನ್ನು ಕೊಡುವಂತೆ ಸಂಸದರಿಗೆ ಪತ್ರ ಬರೆದಿರುವುದಾಗಿ ಗಣೇಶ್ ಪುತ್ರನ್ ತಿಳಿಸಿದ್ದಾರೆ.

ಕಿರುಸುದ್ದಿ

ನೆಟ್ ಬೌಲಿಂಗ್: 7 ಯುವ ಬೌಲರ್ಸ್‌ಗೆ ಬಿಸಿಸಿಐ ಆಹ್ವಾನ

ಮುಂಬೈ: ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್‌ಗೂ ಮುನ್ನ ಟೀಮ್ ಇಂಡಿಯಾ ಬ್ಯಾಟರ್‌ಗಳಿಗೆ ನೆಟ್ಸ್‌ನಲ್ಲಿ ಬೌಲಿಂಗ್ ಮಾಡಲು ಜಮ್ಮು ಕಾಶ್ಮೀರದ ವೇಗಿ ಆಕಿಬ್ ನಬಿ ದಾರ್ ಮತ್ತು ಉತ್ತರಪ್ರದೇಶದ ಲೆಗ್‌ಸ್ಪಿನ್ನರ್ ಜೀಶಾನ್ ಅನ್ಸಾರಿ ಸೇರಿದಂತೆ ಒಟ್ಟು 7 ಬೌಲರ್‌ಗಳನ್ನು ಬಿಸಿಸಿಐ ಆಹ್ವಾನಿಸಿದೆ. ಐಪಿಎಲ್ ಮತ್ತು ರಣಜಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಹೊರತಾಗಿಯೂ ಆಕಿಬ್ ಭಾರತ ತಂಡಕ್ಕೆ ಆಯ್ಕೆ ಆಗದಿರುವುದು ಸಾಕಷ್ಟು ಟೀಕೆಗೆ ಕಾರಣವಾಗಿತ್ತು. ಐಪಿಎಲ್ ಬಳಿಕ ಪ್ರಮುಖ ವೇಗಿಗಳಿಗೆ ವಿಶ್ರಾಂತಿ ಅಗತ್ಯವಿದ್ದು, ಪೂರ್ಣ ಪ್ರಮಾಣದಲ್ಲಿ ನೆಟ್ಸ್‌ನಲ್ಲಿ ಬೌಲಿಂಗ್ ನಡೆಸಲು ಸಾಧ್ಯವಿಲ್ಲ. ಆದರೆ ಬ್ಯಾಟರ್‌ಗಳಿಗೆ ಅಭ್ಯಾಸದ ಅಗತ್ಯವಿದೆ. ಈ ಕಾರಣಕ್ಕೆ 7 ಯುವ ಬೌಲರ್‌ಗಳನ್ನು ಆಹ್ವಾನಿಸಲಾಗಿದೆ ಎನ್ನಲಾಗುತ್ತಿದೆ.

ಇಂಡೋನೇಷ್ಯಾ ಓಪನ್: 2ನೇ ಸುತ್ತಿಗೆ ಆಯುಷ್, ಸಿಂಧು



ಹೊಸದಿಲ್ಲಿ: ಇಂಡೋನೇಷ್ಯಾ ಓಪನ್ 2026 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಯುವ ಶಟ್ಲರ್ ಆಯುಷ್ ಶೆಟ್ಟಿ ಪುರುಷರ ವಿಭಾಗದಲ್ಲಿ ಬುಧವಾರ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ತಾರಾ ಆಟಗಾರ್ತಿ ಪಿವಿ ಸಿಂಧು ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. 21ರ ಹರೆಯದ ಆಯುಷ್ ಚೀನಾ ಎದುರಾಳಿ ವೆಂಗ್ ಹೊಂಗ್ ಯಾಂಗ್ ವಿರುದ್ಧ ಏಕಪಕ್ಷೀಯ ಪಂದ್ಯದಲ್ಲಿ ಸುಲಭ ಜಯ ಸಾಧಿಸಿದ್ದಾರೆ. 20ನೇ ಶ್ರೇಯಾಂಕದ ಶೆಟ್ಟಿ ಚೀನಾದ 15ನೇ ಶ್ರೇಯಾಂಕದ ಹೊಂಗ್‌ರನ್ನು 66 ನಿಮಿಷಗಳ ಪಂದ್ಯದಲ್ಲಿ 22–20, 21–15 ಅಂಕಗಳ ಅಂತರದಲ್ಲಿ ಸೋಲಿಸಿದ್ದಾರೆ.

ಹೊರಬಿದ್ದ ಸಾತ್ವಿಕ್–ಚಿರಾಗ್ ಜೋಡಿ: ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ನಿರೀಕ್ಷೆಯನ್ನು ಹೊತ್ತಿದ್ದ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಇಂಡೋನೇಷ್ಯಾ ಓಪನ್‌ನಿಂದ ಹೊರಬಿದ್ದಿದೆ. ಇತ್ತೀಚೆಗೆ ಈ ಜೋಡಿ ಸಿಂಗಾಪುರ ಓಪನ್ ಪುರುಷರ ಡಬಲ್ಸ್ ಗರಿ ಮುಡಿಗೇರಿಸಿತ್ತು. ಆದರೆ ಇಂಡೋನೇಷ್ಯಾ ಓಪನ್ ಮೊದಲ ಸುತ್ತಿನಲ್ಲಿ 7 ನಿಮಿಷದ ಆಟದ ಬಳಿಕ ಸಾತ್ವಿಕ್ ಭುಜದ ಗಾಯಕ್ಕೆ ಒಳಗಾದ ಕಾರಣ ಜೋಡಿ ಸ್ಪರ್ಧೆಯಿಂದ ಹಿಂದೆ ಸರಿಯಿತು. ಪಂದ್ಯದಲ್ಲಿ ಮಲೇಷ್ಯಾ ಜೋಡಿ ವಿರುದ್ಧ 6–11 ಅಂಕಗಳ ಹಿನ್ನಡೆ ಅನುಭವಿಸಿದ್ದರು. ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ರೋಹನ್ ಕುಮಾರ್ ಮತ್ತು ರುಥ್ವಿಕಾ ಗದ್ದೆ ಜೋಡಿ ಚೈನೀಸ್ ಥೈಪೆ ಜೋಡಿಯನ್ನು 21–14, 21–14 ನೇರ ಗೇಮ್‌ಗಳಿಂದ ಸೋಲಿಸಿ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಅನುಭವಿ ಎಚ್‌ಎಸ್ ಪ್ರಣೋಯ್ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದಿದ್ದಾರೆ. ಮಹಿಳೆಯರ ಸಿಂಗಲ್ಸ್ ಸ್ಪರ್ಧೆಯಲ್ಲಿ ಯುವ ಶಟ್ಲರ್ ಉನ್ನತಿ ಹುಡ್ಡಾ ಜಪಾನ್ ಎದುರಾಳಿ ನಯೊಮಿ ಒಕುಹಾರ ವಿರುದ್ಧ 15–21, 14–21 ನೇರ ಸೋಲುಂಡಿದ್ದಾರೆ.

ದ್ವಿತೀಯ ಸುತ್ತಿಗೆ ಸಿಂಧು: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿವಿ ಸಿಂಧು ಮಂಗಳವಾರ ತಡರಾತ್ರಿ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಗೆದ್ದು ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಥೈಲೆಂಡ್ ಎದುರಾಳಿ ಬುಸಾನನ್ ವಿರುದ್ಧ 51 ನಿಮಿಷಗಳ ಪಂದ್ಯದಲ್ಲಿ 25–23, 21–16 ಅಂಕಗಳಿಂದ ಸಿಂಧು ಜಯಿಸಿದ್ದಾರೆ. ಗುರುವಾರ ತಮ್ಮ ದ್ವಿತೀಯ ಸುತ್ತಿನ ಪಂದ್ಯದಲ್ಲಿ ಜಪಾನ್ ಎದುರಾಳಿ ಎಸ್‌ವೈ ಆ್ಯನ್ ಸವಾಲನ್ನು ಎದುರಿಸಲಿದ್ದಾರೆ.

ಸೆಮಿಗೆ ಮೆನ್ಸಿಕ್, ಖ್ವಾಲೀನ್ಸ್ಕಾ

ಪ್ಯಾರಿಸ್: ಫ್ರೆಂಚ್ ಓಪನ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಜೇಕಬ್ ಮೆನ್ಸಿಕ್ ಹಾಗೂ ಮಹಿಳೆಯರ ವಿಭಾಗದಲ್ಲಿ ಪೋಲೆಂಡ್‌ನ ಮಾಯ ಖ್ವಾಲೀನ್ಸ್ಕಾ ತಮ್ಮ ಕ್ವಾರ್ಟರ್ ಫೈನಲ್ ಪಂದ್ಯಗಳನ್ನು ಗೆದ್ದು ಸೆಮಿ ಫೈನಲ್ ಹಂತಕ್ಕೇರಿದ್ದಾರೆ. ಬುಧವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ತಾಳ್ಮೆಯ ಆಟ ಪ್ರದರ್ಶಿಸಿದ ಜೆಕ್ ಗಣರಾಜ್ಯದ ಆಟಗಾರ ಮೆನ್ಸಿಕ್, ಬ್ರೆಜಿಲ್ ಆಟಗಾರ ಜಾವೊ ಫಾನ್ಸೇಕರನ್ನು 6–4, 6–3 ಮತ್ತು 7–6(3) ಸೆಟ್ ಅಂತರದಿಂದ ಸೋಲಿಸಿದ್ದಾರೆ. ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ 22ನೇ ಶ್ರೇಯಾಂಕದ ರಷ್ಯಾ ಆಟಗಾರ್ತಿ ಅನ್ನಾ ಕಲಿನ್ಸ್ಕಯಾ ಅವರನ್ನು ಪೋಲೆಂಡ್ ಆಟಗಾರ್ತಿ 7–6(3), 6–3 ಸೆಟ್ ಅಂತರದಿಂದ ಸೋಲಿಸಿದ್ದಾರೆ.

ಮತ್ತೆ ನಂ.1 ಮ್ಯಾಗ್ನಸ್ ಮಣಿಸಿದ ಭಾರತದ ಗ್ರಾಂಡ್‌ಮಾಸ್ಟರ್

ಪ್ರಜ್ಞಾನಂದ ದಿಗ್ವಿಜಯ



ಓಸ್ಲೋ: ನಾರ್ವೆಯ ಓಸ್ಲೊದಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ 2026 ಪಂದ್ಯಾವಳಿಯ ಎಂಟನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಮತ್ತೊಂದು ಐತಿಹಾಸಿಕ ಸಾಧನೆ ಮಾಡಿದ್ದಾರೆ.

ಚೆಸ್ ಲೋಕದಲ್ಲಿ ಭಾರತದ ಪಾರಮ್ಯ ಮುಂದುವರಿದಿದ್ದು, ವಿಶ್ವ ನಂ.1 ಮ್ಯಾಗ್ನಸ್ ಕಾರ್ಲ್ಸನ್‌ರನ್ನು ಕ್ಲಾಸಿಕಲ್ ವಿಭಾಗದಲ್ಲಿ ಮತ್ತೊಮ್ಮೆ ಮಣಿಸಿದ್ದಾರೆ. ಇದರೊಂದಿಗೆ ಪ್ರಶಸ್ತಿ ಸುತ್ತು ಇನ್ನಷ್ಟು ರೋಚಕಗೊಂಡಿದ್ದು, ಪ್ರಜ್ಞಾನಂದ ಪಂದ್ಯಾವಳಿಯಲ್ಲಿ ಪ್ರಬಲ ಸ್ಪರ್ಧಿಯಾಗಿದ್ದಾರೆ.

ಐತಿಹಾಸಿಕ ದಾಖಲೆ: ಕಳೆದ ವಾರ ಬಿಳಿ ಕಾಯಿಗಳೊಂದಿಗೆ ಮ್ಯಾಗ್ನಸ್ ಅವರನ್ನು ಸೋಲಿಸಿದ್ದ ಪ್ರಜ್ಞಾನಂದ, ಈ ಬಾರಿ ಕಪ್ಪು ಕಾಯಿಗಳೊಂದಿಗೆ ಗೆಲುವು ಸಾಧಿಸಿ ಅಪರೂಪದ ದಾಖಲೆ ನಿರ್ಮಿಸಿದರು. ಒಂದೇ ಟೂರ್ನಿಯಲ್ಲಿ ಕಾರ್ಲ್ಸನ್ ವಿರುದ್ಧ ಎರಡು ಕ್ಲಾಸಿಕಲ್ ಗೆಲುವು ಸಾಧಿಸಿದ ಭಾರತದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಸಾಧನೆಯನ್ನು ಈ ಹಿಂದೆ ಭಾರತದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಮಾತ್ರ ಮಾಡಿದ್ದರು.

ಇದರೊಂದಿಗೆ ಕ್ಲಾಸಿಕಲ್ ಚೆಸ್‌ನಲ್ಲಿ ಐದು ಬಾರಿಯ ವಿಶ್ವ ಚಾಂಪಿಯನ್ ಕಾರ್ಲ್ಸನ್ ಅವರನ್ನು ಮೂರು ಬಾರಿ ಮಣಿಸಿದ ಆಯ್ದ ಆಟಗಾರರ ಪಟ್ಟಿಗೂ ಪ್ರಜ್ಞಾನಂದ ಸೇರ್ಪಡೆಯಾದರು. ಇನ್ನೊಂದು ಪ್ರಮುಖ ಪಂದ್ಯದಲ್ಲಿ ಅಲಿರೆಜಾ ಫಿರೌಜಾ, ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ವಿರುದ್ಧ ಕ್ಲಾಸಿಕಲ್ ವಿಭಾಗದಲ್ಲಿ ಜಯ ಸಾಧಿಸಿದರು. ಸಮಯದ ಒತ್ತಡದ ನಡುವೆಯೂ ಅಂತಿಮ ಹಂತದಲ್ಲಿ ಉತ್ತಮ ಆಟವಾಡಿದ ಫಿರೌಜಾ ಅಮೂಲ್ಯ ಮೂರು ಅಂಕಗಳನ್ನು ತಮ್ಮದಾಗಿಸಿಕೊಂಡರು.

ವೆಸ್ಲಿ ಸೋ ಮತ್ತು ವಿನ್ಸೆಂಟ್ ಕೀಮರ್ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ವೆಸ್ಲಿ ಸೋ ಗೆದ್ದು ಹೆಚ್ಚುವರಿ ಅಂಕಗಳನ್ನು ಪಡೆದುಕೊಂಡರು.ಎಂಟು ಸುತ್ತುಗಳ ಅಂತ್ಯಕ್ಕೆ ವೆಸ್ಲಿ ಸೋ 14 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಫಿರೌಜಾ 13 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಪ್ರಜ್ಞಾನಂದ 12 ಅಂಕಗಳೊಂದಿಗೆ ಪ್ರಶಸ್ತಿ ಪೈಪೋಟಿಯಲ್ಲಿ ಉಳಿದಿದ್ದಾರೆ.

ದಿವ್ಯಾಗೆ ಜಂಟಿ ತೃತೀಯ ಸ್ಥಾನ

ಮಹಿಳಾ ವಿಭಾಗದಲ್ಲಿ ಬಿಬಿಸಾರಾ ಅಸ್ಸೌಬಯೇವಾ ಮಹತ್ವದ ಕ್ಲಾಸಿಕಲ್ ಗೆಲುವು ದಾಖಲಿಸಿ ಅಗ್ರಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಂಡರು. ಭಾರತದ ದಿವ್ಯಾ ದೇಶಮುಖ್ ವಿರುದ್ಧ ಕಪ್ಪು ಕಾಯಿಗಳೊಂದಿಗೆ ಆಡಿದ ಅಸ್ಸೌಬಯೇವಾ, ಸಮಯದ ಒತ್ತಡವನ್ನು ಸದುಪಯೋಗಪಡಿಸಿಕೊಂಡು ಪೂರ್ಣ ಅಂಕ ಗಳಿಸಿದರು.



ಮತ್ತೊಂದು ಪಂದ್ಯದಲ್ಲಿ ಝು ಜಿನರ್, ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಜು ವೆನ್‌ಜುನ್ ಅವರನ್ನು ಮಣಿಸಿ ಮಹತ್ವದ ಜಯ ಸಾಧಿಸಿದರು. ಇದರೊಂದಿಗೆ ಅವರು ದಿವ್ಯಾ ದೇಶಮುಖ್ ಅವರೊಂದಿಗೆ ತಲಾ 10 ಅಂಕಗಳನ್ನು ಹೊಂದಿದ್ದಾರೆ. ಅನ್ನಾ ಮುಜಿಚುಕ್ ಹಾಗೂ ಕೊನೇರು ಹಂಪಿ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ಕಪ್ಪು ಕಾಯಿಗಳೊಂದಿಗೆ ಆಡಿದ ಹಂಪಿ ಗೆದ್ದು ಹೆಚ್ಚುವರಿ ಅಂಕಗಳನ್ನು ಕಲೆಹಾಕಿದರು. ಎಂಟನೇ ಸುತ್ತಿನ ಬಳಿಕ ಮಹಿಳಾ ವಿಭಾಗದಲ್ಲಿ ಬಿಬಿಸಾರಾ ಅಸ್ಸೌಬಯೇವಾ 15.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಅನ್ನಾ ಮುಜಿಚುಕ್ 10.5 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ದಿವ್ಯಾ ದೇಶಮುಖ್ ಹಾಗೂ ಝು ಜಿನರ್ ತಲಾ 10 ಅಂಕಗಳೊಂದಿಗೆ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ಜೂ.6ಕ್ಕೆ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್

ಕಠಿಣ ಅಭ್ಯಾಸ ನಡೆಸಿದ ಗಿಲ್ ನೇತೃತ್ವದ ಭಾರತ





ಹೊಸದಿಲ್ಲಿ: ಜೂ.6ರಂದು ಚಂಡೀಗಢದಲ್ಲಿ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯಕ್ಕಾಗಿ ಶುಭ್ಮನ್ ಗಿಲ್ ನೇತೃತ್ವದ ಭಾರತ ತಂಡ ಬುಧವಾರ ಕಠಿಣ ಅಭ್ಯಾಸವನ್ನು ಆರಂಭಿಸಿದೆ.

ಏಕೈಕ ಟೆಸ್ಟ್ ಬಳಿಕ ಅಫ್ಘಾನಿಸ್ತಾನ ವಿರುದ್ಧ ಭಾರತ ಮೂರು ಪಂದ್ಯಗಳ ಏಕದಿನ ಸರಣಿಯನ್ನೂ ಆಡಲಿದೆ. ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದ ಕನ್ನಡಿಗರಾದ ಭರವಸೆಯ ಬ್ಯಾಟರ್ ಕೆಎಲ್ ರಾಹುಲ್ ಹಾಗೂ ವೇಗಿ ಪ್ರಸಿದ್ಧ್ ಕೃಷ್ಣ ನೆಟ್ಸ್‌ನಲ್ಲಿ ಕಠಿಣ ಅಭ್ಯಾಸದಲ್ಲಿ ಪಾಲ್ಗೊಂಡು ಬೆವರಿಳಿಸಿದ್ದಾರೆ. ಪ್ರಸಿದ್ಧ್ ಜತೆಗೂಡಿ ವೇಗಿ ಮೊಹಮ್ಮದ್ ಸಿರಾಜ್ ನಿರಂತರ 25 ನಿಮಿಷಗಳ ಕಾಲ ಬೌಲಿಂಗ್ ಅಭ್ಯಾಸ ನಡೆಸಿದ್ದಾರೆ. ಸಿರಾಜ್ ಫಿಟ್ ಇದ್ದಾರೆಂದೂ ಅಫ್ಘಾನ್ ವಿರುದ್ಧದ ಟೆಸ್ಟ್ ಪಂದ್ಯಕ್ಕೆ ಸಿದ್ಧರಿದ್ದಾರೆಂದೂ ತಿಳಿದುಬಂದಿದೆ.

ನೆಟ್ಸ್‌ನಲ್ಲಿ ಗಮನಸೆಳೆದ ವೇಗಿಗಳು: ಸಿರಾಜ್ ಮತ್ತು ಪ್ರಸಿದ್ಧ್ ಮಾತ್ರವಲ್ಲದೆ, ಇತರ ವೇಗಿಗಳೂ ನೆಟ್ ಅಭ್ಯಾಸದ ವೇಳೆ ಗಮನಸೆಳೆದರು. ವೇಗಿ ಗುರ್‌ನೂರ್ ಬ್ರಾರ್ ತಮ್ಮ ಬೌನ್ಸಿ ಎಸೆತಗಳಿಂದ ಬ್ಯಾಟರ್ ಕೆಎಲ್ ರಾಹುಲ್ ಅವರನ್ನು ತುಸು ಕಾಡಿದರು. ಬ್ರಾರ್ ಅವರ ಕೆಲವು ಎಸೆತಗಳು ರಾಹುಲ್ ಸ್ಟಂಪ್‌ಗಳನ್ನು ತಗುಲಿದವು. ಆದರೂ ನೆಟ್ಸ್‌ನಲ್ಲಿ ರಾಹುಲ್ ಅದ್ಭುತ ಲಯದಲ್ಲಿ ಇರುವಂತೆ ಕಾಣಿಸಿದರು.

7 ಯುವ ಬೌಲರ್‌ಗಳು ಭಾಗಿ: ಬಿಸಿಸಿಐ ಆಹ್ವಾನಿಸಿದ 7 ಯುವ ಬೌಲರ್‌ಗಳೂ ನೆಟ್ ಅಭ್ಯಾಸದಲ್ಲಿ ಭಾರತೀಯ ಬ್ಯಾಟರ್‌ಗಳಿಗೆ ಬೌಲಿಂಗ್ ನಡೆಸಿದರು. ಐಪಿಎಲ್ ಮತ್ತು ರಣಜಿ ಋತುವಿನಲ್ಲಿ ಮಿಂಚಿದ್ದ ಜಮ್ಮು ಕಾಶ್ಮೀರದ ವೇಗಿ



ಆಕಿಬ್ ನಬಿ ದಾರ್ ಬಹಳ ಹೊತ್ತು ಬೌಲಿಂಗ್ ನಡೆಸಿದರು. ಇದೇ ಸಂದರ್ಭ ನಾಯಕ ಶುಭ್ಮನ್ ಗಿಲ್ ಸಹಿತ ಬ್ಯಾಟರ್‌ಗಳೆಲ್ಲರೂ ರಿಸರ್ವ್ ಬೌಲರ್ಸ್ ವಿರುದ್ಧ ಬ್ಯಾಟಿಂಗ್ ಅಭ್ಯಾಸ ನಡೆಸಿದರು.

ಸ್ಪಿನ್ನರ್‌ಗಳ ಮಧ್ಯೆ ಸ್ಪರ್ಧೆ: ತರಬೇತಿ ಸಂದರ್ಭ ಎಡಗೈ ಸ್ಪಿನ್ನರ್ ಹರ್ಷ್ ದುಬೆ ಗಮನಸೆಳೆದರು. ಇದೇ ವೇಳೆ ಟೀಮ್ ಮ್ಯಾನೇಜ್‌ಮೆಂಟ್ ಹರ್ಷ್ ಅವರ ಬ್ಯಾಟಿಂಗ್ ಕೌಶಲವನ್ನೂ ಪರೀಕ್ಷಿಸಿದೆ. ಕೆಲಹೊತ್ತು ಹರ್ಷ್ ಬ್ಯಾಟಿಂಗ್ ಅಭ್ಯಾಸವನ್ನೂ ನಡೆಸಿದ್ದಾರೆ. ದುಬೆ ಮತ್ತು ಎಡಗೈ ಸ್ಪಿನ್ನರ್ ಮಾನವ್ ಸುಥಾರ್ ನಡುವೆ ಆಡುವ ಬಳಗಕ್ಕೆ ಯಾರು ಆಯ್ಕೆ ಆಗುತ್ತಾರೆ ಎಂಬ ಸ್ಪರ್ಧೆ ಏರ್ಪಟ್ಟಿದೆ. ಮುಖ್ಯ ಕೋಚ್ ಗೌತಮ್ ಗಂಭೀರ್ ಇಬ್ಬರ ಮೇಲೂ ಗಮನಹರಿಸಿದ್ದಾರೆ.

ಮರಳಿದ ಮಯಾಂಕ್: ಕಳೆದ ಕೆಲವು ವರ್ಷಗಳಿಂದ ಹಲವು ಗಾಯಗಳ ಕಾರಣದಿಂದ ಸ್ಥಾನ ಪಡೆಯದ ವೇಗಿ ಮಯಾಂಕ್ ಯಾದವ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಅವರು ಬೌಲಿಂಗ್ ಅಭ್ಯಾಸಕ್ಕಿಂತ ಹೆಚ್ಚಾಗಿ ಡ್ರಿಲ್ಸ್ ಮತ್ತು ಫಿಟ್‌ನೆಸ್ ಮೇಲೆ ಗಮನಹರಿಸಿದ್ದಾರೆ.

ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ಕೊನೆಯ ಸರಣಿ

ಭಾರತಕ್ಕೆ ಸರಣಿ ಸೋಲು



ಟೌಂಟನ್: ಮುಂಬರುವ ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ಕೊನೆಯ ಟಿ20 ಸರಣಿ ಆಡಿದ ಭಾರತ, ಆತಿಥೇಯರ ವಿರುದ್ಧ 1–2 ಅಂತರದ ಸರಣಿ ಸೋಲುಂಡಿದೆ. ಇಲ್ಲಿ ಮಂಗಳವಾರ ತಡರಾತ್ರಿ ನಡೆದ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಇಂಗ್ಲೆಂಡ್ 6 ವಿಕೆಟ್ ಜಯ ಸಾಧಿಸಿದೆ.

ಟಾಸ್ ಗೆದ್ದ ಇಂಗ್ಲೆಂಡ್ ನಾಯಕಿ ಚಾರ್ಲಿ ಡೀನ್ ಭಾರತೀಯರನ್ನು ಬ್ಯಾಟಿಂಗ್‌ಗೆ ಇಳಿಸಿದ್ದರು. ನಾಯಕಿ ಹರ್ಮನ್‌ಪ್ರೀತ್ ಕೌರ್ ಅರ್ಧ ಶತಕದ (56) ನೆರವಿನಿಂದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 180 ರನ್ ಪೇರಿಸಿತ್ತು. ಅಲೀಸ್ ಕ್ಯಾಪ್ಸಿ ಸ್ಫೋಟಕ 82 ರನ್ ಮತ್ತು ಹೀದರ್ ನೈಟ್ ಅವರ ಅಜೇಯ 70 ರನ್ ನೆರವಿನಿಂದ ಇಂಗ್ಲೆಂಡ್ ಗೆಲುವಿನ ದಡ ಸೇರಿಸಿದೆ.

ಭಾರತದ ಪರ ಸ್ಮೃತಿ ಮಂದನಾ(8) ಮತ್ತು ಶೆಫಾಲಿ ವರ್ಮಾ(11) ಬೇಗನೆ ಔಟಾಗಿ ಪೆವಿಲಿಯನ್ ಸೇರಿದ್ದರು. ತಂಡ ಸಂಕಷ್ಟದಲ್ಲಿದ್ದಾಗ ಯಸ್ತಿಕಾ ಭಾಟಿಯಾ(32) ಮತ್ತು ಜೆಮಿಮಾ ರಾಡ್ರಿಗ್ಸ್(29) ಕೊಡುಗೆ ನೀಡಿದರು. ಜೆಮಿಮಾ ಮತ್ತು ಹರ್ಮನ್ 4ನೇ ಜತೆಗೂಡಿ 26 ಎಸೆತಗಳಲ್ಲಿ 40 ರನ್ ಚಚ್ಚಿದರು. ಭಾರತ ತಂಡವು ಭರ್ತಿ 100 ರನ್ ಗಳಿಸಿದ್ದಾಗ 4ನೇ ವಿಕೆಟ್ ರೂಪದಲ್ಲಿ ಜೆಮಿಮಾ ಔಟಾಗಿದ್ದರು. ಈ ಸಂದರ್ಭ ಜತೆಗೂಡಿದ ನಾಯಕಿ ಹರ್ಮನ್‌ಪ್ರೀತ್ ಮತ್ತು ದೀಪ್ತಿ ಶರ್ಮಾ 5ನೇ ವಿಕೆಟ್‌ಗೆ 67 ರನ್ ಸೇರಿಸಿದರು. ಜೆಮಿಮಾರನ್ನು ಕ್ಲೀನ್‌ಬೌಲ್ಡ್ ಮಾಡಿದ್ದ ಬೆಲ್ ದೀಪ್ತಿ ವಿಕೆಟ್ ಸಹ ಕಬಳಿಸಿದರು.

ಕ್ಯಾಪ್ಸಿ–ನೈಟ್ 137 ರನ್ ಜತೆಯಾಟ: ಇಂಗ್ಲೆಂಡ್ ಆರಂಭಿಕ ಆಘಾತಗಳನ್ನು ಕಂಡರೂ ಬ್ಯಾಟಿಂಗ್ ಆಲ್‌ರೌಂಡರ್ ಅಲೀಸ್ ಕ್ಯಾಪ್ಸಿ 43 ಎಸೆತಗಳಿಂದ 82 ರನ್ ಬಾರಿಸಿದರು. ಇನ್ನೊಂದು ಬದಿ ಕ್ರೀಸ್ ಆಕ್ರಮಿಸಿದ ಹೀದರ್ 42 ಎಸೆತಗಳಿಂದ ಔಟಾಗದೆ 70 ರನ್ ಗಳಿಸಿದರು. ಇಬ್ಬರೂ 5ನೇ ವಿಕೆಟ್‌ಗೆ 76 ಎಸೆತಗಳಲ್ಲಿ 137 ರನ್ ಪೇರಿಸುವ ಮೂಲಕ ಇಂಗ್ಲೆಂಡ್ ಟಿ20 ಸರಣಿ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇಂಗ್ಲೆಂಡ್‌ನಲ್ಲಿ ಕೌರ್ ಚೊಚ್ಚಲ ಟಿ20 ಫಿಫ್ಟಿ: ನಾಯಕಿ ಹರ್ಮನ್‌ಪ್ರೀತ್ ಕೌರ್ ಇಂಗ್ಲೆಂಡ್ ನೆಲದಲ್ಲಿ ಚೊಚ್ಚಲ ಟಿ20 ಅರ್ಧ ಶತಕ ದಾಖಲಿಸಿದ್ದು, ಒಟ್ಟಾರೆ ಅವರ 17ನೇ ಟಿ20 ಅರ್ಧ ಶತಕ ಇದಾಗಿತ್ತು.

ಸಂಕ್ಷಿಪ್ತ ಸ್ಕೋರ್

ಭಾರತ ವನಿತೆಯರು 180/5(20): ಹರ್ಮನ್‌ಪ್ರೀತ್ 56*, ಯಸ್ತಿಕಾ 32, ದೀಪ್ತಿ 32, ಜೆಮಿಮಾ 29, ಬೆಲ್ 36ಕ್ಕೆ 2.

ಇಂಗ್ಲೆಂಡ್ ವನಿತೆಯರು 184/4(20): ಕ್ಯಾಪ್ಸಿ 82,ನೈಟ್ 70*, ಅರುಂಧತಿ 31ಕ್ಕೆ 2, ಕ್ರಾಂತಿ 40ಕ್ಕೆ 2.

ಕೊಡಗು ಸೈನಿಕ ಶಾಲೆಯಲ್ಲಿ ಅಖಿಲ ಭಾರತ ಅಂತರಗುಂಪು ಫುಟ್ಬಾಲ್

ಪ್ರಿ ಸುಬ್ರೊಟೊ ಕಪ್‌ಗೆ ಚಾಲನೆ

ಕುಶಾಲನಗರ: ಕೊಡಿಗೆಯಲ್ಲಿರುವ ಕೊಡಗು ಸೈನಿಕ ಶಾಲೆಯ ಮರಿಯಪ್ಪ ಕೆಂಪಯ್ಯ ಫುಟ್ಬಾಲ್ ಮೈದಾನದಲ್ಲಿ ಪ್ರತಿಷ್ಠಿತ ಅಖಿಲ ಭಾರತ ಅಂತರ ಗುಂಪು ಫುಟ್ಬಾಲ್ ಪಂದ್ಯಾವಳಿ(ಪ್ರಿ ಸುಬ್ರೊಟೊ ಕಪ್–2026) ವಿದ್ಯುಕ್ತವಾಗಿ ಉದ್ಘಾಟನೆಗೊಂಡಿತು.

ಕೊಡಿಗೆಯ ಸೈನಿಕ ಶಾಲೆಯಲ್ಲಿ ಮೊದಲ ಬಾರಿಗೆ ನಡೆಯುತ್ತಿರುವ ಈ ಪಂದ್ಯಾವಳಿಯು ಜೂ.11ರವರೆಗೆ ನಡೆಯಲಿದ್ದು, ದೇಶದೆಲ್ಲೆಡೆಯ 13 ಸೈನಿಕ ಶಾಲೆಗಳ 21 ತಂಡಗಳು ಇದರಲ್ಲಿ ಭಾಗವಹಿಸಿವೆ.

ಈ ಚಾಂಪಿಯನ್‌ಶಿಪ್ ಸಬ್ ಜೂನಿಯರ್ ಬಾಲಕರು(15 ವರ್ಷದೊಳಗಿನ), ಜೂನಿಯರ್ ಬಾಲಕರು(17 ವರ್ಷದೊಳಗಿನ) ಮತ್ತು ಜೂನಿಯರ್ ಬಾಲಕಿಯರು(17 ವರ್ಷದೊಳಗಿನ) ಎಂಬ ಮೂರು ವಿಭಾಗಗಳಲ್ಲಿ ನಡೆಯಲಿದೆ.ಕೊಡಗು ಸೈನಿಕ ಶಾಲೆ ಗುಂಪು ಮಟ್ಟದ ಪಂದ್ಯಗಳಲ್ಲಿ ಜಯ ಗಳಿಸಿ ಮೂರೂ ವಿಭಾಗಗಳಲ್ಲಿ ಗ್ರೂಪ್ ಎಚ್ ಅನ್ನು ಪ್ರತಿನಿಧಿಸುತ್ತಿದ್ದು, ಈ ಮೂಲಕ ಸಂಸ್ಥೆಯು ಇತಿಹಾಸವನ್ನು ಸೃಷ್ಟಿಸಿದೆ.

ಉದ್ಘಾಟನಾ ಸಮಾರಂಭವು ಕೊಡಗು ಸೈನಿಕ ಶಾಲೆಯ ಪರೇಡ್ ಕಮಾಂಡರ್ ಕೆಡೆಟ್



ಆರ್ಯನ್ ಮಹಾವರ್ಕರ್ ನೇತೃತ್ವದಲ್ಲಿ ಭಾಗವಹಿಸಿದ ಎಲ್ಲಾ ತಂಡಗಳ ಆಕರ್ಷಕ ಪಥಸಂಚಲನದೊಂದಿಗೆ ಚಾಲನೆಗೊಂಡಿತು.

ಪ್ರಸ್ತುತ ಪಂದ್ಯಾವಳಿಯಲ್ಲಿ ಒಟ್ಟು 336 ಕ್ರೀಡಾಪಟುಗಳು ಸ್ಪರ್ಧಿಸುತ್ತಿದ್ದು, ಇದು ಸೈನಿಕ ಶಾಲೆಗಳ ಕ್ಯಾಲೆಂಡರ್‌ನ ಅತಿ ದೊಡ್ಡ ಮತ್ತು ಅತಿ ಮಹತ್ವದ ಕ್ರೀಡಾಕೂಟಗಳಲ್ಲಿ ಒಂದಾಗಿದೆ. ಕೊಡಗು ಸೈನಿಕ ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ್‌ಜೀತ್ ಸಿಂಗ್ ಅವರು, ಮುಖ್ಯ ಅತಿಥಿಗಳಾದ ಮೈಸೂರು ದಕ್ಷಿಣ ವಲಯದ ಪೊಲೀಸ್ ಮಹಾನಿರೀಕ್ಷಕ ಡಾ. ಎಂ.ಬಿ.ಬೋರಲಿಂಗಯ್ಯ, ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ ಹಾಗೂ ಭಾಗವಹಿಸಿದ ಎಲ್ಲಾ ತಂಡಗಳ ಕ್ರೀಡಾಪಟುಗಳು ಹಾಗೂ ಆಯಾ ಶಾಲೆಗಳ ಸಿಬ್ಬಂದಿಗಳನ್ನು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ, ಸೈನಿಕ ಶಾಲೆಯ ಉಪ ಪ್ರಾಂಶುಪಾಲ ವಿಂಗ್ ಕಮಾಂಡರ್ ಮೊಹಮ್ಮದ್ ಶಾಜಿ, ದಿವ್ಯಾ ಸಿಂಗ್, ಹಿರಿಯ ಶಿಕ್ಷಕ ವಿಬಿನ್ ಕುಮಾರ್, ಭಾಗವಹಿಸಿದ ವಿವಿಧ ತಂಡಗಳ ಮೇಲ್ವಿಚಾರಕರು, ತೀರ್ಪುಗಾರರು, ಪಂದ್ಯದ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಸೈನಿಕ ಶಾಲೆಯ ಸಿಬ್ಬಂದಿ ವರ್ಗ, ಕೊಡಿಗೆಯ ಮೊರಾರ್ಜಿ ಶಾಲೆ ಮತ್ತು ಅತ್ತೂರಿನ ಜ್ಞಾನಗಂಗಾ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಫ್ರೆಂಚ್ ಓಪನ್: ವಿಶ್ವ ನಂ.1 ಸಬಲೆಂಕಾಗೆ ಆಘಾತ!



ಪ್ಯಾರಿಸ್: ವಿಶ್ವ ನಂ.1 ಅರೀನಾ ಸಬಲೆಂಕಾ ಫ್ರೆಂಚ್ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಆಘಾತ ಅನುಭವಿಸಿದ್ದಾರೆ. ನಾಲ್ಕು ಬಾರಿಯ ಗ್ರ್ಯಾಂಡ್ ಸ್ಲಾಮ್ ಚಾಂಪಿಯನ್ ಸಬಲೆಂಕಾ ಅವರು ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಡಯಾನ ಶ್ನೈಡರ್ ಎದುರು 3–6, 7–5, 6–0 ಸೆಟ್ ಅಂತರದಿಂದ ಸೋಲುಂಡಿದ್ದಾರೆ. ಸುಲಭದಲ್ಲಿ ಸೆಮಿ ಫೈನಲ್ ಪ್ರವೇಶಿಸುತ್ತಾರೆ ಎಂಬ ನಿರೀಕ್ಷೆಯಿದ್ದ ಸಬಲೆಂಕಾ ಕ್ವಾರ್ಟರ್ ಸೋಲುಂಡು ಹೊರಬಿದ್ದಿದ್ದಾರೆ. ಕಳೆದ ಬಾರಿ ಅವರು ಫೈನಲ್‌ನಲ್ಲಿ ಕೊಕೊ ಗಾಫ್ ಎದುರು ಸೋತು ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿಪಟ್ಟಿದ್ದರು.

ನ್ಯೂಜಿಲೆಂಡ್ ಪ್ರವಾಸದ ವೇಳಾಪಟ್ಟಿ ಪ್ರಕಟ

ಕಿವೀಸ್ ವಿರುದ್ಧ 12 ಪಂದ್ಯ

ವೆಲ್ಲಿಂಗ್ಟನ್: ಐತಿಹಾಸಿಕ ನ್ಯೂಜಿಲೆಂಡ್ ಪ್ರವಾಸದ ವೇಳಾಪಟ್ಟಿಯನ್ನು ಬಿಸಿಸಿಐ ಬುಧವಾರ ಪ್ರಕಟಿಸಿದೆ. ಇದೇ ವರ್ಷ ಅಕ್ಟೋಬರ್‌ನಲ್ಲಿ ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳಲಿರುವ ಭಾರತೀಯ ಕ್ರಿಕೆಟ್ ತಂಡವು 12 ಪಂದ್ಯಗಳನ್ನು ಆಡಲಿದೆ. ಸುದೀರ್ಘ ಸರಣಿಯಲ್ಲಿ ಐದು ಟಿ20, ಐದು ಏಕದಿನ ಮತ್ತು 2 ಟೆಸ್ಟ್ ಪಂದ್ಯಗಳನ್ನು ಒಳಗೊಂಡಿವೆ. ಕಿವೀಸ್ ಪ್ರವಾಸ ಅ.22ರಂದು ಆರಂಭವಾಗಲಿದ್ದು, ಸರಣಿ ಮೊದಲ ಟಿ20 ಪಂದ್ಯ ಹ್ಯಾಗ್ಲೆ ಓವಲ್‌ನಲ್ಲಿ ನಡೆಯಲಿದೆ. ನ.27ರಂದು ಕ್ರೈಸ್ಟ್‌ಚರ್ಚ್‌ನಲ್ಲಿ ನಡೆಯುವ ಎರಡನೇ ಟೆಸ್ಟ್ ಪಂದ್ಯದೊಂದಿಗೆ ಸರಣಿ ಸಮಾರೋಪಗೊಳ್ಳಲಿದೆ. ಇದು ಕ್ರಿಕೆಟ್ ಅಷ್ಟೇ ಅಲ್ಲದೆ, ಭಾರತ– ಕಿವೀಸ್ ನಡುವಿನ ಸ್ನೇಹ, ಇತಿಹಾಸ ಮತ್ತು ಸಂಸ್ಕೃತಿಯ ಸಂಭ್ರಮಾಚರಣೆ ಆಗಿರಲಿದೆ ಎಂದು ನ್ಯೂಜಿಲೆಂಡ್ ಕ್ರಿಕೆಟ್ ಮಾರ್ಕೆಟಿಂಗ್ ಮತ್ತು ವಾಣಿಜ್ಯ ಅಧಿಕಾರಿ ಗ್ಲೆನ್ ಕ್ರಿಟ್‌ಜ್ಲೆ ಹೇಳಿದ್ದಾರೆ.



ತಿಂಗಳಾಂತ್ಯ ಐರ್ಲೆಂಡ್ ಪ್ರವಾಸ

ಭಾರತೀಯ ಕ್ರಿಕೆಟ್ ತಂಡ ಇದೇ ತಿಂಗಳಾಂತ್ಯದಲ್ಲಿ ಐರ್ಲೆಂಡ್ ಪ್ರವಾಸ ಕೈಗೊಳ್ಳಲಿದ್ದು, ಎರಡು ಟಿ20 ಪಂದ್ಯಗಳನ್ನು ಆಡಲಿದೆ. ಬೆಲ್‌ಫಾಸ್ಟ್ ಮೈದಾನದಲ್ಲೇ ಜೂ.26ರಂದು ಮೊದಲ ಟಿ20 ಮತ್ತು ಜೂ.28ರಂದು ದ್ವಿತೀಯ ಟಿ20 ಪಂದ್ಯ ಆಡಲಾಗುವುದು.

ಸರಣಿ ವೇಳಾಪಟ್ಟಿ

ಐದು ಟಿ20 ಅಂ. ಪಂದ್ಯಗಳು

ಅ.22, ಮೊದಲ ಟಿ20, ಹ್ಯಾಗ್ಲೆ ಓವಲ್, ಕ್ರೈಸ್ಟ್‌ಚರ್ಚ್
ಅ.24, ದ್ವಿತೀಯ ಟಿ20, ಹ್ಯಾಗ್ಲೆ ಓವಲ್, ಕ್ರೈಸ್ಟ್ ಚರ್ಚ್
ಅ.27, ತೃತೀಯ ಟಿ20, ಹೆಸ್ರಿ ಸ್ಟೇಡಿಯಂ, ವೆಲ್ಲಿಂಗ್ಟನ್
ಅ.30, ನಾಲ್ಕನೇ ಟಿ20, ಈಡನ್ ಪಾರ್ಕ್, ಆಕ್ಲೆಂಡ್
ನ.1, ಐದನೇ ಟಿ20, ಸೆಡ್ಡನ್ ಪಾರ್ಕ್, ಹ್ಯಾಮಿಲ್ಟನ್
(ಎಲ್ಲಾ ಪಂದ್ಯಗಳೂ ಭಾರತೀಯ ಕಾಲಮಾನ ಮಧ್ಯಾಹ್ನ 1.30ರಿಂದ).

ಐದು ಏಕದಿನ ಪಂದ್ಯಗಳು


ನ.4, ಮೊದಲ ಏಕದಿನ, ಈಡನ್ ಪಾರ್ಕ್, ಆಕ್ಲೆಂಡ್
ನ.7, ಎರಡನೇ ಏಕದಿನ, ಹೆಸ್ರಿ ಸ್ಟೇಡಿಯಂ, ವೆಲ್ಲಿಂಗ್ಟನ್
ನ.10, ತೃತೀಯ ಏಕದಿನ, ಸೆಡ್ಡನ್ ಪಾರ್ಕ್, ಹ್ಯಾಮಿಲ್ಟನ್
ನ.13, 4ನೇ ಏಕದಿನ, ಬೇ ಓವಲ್, ಮೌಂಟ್ ಮೌಂಗನೂಯಿ
ನ.15, 5ನೇ ಏಕದಿನ, ಬೇ ಓವಲ್, ಮೌಂಟ್ ಮೌಂಗನೂಯಿ
(ಎಲ್ಲಾ ಪಂದ್ಯಗಳೂ ಭಾರತೀಯ ಕಾಲಮಾನ ಬೆಳಗ್ಗೆ 8.30ರಿಂದ).

ಎರಡು ಟೆಸ್ಟ್ ಪಂದ್ಯಗಳು

ನ.19, ಮೊದಲ ಟೆಸ್ಟ್, ಬೇಸಿನ್ ರಿಸರ್ವ್, ವೆಲ್ಲಿಂಗ್ಟನ್
ನ.27, ದ್ವಿತೀಯ ಟೆಸ್ಟ್, ಹ್ಯಾಗ್ಲೆ ಓವಲ್, ಕ್ರೈಸ್ಟ್‌ಚರ್ಚ್.
(ಎರಡೂ ಪಂದ್ಯಗಳು ಭಾರತೀಯ ಕಾಲಮಾನ ಬೆಳಗ್ಗೆ 4.30ರಿಂದ).

ಪದಬಂಧ

ರಾಜಾ ಸಂಗಮೇಶ ಹಿರೇಮಠ



6004

ಎಡದಿಂದ ಬಲಕ್ಕೆ

1.ದರದ ನಡುವೆ ಅಡಗಿದ ಮೋಸಗಾರ (4)
6.ನ್ಯಾಯ ನಿರ್ವಹಣಾ ಶಾಸ್ತ್ರ (4)
7.ಮುಚ್ಚಳವಿರುವ ಸಣ್ಣಪಾತ್ರೆ (3)
8.ಈಕೆ ಅಣ್ಣನ ಹೆಂಡತಿ (3)
10.ನಡವಳಿಕೆ–ವರ್ತನೆ (3)
11.ಜೊತೆಯಾಗಿರುವ ಗಂಡಹೆಂಡತಿ (3)
12.ವಸ್ತುವಿನ ವಿಶಮಾನ ಗಾತ್ರದಲ್ಲಿರುವ ದ್ರವ್ಯರಾಶಿಯ ಅಳತೆ (3)
14.ತರಬೇತಿ–ಅಭ್ಯಾಸದ ಸಮಾನಪದ (3)
16.ಆರಂಭದಲ್ಲಿ ವಿಷ್ಣು ಹೊಂದಿರುವ ಸುದ್ದಿ ತಲುಪಿಸುವ ವ್ಯಕ್ತಿ (4)
17.ಒಳ್ಳೆಯ ಮನಸ್ಸಿರುವವನು (4)

ಮೇಲಿನಿಂದ ಕೆಳಕ್ಕೆ

2.ಈಕೆ ತೆಲ್ಲಿಗರ ಮಹಿಳೆ (4)
3.ಹಾಸ್ಯ ಮನೋಭಾವದವ–ರಸಜ್ಞ (3)
4.ದಂಡ ಕಡೆಯಲ್ಲಿಟ್ಟುಕೊಂಡ ಬಿಲ್ಲು (3)
5. ಪಾತಿವ್ರತ್ಯವುಳ್ಳವಳು–ಗರತಿ (4)
9. ಸಖಿ–ಮಿತ್ರೆಯೀಕೆ (3)
10. ಸಮಾಧಾನದ ಮಾತು ತಲೆಕೆಳಗಾಗಿದೆ (3)
11. ಕಡಗೋಲಿನಿಂದ ಕಡೆದ ಮಜ್ಜಿಗೆ (4)
13. ಹಣವಿಲ್ಲದವನು–ಬಡವ (4)
14. ತಾಣದ ನಡುವೆ ದಾಟುವಿಕೆಯಿದೆ (3)
15. ಹತ್ತಿರದವರ ಕೋಚಿಸಿಕೊಳ್ಳುವಿಕೆ (3)

6003 ಉತ್ತರ

ಎಡದಿಂದ ಬಲಕ್ಕೆ:

2.ತಿನ್ನಾಸಕ 4.ಕಪ್ಪೆ
5.ಕುಕಿಲ 6.ದ್ವಾರಪಾಲಕ
8.ಪುರಾತನ
11.ತಾಳಮೇಳ
12.ಮತಿಭ್ರಮಣೆ
14.ದಾತಾರ 16.ಕೇರಿ
17.ಯಶಸ್ಕರ

ಮೇಲಿನಿಂದ ಕೆಳಕ್ಕೆ :

1.ಬೇಕು 2.ತಿಲಘಾತಕ
3.ಕಸರತ್ತು 4.ಕಪಾಲ
7.ಕಳವಳ 8.ಪುಣ್ಯಧಾಮ
9.ಬಳಕೆದಾರ
10.ಕಮನೀಯ
13.ತಿಜೋರಿ 15.ರಟ್ಟು



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 29° 25°
ಉಡುಪಿ 29° 26°

ಹೊಸ ದಿಗಂತ ಸಂಗಮ

ರಾಷ್ಟ್ರ ಜಾಗೃತಿಯ ದೈನಿಕ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಗುರುವಾರ 04, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಎಲ್ಲೆಂದರಲ್ಲಿ ತ್ಯಾಜ್ಯ ಎಸೆದರೆ ಬೀಳುತ್ತೆ ದಂಡ, ತಪ್ಪಿದರೆ ಕೇಸ್



ಪುಟ 5

ಕಳಪೆ ಕಾಮಗಾರಿಯಿಂದ ಪಾದಚಾರಿಗಳಿಗೆ ಸಮಸ್ಯೆ: ಆರೋಪ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!



ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸುವ ಕಾರ್ಯಕ್ರಮದ ನೇರಪ್ರಸಾರ ವೀಕ್ಷಣೆಗೆ ರಾಜ್ಯದ ಎಲ್ಲಾ ಕೆಎಸ್ಆರ್ಟಿಸಿ ಬಸ್ ನಿಲ್ದಾಣಗಳಲ್ಲಿ ವ್ಯವಸ್ಥೆ ಮಾಡಲಾಗಿದ್ದು, ಮಂಗಳೂರು ಬಿಜೈನಲ್ಲಿರುವ ಬಸ್ ನಿಲ್ದಾಣದಲ್ಲಿಯೂ ಟಿವಿ ಪರದೆಯ ಮೂಲಕ ಪ್ರಯಾಣಿಕರು ಪ್ರಮಾಣವಚನ ಕಾರ್ಯಕ್ರಮವನ್ನು ಕುತೂಹಲದಿಂದ ವೀಕ್ಷಿಸಿದರು.

ಸುತ್ತಮುತ್ತ

ಮುಂಗಾರು ಸ್ವಾಗತಕ್ಕೆ ಸಿದ್ಧತೆ: ಕರಾವಳಿ ಭಾಗದಲ್ಲಿ ಮತ್ತಷ್ಟು ಮಳೆ ಸಾಧ್ಯತೆ

ಮಂಗಳೂರು: ದಕ್ಷಿಣ ಕನ್ನಡ ಸಹಿತ ಕರಾವಳಿ ಭಾಗದ ಜಿಲ್ಲೆಗಳು ಮುಂಗಾರಿನ ಸ್ವಾಗತಕ್ಕೆ ಸಜ್ಜಾಗುತ್ತಿದ್ದು, ಈ ನಡುವೆ ಮುಂದಿನ ಎರಡು ದಿನಗಳ ಕಾಲ ಮಳೆ ತೀವ್ರ ಗೊಳ್ಳುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡದೆ.

ತಗ್ಗು ಪ್ರದೇಶದ ಜನತೆಗೆ ಮುನ್ನೆಚ್ಚರಿಕೆ

ಭಾರೀ ಮಳೆಯ ಸಾಧ್ಯತೆ ಹಿನ್ನೆಲೆಯಲ್ಲಿ ತಗ್ಗು ಪ್ರದೇಶದ ನಿವಾಸಿಗಳು ಹೆಚ್ಚು ಎಚ್ಚರಿಕೆ ವಹಿಸುವಂತೆ ಕೂಡಾ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಕಡಲ ತೀರಗಳಲ್ಲಿ ತಾಸಿಗೆ 60 ಕಿಮೀ ವೇಗದಲ್ಲಿ 'ಬಿರುಗಾಳಿ'ಯ ಸಾಧ್ಯತೆ

ಮಂಗಳೂರು: ಕರಾವಳಿ ಭಾಗದಲ್ಲಿ ಇಂದಿನಿಂದ (ಜೂ.4) ಜೂ.7ರ ತನಕ ಬಿರುಗಾಳಿ ಬೀಸುವ ಸಾಧ್ಯತೆ ಕಂಡುಬಂದಿದ್ದು, ಮೀನುಗಾರರು, ನಾಗರಿಕರು, ಪ್ರವಾಸಿಗರು ಕಡಲ ಬದಿಗೆ ತೆರಳದಂತೆ ಕೇಂದ್ರ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಈ ಅವಧಿಯಲ್ಲಿ ಗಾಳಿಯ ವೇಗವು ಪ್ರತೀ ಗಂಟೆಗೆ 40ರಿಂದ 60 ಕಿಲೋ ಮೀಟರ್ ವೇಗ ಪಡೆದುಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಎಚ್ಚರಿಕೆ ವಹಿಸಬೇಕು ಎಂದು ಇಲಾಖೆ ಹೇಳಿದೆ.

ಈಗ ಬೂಸ್ಟರ್ ಡೋಸ್ ನೀಡಿದೆ ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಸುರಿದ ಮಳೆ

ಮಂಗಳೂರು: ಕಳೆದ ಕೆಲವು ದಿನಗಳಿಂದ ಪಶ್ಚಿಮ ಘಟ್ಟದ ತಪ್ಪಲು ಪ್ರದೇಶಗಳಾದ ಕಾರ್ಕಳ, ಸುಬ್ರಹ್ಮಣ್ಯ ಸಹಿತ ವಿವಿಧ ಭಾಗಗಳಲ್ಲಿ ಸಾಧಾರಣ ಮಳೆಯಾಗುತ್ತಿದ್ದು, ಜೀವನದಿಗಳ ಒಡಲಿಗೆ ಜೀವತುಂಬುತ್ತಿದೆ. ನೇತ್ರಾವತಿ, ಫಲ್ಗುಣಿ, ಸ್ವರ್ಣೆ ಮೊದಲಾದ ನದಿಗಳಲ್ಲಿ ಈಗ ನೀರಿನ ಹರಿವು ಹೆಚ್ಚುತ್ತಿದ್ದು, ಈ ಬಾರಿಯ ಬಿರುಬಿಸಿಲು ಕಂಡು ಜಲಕ್ಷಾಮದ ಭೀತಿ ಎದುರಿಸುತ್ತಿದ್ದ ನಾಡಿನ ಕೃಷಿಕರು, ಜನತೆ ಸಮಾಧಾನದ ನಿಟ್ಟುಸಿರಿಟ್ಟಿದ್ದಾರೆ.

ಉಡುಪಿ ಸಿದ್ದಾಪುರದಲ್ಲಿ ಅತೀ ಹೆಚ್ಚು ಮಳೆಯ ಪ್ರಮಾಣ ದಾಖಲು

ಮಂಗಳೂರು: ಬುಧವಾರ ಬೆಳಗ್ಗೆ 8.30ಕ್ಕೆ ಅಂತ್ಯಗೊಂಡ ಹಿಂದಿನ 24 ತಾಸುಗಳ ಅವಧಿಯಲ್ಲಿ ಉಡುಪಿ ಜಿಲ್ಲೆಯ ಸಿದ್ದಾಪುರದಲ್ಲಿ 7 ಸೆಂ.ಮೀ. ಮಳೆ ಬಿದ್ದಿದ್ದು, ಇದು ಕರಾವಳಿ ಜಿಲ್ಲೆಗಳಲ್ಲಿಯೇ ಗರಿಷ್ಟ ಮಳೆ ಪ್ರಮಾಣವಾಗಿ ದಾಖಲಾಗಿದೆ.

ಅಲ್ಲಲ್ಲಿ ಕಂಡಿದೆ ವರುಣನ ಕರುಣ | ಎಲ್ಲೆಡೆ ಮಳೆಗಾಲದ ಚಿತ್ರಣ

ಬಿಸಿಲಿಗೆ ಮಳೆಯ ಮಂಗಳ?

ಮಾನ್ಸೂನ್ ಸ್ವಾಗತಕ್ಕೆ ಸಜ್ಜಾಗುತ್ತಿದೆ ಕರಾವಳಿ ಜಿಲ್ಲೆಗಳು

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಂಗವಾರ ರಾತ್ರಿ ಬಳಿಕ ಮುಂಗಾರು ಪೂರ್ವ ಮಳೆಯಾಗಿದೆ.

ಮಂಗಳವಾರ ಸಂಜೆಯ ಬಳಿಕ ಕರಾವಳಿಯ ಬಹುತೇಕ ಭಾಗಗಳಲ್ಲಿ ಜೂನ್ ಮಳೆಗಾಲದ ಚಿತ್ರಣ ಅರಳಿಕೊಂಡಿದ್ದು, ಕೆಲವು ಕಡೆಗಳಲ್ಲಿ ರಾತ್ರಿಯಿಂದ ಬುಧವಾರ ಬೆಳಗ್ಗಿನವರೆಗೂ ಸತತ ಮಳೆ ಸುರಿದಿದೆ. ಮಂಗಳೂರು ನಗರ, ಗ್ರಾಮಾಂತರ ಭಾಗದಲ್ಲಿ ಕೆಲವೆಡೆ ಭಾರೀ ಮಳೆಯಾಗಿದ್ದರೆ ಕೆಲವೆಡೆ ಸಾಧಾರಣ ಮಳೆ ಬಿದ್ದಿದೆ.

ಬಜಪೆ, ಎಡಪದವು, ಕುಪ್ಪೆಪದವು, ಬೊಳಿಯ, ಮುತ್ತೂರು, ಮಳಲಿ, ಗಂಜಿಮಠ, ಎಡಪದವು, ಗುರುಪುರ, ಕೈಕಂಬ ಮತ್ತಿತರ ಭಾಗಗಳಲ್ಲಿ ಉತ್ತಮ ಮಳೆಯಾಗಿದ್ದು, ಬಂಟ್ವಾಳ, ಕಡಬ ತಾಲೂಕಿನ ಕೆಲವೆಡೆ ಸಾಧಾರಣ ಮಳೆಯಾಗಿದೆ. ಸುಬ್ರಹ್ಮಣ್ಯ, ಕುಲ್ಕುಂದ ಪರಿಸರದಲ್ಲಿ ಕೂಡಾ ಭಾರೀ ಮಳೆಯಾಗಿದೆ.

ಈ ನಡುವೆ ಜೂ.8ರ ಸುಮಾರಿಗೆ ರಾಜ್ಯದಲ್ಲಿ ಮುಂಗಾರು ಆರ್ಭಟ ಕಾಣಿಸಿಕೊಳ್ಳುವ ಲಕ್ಷಣ ಗೋಚರಿಸಿದ್ದು, ಮುಂದಿನ ಕೆಲವು ದಿನಗಳ ಕಾಲ ಇದೇ ಮಾದರಿಯ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಉಭಯ ಜಿಲ್ಲೆಗಳಲ್ಲಿ ನದಿಗಳ ನೀರಿನ ಮಟ್ಟ ಮತ್ತಷ್ಟು ಏರಿಕೆ

ಕಳೆದ ಕೆಲವು ದಿನಗಳಿಂದ ಪಶ್ಚಿಮ ಘಟ್ಟದ ತಪ್ಪಲು ಪ್ರದೇಶಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಉಭಯ ಜಿಲ್ಲೆಯಗಳ ಜೀವನದಿಗಳ ನೀರಿನಮಟ್ಟ ತುಸು ಏರಿಕೆಯಾಗಿದೆ. ತುಂಬೆ ಅಣೆಕಟ್ಟಿನಲ್ಲಿ ನೀರಿನ ಸಂಗ್ರಹ ಸ್ಥಿರವಾಗಿದ್ದು, ಮಂಗಳೂರು ನಗರಕ್ಕೆ ಕಾಡುತ್ತಿದ್ದ ನೀರಿನ ಅಭಾವ ಭೀತಿ ಸದ್ಯಕ್ಕೆ ಈಗ ದೂರವಾಗುತ್ತಿದೆ.

ಎಲ್ಲೆಲ್ಲಿ ಎಷ್ಟು ಮಳೆ?

(ಬುಧವಾರ ಬೆಳಗ್ಗೆ 7.30ಕ್ಕೆ ಅಂತ್ಯಗೊಂಡ ಹಿಂದಿನ 24 ತಾಸು ಅವಧಿಯಲ್ಲಿ ಸುರಿದ ಮಳೆ (ಮಿ.ಮೀ))

ಮಡಮಕ್ಕಿ	93.05
ಪುತ್ತೂರು ಪಾಣಾಜೆ	85.05
ಬೆಳ್ತಂಗಡಿ ಮುಂಡಾಜೆ	85.05
ಕಾರ್ಕಳ ಮಾಳ	84.00
ಕಾರ್ಕಳ ಕುಚ್ಚೂರು	76.05
ಕಾರ್ಕಳ ನಡಪಾಲು	74.05
ಉಡುಪಿ ಅಲೆವೂರು	67.05
ಉಡುಪಿ ಕಡೆಕಾರು	66.00
ಕಡಬದ ನೂಜಿಬಾಳ್ತಿಲ	56.00
ಬೆಳ್ತಂಗಡಿ ಕಲ್ಮಂಜ	54.05
ಬೆಳ್ತಂಗಡಿ ಮಲವಂತಿಗೆ	50.00
ಪುತ್ತೂರು ಕಬಕ	48.05
ಉಡುಪಿ ಕಾಪು	47.05
ಹೊಸಂಗಡಿ (ಉ)	46.05
ಕಾರ್ಕಳ ಮರ್ಣೆ	44.05
ಬೆಳ್ತಂಗಡಿ ಲಾಯಿಲ	44.00
ಬಂಟ್ವಾಳ ಕೇಪು	43.05

ನಾಗರಿಕರಿಗೆ ಇಲಾಖೆ ಸೂಚನೆ

- ಕುಸಿಯುವ ಹಂತದ ಹಳೆ ಗೋಡೆ, ಕಟ್ಟಡಗಳ ಆಸುಪಾಸಿನಲ್ಲಿ ಆಶ್ರಯ ಪಡೆಯಬಾರದು
- ರಸ್ತೆ ಬದಿಯ ವಿದ್ಯುತ್ ಕಂಬ, ಜೋತಾಡುವ ವಿದ್ಯುತ್ ತಂತಿಗಳನ್ನು ತಪ್ಪಿಯೂ ಮುಟ್ಟಬೇಡಿ
- ಬಿರುಗಾಳಿ, ಮಳೆ ವೇಳೆ ಮರ, ಜಾಹೀರಾತು ಫಲಕ ಕೆಳಗೆ ನಿಲ್ಲಬೇಡಿ, ವಾಹನ ನಿಲ್ಲಿಸಬೇಡಿ
- ಒಣ ಮತ್ತು ಹಸಿ ಕಸಗಳನ್ನು ಚರಂಡಿಗಳಿಗೆ ಎಸೆಯಬೇಡಿ

ಮುಂಗಾರು ಪ್ರವೇಶಕ್ಕೆ ಕ್ಷಣಗಣನೆ

ಸಮುದ್ರ ತೀರಗಳಿಗೆ ಮತ್ತೆ ನಡುಕ ಶುರು!

ಮಂಗಳೂರು: ಸದ್ಯದ ಬೆಳವಣಿಗೆಗಳ ಆಧಾರದಲ್ಲಿ ಇಂದು (ಜೂ.4) ಕೇರಳಕ್ಕೆ ಮುಂಗಾರು ಕಾಲಿಡಲಿದ್ದು, ಮುಂದಿನ ಕೆಲವೇ ದಿನಗಳಲ್ಲಿ ರಾಜ್ಯಕ್ಕೆ ಎಂಟ್ರಿ ನೀಡಲಿದೆ. ಮಳೆಗಾಲ ಅಧಿಕೃತವಾಗಿ ಆರಂಭವಾಗುತ್ತಿರುವ ಬೆನ್ನಿಗೇ ಈಗ ಕಡಲ ತೀರದ ನಿವಾಸಿಗಳಿಗೆ ಕಡಲ್ಕೊರೆತದ ಭೀತಿ ಆರಂಭವಾಗಿದೆ. ದಕ್ಷಿಣ ಕನ್ನಡ ಉಡುಪಿಯಿಂದ ಕಾರವಾರದ ತನಕ ವಿವಿಧ ಭಾಗಗಳಲ್ಲಿ ಕಡಲ್ಕೊರೆತ ಸಮಸ್ಯೆ ಇದ್ದು, ಪ್ರತೀ ಮಳೆಗಾಲದಲ್ಲಿ ಹಲವು ಸವಾಲುಗಳನ್ನು ಇದು ಸೃಷ್ಟಿಸುತ್ತಿದೆ. ಹೀಗಾಗಿ ಕಡಲ ತಡಿ ಜನತೆಗೆ ಈಗಾಗಲೇ 'ಮಳೆಗಾಲ'ದ ನಡುಕ ಆರಂಭವಾಗಿದೆ.



ಉರಗಗಳ ಪಾಲಿಗೆ ಮತ್ತೆ ಆಪತ್ಬಾಂಧವನಾದ ಪುತ್ತೂರಿನ ತೇಜಸ್

ನಾಗರ ಹಾವಿನ 26 ಮರಿಗಳಿಗೆ ಜೀವದಾನ

ಪುತ್ತೂರು: ಇಲ್ಲಿನ ಉರಗತಜ್ಞ ತೇಜಸ್, ಮತ್ತೊಮ್ಮೆ ಉರಗಗಳ ಪಾಲಿಗೆ ಆಪತ್ಬಾಂದವರಾಗಿದ್ದು, ಸಾವಿನಂಚಿನ ಅಪಾಯದಲ್ಲಿದ್ದ ನಾಗರ ಹಾವಿನ ಒಟ್ಟು 26 ಮರಿಗಳನ್ನು ರಕ್ಷಿಸಿ ಸುರಕ್ಷಿತವಾಗಿ ಅರಣ್ಯಕ್ಕೆ ಬಿಟ್ಟಿದ್ದಾರೆ.

ಬಂಟ್ವಾಳ ತಾಲೂಕು ಪೆರಾಜೆ ಗ್ರಾಮದ ನಿವೃತ್ತ ಯೋಧರಾದ ಕೆ.ಟಿ. ನಾಯ್ಕ್ ಎಂಬವರ ಜಾಗದಲ್ಲಿ ಮರಿ ರಕ್ಷಣೆ ಮಾಡಲಾಗಿದೆ.

ಮಣ್ಣಿನಡಿ ಸಿಲುಕಿಕೊಂಡಿದ್ದ ಈ ಮರಿಗಳನ್ನು ರಕ್ಷಿಸಿ ಬಳಿಕ ಅವುಗಳು ಸುರಕ್ಷಿತವಾಗಿ ಪೊರೆ ಕಳಚಿದ ಬಳಿಕ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಸುನೀಲ್ ಡಿಸೋಜಾ, ಉಪ ವಲಯ ಅರಣ್ಯಾಧಿಕಾರಿ ರವಿ, ಅರಣ್ಯ ರಕ್ಷಕ ದಯಾನಂದ್, ರಾಘವ ಅವರುಗಳ ಸಹಕಾರದೊಂದಿಗೆ ಅರಣ್ಯಕ್ಕೆ ಬಿಡಲಾಗಿದೆ.



ಧಾರ್ಮಿಕ ನಂಬಿಕೆಯಂತೆ ಮೃತಪಟ್ಟ ಹಾವಿನ ಸಂಸ್ಕಾರ ನೆರವೇರಿಸಲಾಗಿದೆ. ತಾಯಿ ನಾಗರ ಹಾವು ಮೃತಪಟ್ಟಿದ್ದು ಬೇಸರ ಉಂಟು ಮಾಡಿದೆ. ಆದರೆ ಮರಿಗಳ ಸಂರಕ್ಷಣೆ ಖುಷಿ ನೀಡಿದೆ ಎಂದಿದ್ದಾರೆ ಉರಗ ತಜ್ಞ ತೇಜಸ್.

ಮಣ್ಣಿನಡಿ ಮರಿಗಳು ಅನಾಥವಾಗಿದ್ದವು...

ನಿವೃತ್ತ ಯೋಧ ಕೆ.ಟಿ. ನಾಯ್ಕ ಅವರ ಅಡಿಕೆ ತೋಟದಲ್ಲಿ ಜೆಸಿಬಿ ಯಂತ್ರದ ಮೂಲಕ ಮಣ್ಣು ಸಮತಟ್ಟು ಮಾಡುವಾಗ ಮಣ್ಣಿನಡಿಯಲ್ಲಿ ಸಿಲುಕಿಕೊಂಡಿದ್ದ ತಾಯಿ ನಾಗರ ಹಾವು ಸತ್ತು ಹೋಗಿದೆ. ಆಳವಾದ ಪರಿಶೀಲನೆ ಮಾಡಿದಾಗ ಈ ಮರಿಗಳು ಸಿಕ್ಕಿವೆ. ಸಿಕ್ಕಿದ 26 ಮರಿಗಳನ್ನು ರಕ್ಷಿಸಿ ಮನೆಗೆ ತಂದು ಆರೈಕೆ ಮಾಡಲಾಗಿದೆ. 4 ದಿನಗಳು ನಿಗಾ ವಹಿಸಿದ ಬಳಿಕ ಸುರಕ್ಷಿತವಾಗಿ ರಕ್ಷಿಸಿ ಅರಣ್ಯಕ್ಕೆ ಬಿಡಲಾಗಿದೆ.

ಕಾಸರಗೋಡಿಗೆ ಸೆಮಿ ಹೈಸ್ಪೀಡ್ ರೈಲು ವಿಸ್ತರಿಸಲು ಆಗ್ರಹ

ಕಾಸರಗೋಡು: ರಾಜ್ಯ ಸರಕಾರವು ತಿರುವನಂತಪುರದಿಂದ ಕಣ್ಣೂರು ತನಕ ಪ್ರಾರಂಭಿಸಲು ಉದ್ದೇಶಿಸಿರುವ ಸೆಮಿ ಹೈಸ್ಪೀಡ್ ರೈಲು ಕಾಸರಗೋಡು ತನಕ ವಿಸ್ತರಿಸಬೇಕೆಂದು ಕಾಸರಗೋಡು ಚೇಂಬರ್ ಆಫ್ ಕಾಮರ್ಸ್‌ನ ಕಾಸರಗೋಡು ಜಿಲ್ಲಾಧ್ಯಕ್ಷ ಎ.ಕೆ. ಶ್ಯಾಮಪ್ರಸಾದ್ ಬುಧವಾರ ಪ್ರೆಸ್ ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕಾಸರಗೋಡಿನಲ್ಲಿ ಅಪಾರ ರೈಲ್ವೆ ಪ್ರಯಾಣಿಕರಿದ್ದಾರೆ. ಆದ ಕಾರಣ ಲಾಭವಿಲ್ಲದಿದ್ದರೂ ಜನರ ಕ್ಷೇಮವನ್ನು »» ಪುಟ 6

ಸುರತ್ಕಲ್‌ನ ಮಧ್ಯ ಸರ್ಕಾರಿ ಶಾಲೆಯಲ್ಲಿ ಬೃಹತ್ ಮಿಯಾವಾಕಿ ಅರಣ್ಯ ನಿರ್ಮಾಣಕ್ಕೆ ಸಿದ್ಧತೆ

ಮುಕ್ಕಾಲು ಎಕರೆಯ ಪ್ರದೇಶದಲ್ಲಿ 835 ಗಿಡ ನಾಟಿ!

ಸುರತ್ಕಲ್: ಇಲ್ಲಿನ ಮಧ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಈಗ ತನ್ನ ಪರಿಸರ ಕಾಳಜಿಯ ಮೂಲಕ ಎಲ್ಲರ ಗಮನಸೆಳೆಯುತ್ತಿದೆ.

ನಾಗರಿಕ ಸಲಹಾ ಸಮಿತಿ ವತಿಯಿಂದ ಈ ಶಾಲೆಯ ಮುಕ್ಕಾಲು ಎಕರೆ ಜಾಗದಲ್ಲಿ ಬೃಹತ್ತಾದ 'ಮಿಯಾವಾಕಿ ಅರಣ್ಯ'ದ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ.

ಪಕ್ಷಿಗಳಿಗಾಗಿ ಹಣ್ಣಿನ ಗಿಡಗಳು

ಇಲ್ಲಿ 850ಕ್ಕೂ ಹೆಚ್ಚು ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಪೋಷಣೆ ಮಾಡಲಾಗುತ್ತಿದೆ. ಪಕ್ಷಿ ಸಂಕುಲಕ್ಕೆ ಅಗತ್ಯವಾದ ಹಣ್ಣಿನ ಗಿಡಗಳೂ ಇದರಲ್ಲಿ ಸೇರಿವೆ. ಗುಣಮಟ್ಟದ ಶಿಕ್ಷಣ, ಮೂಲಸೌಕರ್ಯಕ್ಕೆ ಹೆಸರಾದ ಮಧ್ಯ ಸರ್ಕಾರಿ ಶಾಲೆ ರಾಜ್ಯಮಟ್ಟದಲ್ಲೂ ಗುರುತಿಸಿಕೊಂಡಿದೆ.



ಸಂಗಮ ವಿಶೇಷ

ಮುಕ್ಕಾಲು ಎಕರೆ ಕಿರು ಅರಣ್ಯಕ್ಕೆ ಮೀಸಲು

ಶಾಲೆಯ ಪರಿಸರ ಕಾಳಜಿಯಿಂದ ಮುಕ್ಕಾಲು ಎಕರೆ ಜಾಗವನ್ನು ಕಿರು ಅರಣ್ಯಕ್ಕೆ ಮೀಸಲಿಡಲಾಗಿದೆ. ಈ ಯೋಜನೆಗೆ ನಾಗರಿಕ ಸಲಹಾ ಸಮಿತಿಗೆಯೊಂದಿಗೆ ಎಂಸಿಎಫ್ ರಸಗೊಬ್ಬರ ಕಾರ್ಖಾನೆ ಸಹಕಾರ ನೀಡಿದೆ.

ಸಮಿತಿಯ ಪ್ರಮುಖರ ಪ್ರಕಾರ ಹತ್ತಿರ ಹತ್ತಿರ ಗಿಡ ಬೆಳೆದು ಮರವಾಗುವುದರಿಂದ ಗಾಳಿ ಮಳೆಗೆ ಉರುಳುವ ಸಾಧ್ಯತೆ ಕಡಿಮೆ. ಭೂ ಕುಸಿತ ಪ್ರದೇಶದಲ್ಲೂ ಇದು ಪ್ರಯೋಜನಕಾರಿ.

ಅರಣ್ಯ ಜೊತೆ ಇಲ್ಲಿದೆ ಪಶುಪಕ್ಷಿಗಳಿಗೆ ನೀರಿನ ಆಸರೆ

ಮಧ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಠಾರದ ಮುಕ್ಕಾಲು ಎಕರೆ ಪ್ರದೇಶದಲ್ಲಿ 835 ಗಿಡಗಳನ್ನು ನೆಡಲಾಗಿದೆ. ಪಶುಪಕ್ಷಿಗಳಿಗೆ ನೀರಿನ ಆಸರೆಯನ್ನೂ ಕಲ್ಪಿಸಲಾಗಿದೆ. ಶಾಲೆಯ ಆಡಳಿತ ವ್ಯವಸ್ಥೆ ಇಲ್ಲಿ ಇವುಗಳನ್ನು ಉತ್ತಮವಾಗಿ ನಿರ್ವಹಿಸಿಕೊಂಡು ಬರುತ್ತಿದೆ.

ಸಾಂಪ್ರದಾಯಿಕ ಅರಣ್ಯಕ್ಕಿಂತ 30ಪಟ್ಟು ವೇಗ

ಜಪಾನ್‌ನ ಸಸ್ಯ ತಜ್ಞ ಡಾ. ಅಕಿರಾ ಮಿಯಾವಾಕಿ ಎಂಬವರು ಕಡಿಮೆ ಜಾಗದಲ್ಲಿ ಕಿರು ಅರಣ್ಯ ಬೆಳೆಸುವ ಪ್ರಯೋಗ ನಡೆಸಿ ಯಶಸ್ವಿಯಾದವರು. ಅತ್ಯಂತ ಕಡಿಮೆ ಜಾಗದಲ್ಲಿ ಹತ್ತಿರ ಹತ್ತಿರ ನೆಟ್ಟ ಗಿಡಗಳು ಸೂರ್ಯನ ಕಿರಣಗಳಿಗೆ ಸ್ಪರ್ಧಿಸಿ ವೇಗವಾಗಿ ಬೆಳೆಯುತ್ತವೆ. ಸಾಂಪ್ರದಾಯಿಕ ಅರಣ್ಯಕ್ಕಿಂತ 30 ಪಟ್ಟು ವೇಗವಾಗಿ ಬೆಳೆಯುವ ಈ ಮಾದರಿ ವಿಶ್ವಾದ್ಯಂತ ಜನಪ್ರಿಯವಾಗಿದೆ.

ಭೂಕುಸಿತ ತಡೆಯಲು ತುರ್ತು ಮುನ್ನೆಚ್ಚರಿಕೆ ಕ್ರಮಕ್ಕೆ ಸೂಚನೆ 3
ಜೂ.8,9ರಂದು ಪೆರಡಾಲ ಶ್ರೀ ಉದನೇಶ್ವರ ಕ್ಷೇತ್ರದಲ್ಲಿ ದೃಢಕಲಶ 5
ಬಡವರ ಸ್ವಂತ ಮನೆ ಆಸೆಗೆ ಹೊಸ ಆಶಾಕಿರಣ ಪಿಎಂ ಆವಾಸ್ 6

ಸುತ್ತಮುತ್ತ

ಕ್ರೀಡಾಕೂಟ: ಗ್ಲೇಡಿಸ್ ಪಾಯ್ಸ್ ಪ್ರಥಮ




ಬಂಟ್ವಾಳ: ಗೋವಾದಲ್ಲಿ ಈಚೆಗೆ ನಡೆದ 3ನೇ ರಾಷ್ಟ್ರೀಯ ಮಹಿಳಾ ಕ್ರೀಡಾಕೂಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಬಂಟ್ವಾಳದ ಹಿರಿಯ ಕ್ರೀಡಾಪಟು ಗ್ಲೇಡಿಸ್ ಪಾಯ್ಸ್, ಅವರು 70ಕ್ಕೆ ಹೆಚ್ಚಿನ ವಯೋಮಾನ ವಿಭಾಗದಲ್ಲಿ ತ್ರಿವಿಧ ಜಿಗಿತ, 400ಮೀ ಓಟ ಹಾಗೂ 200ಮೀ ಓಟದಲ್ಲಿ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಆಗಿ ಗುರುತಿಸಿದ್ದಾರೆ.

ಒಂದು ತಿಂಗಳು ಯಕ್ಷಗಾನ ತಾಳಮದ್ದಳೆ: ತಂಡಗಳಿಗೆ ಆಹ್ವಾನ

ಬಂಟ್ವಾಳ: ಇಲ್ಲಿನ ಶ್ರೀ ತಿರುಮಲ ವೆಂಕಟರಮಣ ದೇವಳದಲ್ಲಿ ಶತಮಾನಗಳಿಂದ ಅವ್ಯಾಹತವಾಗಿ ನಡೆದುಕೊಂಡು ಬಂದ ಶ್ರಾವಣ ಮಾಸದ ಯಕ್ಷಗಾನ ತಾಳಮದ್ದಳೆ ಸೇವೆಯು ಆಗಸ್ಟ್ 13ರಿಂದ ಸೆಪ್ಟೆಂಬರ್ 11ರವರೆಗೆ ಒಂದು ತಿಂಗಳ ಪರ್ಯಂತ ನಡೆಯಲಿದೆ. ಯಕ್ಷಗಾನ ತಾಳಮದ್ದಳೆ ಸೇವೆಯು ಸಂಜೆ 6.30ರಿಂದ 9.30 ರವರೆಗೆ ನಡೆಯಲಿದ್ದು ಸೇವೆಯಲ್ಲಿ ಭಾಗವಹಿಸಲಿಚ್ಛಿಸುವ ಯಕ್ಷಗಾನ ತಂಡ ತಮಗೆ ಅನುಕೂಲವಾದ ಕನಿಷ್ಠ 5 ದಿನಗಳನ್ನು ತಿಳಿಸಿದಲ್ಲಿ ಒಂದು ದಿನವನ್ನು ಆಯ್ಕೆ ಮಾಡಿ ತಿಳಿಸಲಾಗುವುದು. ಯಾವುದೇ ವೆಚ್ಚ ಕೊಡಲ್ಪಡುವುದಿಲ್ಲ.ಯಕ್ಷಗಾನ ಸಾಹಿತ್ಯ ಲಭ್ಯವಿರುವುದು, ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ : 90719 23352 ಅಥವಾ 94813 90149 ಸಂಪರ್ಕಿಸಬಹುದಾಗಿದೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಗಪಟ್ಟಣ ಕಿಂಡಿ ಅಣೆಕಟ್ಟು ಗೇಟು ತೆಗೆಯಲು ಆದೇಶ



ಸುಳ್ಯ: ಮಳೆ ಆರಂಭವಾಗುತ್ತಿದ್ದಂತೆ ಪಯಸ್ವಿನಿ ನದಿಗೆ ನಾಗಪಟ್ಟಣದಲ್ಲಿ ನಿರ್ಮಿಸಲಾಗಿರುವ ಕಿಂಡಿ ಅಣೆಕಟ್ಟಿನ ಮೇಲ್ಭಾಗದ ಪ್ರದೇಶದಲ್ಲಿ ನೀರು ಹೆಚ್ಚುತ್ತಿದ್ದು ನೀರು ಸರಾಗವಾಗಿ ಹರಿದು ಹೋಗುವ ನಿಟ್ಟಿನಲ್ಲಿ ಅಣೆಕಟ್ಟಿನ ಗೇಟು ತೆರವು ಮಾಡುವಂತೆ ಆದೇಶವಾಗುವುದಾಗಿ ಶಾಸಕಿ ಕಚೇರಿ ತಿಳಿಸಿದೆ. ನಾಗಪಟ್ಟಣ ಕಿಂಡಿ ಅಣೆಕಟ್ಟಿನಲ್ಲಿ 4 ಮೀಟರ್ ನೀರು ನಿಲ್ಲುತ್ತಿದ್ದು ಈಗ ನೀರು ಹೊರ ಹರಿಯುತ್ತಿದ್ದು ಮೇಲ್ಭಾಗದಲ್ಲಿ ನೀರಿನ ಮಟ್ಟ ಹೆಚ್ಚಾಗುತ್ತಿದೆ. ಅರಂಬೂರು ಭಾಗದ ಕೃಷಿಕರ ಕೃಷಿಗಾಗಿ ನೀರು ಹರಿಸಲು ಹೊಳೆಗೆ ಪಂಪ್ ಇರಿಸಿದ್ದಾರೆ. ಅಣೆಕಟ್ಟಿನ ಗೇಟು ತೆರೆಯುವ ಸಂದರ್ಭದಲ್ಲಿ ಕೃಷಿಕರು ಜಾಗರೂಕರಾಗಿದ್ದು ಎರಡು ದಿನಗಳ ಕಾಲ ಸಾರ್ವಜನಿಕರು ಸಹಕರಿಸುವಂತೆ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಹಾಗೂ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ತಾಂತ್ರಿಕ ದೋಷ: ಬಸ್ ಅಪಘಾತ

ವಿಟ್ಲ: ಉಕ್ಕುಡ ಸಮೀಪ ಸರ್ಕಾರಿ ಬಸ್ಸೊಂದು ತಾಂತ್ರಿಕ ದೋಷದಿಂದ ನಿಯಂತ್ರಣ ತಪ್ಪಿ ರಸ್ತೆಯಿಂದ ಬದಿಗೆ ಸಂಚರಿಸಿದ್ದು ಬಸ್ಸಿನ ಚಾಲಕ ಸೇರಿ ವಿದ್ಯಾರ್ಥಿಗಳಿಗೆ ಗಾಯವಾಗಿದೆ. ಉಕ್ಕುಡ ಅಪ್ಪೆರಿಪಾದೆಯಲ್ಲಿ ಬೆಳಗ್ಗೆ ವಿಟ್ಲ ಕಡೆಗೆ ಬರುತ್ತಿದ್ದ ಬಸ್ ಪೂರ್ತಿ ವಿದ್ಯಾರ್ಥಿಗಳಿಂದ ತುಂಬಿತ್ತು. ಚಾಲಕನಿಗೆ ತಾಂತ್ರಿಕ ದೋಷದ ಅರಿವಾಗಿ ನಿಲ್ಲಿಸಲು ಪ್ರಯತ್ನಿಸಿದ್ದು ಈ ಸಂದರ್ಭ ನಿಯಂತ್ರಣ ತಪ್ಪಿ ರಸ್ತೆಯ ಪಕ್ಕಕ್ಕೆ ಸಾಗಿದೆ. ಇದರಿಂದ ಚಾಲಕನ ಸೊಂಟದ ಭಾಗಕ್ಕೆ ಹಾಗೂ ವಿದ್ಯಾರ್ಥಿನಿಯೊಬ್ಬರ ಕಾಲಿಗೆ ಗಾಯವಾಗಿದೆ ಎಂದು ತಿಳಿದು ಬಂದಿದೆ.

ಹದಗೆಟ್ಟ ನುಳಿಯಾಲು-ಬಂಟಾಜೆ ರಸ್ತೆ: ದುರುಸ್ತಿಗೆ ಸಾರ್ವಜನಿಕರಿಂದ ಆಗ್ರಹ



ನಿಡ್ವಳ್ಳಿ: ರೆಂಜ ತಂಬುತ್ತಡ್ಕ ನುಳಿಯಾಲು ಮೂಲಕ ಬಂಟಾಜೆ ಹೋಗುವ ರಸ್ತೆ ಹೊಂಡ ಗುಂಡಿಗಳಿಂದ ತೀರಾ ಹದಗೆಟ್ಟಿದ್ದು ಸಂಚಾರಕ್ಕೆ ಸಮಸ್ಯೆಯಾಗಿದ್ದು ತಕ್ಷಣ ದುರಸ್ತಿಗಾಗಿ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಈ ರಸ್ತೆಯು ಕರ್ನಾಟಕ ಕೇರಳ ಗಡಿ ಪ್ರದೇಶದಲ್ಲಿದ್ದು ದಿನಂಪ್ರತಿ ನೂರಾರು ವಾಹನಗಳು ಈ ರಸ್ತೆಯಲ್ಲಿ ಕೇರಳಕ್ಕೆ ಸಂಚರಿಸುತ್ತವೆ. ವಾಹನ ಸಂಚಾರಕ್ಕೆ ಮಾತ್ರವಲ್ಲದೆ ಪಾದಚಾರಿಗಳೂ ನಡೆದಾಡಲು ಅಸಾಧ್ಯವಾಗಿದೆ. ಈ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಮಾಡುವಂತೆ ಅನೇಕ ವರ್ಷಗಳಿಂದ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸುತ್ತಾ ಬಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಇಲ್ಲಿನ ಸಾರ್ವಜನಿಕರು, ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಆದುದರಿಂದ ಇನ್ನಾದರೂ ಸಂಬಂಧ ಪಟ್ಟ ಇಲಾಖೆ ಇತ್ತ ಗಮನ ಹರಿಸಿ ತಕ್ಷಣ ದುರಸ್ತಿ ಗೊಳಿಸುವಂತೆ ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ. ಈ ರಸ್ತೆಯಲ್ಲಿ ಕೇರಳದಿಂದ ಕರ್ನಾಟಕಕ್ಕೆ ಕೆಂಪು ಕಲ್ಲು ಸಾಗಾಟ ನಡೆಯುತ್ತಿದ್ದು, ದೊಡ್ಡ ಗಾತ್ರದ ಲಾರಿಗಳು ಹೋಗುತ್ತಿರುವುದರಿಂದ ರಸ್ತೆ ಹಾಳಾಗುತ್ತಿದೆ. ಕಲ್ಲು ಸಾಗಾಟವನ್ನು ಮಳೆಗಾಲದಲ್ಲಿ ನಿಲ್ಲಿಸಬೇಕು ಎಂದು ಸ್ಥಳೀಯ ನಾಗರಿಕರು ತಿಳಿಸಿದ್ದಾರೆ.

ಪುತ್ತೂರು ತಾಲೂಕು ಪಂಚಾಯತ್ ಇಒ ಸೂಚನೆಯಡಿ ಗ್ರಾಮ ಪಂಚಾಯತ್‌ನಿಂದ ಕಾರ್ಯಾಚರಣೆ

ಎಲ್ಲೆಂದರಲ್ಲಿ ತ್ಯಾಜ್ಯ ಎಸೆದರೆ ಬೀಳುತ್ತೆ ದಂಡ, ತಪ್ಪಿದರೆ ಕೇಸ್





ಸಂಗಮ ವಿಶೇಷ

ಪುತ್ತೂರು: ತಾಲೂಕಿನಾದ್ಯಂತ ಸಾರ್ವಜನಿಕರಲ್ಲಿ ಸ್ವಚ್ಛತೆಯ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ತಾಲೂಕು ಪಂಚಾಯತ್ ವತಿಯಿಂದ ಸ್ವಚ್ಛ ಶನಿವಾರ, 'ನಮ್ಮ ಸಂಸ್ಕೃತಿ ಸ್ವಚ್ಛ ಸಂಸ್ಕೃತಿ' ಹೀಗೆ ಸ್ವಚ್ಛ ಭಾರತ ಮಿಷನ್ (ಗ್ರಾಮೀಣ) ಯೋಜನೆಯಡಿಯಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯತೆಯ ಜಾಗೃತಿ ಮೂಡಿಸುವ ಅಂಗವಾಗಿ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆದರೆ, ಮತ್ತದೇ ಚಾಳಿ ಸಾರ್ವಜನಿಕರಲ್ಲಿ ಮುಂದು ವರಿದಿರುವ ಹಿನ್ನಲೆಯಲ್ಲಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ನವೀನ್ ಭಂಡಾರಿ ಅವರ ಸೂಚನೆಯಂತೆ ಕಬಕ ಹಾಗೂ ನರಿಮೊಗರು ಗ್ರಾ.ಪಂ. ವ್ಯಾಪ್ತಿಯಲ್ಲಿ ತ್ಯಾಜ್ಯ ಎಸೆದವರಿಗೆ ದಂಡ ವಿಧಿಸುವ ಕಾನೂನು ಅಸ್ತ್ರದ ಮೂಲಕ ನಾಗರಿಕ ಪ್ರಜ್ಞೆಯನ್ನು ಎಚ್ಚರಿಸುವ ಕಾರ್ಯ ಆರಂಭಿಸಲಾಗಿದೆ.

ರೂ.20 ಸಾವಿರ ದಂಡ ವಸೂಲಿ

ಕಬಕ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಕಬಕ ಜಂಕ್ಷನ್‌ನಿಂದ ಕೂವೆತ್ತಿಲದವರೆಗೆ ರಸ್ತೆ ಬದಿ ಕಸ ಎಸೆದ 5 ಪ್ರಕರಣಗಳು ಕಳೆದ 3 ದಿನಗಳಲ್ಲಿ ಬೆಳಕಿಗೆ ಬಂದಿದೆ. ಕಬಕ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ, ಸಿಬ್ಬಂದಿ, ಸಂಜೀವಿನಿ ಹಾಗೂ ಆಶಾ ಕಾರ್ಯಕರ್ತೆಯರು ಕಸದ ಮೂಟೆಯನ್ನು ಕೆದಕಿ ಅದರಲ್ಲಿ ಕಸ ಎಸೆದವರ ವಿಳಾಸವಿರುವ ಪಾರ್ಸಲ್ ಕವರ್‌ಗಳ ಮೂಲಕ ಕಸ ಎಸೆದವರನ್ನು ಗುರುತಿಸಿ ದಂಡ ವಿಧಿಸುವ ಪಾಠವನ್ನು ಮಾಡಿದ್ದಾರೆ. ಕಸ ಎಸೆದ 5 ಮಂದಿಯ ಪೈಕಿ 4 ಮಂದಿಯಿಂದ ರೂ.5 ಸಾವಿರದಂತೆ ಒಟ್ಟು 20 ಸಾವಿರ ದಂಡವನ್ನು ಕಬಕ ಗ್ರಾ.ಪಂ. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸುಭಾಶ್ಚಂದ್ರ ಪಿ.ಜೆ. ವಸೂಲಿ ಮಾಡಿದ್ದರೆ. ಓರ್ವ ಕಸ ಎಸೆದ ವ್ಯಕ್ತಿ ದಂಡ ತೆರಲು ನಿರಾಕರಿಸಿದ ಕಾರಣ ಆ ವ್ಯಕ್ತಿಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನರಿಮೊಗರಿನಲ್ಲಿ ರೂ.10 ಸಾವಿರ ದಂಡ

ನರಿಮೊಗರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮೇ 30ಕ್ಕೆ ಕೈಪಂಗಳ ಎಂಬಲ್ಲಿ ಸಾರ್ವಜನಿಕ ತೋಡಿಗೆ ಗೋಣಿಚೀಲದಲ್ಲಿ ಮಾಂಸದ ತ್ಯಾಜ್ಯ ಎಸೆಯುವುದನ್ನು ಸಾರ್ವಜನಿಕರು ವೀಕ್ಷಿಸಿದ್ದು ಕಸ ಎಸೆದವರ ಫೋಟೋ ಸಮೇತ ಪಂಚಾಯತ್‌ಗೆ ವಿಷಯ ತಿಳಿಸಿದ ಪರಿಣಾಮ ಆ ವ್ಯಕ್ತಿಯ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿ ಆ ಮೂಲಕ ಕಸ ಎಸೆದ ವ್ಯಕ್ತಿಯಿಂದಲೇ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಆಶಾ ಅವರು ರೂ.10 ಸಾವಿರ ದಂಡ ಕಟ್ಟಿಸಿಕೊಂಡಿದ್ದಾರೆ ಹಾಗೂ ಇನ್ನು ಮುಂದೆ ಕಸ ಎಸೆಯದಂತೆ ಎಚ್ಚರಿಕೆ ನೀಡಿದ್ದಾರೆ.

ದಂಡ ಪ್ರಯೋಗ ನಿಶ್ಚಿತ

ರಸ್ತೆ ಬದಿ, ಸಾರ್ವಜನಿಕ ಪ್ರದೇಶದಲ್ಲಿ ಎಸೆಯುವ ಕಸದ ಮೂಟೆಯನ್ನು ಬಿಚ್ಚಿ ಕಸ ಎಸೆದವರ ಜಾಡು ಹಿಡಿಯಲಾಗುತ್ತಿದೆ. ಆನ್‌ಲೈನ್‌ನಲ್ಲಿ ಖರೀದಿಸಿದ ವಿವಿಧ ಉತ್ಪನ್ನಗಳ ಕವರ್ ಸಮೇತ ಎಸೆಯುವುದರಿಂದ ಕಸದ ಚೀಲವನ್ನು ಬಿಡಿಸಿ ಆ ಮೂಲಕ ಕಸ ಎಸೆದವರ ವಿಳಾಸ ಅಥವಾ ಹೆಸರನ್ನು ಕಂಡು ಹಿಡಿದು ಆ ಮೂಲಕ ದಂಡ ವಿಧಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಕಸ ಎಸೆದಿರುವ ಬಗ್ಗೆ ಸ್ಪಷ್ಟ ಆಧಾರ ದೊರೆತು ಆ ವ್ಯಕ್ತಿಗೆ ದಂಡ ಕಟ್ಟುವಂತೆ ತಿಳಿಸಿದರೂ ಕೆಲವು ವ್ಯಕ್ತಿಗಳು ದಂಡ ಕಟ್ಟಲು ನಿರಾಕರಿಸಿದರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗುತ್ತಿದೆ. ಒಟ್ಟಿನಲ್ಲಿ ಸ್ವಚ್ಛತೆಯ ಕೆಲಸ ಕೇವಲ ಗ್ರಾ.ಪಂ. ಮಾತ್ರವಲ್ಲದೆ ಸಾರ್ವಜನಿಕರೂ ಸಹಕರಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಸ್ವಚ್ಛ ಪರಿಸರ ನಿರ್ಮಾಣಕ್ಕೆ ಆಡಳಿತಕ್ಕೆ ಜನತೆ ಕೈ ಜೋಡಿಸಬೇಕಿದೆ.

ದಂಡ ತಪ್ಪಿದಲ್ಲಿ ಎಫ್‌ಐಆರ್

ಈಗಾಗಲೇ ನಾಗರಿಕರಿಗೆ ಸ್ವಚ್ಛತೆಯ ಪ್ರಜ್ಞೆ ಮೂಡಿಸುವ ನಿಟ್ಟಿನಲ್ಲಿ ಹಲವು ಮಾಹಿತಿ, ಶಿಕ್ಷಣ, ಸಂವಹನ ಕಾರ್ಯಕ್ರಮಗಳನ್ನು ಅಭಿಯಾನಗಳನ್ನು ಹಮ್ಮಿಕೊಂಡಿದ್ದರೂ ರಸ್ತೆ ಇಕ್ಕೆಲಗಳಲ್ಲಿ ಕಸ ಎಸೆಯುವ ಛಾಳಿ ಮುಂದುವರಿಯುತ್ತಲೇ ಇದೆ. ಪ್ರತಿ ವಾರ ಗ್ರಾ.ಪಂ.ಗಳಿಂದ ಕಸ ಹೆಕ್ಕುವ ಕಾರ್ಯ ಮಾಡುತ್ತಾರೆ. ಆದರೆ, ವಾರದೊಳಗೆ ಮತ್ತದೇ ಕಸದ ರಾಶಿಗಳು ಕಂಡು ಬರುತ್ತಿವೆ. ಇದಕ್ಕೆ ದಂಡ ಪ್ರಯೋಗವೇ ಸರಿಯಾದ ಕ್ರಮ. ದಂಡ ಕಟ್ಟಲು ನಿರಾಕರಿಸಿದರೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗುವುದು. ಆ ಮೂಲಕ ದಂಡದ ಜೊತೆಗೆ ಸ್ವಚ್ಛತೆಯ ಪ್ರಜ್ಞೆ ಮೂಡಿಸುವ ಉದ್ದೇಶದಿಂದ ಹಾಗೂ ಸ್ವಚ್ಛ ಸುಂದರ ವಾತಾವರಣಕ್ಕಾಗಿ ಈ ಕಟ್ಟು ನಿಟ್ಟಿನ ಕ್ರಮಕ್ಕೆ ಎಲ್ಲರೂ ಸಹಕರಿಸಬೇಕು.

● ನವೀನ್ ಭಂಡಾರಿ, ತಾ.ಪಂ. ಇ.ಒ.

ಮಾರ್ಗಸೂಚಿ ಪ್ರಕಾರ ತ್ಯಾಜ್ಯ ವಿಂಗಡಿಸಿ

ಈಗಾಗಲೇ ಪ್ರತಿ ಗ್ರಾಮ ಪಂಚಾಯತ್‌ಗಳಲ್ಲಿ ಮಾರ್ಗಸೂಚಿ ಪ್ರಕಾರ ಘನ ತ್ಯಾಜ್ಯ ಸಂಗ್ರಹಕ್ಕೆ ಸ್ವಚ್ಛತಾ ವಾಹಿನಿಯ ಬರುತ್ತಿದ್ದು ಎಲ್ಲರೂ ಒಣ ಕಸವನ್ನು ನೀಡಿ ಸಹಕರಿಸಬೇಕು ಎಂದು ತಾಲೂಕು ಪಂಚಾಯತ್ ಎಚ್ಚರಿಕೆ ನೀಡಿದೆ.

ಆಟೋ ಚಾಲಕರು ಜನಸಾಮಾನ್ಯರ ನೈಜ ಒಡನಾಡಿಗಳು: ಶಾಸಕಿ ಭಾಗೀರಥಿ



ಕಡಬ: ಉಪ್ಪಿನಂಗಡಿ-ಕಡಬ-ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿಯ ಬಲ್ಯ ಎಂಬಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ರೂ.5 ಲಕ್ಷ ವೆಚ್ಚದಲ್ಲಿ ನಿರ್ಮಾಣವಾದ ಆಟೋ ರಿಕ್ಷಾ ನಿಲ್ದಾಣವನ್ನು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಮಂಗಳವಾರ ಲೋಕಾರ್ಪಣೆಗೊಳಿಸಿದರು.

ಈ ಸಂದರ್ಭ ಮಾತನಾಡಿದ ಶಾಸಕರು, ಸರಕಾರದಿಂದ ದೊರೆಯುವ ಅನುದಾದ ತುಂಬಾ ಕಡಿಮೆಯಾಗಿದೆ, ಲಭ್ಯ ಅನುದಾನದಲ್ಲಿ ಸಾಮಾನ್ಯ ಜನರ ಒಡನಾಡಿಯಾಗಿ ಸೇವೆ ಸಲ್ಲಿಸುತ್ತಿರುವ ಆಟೋ ಚಾಲಕರಿಗೆ ಅಗತ್ಯವಿರುವ ಆಟೋ ನಿಲ್ದಾಣಕ್ಕೆ ಅನುದಾನ ಒದಗಿಸಲಾಗಿದೆ. ಆಟೋ ಚಾಲಕರು ಕೊರೋನಾದಂತಹ ಸಂದರ್ಭದಲ್ಲಿ ಕೂಡಾ ಜೀವದ ಹಂಗು ತೊರೆದು ಕೆಲಸ ನಿರ್ವಹಿಸಿದ್ದಾರೆ. ಯಾವುದೇ ಕ್ಲಿಷ್ಟಕರ ಸಂದರ್ಭದಲ್ಲಿ ಕೂಡಾ ಆಟೋ ಚಾಲಕರು ಜನರಿಗೆ ಲಭ್ಯರಿದ್ದು ಸೇವೆ ನೀಡುತ್ತಾರೆ. ಇಂತಹ ಕಷ್ಟ ಜೀವಿಗಳ ಸೇವೆಯನ್ನು ನಾವು ಸದಾ ಗೌರವಿಸಬೇಕು ಎಂದರು.

ಬಿಜೆಪಿ ಬಲ್ಯ ಬೂತ್ ಸಮಿತಿಯ ಅಧ್ಯಕ್ಷ ಪ್ರಕಾಶ್ ಪಟ್ಟೆ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಕೃಷ್ಣ ಶೆಟ್ಟಿ ಕಡಬ, ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಕಾರ್ಯದರ್ಶಿ ಶ್ರೀಕೃಷ್ಣ ಎಂ.ಆರ್., ಸುಳ್ಯ ಮಂಡಲ ಕಾರ್ಯದರ್ಶಿ ಪ್ರದೀಪ್ ರೈ ಮನವಳಿಕೆ, ಬಲ್ಯ ಶ್ರೀ ಉಮಾ ಮಹೇಶ್ವರಿ ದೇವಸ್ಥಾನ ಅಧ್ಯಕ್ಷ ರಾಮಚರಣ್ ರೈ ಮಾಣಿಗ, ಕಾರ್ಯದರ್ಶಿ ನಾರಾಯಣ ಗೌಡ ಬಲ್ಯ, ಹೊಸಮಠ ಪ್ರಾಥಮಿಕ ಕೃಷಿ ಪತ್ತಿನ ಸಂಘದ ಅಧ್ಯಕ್ಷ ಕೃಷ್ಣಪ್ಪ ದೇವಾಡಿಗ ನಸಲ, ಮಾಜಿ ಅಧ್ಯಕ್ಷ ಶಿವಪ್ರಸಾದ್ ಪುತ್ತಿಲ, ಬಿಜೆಪಿ ಮುಖಂಡ ಅಶೋಕ್ ಕುಮಾರ್ ಪಿ., ದೇವಯ್ಯ ಗೌಡ ಪನ್ಯಾಡಿ, ಪೂರ್ಣೇಶ್ ಬಲ್ಯ, ಜನಾರ್ದನ ಗೌಡ ಆರಿಗ, ಅರ್ಚಕ ರವಿಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು. ಪುಷ್ಪರಾಜ್ ಬಾರೆತ್ತಡಿ ಸ್ವಾಗತಿಸಿ, ಹರೀಶ್ ದೇವತಡ್ಕ ವಂದಿಸಿದರು. ಧನಂಜಯ ಕೊಡಂಗೆ ನಿರ್ವಹಿಸಿದರು. ಶಾಸಕರು ಚಾಲಕರಿಗೆ ಕಿಟ್ ವಿತರಿಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ವ್ಯವಸ್ಥೆ ಕಲ್ಪಿಸುವಲ್ಲಿ ಮನಪಾ ವಿಫಲ: ಆರೋಪ

ಮಂಗಳೂರು: ಬೀದಿ ಬದಿ ವ್ಯಾಪಾರಿಗಳಿಗೆ ಸಮರ್ಪಕವ್ಯವಸ್ಥೆ ಕಲ್ಪಿಸುವಲ್ಲಿ ಮಂಗಳೂರು ಮಹಾನಗರ ಪಾಲಿಕೆ ವಿಫಲವಾಗಿದೆ. ಪಾಲಿಕೆ ಹಾಗೂ ಜಿಲ್ಲಾಡಳಿತ ತಕ್ಷಣ ಸ್ಪಂದಿಸಿ ಪ್ರತ್ಯೇಕ ಬೀದಿಬದಿ ವ್ಯಾಪಾರ ವಲಯ ಗುರುತಿಸಿ ಪರವಾನಿಗೆ ನೀಡಬೇಕು. ಅರ್ಹ ವ್ಯಾಪಾರಿಗಳಿಗೆ ಅನ್ಯಾಯವಾಗದಂತೆ ಕ್ರಮ ವಹಿಸಬೇಕು ಎಂದು ಆಮ್ ಆದ್ಮಿ ಪಕ್ಷ ದಕ್ಷಿಣ ಕನ್ನಡ ಜಿಲ್ಲಾ ಘಟಕ ಆಗ್ರಹಿಸಿದೆ.

ಬೀದಿ ಬದಿ ವ್ಯಾಪಾರಿಗಳು ನಮ್ಮ ನಗರದ ಆರ್ಥಿಕತೆಯ ಪ್ರಮುಖ ಆಧಾರ ಸ್ತಂಭವಾಗಿದ್ದಾರೆ. ಕೇಂದ್ರ ಸರ್ಕಾರ ವಿವಿಧ ಕಲ್ಯಾಣ ಯೋಜನೆಗಳ ಮೂಲಕ ಅವರನ್ನು ಸಬಲೀಕರಣಗೊಳಿಸಲು ಉತ್ತೇಜನ ನೀಡುತ್ತಿದೆ. ಆದರೆ, ಸೂಕ್ತ ವ್ಯಾಪಾರ ವಲಯ ಗುರುತಿಸುವಲ್ಲಿ ವಿಫಲವಾಗಿರುವ ಮಂಗಳೂರು ಮಹಾನಗರ ಪಾಲಿಕೆಯು, ನಗರದ ಬಡವರ ಸಂಪಾದನೆಯ ಅವಕಾಶಗಳನ್ನು ನೇರವಾಗಿ ಕಸಿದುಕೊಂಡಿದೆ ಎಂದು ಆಪ್ ರಾಜ್ಯ ಉಪಾಧ್ಯಕ್ಷ ವಿವೇಕಾನಂದ ಸಾಲಿನ್ಸ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಸವಲತ್ತು ಪಡೆಯಲು ಕಷ್ಟ

ಬೀದಿ ಬದಿ ವ್ಯಾಪಾರಿಗಳ ಕಾಯ್ದೆಯು ವ್ಯಾಪಾರ ವಲಯಗಳನ್ನು ಗುರುತಿಸಲು ಮತ್ತು ಬಯೋಮೆಟ್ರಿಕ್ ಪರವಾನಗಿಗಳನ್ನು ನೀಡಲು ಸ್ಪಷ್ಟ ಮಾರ್ಗಸೂಚಿಗಳನ್ನು ನೀಡಿದೆ. ಆದರೆ, ಪಾಲಿಕೆ ಅಧಿಕಾರಿಗಳ ಅಸಮರ್ಥತೆಯಿಂದ ಈ ಪ್ರಕ್ರಿಯೆಯು ಸಂಪೂರ್ಣವಾಗಿ ನನೆಗುದಿಗೆ ಬಿದ್ದಿದೆ. ವ್ಯಾಪಾರಿಗಳ ಏಳಿಗೆಗಾಗಿ ಇರುವ ಕೇಂದ್ರ ಸರಕಾರದ ಹಣಕಾಸು ಯೋಜನೆಗಳು ಸ್ಥಳೀಯವಾಗಿ ಅನುಷ್ಠಾನಗೊಳ್ಳದೆ ಹಾಗೇ ಉಳಿದುಕೊಂಡಿದ್ದು, ಪಾಲಿಕೆ ತತ್ ಕ್ಷಣ ಕ್ರಮ ಕೈಗೊಳ್ಳಬೇಕು ಎಂದರು.

ಪಕ್ಷವು ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಿ ಪರಿಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸುತ್ತಿದ್ದು, ಈಗಾಗಲೇ 22 ದೂರುಗಳನ್ನು ಸ್ವೀಕರಿಸಲಾಗಿದೆ ಎಂದರು. ಜಿಲ್ಲಾ ಸಂಘಟನಾ ಕಾರ್ಯದರ್ಶಿ ಎಸ್. ಎಲ್. ಪಿಂಟೊ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಸೀಮಾ ಮಡಿವಾಳ, ಪ್ರಮುಖರಾದ ಕಬೀರ್ ಕಾಟಿಪಳ್ಳ, ಶಾಲೆಟ್ ಪಿಂಟೊ, ಸುಜಾತ ಯತೀಶ್ ಉಪಸ್ಥಿತರಿದ್ದರು.

ಪರವಾನಗಿ ನೀಡಿ

ಬೀದಿಬದಿ ವ್ಯಾಪಾರಸ್ಥರ ಯೂನಿಯನ್ ಮಾಡಿ ಅವರಿಂದ 50 ರೂ., 20 ರೂ. ಸಂಗ್ರಹಿಸುವುದು ಸರಿಯಲ್ಲ, ಹೊರಗಿನಿಂದ ಮಂಗಳೂರಿಗೆ ವ್ಯಾಪಾರಕ್ಕೆ ಆಗಮಿಸುವವರಿಗೆ ಗೌರವ ನೀಡಿ, ಕಾನೂನು ಮೂಲಕ ಅವರಿಗೆ ಪರವಾನಿಗೆ ಒದಗಿಸಬೇಕು ಎಂದು ವಿವೇಕಾನಂದ ಸಾಲಿನ್ಸ್ ಹೇಳಿದರು.

ಶೌರ್ಯ ತಂಡದ ಸದಸ್ಯರಿಂದ ಬಡ ಮಹಿಳೆಯ ಮನೆ ದುರಸ್ತಿ



ಬಂಟ್ವಾಳ: ತಾಲೂಕಿನ ಚೆನ್ನೈತೋಡಿ ಗ್ರಾಮದ ವಾಮದಪದವು ಮಂಜುಳಾ ಅವರ ಮನೆಯ ಮೇಲ್ಛಾವಣಿ ದುರಸ್ತಿ ಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಬಂಟ್ವಾಳ ಇದರ ವಗ್ಗ ವಲಯದ ಶೌರ್ಯ ವಿಪತ್ತು ನಿರ್ವಹಣಾ ಘಟಕ ಕಾಡಬೆಟ್ಟು- ವಗ್ಗ ವತಿಯಿಂದ ವಾಮದಪದವು ಮತ್ತು ಧನು ಪೂಜೆ ಶೌರ್ಯ ಘಟಕ ಸದಸ್ಯರ ಸಹಕಾರದೊಂದಿಗೆ ಮಾಡಲಾಯಿತು.

ಈ ಸಂದರ್ಭ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹಾಸನ ಜಿಲ್ಲೆಯ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್ ಭೇಟಿ ನೀಡಿ ಶ್ರಮದಾನಕ್ಕೆ ಪ್ರೋತ್ಸಾಹವನ್ನಿತ್ತರು. ಈ ವರ್ಷದಲ್ಲಿ ಕಾಡಬೆಟ್ಟು ವಗ್ಗ ಶೌರ್ಯ ಘಟಕದ 7ನೇ ಮನೆ ದುರಸ್ತಿಯ ಶ್ರಮದಾನ ಇದಾಗಿದ್ದು, ತೀರಾ ಬಡತನದಲ್ಲಿರುವ ಮಂಜುಳಾ ಅವರ ಮನೆಯಲ್ಲಿ ಇವರೊಂದಿಗೆ ವಿಕಲಚೇತನ ಅಕ್ಕ ವಾಸಿಸುತ್ತಿದ್ದು ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಮಾಶಾಸನವನ್ನು ಪಡೆಯುತಿದ್ದಾರೆ. ಮನೆಯ ಮೇಲ್ಛಾವಣಿ ದುರಸ್ತಿಗೆ ಬೇಕಾದ ಸಲಕರಣೆಗಳನ್ನು ಹಾಗೂ ಉಪಹಾರದ ವ್ಯವಸ್ಥೆಯನ್ನು ವಾಮದಪದವಿನ ಉದ್ಯಮಿ ಅನಂತ ಪೈ ನೀಡಿ ಸಹಕರಿಸಿದರು.

ಶ್ರಮದಾನ ಕಾರ್ಯದಲ್ಲಿ ಕಾಡಬೆಟ್ಟು ಶೌರ್ಯ ಘಟಕದ ಘಟಕ ಪ್ರತಿನಿಧಿ ಪ್ರವೀಣ್, ಸದಸ್ಯರಾದ ಸಂಪತ್ ಶೆಟ್ಟಿ, ಅಶೋಕ ಬೊಳ್ಮಾರ್, ಶಶಿಕಲಾ, ನಾರಾಯಣ್ ಪೂಜಾರಿ, ರಮೇಶ್, ವಿನೋದ್, ಮಹಾಬಲ ರೈ, ನಾರಾಯಣಶೆಟ್ಟಿ ಮೋಹನಂದ, ರೋಹಿತ್, ಜನಾರ್ದನ, ಹಾಗೂ ವಾಮದಪದವು ಶೌರ್ಯ ಘಟಕ ಪ್ರತಿನಿಧಿ ಪ್ರಕಾಶ್, ರವೀಂದ್ರ ರೈ, ಗಿರೀಶ್ ನಾಯಕ್, ಧನು ಪೂಜೆ ಘಟಕದ ಪ್ರಮೋದ್ ಆಚಾರ್ಯ ಮೊದಲಾದವರು ಭಾಗವಹಿಸಿದ್ದರು

ಡಾ. ಹರಿಶ್ಚಂದ್ರ ಪಿ. ಸಾಲ್ಯಾನ್‌ರ 'ನುಡಿಮುತ್ತು' ಕೃತಿಯ ಲೋಕಾರ್ಪಣೆ



ಮುಲ್ಕಿ: ಹೊಸ ಅಂಗಣ ಪ್ರಕಟಣಾಲಯ ವತಿಯಿಂದ ಸಂಪಾದಕ ಡಾ.ಹರಿಶ್ಚಂದ್ರ ಪಿ. ಸಾಲ್ಯಾನ್ ಅವರ 'ನುಡಿಮುತ್ತು' 23ನೇ ಕೃತಿ ಬಿಡುಗಡೆ ಸಮಾರಂಭ ಬುಧವಾರ ಪುನರೂರು ಟೂರಿಸ್ಟ್ ಹೋಮ್ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಸಾಪ ಮಾಜಿ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಕನ್ನಡ ಉಳಿಸಿ ಬೆಳೆಸಿ, ಪತ್ರಿಕೆ ಪುಸ್ತಕಗಳನ್ನು ಕೊಂಡು ಓದಿ ಪ್ರೋತ್ಸಾಹಿಸುವ ಕಾರ್ಯವಾಗಬೇಕು ಎಂದರು. ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ತಲ್ಲೂರು ಶಿವರಾಮ್ ಶೆಟ್ಟಿ,ಕಿನ್ನಿಗೋಳಿ ಯುಗಪುರುಷ ಸಂಪಾದಕ ಭುವನಾಭಿರಾಮ ಉಡುಪ, ಕೇಶವಾನಂದ ಸ್ವಾಮೀಜಿ, ಮುಂಬೈ ಪತ್ರಕರ್ತ ಉಮೇಶ್ ಕೆ. ಅಂಚನ್, ಹಳೆಯಂಗಡಿ ಪ್ರಿಯದರ್ಶಿನಿ ಸೊಸೈಟಿ ಸಿಇಒ ಸುದರ್ಶನ್, ಭಾನುಮತಿ ಶೆಟ್ಟಿ ಕಕ್ವಗುತ್ತು, ಅತಿಕಾರಿಬೆಟ್ಟು ಗ್ರಾಪಂ ಮಾಜಿ ಅಧ್ಯಕ್ಷ ಮನೋಹರ್ ಕೋಟ್ಯಾನ್, ವಿಶ್ವಕರ್ಮ ಒಕ್ಕೂಟದ ಬಿಜಿ ಆಚಾರ್ಯ, ಹೊಸ ಅಂಗಣ ಪ್ರಕಾಶನದ ಡಾ.ಹರಿಶ್ಚಂದ್ರ ಪಿ. ಸಾಲ್ಯಾನ್, ಜಾನ್ ಕ್ವಾಡ್ರಸ್, ಮತ್ತಿತರರು ಉಪಸ್ಥಿತರಿದ್ದರು. ಇದೇ ಸಂದರ್ಭ ಶಿಕ್ಷಕಿ ಹಾಗೂ ಸಮಾಜ ಸೇವಕಿ ವಸಂತಿ ಅವರನ್ನು ಗೌರವಿಸಲಾಯಿತು. ದಿನೇಶ್ ಶೆಟ್ಟಿ ಸ್ವಾಗತಿಸಿ, ವಾಸು ಪೂಜಾರಿ ಚಿತ್ರಾಪು ವಂದಿಸಿದರು. ರವಿಚಂದ್ರ ರಾವ್ ನಿರೂಪಿಸಿದರು.

ಪದ್ಮುಂಜದಲ್ಲಿ ಎಂಡೋಸಲ್ಫಾನ್ ಸಂತ್ರಸ್ತರ ಪಾಲನಾ ಕೇಂದ್ರ ಉದ್ಘಾಟನೆ



ಉಪ್ಪಿನಂಗಡಿ: ಬೆಳ್ತಂಗಡಿ ತಾಲೂಕಿನ ಕಣಿಯೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಂಡೋಸಲ್ಫಾನ್ ಸಂತ್ರಸ್ತರ ಪಾಲನಾ ಕೇಂದ್ರವು ತಾಲೂಕು ವೈದ್ಯಾಧಿಕಾರಿ ಡಾ. ಸಂಜಾತ್ ಆರ್.ಬಿ ಅಧ್ಯಕ್ಷತೆಯಲ್ಲಿ ಪದ್ಮುಂಜದ ಕಣಿಯೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉದ್ಘಾಟನೆಗೊಂಡಿತು.

ಈ ಮೂಲಕ ಪದ್ಮುಂಜದ ಸುತ್ತಮುತ್ತಲಿನ 15 ಕಿಲೋಮೀಟರ್ ವ್ಯಾಪ್ತಿಯ ಎಂಡೋ ಸಲ್ಫಾನ್ ಸಂತ್ರಸ್ತರಿಗೆ ಇದರ ಪ್ರಯೋಜನವಾಗಲಿದೆ. ಸಂಸ್ರಸ್ತ ಕೇಂದ್ರವನ್ನು ಮೇಲ್ವಿಚಾರಣೆ ನಡೆಸುತ್ತಿರುವ ಉದ್ಭವ್ ಶೈಕ್ಷಣಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ರಾಜರಾಜೇಶ್ವರಿ ನಗರ ಬೆಂಗಳೂರು ಇದರ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದ ಮೂರ್ತಿ, ಕಣಿಯೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ನಿತಿನ್ ಪಿ.ಎಸ್. ಮಾತನಾಡಿದರು. ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು. ಸಂಸ್ರಸ್ತರು ಸಂಸ್ರಸ್ತ ಪೋಷಕರು ಉಪಸ್ಥಿತರಿದ್ದರು. ಫಿಝಿಯೋತೆರಪಿಸ್ಟ್ ರಶ್ಮಿತಾ, ವಿಶೇಷ ತರಬೇತಿ ಶಿಕ್ಷಕಿ ಸುಜಾತ, ಕೌಶಲ್ಯ ಅಭಿವೃದ್ಧಿ ಶಿಕ್ಷಕಿ ನಯನ, ಅಡಿಗೆ ಸಿಬ್ಬಂದಿ ಶಾಲಿನಿ, ಸಹಾಯಕರಾಗಿ ಪ್ರಮೀಳಾ ಮತ್ತು ಉಷಾ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮೇಲ್ವಿಚಾರಕಿ ಚಂದ್ರಿಕಾ ಸ್ವಾಗತಿಸಿ, ಧನ್ಯವಾದವಿತ್ತರು.

ಡಾ. ಭರತ್ ಶೆಟ್ಟಿ ಕಚೇರಿಯಲ್ಲಿ ಜನಸ್ಪಂದನ, ಅಹವಾಲು ಸ್ವೀಕಾರ



ಸುರತ್ಕಲ್: ಮಂಗಳೂರು ಮಹಾನಗರ ಪಾಲಿಕೆಯ ಸುರತ್ಕಲ್ ಉಪ ಕಚೇರಿಯಲ್ಲಿರುವ ಶಾಸಕರ ಕಚೇರಿಯಲ್ಲಿ ಮಂಗಳೂರು ನಗರ ಉತ್ತರ ಶಾಸಕ ಡಾ. ವೈ. ಭರತ್ ಶೆಟ್ಟಿ ಅವರು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲಿಯೇ ಸ್ಪಂದಿಸಿದರು.

ಮಳೆಗಾಲದಲ್ಲಿ ಕೃತಕ ನೆರೆ ಉದ್ಭವಿಸದಂತೆ ತೋಡುಗಳ ಸ್ವಚ್ಛತೆ, ಹಳೆಯದಾದ ಮರಗಳ ಗೆಲ್ಲುಗಳನ್ನು ಕಡಿಯುವುದು, ಸಮುದ್ರ ಕೊರೆತ ತಡೆಗೆ ಕ್ರಮ ಮತ್ತಿತರ ವಿಚಾರಗಳ ಬಗ್ಗೆ ಮನವಿ ಸ್ವೀಕರಿಸಿದರು. ಇದೇ ಸಂದರ್ಭ ಸುರತ್ಕಲ್ ವ್ಯಾಪ್ತಿಯಲ್ಲಿ ಇರುವ ಚೆರಂಡಿ ಸಮಸ್ಯೆ, ವಿದ್ಯುತ್ ಸಮಸ್ಯೆ ಬಗ್ಗೆ ಹಾಗೂ ರಸ್ತೆ ಸಮಸ್ಯೆ ಬಗ್ಗೆ ಜನರು ಗಮನ ಸೆಳೆದರು. ಸರಕಾರದಿಂದ ಪ್ರತಿ ತಿಂಗಳು ಬರುತ್ತಿದ್ದ ವಿಧವಾ ವೇತನ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು ಸಮಸ್ಯೆಯ ಬಗ್ಗೆ ಫಲಾನುಭವಿಗಳು ಶಾಸಕರ ಗಮನ ಸೆಳೆದರು. ಶಾಸಕರು ಜನರ ಅಹವಾಲುಗಳನ್ನು ಸ್ವೀಕರಿಸಿ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಮೊಂಟೆಪದವಿನ 'ಮಾಧವನ'ದಲ್ಲಿ ವಿಶೇಷ ಮಕ್ಕಳ ವಸತಿಯುತ ಶಾಲೆ, ಫಿಸಿಯೋಥೆರಪಿ ಘಟಕ ಉದ್ಘಾಟನೆ

ಶಾಲೆಗಳ ಅಭಿವೃದ್ಧಿಗೆ ಸಂಘ-ಸಂಸ್ಥೆಗಳ ಸಹಕಾರ ಅತ್ಯಗತ್ಯ: ಸತೀಶ್ಚಂದ್ರ



ಕೊಣಾಜೆ: ಸೇವಾ ಭಾರತಿ ಮಂಗಳೂರು ಇದರ ಮೊಂಟೆಪದವಿನ 'ಮಾಧವನ'ದಲ್ಲಿ ಅಂಕುರ ಕಟ್ಟಡದಲ್ಲಿ ವಿಶೇಷ ಮಕ್ಕಳ ವಸತಿಯುತ ಶಾಲೆ ಮತ್ತು ಫಿಸಿಯೋಥೆರಪಿ ಘಟಕ ಉದ್ಘಾಟನಾ ಕಾರ್ಯಕ್ರಮ ಹಾಗೂ ಆದಮ್ಯ ಚೇತನ ಶಾಲೆಯ ಪುನರಾರಂಭ ಕಾರ್ಯಕ್ರಮ ಸೋಮವಾರ ನಡೆಯಿತು.

ಆದಮ್ಯ ಚೇತನ ಶಾಲೆಯ ವಿಶೇಷ ಮಕ್ಕಳನ್ನು ನಾದಸ್ವರ, ಗೊಂಬೆ, ಕಲಶ ಹಾಗೂ ಚೆಂಡೆವಾದನಗಳೊಂದಿಗೆ, ಆದಮ್ಯ ಚೇತನ ಶಾಲೆಯವರೆಗೆ ನಡೆದ ಭವ್ಯ ಮೆರವಣಿಗೆಯ ಮೂಲಕ ಸ್ವಾಗತಿಸಲಾಯಿತು.

ಕ್ಯಾಂಪ್ಕೋ ಅಧ್ಯಕ್ಷ ಎಸ್. ಆರ್. ಸತೀಶ್ಚಂದ್ರ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ, ಸಂಘ ಸಂಸ್ಥೆಗಳ ಸಹಕಾರ ನೀಡಿದರೆ ಶಾಲೆಗಳ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಅದಾನಿ ಪವರ್ ಲಿಮಿಟೆಡ್‌ನ ಅಸೋಸಿಯೇಟ್ ಜನರಲ್ ಮ್ಯಾನೇಜರ್ ರವಿ ಆರ್. ಅವರು ದೀಪ ಬೆಳಗಿಸುವುದರ ಮೂಲಕ ಆದಮ್ಯ ಚೇತನ ವಸತಿಯುತ ಶಾಲೆಯನ್ನು ಉದ್ಘಾಟಿಸಿ, ಶಾಲೆಯ ಮತ್ತು ಸಂಸ್ಥೆಯ ಕಾರ್ಯವೈಖರಿಯ ಬಗ್ಗೆ ಶ್ಲಾಘಿಸಿದರು. ಇಂತಹ ಶಾಲೆಗಳು ಸಮಾಜಕ್ಕೆ ಮಾದರಿಯಾಗಿದ್ದು, ಇಲ್ಲಿನ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವಲ್ಲಿ ಸೇವಾ ಭಾರತಿ ಉತ್ತಮ ಕಾರ್ಯ ಮಾಡುತ್ತಿದೆ ಎಂದರು.

ಕೊಠಡಿಯ ವ್ಯವಸ್ಥೆಗೆ ಪ್ರಶಂಸೆ

ಎಂ.ಆರ್.ಪಿ.ಎಲ್. ಸಹಕಾರದಿಂದ ನಿರ್ಮಾಣಗೊಂಡಿರುವ ಫಿಸಿಯೋಥೆರಪಿ ಘಟಕವನ್ನು ಎಂ.ಆರ್.ಪಿ.ಎಲ್‌ನ ಗ್ರೂಪ್ ಜನರಲ್ ಮ್ಯಾನೇಜರ್ ಪ್ರಶಾಂತ್ ಶಂಕರ್ ಪೊದುವಾಳ್ ಅವರು ಉದ್ಘಾಟಿಸಿ, ಹೆಚ್ಚಿನ ಮಕ್ಕಳಿಗೆ ಸದುಪಯೋಗವಾಗುವಂತಹ ಸಂವೇದನಾಶೀಲ ಕೊಠಡಿ ಹಾಗೂ ಫಿಸಿಯೋಥೆರಪಿ ಕೊಠಡಿಯ ವ್ಯವಸ್ಥೆಯ ಬಗ್ಗೆ ಪ್ರಶಂಸಿಸಿದರು.

ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪೃಥ್ವೀಪಾಲ್ ಕೆ. ಪ್ರಾಸ್ತಾವಿಕವಾಗಿ ಮಾತನಾಡಿದರು. ಸೇವಾ ಭಾರತಿ ಸಂಸ್ಥೆಯ ಅಧ್ಯಕ್ಷರಾದ ಮುಕುಂದ್ ಕಾಮತ್ ಅಧ್ಯಕ್ಷೀಯ ಭಾಷಣ ಮಾಡಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಎಚ್. ನಾಗರಾಜ್ ಭಟ್, ಕೋಶಾಧಿಕಾರಿ ವಿನೋದ್ ಶೆಣೈ, ಟ್ರಸ್ಟಿಗಳಾದ ಡಾ. ಕೆ. ಆರ್. ಕಾಮತ್ ಮತ್ತು ಡಾ. ಸತೀಶ್ ರಾವ್, ಸಲಹಾ ಸಮಿತಿಯ ಸದಸ್ಯರಾದ ಸುಮನ್ ಘಾಟೆ, ಶಾಲಾ ಮುಖ್ಯ ಶಿಕ್ಷಕಿ ವರ್ಷಾ, ಸಂಸ್ಥೆಯ ವಿಶ್ವಸ್ತರು, ಸ್ವಯಂಸೇವಕರು, ಮಕ್ಕಳ ಪೋಷಕರು ಹಾಗೂ ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಶಿಕ್ಷಕಿ ಉಷಾ ಸ್ವಾಗತಿಸಿದರು. ಶಿಕ್ಷಕಿ ರೇಖಾ ವಂದಿಸಿದರು. ಶಿಕ್ಷಕಿಯರಾದ ಯಶೋಧಾ ಮತ್ತು ಲತಿಕಾ ಕಾರ್ಯಕ್ರಮವನ್ನು ನಿರೂಪಿಸಿದರು.

ಸುತ್ತ ಮುತ್ತ

ಜೂ. 6ರಂದು ಉದ್ಯೋಗ ನೇಮಕಾತಿಗೆ ನೇರ ಸಂದರ್ಶನ

ಉಡುಪಿ: ಉಡುಪಿಯ ಉದ್ಯಾವರದ ಐ.ಒ.ಸಿ.ಎಲ್ ಪೆಟ್ರೋಲ್ ಬಂಕ್ ಬಳಿಯ ಅರವಿಂದ್ ಮೋಟರ್ಸ್ ಪ್ರೈ.ಲಿಮಿಟೆಡ್ ಇಲ್ಲಿ ಜೂನ್ 6 ರಂದು ಬೆಳಗ್ಗೆ 10.30 ಕ್ಕೆ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ನಡೆಯಲಿದೆ. ಪಿ.ಯು.ಸಿ, ಐ.ಟಿ.ಐ ಮತ್ತು ಇತರೆ ಪದವಿ ವಿದ್ಯಾರ್ಹತೆಯೊಂದಿಗೆ ಉತ್ತೀರ್ಣರಾದ ಅಭ್ಯರ್ಥಿಗಳು ತಮ್ಮ ಅಂಕಪಟ್ಟಿ, ಸ್ವವಿವರವುಳ್ಳ ರೆಸ್ಯೂಮ್/ಸಿವಿ ಹಾಗೂ ಆಧಾರ್ ಕಾರ್ಡ್ ಪ್ರತಿಯೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಜಿಲ್ಲಾಧಿಕಾರಿ ಸಂಕೀರ್ಣ, ರಜತಾದ್ರಿ, ಮಣಿಪಾಲ, ಉಡುಪಿ ದೂರವಾಣಿ ಸಂಖ್ಯೆ: 8105618291, 9945856670, 8150961875 ಹಾಗೂ 9901472710 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಪ್ರವೇಶಾತಿ

ಉಡುಪಿ: ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿಗಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ ?1, 2ಎ, 2ಬಿ, 3ಎ, 3ಬಿ, ಪ.ಜಾತಿ / ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ, ಪಿ.ಯು.ಸಿ ಸಮಾನಾಂತರ ಡಿಪ್ಲೋಮಾ, ಐ.ಟಿ.ಐ ಕೋರ್ಸ್‌ನಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ವೆಬ್‌ಸೈಟ್ https://shp.karnataka.gov.in/bcwd ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8050770004 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳ ಕಛೇರಿ ಪ್ರಕಟಣೆ ತಿಳಿಸಿದೆ.

ಶ್ರೀ ಮುತ್ತಪ್ಪ ಸೇವಾ ಸಮಿತಿ ಮಹಾಸಭೆ



ಕಾಸರಗೋಡು: ಪಾರೆಕಟ್ಟೆ ಮಡಪ್ಪುರ ಶ್ರೀ ಮುತ್ತಪ್ಪ ಸೇವಾ ಸಮಿತಿಯ ವಾರ್ಷಿಕ ಮಹಾಸಭೆಯು ಭಾನುವಾರ ಶ್ರೀ ಕ್ಷೇತ್ರದ ಪರಿಸರದಲ್ಲಿ ಜರಗಿತು. ರತೀಶ್ (ಆಲ್ ಮಡೇಯ) ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಶ್ರೀ ಮುತ್ತಪ್ಪ ಸೇವಾ ಸಮಿತಿ ಅಧ್ಯಕ್ಷ ಗಣೇಶ್ ಪಾರೆಕಟ್ಟೆ ಅಧ್ಯಕ್ಷತೆ ವಹಿಸಿ ಶುಭಕೋರಿದರು.

ಸಮಿತಿ ಕಾರ್ಯದರ್ಶಿ ಜಯೇಶ್ ಪಾರೆಕಟ್ಟೆ ವರದಿ ವಾಚಿಸಿದರು. ಕೋಶಾಧಿಕಾರಿ ವಿನೋದ್‌ರಾಜ್ ಶೆಟ್ಟಿ ಆಯವ್ಯಯ ಲೆಕ್ಕಪತ್ರ ಮಂಡಿಸಿದರು.

ಮುಂದೆ ಕೈಗೊಳ್ಳಬೇಕಾದ ಯೋಜನೆಗಳು ಕುರಿತು ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಲಾಯಿತು.

ಸೇವಾ ಸಮಿತಿ ಹಿರಿಯ ಸದಸ್ಯರಾದ ಸುಕುಮಾರನ್, ರಾಮಕೃಷ್ಣ, ಮಹಿಳಾ ಸಮಿತಿ ಸದಸ್ಯೆ ರೋಶಿನಿ, ಕಾರ್ಯದರ್ಶಿ ವಿಶಾಲಾಕ್ಷಿ, ಪುಷ್ಪಾ ಜೀವನ್, ಕೇಶವ, ಮುರಳಿ ಪಾರೆಕಟ್ಟೆ ನಾಗೇಶ್ ಶೆಟ್ಟಿ ಲೋಹಿತ್ ಮೊದಲಾದವರು ಉಪಸ್ಥಿತರಿದ್ದರು. ಕಾರ್ಯದರ್ಶಿ ಜಯೇಶ್ ಪಾರೆಕಟ್ಟೆ ಸ್ವಾಗತಿಸಿ, ಜಗನ್ನಾಥ ಶೆಟ್ಟಿ ವಂದಿಸಿದರು. 2026–28ನೇ ಅವಧಿಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ರಘುವೀರ ಶೆಟ್ಟಿ, ಅಧ್ಯಕ್ಷರಾಗಿ ಗಣೇಶ್ ಪಾರೆಕಟ್ಟೆ, ಉಪಾಧ್ಯಕ್ಷರಾಗಿ ನಿತಿನ್‌ರಾಜ್, ಕಾರ್ಯದರ್ಶಿಯಾಗಿ ಜಯೇಶ್ ಪಾರೆಕಟ್ಟೆ ಜೊತೆ ಕಾರ್ಯದರ್ಶಿಯಾಗಿ ನವೀನ್, ಕೇಶವ, ಕೋಶಾಧಿಕಾರಿಯಾಗಿ ವಿನೋದ್‌ರಾಜ್ ಶೆಟ್ಟಿ ಸದಸ್ಯರಾಗಿ ರತೀಶ್ (ಆಲ್ ಮಡೇಯ), ವಾಸು ಎ., ಕಿಶೋರ್ ಕೆ.ಜೆ., ಮುರಳಿ ಪಾರೆಕಟ್ಟೆ ಲೋಹಿತ್, ಶಶಿಕಾಂತ್ ಕೆ.ಜೆ., ಗಿರೀಶ್ (ಕರ್ಮಿ), ರಾಕೇಶ್ ಶೆಟ್ಟಿ ಜಗನ್ನಾಥ ಶೆಟ್ಟಿ ಹರೀಶ್, ಮೀನಾಕ್ಷಿ ಹಾಗೂ ಮಹಿಳಾ ಸಮಿತಿ ಅಧ್ಯಕ್ಷೆಯಾಗಿ ರೋಶಿನಿ, ಕಾರ್ಯದರ್ಶಿಯಾಗಿ ವಿಶಾಲಾಕ್ಷಿ ಅವರನ್ನು ಆರಿಸಲಾಯಿತು.

ಎನ್ಎಚ್ 66ರ ಕಾಮಗಾರಿ | ಚೆರ್ಕಳ ಬೇವಿಂಜೆ ಪ್ರದೇಶಕ್ಕೆ ಕಾಸರಗೋಡು ಡಿಸಿ ಅರ್ಜುನ್ ಪಾಂಡ್ಯನ್

ಭೂಕುಸಿತ ತಡೆಯಲು ತುರ್ತು ಮುನ್ನೆಚ್ಚರಿಕೆ ಕ್ರಮಕ್ಕೆ ಸೂಚನೆ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿ 66ರ ನಿರ್ಮಾಣ ಯೋಜನೆಯ ಅಂಗವಾಗಿ ಚೆರ್ಕಳ ಬೇವಿಂಜೆ ಪ್ರದೇಶಕ್ಕೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಮಂಗಳವಾರ ಭೇಟಿ ನೀಡಿದರು.

ಮಳೆಗಾಲಕ್ಕೆ ಮುಂಚಿತವಾಗಿ ಬೇವಿಂಜೆ ತೆಕ್ಕಿಲ್ ಭಾಗದಲ್ಲಿ ಭೂಕುಸಿತವನ್ನು ತಡೆಗಟ್ಟಲು ತುರ್ತು ಮುನ್ನೆಚ್ಚರಿಕೆಗಳನ್ನು ಕೈಗೊಳ್ಳುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಜಿಲ್ಲಾಧಿಕಾರಿ ಸೂಚಿಸಿದರು.

ಚೆರ್ಕಳ – ಬೇವಿಂಜೆ ರಾಷ್ಟ್ರೀಯ ಹೆದ್ದಾರಿಗೆ ಭೇಟಿ ನೀಡಿದ ಅವರು, ನಿರ್ಮಾಣದ ಪ್ರಗತಿಯನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಮಾತನಾಡಿದರು. ಬೇವಿಂಜೆ, ಚೆರುವತ್ತೂರು ಮತ್ತು ವೀರಮಲಕುನ್ನು ವಿಭಾಗಗಳಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಪ್ರಗತಿಯನ್ನು ಆರ್‌ಡಿಒಗಳು ಪ್ರತಿದಿನ ನಿರ್ಣಯಿಸುತ್ತಿದ್ದಾರೆ ಎಂದರು. ಆದರೂ ಮಳೆಗಾಲಕ್ಕೆ ಮುಂಚಿತವಾಗಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿ ನಿರೀಕ್ಷಿಸಿದಷ್ಟು ಕೆಲಸಗಳು ನಡೆದಿಲ್ಲ ಎಂದು ಅವರು ಹೇಳಿದರು.





ಅನಾಹುತ ಸಂಭವಿಸದಂತೆ ತಡೆಯಲು ಕ್ಷಿಪ್ರ ರಕ್ಷಣಾ ತಂಡದ ಕೆಲಸವನ್ನು ಬಲಪಡಿಸಬೇಕು. ಚೆರ್ಕಳ ಪೇಟೆ ಮತ್ತು ಚೆಂಗಳ ಗ್ರಾಮ ಪಂಚಾಯತ್ ಕಚೇರಿ ಆವರಣದಲ್ಲಿ ಅಪೂರ್ಣ ನಿರ್ಮಾಣದಿಂದಾಗಿ ಎದುರಾಗಿರುವ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸುವಂತೆ ಜಿಲ್ಲಾಧಿಕಾರಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದರು.

■ **ಚೆರ್ಕಳ ಪೇಟೆ, ಚೆಂಗಳ ಗ್ರಾ.ಪಂ. ಮುಂಭಾಗದಲ್ಲಿ ಅರೆಬರೆ ಕಾಮಗಾರಿ ಸಮಸ್ಯೆ ಪರಿಹಾರಕ್ಕೆ ನಿರ್ದೇಶನ**

ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿಜಯಭರತ್ ರೆಡ್ಡಿ ಎಎಸ್‌ಪಿ ಅಚ್ಯುತ್ ಅಶೋಕ್, ಆರ್‌ಡಿಒ ಬಿನು ಜೋಸೆಫ್, ಉಪ ಜಿಲ್ಲಾಧಿಕಾರಿ ಲಿಪು ಎಸ್. ಲಾರೆನ್ಸ್, ಆರ್‌ಟಿಒ ಜೆ.ಗೆರಾರ್ಡ್, ಮೋಟಾರ್ ವಾಹನ ಅಧಿಕಾರಿ ಎಂ.ವಿಜಯನ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಉಮೇಶ್ ಗರ್ಗ್, ನಿರ್ಮಾಣ ಗುತ್ತಿಗೆ ಕಂಪೆನಿಯ ಪ್ರತಿನಿಧಿಗಳು, ತಹಶೀಲ್ದಾರ್‌ಗಳು ಮುಂತಾದವರು ಭಾಗವಹಿಸಿದ್ದರು.

ಸುರಕ್ಷತಾ ಗೋಡೆಗಳನ್ನು ನಿರ್ಮಾಣಕ್ಕೆ ಆದೇಶ

ತುಂಬಿ ಹರಿಯುವ ಕಾಲುವೆಗಳಿಂದ ಮನೆಗಳು ಮುಳುಗದಂತೆ ತಡೆಯಲು ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ನೀರು ನುಗ್ಗುವಿಕೆ ಹಾಗೂ ಭೂಕುಸಿತವನ್ನು ತಡೆಯಲು ಚರಂಡಿಗಳು ಮತ್ತು ಸುರಕ್ಷತಾ ಗೋಡೆಗಳನ್ನು ಖಚಿತಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನಿರ್ದೇಶಿಸಿದರು.

ಸಮಸ್ಯೆಯ ಬಗ್ಗೆ ಜಿಲ್ಲಾಧಿಕಾರಿಗೆ ಮಾಹಿತಿ


ಜಿಲ್ಲಾಧಿಕಾರಿಗಳ ಭೇಟಿಯ ಸಂದರ್ಭ ಚೆಂಗಳ ಗ್ರಾಮ ಪಂಚಾಯತ್ ಅಧ್ಯಕ್ಷ ವಸಂತ ಆಜಕ್ಕೋಡು ಅವರು ಚೆರ್ಕಳ ಬೇವಿಂಜೆ ಪ್ರದೇಶದ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು.

ಜೂ.4-5: ವಿವೇಕಾನಂದ ಪಿಯು ಕಾಲೇಜಿನಲ್ಲಿ 'ವಿವೇಕ ಸಂಕಲ್ಪ-2026'

ಪುತ್ತೂರು: 2026–27ನೇ ಸಾಲಿನ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗಗಳ ವಿದ್ಯಾರ್ಥಿ–ಪೋಷಕರ ಸಮಾವೇಶ 'ವಿವೇಕ ಸಂಕಲ್ಪ–2026' ಎಂಬ ಶೀರ್ಷಿಕೆಯೊಂದಿಗೆ ಜೂ.4, ಜೂ.5ರಂದು ನಡೆಯಲಿದೆ.

ಕಾಲೇಜಿನ ಆವರಣದ ಕೇಶವ ಸಂಕಲ್ಪ ಸಭಾಭವನದಲ್ಲಿ ಜೂ.4ರಂದು ಬೆಳಗ್ಗೆ 10 ಗಂಟೆಗೆ ವಿಜ್ಞಾನ ವಿಭಾಗದ ಪೋಷಕರ ಸಭೆ ನಡೆಯಲಿದ್ದು, ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ರವೀಂದ್ರ ಪಿ. ಅಧ್ಯಕ್ಷತೆ ವಹಿಸಲಿದ್ದಾರೆ. ಕಾಲೇಜ್ ಆಡಳಿತ ಮಂಡಳಿ ನಿರ್ದೇಶಕ ಡಾ.ಕೆ.ಎನ್. ಸುಬ್ರಹ್ಮಣ್ಯ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಉಡುಪಿ ಡಾ.ಎ.ವಿ. ಬಾಳಿಗಾ ಸ್ಮಾರಕ ಆಸ್ಪತ್ರೆಯ ಖ್ಯಾತ ಮನೋವೈದ್ಯ ಹಾಗೂ ಲೇಖಕ ಡಾ. ವಿರೂಪಾಕ್ಷ ದೇವರಮನೆ ಭಾಗವಹಿಸಿ ಪೋಷಕರಿಗೆ 'ಸುಗಮ ಪಾಲನೆಗೆ ಹೊಸ ತಲೆಮಾರಿನ ಸವಾಲುಗಳು' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ನೀಡಲಿದ್ದಾರೆ. ಈ ಸಂದರ್ಭ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾಹಿತಿ ಕಾರ್ಯಾಗಾರ ನಡೆಯಲಿದೆ.

ಜೂ.5ರಂದು ವಿವೇಕಾನಂದ ಪಿಯು ಕಾಲೇಜಿನ ವೈದೇಹಿ ಸಭಾಂಗಣದಲ್ಲಿ ಬೆಳಗ್ಗೆ



10ಕ್ಕೆ ಕಲಾ, ವಾಣಿಜ್ಯ ವಿಭಾಗದ ಪೋಷಕರ ಸಭೆ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ರವೀಂದ್ರ. ಪಿ. ಅಧ್ಯಕ್ಷತೆಯಲ್ಲಿ ನಡೆಯಲಿದ್ದು ಆಡಳಿತ ಮಂಡಳಿ ಕೋಶಾಧಿಕಾರಿ ಸಚಿನ್ ಶೆಣೈ ಕೆ. ಉಪಸ್ಥಿತರಿರುವರು. ಡಾ. ವಿರೂಪಾಕ್ಷ ದೇವರಮನೆ 'ಪೋಷಕರು ಹಾಗೂ ಮಕ್ಕಳ ಮಧ್ಯೆ ಮನೋವಿಜ್ಞಾನದ ಸತ್ಯಗಳು' ವಿಷಯ ದಲ್ಲಿ ವಿಶೇಷ ಉಪನ್ಯಾಸ ನೀಡಲಿ ದ್ದಾರೆ. ಶೈಕ್ಷಣಿಕ ಮಾಹಿತಿ ಕಾರ್ಯಾಗಾರ ನಡೆಯಲಿದೆ.

ಸರಸ್ವತಿ ಪೂಜೆ

ಕಾಲೇಜ್ ಪ್ರಾರಂಭೋತ್ಸವದ ಪ್ರಯುಕ್ತ ಜೂ.6ರಂದು ಕಶೆಕೋಡಿ ಸೂರ್ಯನಾರಾಯಣ ಭಟ್ ನೇತೃತ್ವದಲ್ಲಿ ಬೆಳಗ್ಗೆ 7.30ರಿಂದ ಸರಸ್ವತಿ ಪೂಜೆ ನಡೆಯಲಿದೆ. ಪ್ರಾಂಶುಪಾಲ ದೇವಿಚರಣ್ ರೈ ಎಂ., ಪೋಷಕರು, ಉಪನ್ಯಾಸಕ ಹಾಗೂ ಉಪನ್ಯಾಸಕೇತರರು ಭಾಗವಹಿಸಲಿದ್ದಾರೆ.

ತುಳು ನಾಟಕ ಕಾರ್ಯಾಗಾರ ಸಮಾರೋಪ, ನಾಟಕ ಪ್ರದರ್ಶನ



ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ಉರ್ವ ಎಸ್‌ಸಿಎಸ್ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ನಡೆದ ತುಳು ನಾಟಕ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭ ಹಾಗೂ ನಾಟಕ ಪ್ರದರ್ಶನ ಕಾರ್ಯಕ್ರಮ ಬುಧವಾರ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ನಟ ಸಾಯಿ ಚೇತನ್ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಮಾತನಾಡಿ, ಕಾಲೇಜಿನಲ್ಲಿ ರಂಗಾಭ್ಯಾಸ ವಿದ್ಯಾರ್ಥಿಗಳಿಗೆ ಸೃಜನಾತ್ಮಕ ಯೋಚನೆ ಮೂಲಕ ಪಠ್ಯ ಅಧ್ಯಯನಕ್ಕೂ ಪೂರಕವಾಗುತ್ತದೆ ಎಂದರು.

ತರಬೇತಿ ಕಾರ್ಯಾಗಾರದ ನಿರ್ದೇಶಕ ಯೋಗೀಶ್ ಶೆಟ್ಟಿ ರಂಗ ನಿರ್ದೇಶಕ ಜಗನ್ ಪವಾರ್, ಕಾಲೇಜಿನ ಕನ್ನಡ ವಿಭಾಗ ಮುಖ್ಯಸ್ಥೆ ಸುಚಿತ್ರಾ ಪಿ. ಶೆಟ್ಟಿ ಇದ್ದರು. ವಿದ್ಯಾರ್ಥಿಗಳಾದ ರಿತೇಶ್ ಪೂಜಾರಿ, ಶಶಾಂಕ್ ನಾಟಕ ಕಾರ್ಯಾಗಾರದ ಅನುಭವ ಹಂಚಿಕೊಂಡರು. ಪ್ರಾಂಶುಪಾಲ ಹಾರ್ದಿಕ್ ಪಿ.ಚೌಹಾಣ್ ಸ್ವಾಗತಿಸಿದರು. ವಿದ್ಯಾರ್ಥಿನಿ ಮೇಘ ನಿರೂಪಿಸಿದರು. ಕಾಲೇಜು ತುಳು ಸಂಘದ ಸಂಚಾಲಕಿ ದೀಕ್ಷಿತಾ ವಂದಿಸಿದರು.

ರಂಗಭೂಮಿ ಕಲಿಕೆ ನಿರಂತರ

ರಂಗಭೂಮಿಯ ಕಲಿಕೆ ನಿರಂತರವಾಗಿದ್ದು, ಸದಾ ಹೊಸತನದ ಅನ್ವೇಷಣೆ ನಡೆಯುತ್ತಿರುತ್ತದೆ. ವಿದ್ಯಾರ್ಥಿಗಳಿಗೆ ತುಳು ನಾಟಕ ತರಬೇತಿ ಕೈಗೊಂಡ ತುಳು ಸಾಹಿತ್ಯ ಅಕಾಡೆಮಿಯ ಕಾರ್ಯ ಶ್ಲಾಘನೀಯ.

● ಸಾಯಿ ಚೇತನ್, ನಟ

ಸಿದ್ದಕಟ್ಟೆ ಸೊಸೈಟಿಯಿಂದ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಅಭಿನಂದನೆ



ಬಂಟ್ವಾಳ: ಪ್ರಸಕ್ತ ಸಾಲಿನ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯ ಮಟ್ಟದ ರ್‍ಯಾಂಕ್ ಪಡೆದ ಸಂಘದ ವ್ಯಾಪ್ತಿಯ ಸದಸ್ಯರ ಮಕ್ಕಳನ್ನು ಸಿದ್ದಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರವನ್ನಿತ್ತು ಅಭಿನಂದಿಸಲಾಯಿತು.

ಸಂಘದ ಸದಸ್ಯ ಡೊಂಬಯ ಡಿ. ಅರಳ ಅವರ ಪುತ್ರಿ, ಆಳ್ವಾಸ್ ವಿದ್ಯಾ ಸಂಸ್ಥೆ ವಿದ್ಯಾರ್ಥಿನಿಯಾಗಿದ್ದ ಜ್ಞಾನಶ್ರೀ ದ್ವಿತೀಯ ಪಿಯುಸಿಯಲ್ಲಿ 600ರಲ್ಲಿ 596 ಅಂಕ ಪಡೆದು ರಾಜ್ಯ ಮಟ್ಟದಲ್ಲಿ ನಾಲ್ಕನೇ ಸ್ಥಾನ, ಆಳ್ವಾಸ್ ಶಿಕ್ಷಣ ಸಂಸ್ಥೆಗೆ ಮೂರನೇ ಸ್ಥಾನ ಹಾಗೂ ಬಂಟ್ವಾಳ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದು, ಸಂಘದ ಸದಸ್ಯ ನವೀನ ಶೆಟ್ಟಿ ಕರಿಂಕಿಜೆ ಅವರ ಪುತ್ರಿ, ರೋಟರಿ ಪಿಯು ಕಾಲೇಜು ವಿದ್ಯಾರ್ಥಿನಿ ಕೃತ್ತಿ ಎನ್. ಶೆಟ್ಟಿ 600ರಲ್ಲಿ 590 ಅಂಕಗಳೊಂದಿಗೆ ರಾಜ್ಯದಲ್ಲಿ ಹತ್ತನೇ ಸ್ಥಾನ, ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದು ಇವರಿಬ್ಬರನ್ನು ಸಂಘದ ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಸಂದೇಶ ಶೆಟ್ಟಿ ಪೊಡುಂಬ, ನಿರ್ದೇಶಕರಾದ ಸತೀಶ್ ಪೂಜಾರಿ ಅಲಕ್ಕೆ, ರಕ್ಷಿತ್ ಶೆಟ್ಟಿ ದಿನೇಶ್ ಪೂಜಾರಿ, ಚಂದ್ರಶೇಖರ ಶೆಟ್ಟಿ, ವಿಶ್ವನಾಥ್ ಶೆಟ್ಟಿಗಾರ್, ಜಾರಪ್ಪ ನಾಯ್ಕ, ವೀರಪ್ಪ ಪರವ, ಎ. ಶಿವ ಗೌಡ ಮಂದಾರತಿ ಎಸ್. ಶೆಟ್ಟಿ ಪುಷ್ಪಲತಾ ಎಸ್.ಆರ್., ರಾಜೇಶ್ ಶೆಟ್ಟಿ ಕೊನೆರಬೆಟ್ಟು, ನವೀನ ಹೆಗ್ಡೆ, ಸಿಇಒ ಆರತಿ ಶೆಟ್ಟಿ, ಪೋಷಕರಾದ ನವೀನ ಶೆಟ್ಟಿ ಇದ್ದರು. ಸುಭಾಸ್ ಬಂಗೇರ ಕಾರ್ಯಕ್ರಮ ನಿರೂಪಿಸಿದರು.

ವಿದ್ಯಾರ್ಥಿಗಳು ಮಾನವ ಕಳ್ಳಸಾಗಣೆ ಬಗ್ಗೆ ಜಾಗೃತಿ ಹೊಂದಿರಲಿ : ವಿನಾಯಕ ಶೇಟ್



ಮಂಗಳೂರು: ಕೆನರಾ ಕಾಲೇಜು (ಸ್ವಾಯತ್ತ) ಮಂಗಳೂರು ಇಲ್ಲಿನ ಮಾನವ ಕಳ್ಳಸಾಗಣೆ ವಿರೋಧಿ ಕ್ಲಬ್ ವತಿಯಿಂದ 'ಜಾಗೃತಿಯಿಂದ ಕ್ರಿಯಾಶೀಲತೆಯತ್ತ: ಮಾನವ ಕಳ್ಳಸಾಗಣೆ ವಿರುದ್ಧ ವಿದ್ಯಾರ್ಥಿಗಳ ಹೋರಾಟ' ವಿಷಯದ ಕುರಿತು ಜಾಗೃತಿ ಕಾರ್ಯಕ್ರಮ ಕಾಲೇಜಿನ ಶ್ರೀಮತಿ ರತ್ನಾ ಎಸ್. ಶೆಣೈ ಸ್ಮಾರಕ ಸೆಮಿನಾರ್ ಹಾಲ್‌ನಲ್ಲಿ ನಡೆಯಿತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿದ್ದ ವಕೀಲ ವಿನಾಯಕ ಜಿ. ಶೇಟ್ ಮಾತನಾಡಿ, ಮಾನವ ಕಳ್ಳಸಾಗಣೆಯ ಅರ್ಥ, ಅದರ ವಿವಿಧ ರೂಪ, ಕಾರಣ, ದುಷ್ಪರಿಣಾಮಗಳು ಹಾಗೂ ಮಾನವ ಕಳ್ಳಸಾಗಣೆಗೆ ಸಂಬಂಧಿಸಿದ ನೈಜ ಪ್ರಕರಣಗಳನ್ನು ಉದಾಹರಣೆಯಾಗಿ ವಿವರಿಸಿದರು. ಇಂತಹ ಅಪರಾಧಗಳ ಗಂಭೀರತೆಯನ್ನು ಮನದಟ್ಟು ಮಾಡಿದರು.

■ **'ಜಾಗೃತಿಯಿಂದ ಕ್ರಿಯಾಶೀಲತೆಯತ್ತ: ಮಾನವ ಕಳ್ಳಸಾಗಣೆ ವಿರುದ್ಧ ವಿದ್ಯಾರ್ಥಿಗಳ ಹೋರಾಟ' ವಿಷಯದ ಕುರಿತು ಜಾಗೃತಿ ಕಾರ್ಯಕ್ರಮ**

ವಿದ್ಯಾರ್ಥಿಗಳು ಮಾನವ ಕಳ್ಳಸಾಗಣೆ ತಡೆಗಟ್ಟುವಲ್ಲಿ ಜಾಗೃತರಾಗಿದ್ದು, ಸಮಾಜದಲ್ಲಿ ಹೊಣೆಗಾರ ನಾಗರಿಕರಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದು ಅವರು ಹೇಳಿದರು.

ಕಾಲೇಜಿನ ಪ್ರಾಂಶುಪಾಲೆ ಡಾ. ಪ್ರೇಮಲತಾ ವಿ., ಕ್ಲಬ್ ಸಂಚಾಲಕಿ ಸ್ಮಿತಾ ಎಂ., ಸದಸ್ಯರಾದ ಆಶಾಲತಾ, ವಿನೋದಾ ವಿ. ನಾಯಕ್ ಹಾಗೂ ತೇಜಾಕ್ಷಿಣಿ ಉಪಸ್ಥಿತರಿದ್ದರು. ಪ್ರತೀಕ್ಷಾ ಕಾರ್ಯಕ್ರಮ ನಿರೂಪಿಸಿದರು. ಅನನ್ಯ ಹಾಗೂ ಅನ್ನಪೂರ್ಣ ಪ್ರಾರ್ಥನೆ ನೆರವೇರಿಸಿದರು.

ವಿಶೇಷ ಮಕ್ಕಳ ಸಮಗ್ರ ಬೆಳವಣಿಗೆಗೆ ಸೂಕ್ತ ತರಬೇತಿ, ಥೆರಪಿ ಅಗತ್ಯ: ಡಾ.ಕಿರಣ್



ಮಂಗಳೂರು: ವಿಶೇಷ ಮಕ್ಕಳನ್ನು ಮುಖ್ಯ ವಾಹಿನಿಗೆ ತರುವಲ್ಲಿ ವಿಶೇಷ ಶಿಕ್ಷಕರ, ವೈದ್ಯರ, ಥೆರಪಿಸ್ಟ್‌ಗಳ ಹಾಗೂ ಹೆತ್ತವರ ಪಾತ್ರ ಗಣನೀಯವಾದುದು. ಮಕ್ಕಳಲ್ಲಿರುವ ನ್ಯೂನ್ಯತೆಗಳನ್ನು ಶೀಘ್ರವಾಗಿ ಪತ್ತೆ ಹಚ್ಚಿ ಅದಕ್ಕೆ ಸೂಕ್ತವಾದ ತರಬೇತಿ ಹಾಗೂ ಥೆರಪಿಯನ್ನು ಎಳೆಯ ವಯಸ್ಸಿನಲ್ಲೇ ನೀಡಿದಲ್ಲಿ ಭಿನ್ನ ಸಾಮರ್ಥ್ಯದ ಮಕ್ಕಳನ್ನು ಮುಖ್ಯ ವಾಹಿನಿಗೆ ತರುವ ಕಾರ್ಯ ಕಷ್ಟವಾಗದು ಎಂದು ಎ.ಜೆ. ಆಸ್ಪತ್ರೆಯ ಮನೋವೈದ್ಯಕೀಯ ವಿಭಾಗದ ಮುಖ್ಯಸ್ಥ ಪ್ರೊ.ಡಾ.ಪಿ.ಕೆ ಕಿರಣ್ ಕುಮಾರ್ ಹೇಳಿದರು.

ಅವರು ಮಂಗಳೂರು ನಗರದ ಶಕ್ತಿನಗರದಲ್ಲಿ ಆಯೋಜಿಸಲಾದ ಆಟಿಸಂ ಮತ್ತು ಆಕ್ಯುಪೇಶನಲ್ ಥೆರಪಿಗೆ ಸಂಬಂಧಿಸಿದ 3 ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಮುಂಬೈಯ ವಿಶೇಷ ಶಿಕ್ಷಣ ತಜ್ಞೆ ಅಂಜಲಿ ಜೋಶಿ ಮಾತನಾಡಿ, ವಿಶೇಷ ಮಕ್ಕಳ ವಿಶೇಷ ಮಕ್ಕಳ ಹೆತ್ತವರಿಗೆ, ವಿಶೇಷ ಶಾಲೆಗಳ ಶಿಕ್ಷಕರಿಗೆ ಹಾಗೂ ಥೆರಪಿಸ್ಟ್‌ಗಳಿಗೆ ಈ ಕಾರ್ಯಾಗಾರ ಹೆಚ್ಚು ಪ್ರಯೋಜನಕಾರಿ ಎಂದು ಹೇಳಿದರು.

ಗಣೇಶ ಸೇವಾ ಟ್ರಸ್ಟಿನ ಪದಾಧಿಕಾರಿ ಮಹಾಬಲ ಮಾರ್ಲ, ಜಗದೀಶ್ ಶೆಟ್ಟಿ ಪ್ರೊ. ರಾಧಾಕೃಷ್ಣ ಉಷಾ ಶೆಟ್ಟಿ ವಿಜಯ ಸುಧೀರ್ ಶೆಟ್ಟಿ ಮೊಹಮ್ಮದ್ ಬಶೀರ್, ಸಲಹಾ ಸಮಿತಿಯ ಸದಸ್ಯರಾದ ಎರಿಕ್ ಜೆ.ಬಿ. ಡಿಸೋಜ, ಶ್ರೀ ಸಂತೋಷ್ ಶೆಟ್ಟಿ ಇದ್ದರು. ಆಡಳಿತಾಧಿಕಾರಿ ಡಾ.ವಸಂತ್‌ಕುಮಾರ್ ಶೆಟ್ಟಿ ಸ್ವಾಗತಿಸಿದರು. ಟ್ರಸ್ಟಿನ ಪದಾಧಿಕಾರಿ ಸಿಎ ಸುಧೀರ್ ಶೆಟ್ಟಿ ವಂದಿಸಿದರು. ವಿಶೇಷ ಶಿಕ್ಷಕಿ ಸೋಫಿಯಾ ಡಿಸೋಜ ನಿರೂಪಿಸಿದರು. ವಿಶೇಷ ಮಕ್ಕಳು ನೃತ್ಯದ ಮೂಲಕ ಅತಿಥಿಗಳನ್ನು ಸ್ವಾಗತಿಸಿದರು. ಸಾನಿಧ್ಯದ ವಿಶೇಷ ಶಿಕ್ಷಕರು, ವಿಶೇಷ ಮಕ್ಕಳ ಹೆತ್ತವರು ಬಾಗವಹಿಸಿದ್ದರು.

ಬಿಜೆಪಿ ಕಾಪು ಮಂಡಲದ ಸಂಘಟನಾತ್ಮಕ ಸಭೆ



ಕಾಪು: ಬಿಜೆಪಿ ಕಾಪು ಮಂಡಲ ಕಚೇರಿಯಲ್ಲಿ ನಡೆದ ಸಂಘಟನಾತ್ಮಕ ಸಭೆಯಲ್ಲಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ಭಾಗವಹಿಸಿ ಮುಂದಿನ ದಿನಗಳಲ್ಲಿ ನಡೆಯಬೇಕಾದ ಪಕ್ಷದ ವಿವಿಧ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಕಾಪು ಮಂಡಲ ಬಿಜೆಪಿ ಅಧ್ಯಕ್ಷ ಜಿತೇಂದ್ರ ಶೆಟ್ಟಿ ಮಾಜಿ ಶಾಸಕರಾದ ಲಾಲಾಜಿ ಆರ್. ಮೆಂಡನ್, ಉಡುಪಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್, ಕೋಶಾಧಿಕಾರಿ ಪ್ರವೀಣ್ ಶೆಟ್ಟಿ ಕಪ್ಪೆಟ್ಟು, ಕಾಪು ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲಕೃಷ್ಣ ರಾವ್, ಶರಣ್ ಕುಮಾರ್ ಮಟ್ಟು ಇದ್ದರು.

ಅಧಿಕಮಾಸದ ಸಂಕಷ್ಟಹರ ಚತುರ್ಥಿ

ಬೈಂದೂರು: ಉಪ್ಪುಂದ ಅಂಬಾಗಿಲು ಶ್ರೀ ಅಶ್ವತ್ಥನಾರಾಯಣ ಮೂಡುಗಣಪತಿ ದೇವಸ್ಥಾನದಲ್ಲಿ ಬುಧವಾರ ಅಧಿಕಮಾಸದ ಸಂಕಷ್ಟಹರ ಚತುರ್ಥಿ ಪ್ರಯುಕ್ತ ಅರ್ಚಕ ಅವಧಾನಿ ಗಣೇಶ ಬಾಬು ಭಟ್ ನೇತೃತ್ವದಲ್ಲಿ ಬೆಳಿಗ್ಗೆ ಶ್ರೀ ದೇವರ ಸನ್ನಿಧಿಯಲ್ಲಿ ಪಂಚಾಮೃತ ಅಭಿಷೇಕ, ಗಣಹೋಮ ಸೇವೆ, ಮೋದಕ ನೈವೇದ್ಯ ಸೇವೆ, ಮಧ್ಯಾಹ್ನ ಮಹಾಪೂಜೆ ನಡೆಯಿತು. ಸಂಜೆ ಭಜನಾ ಸಂಕೀರ್ತನೆ, ರಾತ್ರಿ ವಿಶೇಷ ಅಲಂಕಾರ ಪೂಜೆ ಹಾಗೂ ಜೇನು ಹೆಗ್ಡೆ ಕುಟುಂಬಿಕರ ಸೇವಾರ್ಥವಾಗಿ ರಜತ ತೊಟ್ಟಿಲೋತ್ಸವ ಜರುಗಿತು. ಬೆಳಿಗ್ಗೆಯಿಂದ ನೂರಾರು ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆದರು.

ಪುತ್ತೂರು ಬಿಜೆಪಿಯಿಂದ ಬನ್ನೂರು ಮೆಸ್ಕಾಂ ಉಪ ವಿಭಾಗ ಕಚೇರಿಗೆ ದೂರು, ಪ್ರತಿಭಟನೆ ಎಚ್ಚರಿಕೆ | 15 ದಿನಗಳಿಂದ ನಿರಂತರ ವಿದ್ಯುತ್ ಕಡಿತದಿಂದ ತೊಂದರೆ

ನಗರ, ಗ್ರಾಮೀಣ ಭಾಗದಲ್ಲಿ ವಿದ್ಯುತ್ ಪೂರೈಕೆ ಸಂಬಂಧಿಸಿದ ಸಮಸ್ಯೆ ಬಗೆಹರಿಸಲು ಆಗ್ರಹ

ಪುತ್ತೂರು: ತಾಲೂಕಿನ ಗ್ರಾಮೀಣ ಮತ್ತು ನಗರ ಭಾಗಗಳಲ್ಲಿ ಕಳೆದ 15 ದಿನಗಳಿಂದ ನಿರಂತರ ವಿದ್ಯುತ್ ಕಡಿತ ಆಗುತ್ತಿದೆ. ಮಳೆಗಾಲ ಆರಂಭವಾಗುವ ಮೊದಲೇ ಜನಸಾಮಾನ್ಯರು ತೊಂದರೆ ಅನುಭವಿಸುತ್ತಿದ್ದಾರೆ. ವಿದ್ಯುತ್ ಪೂರೈಕೆ ಸಂಬಂಧಿ ಈ ಸಮಸ್ಯೆಯನ್ನು ತಕ್ಷಣ ಬಗೆಹರಿಸಬೇಕೆಂದು ಆಗ್ರಹಿಸಿ ಪುತ್ತೂರು ಮಾಜಿ ಶಾಸಕ ಸಂಜೀವ ಮಠಂದೂರು ಅವರ ನೇತೃತ್ವದಲ್ಲಿ ಪುತ್ತೂರು ಬಿಜೆಪಿಯ ವತಿಯಿಂದ ಬುಧವಾರ ಬನ್ನೂರಿನಲ್ಲಿರುವ ಮೆಸ್ಕಾಂ ಉಪ ವಿಭಾಗ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು. ಸಮಸ್ಯೆ ಮುಂದುವರಿದಲ್ಲಿ ಪ್ರತಿಭಟನೆ ನಡೆಸುವ ಎಚ್ಚರಿಕೆಯನ್ನು ನೀಡಲಾಯಿತು.

ಮಾಜಿ ಶಾಸಕ ಸಂಜೀವ ಮಠಂದೂರು ಅವರು ಮೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ



ರಾಮಚಂದ್ರ ಎ. ಅವರಲ್ಲಿ ಸಮಸ್ಯೆ ಮುಂದಿಟ್ಟರು. ಮಳೆಗಾಲ ಆರಂಭ ಆಗುವ ಮುನ್ನವೇ ಪುತ್ತೂರು ತಾಲೂಕಿನ ಬಹುತೇಕ ಕಡೆ ವಿದ್ಯುತ್ ವಾರಗಟ್ಟಲೆ ಕಡಿತ ಆಗಿ ಜನ ಸಾಮಾನ್ಯರು ಕುಡಿಯುವ ನೀರಿಗೆ ಬವಣೆ ಪಡುವಂತೆ ಆಗಿದೆ. ಮಳೆಗಾಲದಲ್ಲಿ ಸಹಜವಾಗಿ ವಿದ್ಯುತ್ ಕಡಿತವಾಗುತ್ತದೆ. ಆದರೆ ಈ ಬಾರಿ ಗಾಳಿ ಮಳೆ, ಸಿಡಿಲು ಇಲ್ಲದ ಸಂದರ್ಭದಲ್ಲೂ ವಿದ್ಯುತ್ ಕಡಿತವಾಗುತ್ತಿದೆ ಎಂದು ಆರೋಪಿಸಿದರು. ಒಂದು ವಾರದಲ್ಲಿ ವಿದ್ಯುತ್ ಸಮಸ್ಯೆ ಬಗೆಹರಿಸದೇ ಇದ್ದರೆ ಬಿಜೆಪಿಯಿಂದ ಉಗ್ರ ಹೋರಾಟ ಮೆಸ್ಕಾಂ ಕಚೇರಿ ಮುಂದೆ ಮಾಡಲಿದ್ದೇವೆ ಎಂದು ಎಚ್ಚರಿಸಿದರು.

ಪವರ್ ಮ್ಯಾನ್‌ಗಳಿಗೆ ವರ್ಗಾವಣೆ

ಉಪ್ಪಿನಂಗಡಿ, ಪುತ್ತೂರು ಪೇಟೆ, ಕಬಕದಲ್ಲಿ ವಿದ್ಯುತ್ ಕಂಬ ತುಂಡಾಗಿದ್ದರೂ ರಾತ್ರಿಯೇ ವಿದ್ಯುತ್ ಸಮಸ್ಯೆಗೆ ಪರಿಹಾರ ನೀಡಿದ್ದೇವೆ. ಈ ನಡುವೆ ಜೊತೆಗೆ ಸುಮಾರು 40 ಮಂದಿ ಪವರ್ ಮ್ಯಾನ್‌ಗಳಿಗೆ ವರ್ಗಾವಣೆ ಆದೇಶ ಆಗಿದೆ. ಆದರೂ ಅವರನ್ನು ನಾವು ಇಲ್ಲಿಗೆ ಬೇರೆ ಬದಲಿ ಜನ ಬಾರದೆ ರಿಲೀವ್ ಮಾಡಿಲ್ಲ. ಪ್ರತಿ ವರ್ಷದಂತೆ ಏಪ್ರಿಲ್ ಆರಂಭದಲ್ಲೇ 58 ಜನರ ಬ್ಯಾಚ್ ಮಾಡಿ ಎಲ್ಲಾ ಸೆಕ್ಷನ್‌ಗಳಿಗೂ ತೆಗೆದುಕೊಂಡಿದ್ದೇವೆ. ಈಗ ನಮ್ಮಲ್ಲಿ 8 ವಾಹನ 24/7 ಕಾರ್ಯ ನಿರ್ವಹಿಸುತ್ತಿದೆ ಎಂದು ಮೆಸ್ಕಾಂ ಕಾರ್ಯ ನಿರ್ವಾಹಕ ಇಂಜಿನಿಯರ್ ರಾಮಚಂದ್ರ, ಎ. ತಿಳಿಸಿದರು.

ಸಹಾಯವಾಣಿ ಯಾವಾಗಲೂ ಎಂಗೇಜ್

ನಗರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷೆ ಗೌರಿ ಬನ್ನೂರು ಮಾತನಾಡಿ ಮೆಸ್ಕಾಂ ಸಹಾಯವಾಣಿ ಇದೆ. ಆ ನಂಬರ್‌ಗೆ ಕರೆ ಮಾಡಿದರೆ ಯಾವಾಗಲೂ ಎಂಗೇಜ್ ಬರುತ್ತದೆ. ಜನರಿಗೆ ಕರೆ ಮಾಡಿ ಸ್ಪಂದಿಸಲು ಸರಿಯಾದ ಸಹಾಯವಾಣಿ ಮಾಹಿತಿ ನೀಡಿ ಎಂದು ಆಗ್ರಹಿಸಿದರು. ನಗರಸಭೆ ಮಾಜಿ ಅಧ್ಯಕ್ಷ ಕೆ. ಜೀವಂಧರ್ ಜೈನ್ ಮಾತನಾಡಿ, ವಿದ್ಯುತ್ ಕಡಿತದಿಂದ ಪುತ್ತೂರು ನಗರಕ್ಕೆ ಬರುವ ಕುಡಿಯುವ ನೀರು ಸಬರಾಜಿಗೆ ಸಮಸ್ಯೆ ಆಗುತ್ತದೆ ಎಂದರು.

ಈ ಸಂದರ್ಭ ನಗರಸಭೆ ಮಾಜಿ ಅಧ್ಯಕ್ಷೆ ಲೀಲಾವತಿ ಅಣ್ಣುನಾಯ್ಕ, ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಸುಂದರ ಪೂಜಾರಿ ಬಡಾವು, ಬಿಜೆಪಿ ನಗರ ಮಂಡಲದ ಅಧ್ಯಕ್ಷ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಯೋಗೀಶ್ ಬಾಳಿಗ, ಗ್ರಾಮಾಂತರ ಮಂಡಲದ ಉಪಾಧ್ಯಕ್ಷ ಹರಿಪ್ರಸಾದ್ ಯಾದವ್, ಲೋಕೇಶ್ ಹೆಗ್ಡೆ, ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷ ಸಾಜ ರಾಧಾಕೃಷ್ಣ ಆಳ್ವ, ರಾಜೇಶ್ ಬನ್ನೂರು, ವಿಶ್ವನಾಥ ಗೌಡ ಬನ್ನೂರು, ಸತೀಶ್ ನ್ಯಾಕ್, ವಿದ್ಯಾಧರ್ ಜೈನ್, ನಗರಸಭೆ ಮಾಜಿ ಸದಸ್ಯೆ ಮೋಹಿನಿ ವಿಶ್ವನಾಥ ಗೌಡ, ಮಹೇಶ್ ಕೇರಿ, ನಿತೀಶ್ ಕುಮಾರ್ ಶಾಂತಿವನ, ನಿತಿನ್ ಕಲ್ಲೇಗ, ನಿರಂಜನ ಮತ್ತಿತರರು ಉಪಸ್ಥಿತರಿದ್ದರು.

ಸುತ್ತ ಮುತ್ತ

ಎಸ್. ಪೊನ್ನಣ್ಣರಿಗೆ ಸಂಪುಟದಲ್ಲಿ ಸ್ಥಾನ ಸಿಗಲಿ: ಲಾಲಾ ಅಪ್ಪಣ್ಣ ಒತ್ತಾಯ

ಶ್ರೀಮಂಗಲ: ಕಾನೂನು ಮತ್ತು ಆಡಳಿತಾತ್ಮಕವಾಗಿ ಉತ್ತಮ ತಿಳುವಳಿಕೆ ಹೊಂದಿರುವ ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರಿಗೆ ಸರಕಾರದಲ್ಲಿ ಸಂಪುಟ ದರ್ಜೆಯ ಸಚಿವ ಸ್ಥಾನ ನೀಡಲು [illegible] ಮರೆನಾಡ್ ಕೊಡವ ಸಮಾಜ ಅಧ್ಯಕ್ಷ ಅಣ್ಣಳಮಾಡ ಲಾಲಾ ಅಪ್ಪಣ್ಣ ಅವರು ಅಗ್ರಹಿಸಿದ್ದಾರೆ.


ಲಾಲಾ ಅಪ್ಪಣ್ಣ

ಸಮಾಜದ ಆಡಳಿತ ಮಂಡಳಿ ಪರವಾಗಿ ಮಾಧ್ಯಮ ಪ್ರಕಟಣೆ ನೀಡಿರುವ ಅವರು ಕ್ಷೇತ್ರವನ್ನು ಶಾಸಕ ಪೊನ್ನಣ್ಣ ಪ್ರಗತಿಯತ್ತ ಕೊಂಡೊಯ್ಯುತ್ತಿದ್ದು ಸರಕಾರಕ್ಕೆ ಮತ್ತು ರಾಜ್ಯದ ಹಿತಾಸಕ್ತಿಗೆ ಸಮಸ್ಯೆ ಬಂದಾಗ ನಿಭಾಯಿಸುವ ಸಾಮರ್ಥ್ಯ ಅವರಿಗಿದೆ. ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರಾಗಿ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದು ಸಮಾಜದಲ್ಲಿ ಎಲ್ಲರಿಗೂ ಸಾಮಾಜಿಕ ನ್ಯಾಯ ಒದಗಿಸುವ ಬದ್ಧತೆಯನ್ನು ಅವರು ತೋರಿದ್ದಾರೆ. ಸಚಿವರಾಗಿ ಪೊನ್ನಣ್ಣ ಅವರು ರಾಜ್ಯದ ಹಿತಾಸಕ್ತಿಗಾಗಿ ಕೇಂದ್ರ ಸರಕಾರದೊಂದಿಗೆ ಸಮಾಲೋಚಿಸುವ, ವ್ಯವಹಾರ ಮಾಡುವ, ಮನವರಿಕೆ ಮಾಡುವ, ನಿಭಾಯಿಸುವ ಸ್ವಂತ ಚಿಂತನೆ ಹೊಂದಿದ್ದಾರೆ. ಆದರೇ ಇವೆಲ್ಲವನ್ನು ನಿರ್ವಹಿಸಲು ಸೂಕ್ತ ಸಚಿವ ಸ್ಥಾನದ ಮೂಲಕ ಪೊನ್ನಣ್ಣ ಅವರಿಗೆ ಅಧಿಕಾರ ನೀಡಬೇಕು ಎಂದು ಲಾಲಾ ಅಪ್ಪಣ್ಣ ಅಗ್ರಹಿಸಿದ್ದಾರೆ.

ಅಭಿನವ ಸಿದ್ದಲಿಂಗ ಮಹಾ ಸ್ವಾಮೀಜಿ ಜನ್ಮದಿನಾಚರಣೆ

ಮುಲ್ಕಿ: ಕೆಎಸ್ ರಾವ್ ನಗರದ ಲಿಂಗಪ್ಪಯ್ಯ ಕಾಡಿನ ಶ್ರೀ ಚನ್ನಮಲ್ಲಿಕಾರ್ಜುನ ಮಠದಲ್ಲಿ ಶ್ರೀ ಗುರು ತಪೋನಿಷ್ಠ ಅಭಿನವ ಸಿದ್ದಲಿಂಗ ಮಹಾ ಸ್ವಾಮೀಜಿ ಅವರ ಜನ್ಮದಿನಾಚರಣೆಯನ್ನು ಶ್ರೀ ಮಠದ ಶಿಷ್ಯ ವೃಂದ ಹಾಗೂ ಲಿಂಗಪ್ಪಯ್ಯ ಕಾಡಿನ ಸಮಸ್ತ ಭಕ್ತರಿಂದ ಶ್ರೀಮಠದ ಆವರಣದಲ್ಲಿ ನಡೆಯಿತು.

ಶ್ರೀಮಠದ ಅಧ್ಯಕ್ಷ ವಿಠಲ್ ಎನ್.ಎಂ., ಮಾತನಾಡಿ, ಗುರುಗಳಾದ ಅಭಿನವ ಸಿದ್ದಲಿಂಗ ಮಹಾ ಸ್ವಾಮೀಜಿಯವರು ಅಪಾರ ಶಿಷ್ಯ ವರ್ಗದವರನ್ನು ಹೊಂದಿದ್ದು ಶ್ರೇಷ್ಠ ವ್ಯಕ್ತಿತ್ವದ ಮೂಲಕ ಮಾನವೀಯ ಮೌಲ್ಯ ಅರಗಿಸಿಕೊಂಡು ಬಡವರ ಕಷ್ಟ ಸುಖಗಳಲ್ಲಿ ಭಾಗಿಯಾಗಿದ್ದಾರೆ. ಎಂದು ಬಣ್ಣಿಸಿದರು.
ಈ ಸಂದರ್ಭ ಮಾಜಿ ನಗರ ಪಂಚಾಯತ್ ಸದಸ್ಯ ಭೀಮಾ ಶಂಕರ ಆರ್. ಕೆ., ಹಿರಿಯ ಪದಾಧಿಕಾರಿಗಳಾದ ವೀರಯ್ಯ ಎ. ಹಿರೇಮಠ, ದೇವೇಂದ್ರಪ್ಪ ಗುರುಪಾದಯ್ಯ ಸ್ವಾಮಿ, ಹನುಮಂತ ಡಿ. ಪೂಜಾರಿ, ಗೊಲ್ಲಾಳಪ್ಪ ತಮಗೊಂಡ, ಹುಲಿಗೇಶ್ ಸೋಲಾರ್, ಶರಣು ಬಿಸ್ನಾಳ್, ಮಂಜುನಾಥ್ ಮೋರಟಗಿ, ವೀರಣ್ಣ ಅರಳಗುಂಡಗಿ, ಪಾಂಡುರಂಗ ಹೊಸಮನಿ, ಮಾಬು ಕುಮಾರ್, ಪರ್ತ್ ಗೌಡ, ತಿರುಪತಿ,ದೇವಿಪ್ರಸಾದ್, ರಾಜು ಮನೂರ್, ಪ್ರಕಾಶ್ ಪೂಜಾರಿ,ಮಂಜು ಜೆಸಿಬಿ, ಮೈಲಾರಿ, ಶಿವರಾಜ್,ಮತ್ತಿತರರು ಉಪಸ್ಥಿತರಿದ್ದರು. ಶಿವಾನಂದ್ ಆರ್.ಕೆ., ಸ್ವಾಗತಿಸಿ, ಉಮೇಶ್ ಮುಲ್ಕಿ ವಂದಿಸಿದರು.

ತೆಕ್ಕಟ್ಟೆ: ವಿಶ್ವತಂಬಾಕು ವಿರೋಧ ದಿನಾಚರಣೆ

ಕೋಟ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಕುಂದಾಪುರ –2 ತಾಲೂಕು ತೆಕ್ಕಟ್ಟೆ ವಲಯದ ತೆಕ್ಕಟ್ಟೆ ಕಾರ್ಯಕ್ಷೇತ್ರದಲ್ಲಿ ವಿಶ್ವ ತಂಬಾಕು ವಿರೋಧ ದಿನಾಚರಣೆಯನ್ನು ತೆಕ್ಕಟ್ಟೆ ಶಿಶು ಮಂದಿರದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ತಾಲೂಕು ಜನಜಾಗೃತಿ ವೇದಿಕೆಯ ಅಧ್ಯಕ್ಷ ಸುಬ್ರಹ್ಮಣ್ಯ ಶೆಟ್ಟಿ ಅವರು ಭಾಗವಹಿಸಿದರು. ಕುಂದಾಪುರ –2 ತಾಲೂಕಿನ ಯೋಜನಾಧಿಕಾರಿ ಸುಧೀರ್ ಹಂಗಳೂರು, ಗ್ರಾಮಾಭಿವೃದ್ಧಿ ಯೋಜನೆಯ ಸೌಲಭ್ಯಗಳು, ಅನುದಾನಗಳ ಬಗ್ಗೆ ಮಾಹಿತಿ ನೀಡಿದರು.

ಒಕ್ಕೂಟದ ಅಧ್ಯಕ್ಷ ರಾಜೇಶ್ ಕಾಂಚನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ನಿಕಟಪೂರ್ವ ವಲಯದ ಅಧ್ಯಕ್ಷ ರಮೇಶ್ ಆಚಾರ್ಯ ಕಾರ್ಯಕ್ರಮದ ಧ್ಯೇಯೋದ್ದೇಶ ಹಾಗೂ ಯೋಜನೆ ನಡೆದು ಬಂದ ಹಾದಿ ಕುರಿತು ತಮಗೆ ಆದ ಅನುಭವ ಹಾಗೂ ಅಭಿವೃದ್ಧಿಯ ಕುರಿತು ತಮ್ಮ ಆಶಯವನ್ನು ತಿಳಿಸಿದರು. ಯೋಜನೆಯ ಅದ್ಭುತ ಕಾರ್ಯಕ್ರಮಗಳಲ್ಲಿ ಒಂದಾದ ಸಂಪೂರ್ಣ ಸುರಕ್ಷಾ ಕಾರ್ಯಕ್ರಮದ ಫಲಾನುಭವಿಗಳಿಗೆ ನೊಂದಾವಣೆ ಕಾರ್ಡನ್ನು ವಿತರಿಸಲಾಯಿತು. ತೆಕ್ಕಟ್ಟೆ ವಲಯದ ಮೇಲ್ವಿಚಾರಕ ಹೇಮಲತಾ ಕಾರ್ಯಕ್ರಮ ನಿರೂಪಿಸಿದರು. ಅನುಷಾ ಪ್ರಾರ್ಥಿಸಿದರು. ಸೇವಾ ಪ್ರತಿನಿಧಿ ಉಷಾ ಸ್ವಾಗತಿಸಿ ಸಾರಿಕಾ ವಂದಿಸಿದರು. ಈ ಸಂದರ್ಭ ಸ್ಥಳೀಯ ತಂಡದ ಸದಸ್ಯರು ಪದಾಧಿಕಾರಿಯವರು ಉಪಸ್ಥಿತರಿದ್ದರು.

ಮಂಚಿ ಕೊಳ್ನಾಡು ಪ್ರೌಢಶಾಲೆಯಲ್ಲಿ ತಾಲೂಕು ಮಟ್ಟದ ಶಾಲಾ ಪ್ರಾರಂಭೋತ್ಸವ

ದಾಖಲಾತಿ ಗಮನಾರ್ಹ: ಶಿಕ್ಷಣಾಧಿಕಾರಿ ಮಾಲತಿ

ಬಂಟ್ವಾಳ: ಸರಕಾರಿ ಕನ್ನಡ ಶಾಲೆಗಳು ಮುಚ್ಚುವ ಭೀತಿಯಲ್ಲಿರುವ ಇಂದಿನ ಕಾಲಘಟ್ಟದಲ್ಲಿ ಮಂಚಿ ಕೊಳ್ನಾಡು ಪ್ರೌಢಶಾಲೆಯ ಮಕ್ಕಳ ದಾಖಲಾತಿ ಸಂಖ್ಯೆ ಗಮನಾರ್ಹವಾಗಿದೆ. ಶೇಕಡಾ 100 ಫಲಿತಾಂಶದೊಂದಿಗೆ ಶಾಲೆಯ ಶೈಕ್ಷಣಿಕ ಗುಣಮಟ್ಟವು ಜನಮಾನಸದಲ್ಲಿ ಶಾಶ್ವತವಾಗಿದೆ ಎಂದು ಬಂಟ್ವಾಳ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಮಾಲತಿ ಹೇಳಿದ್ದಾರೆ.



ಮಂಚಿ ಕೊಳ್ನಾಡು ಪ್ರೌಢಶಾಲೆಯಲ್ಲಿ ತಾಲೂಕು ಮಟ್ಟದ ಶಾಲಾ ಪ್ರಾರಂಭೋತ್ಸವ ಉದ್ಘಾಟಿಸಿ ಮಾತನಾಡಿದ ಅವರು ಪಠ್ಯ ಹಾಗೂ ಸಹಪಠ್ಯದ ಸಮತೋಲಿತ ಕಲಿಕೆ ಮಕ್ಕಳ ಸಂಸ್ಕಾರಯುತ ನಡೆಗೆ ತೆರೆದು ಪ್ರಜ್ಞಾವಂತ ಸಮಾಜದ ಅನಾವರಣಕ್ಕೆ ಕಾರಣವಾಗುತ್ತದೆ ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಶಿವಶಂಕರ್ ರಾವ್ ಮಾತನಾಡಿ, ಮಂಚಿ ಕೊಳ್ನಾಡು ಪ್ರೌಢಶಾಲೆಯು ಶಾಲಾ ಶೈಕ್ಷಣಿಕ ಹಿತದೃಷ್ಟಿಯಿಂದ ಹಲವಾರು ಹೆಜ್ಜೆ ಗುರುತು ಮೂಡಿಸಿದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಿದ್ದು ಶೈಕ್ಷಣಿಕ ಗುಣಮಟ್ಟ ಹಾಗೂ ಭೌತಿಕ ವ್ಯವಸ್ಥೆ ಈಡೇರಿಸುವಲ್ಲಿ ಶಾಲಾಭಿವೃದ್ಧಿ ಸಮಿತಿ ಶ್ರಮಿಸುತ್ತಿದೆ ಎಂದರು.

ಉಚಿತ ಪಠ್ಯಪುಸ್ತಕ ವಿತರಣೆ

ಇದೇ ವೇಳೆ ವಿದ್ಯಾರ್ಥಿಗಳಿಗೆ ಪೋಷಕರು ಬರೆಯುವ ಪೆನ್ನು ವಿತರಿಸುವ ಮೂಲಕ ದಾಖಲಾತಿ ಹೊಂದಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಉಚಿತ ಪಠ್ಯಪುಸ್ತಕವನ್ನು ಹಸ್ತಾಂತರಿಸಲಾಯಿತು. ಶಾಲಾ ವಿದ್ಯಾರ್ಥಿಗಳ ಹೊಸ ವಿನ್ಯಾಸದ ಕ್ರೀಡಾ ಜರ್ಸಿಯನ್ನು ಪ್ರದರ್ಶಿಸಲಾಯಿತು. ಶಾಲಾ ವಿದ್ಯಾರ್ಥಿನಿಯರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೆರವೇರಿಸಿದರು.

ಶಿಕ್ಷಣ ಸಂಯೋಜಕ ರಮಾನಂದ ನೂಜಿಪ್ಪಾಡಿ, ಶಾಲಾಭಿವೃದ್ಧಿ ಸಮಿತಿಯ ಸದಸ್ಯರಾದ ರಮೇಶ್ ರಾವ್ ಪತ್ತುಮುಡಿ, ಡಾ. ಗೋಪಾಲ್ ಆಚಾರ್, ಹಿರಿಯ ವಿದ್ಯಾರ್ಥಿ ಸುಲೈಮಾನ್ ಜಿ. ಸುರಿಬೈಲು, ಗಣೇಶ್ ಪ್ರಭು ಅವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಬಂಟ್ವಾಳ ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿ ವಿದ್ಯಾಶ್ರೀ, ಶಿಕ್ಷಣ ಸಂಯೋಜಕ ಸುಧಾ, ಶಾಲಾಭಿವೃದ್ಧಿ ಸಮಿತಿಯ ಸದಸ್ಯ ರಮೇಶ್ ಟೈಲರ್, ಶಾಲಾ ಸ್ಥಳ ದಾನಿಗಳಾದ ನಾರಾಯಣ ಭಟ್ ನೂಜಿಬೈಲು ಉಪಸ್ಥಿತರಿದ್ದರು. ಕನ್ನಡ ಭಾಷಾ ಶಿಕ್ಷಕಿ ವಿಜಯಲಕ್ಷ್ಮಿ ಕಟೀಲು ಕಾರ್ಯಕ್ರಮ ನಿರೂಪಿಸಿದರು. ಮುಖ್ಯ ಶಿಕ್ಷಕರಾದ ಸುಶೀಲ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಹಿಂದಿ ಭಾಷಾ ಶಿಕ್ಷಕಿ ಶಾಂತ ಎಸ್. ವಂದಿಸಿದರು.

> **ಗುಣಮಟ್ಟದ ಶಿಕ್ಷಣ**
> ಉತ್ತಮ ಗುಣಮಟ್ಟದ ಶಿಕ್ಷಣ ನೀಡಿದಾಗ ಮಕ್ಕಳ ದಾಖಲಾಗಿಯಲ್ಲಿ ಹೆಚ್ಚಳವಾಗುತ್ತದೆ. ಇದಕ್ಕೆ ಮಂಚಿ ಕೊಳ್ನಾಡು ಪ್ರೌಢಶಾಲೆಯೇ ಸಾಕ್ಷಿಯಾಗಿದೆ.
> ● ಮಾಲತಿ, ಶಿಕ್ಷಣಾಧಿಕಾರಿ

ಮಕ್ಕಳಿಗೆ ಕಿರೀಟ ಧರಿಸಿ, ತಿಲಕವಿಟ್ಟು ಸೂರಂಬೈಲು ಶಾಲೆಯಲ್ಲಿ ಮಕ್ಕಳ ಸ್ವಾಗತ



ನಿಡ್ಪಳ್ಳಿ: ಸೂರಂಬೈಲಿನ ದ.ಕ. ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಜೂ.1ರಂದು ಅತ್ಯಂತ ಸಂಭ್ರಮ, ಸಡಗರ ಹಾಗೂ ಅದ್ದೂರಿಯಾಗಿ ಆಚರಿಸಲಾಯಿತು.

ಶಾಲೆಗೆ ಹೊಸದಾಗಿ ಸೇರ್ಪಡೆಯಾದ ಮಕ್ಕಳನ್ನು ಬ್ಯಾಂಡ್ ವಾದ್ಯದೊಂದಿಗೆ ದಾಖಲಾತಿಜಾಥಾನಡೆಸಿಸ್ವಾಗತಿಸಲಾಯಿತು. ಬಳಿಕ ಮಕ್ಕಳಿಗೆ ಕಿರೀಟ ಧರಿಸಿ, ತಿಲಕವಿಟ್ಟು ಆರತಿ ಬೆಳಗುವ ಮೂಲಕ ಆತ್ಮೀಯವಾಗಿ ಶಾಲೆಗೆ ಬರ ಮಾಡಿಕೊಳ್ಳಲಾಯಿತು. ಬಳಿಕ ಪಠ್ಯಪುಸ್ತಕಗಳು ಹಾಗೂ ಸಮವಸ್ತ್ರ ವಿತರಿಸಲಾಯಿತು.

ಬ್ಯಾಗ್ ವಿತರಣೆ

ಬೆಂಗಳೂರಿನ ಸುರಕ್ಷಾ ವೆಲ್ಫೇರ್ ಟ್ರಸ್ಟ್‌ನ ಆಡಳಿತ ನಿರ್ದೇಶಕ ಶ್ರೀರಾಮ್ ಪ್ರಸಾದ್ ಪಟ್ಟೆ ಬಾಳೆಮೂಲೆ ಪ್ರಾಯೋಜಿಸಿದ್ದ ಶಾಲಾ ಬ್ಯಾಗ್‌ಗಳನ್ನು ಮಕ್ಕಳಿಗೆ ಈ ಸಂದರ್ಭ ವಿತರಿಸಲಾಯಿತು. ಹಿರಿಯ ವಿದ್ಯಾರ್ಥಿ ಸಂಘದ ವತಿಯಿಂದ ಪೆನ್ನು-ಪೆನ್ಸಿಲ್ ಕಿಟ್‌ಗಳನ್ನು ವಿತರಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕಿ ಊರ್ಮಿಳಾ ಕೆ. ಮಾತನಾಡಿ,ಶಾಲೆಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಶ್ರೀನಿವಾಸ ಪ್ರಸಾದ್, ಸ್ಕಂದಶ್ರೀ ಯುವಕ ಮಂಡಳದ ಅಧ್ಯಕ್ಷ, ಪಾಣಾಜೆ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಮೋಹನ್ ನಾಯ್ಕ ತೂಂಬಡ್ಕ, ಓಂ ಫ್ರೆಂಡ್ಸ್ ಭರಣ್ಯ ಇದರ ಅಧ್ಯಕ್ಷ ವಸಂತ ಕುರುಪ್ ಶುಭಾಶಯ ಕೋರಿದರು. ಗ್ರಾಮದ ಹಿರಿಯರಾದ ಸದಾಶಿವ ರೈ ಸೂರಂಬೈಲು, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀಧರ ನಾಯ್ಕ ತೂಂಬಡ್ಕ, ತೂಂಬಡ್ಕದ ತುಳುನಾಡ ಫ್ರೆಂಡ್ಸ್ ಅಧ್ಯಕ್ಷ ದಯಾನಂದ ತೂಂಬಡ್ಕ ಮತ್ತಿತರರಿದ್ದರು. ಅತಿಥಿ ಶಿಕ್ಷಕಿ ಸುಪ್ರೀತಾ ಕೆ. ಸ್ವಾಗತಿಸಿ, ಸಹಶಿಕ್ಷಕಿ ಪವಿತ್ರ ಎಂ.ಆರ್. ವಂದಿಸಿದರು. ಸಹಶಿಕ್ಷಕಿ ಶೃತಿ, ವಿದ್ಯಾ, ಯಶಸ್ವಿನಿ ಮತ್ತು ಹಿರಿಯ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಪಾಣಾಜೆ ಸಹಕರಿಸಿದರು.

ಮೀಯಪದವು ಶ್ರೀ ವಿದ್ಯಾವರ್ಧಕ ಶಾಲೆಯಲ್ಲಿ ಪ್ರವೇಶೋತ್ಸವದ ಸಂಭ್ರಮ



ಮಂಜೇಶ್ವರ: ಮೀಯಪದವು ಶ್ರೀ ವಿದ್ಯಾವರ್ಧಕ ಉನ್ನತ ಪ್ರೌಢ ಶಾಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ಪ್ರವೇಶೋತ್ಸವವು ಸಂಭ್ರಮದಿಂದ ಜರಗಿತು. ಶಾಲಾ ಪ್ರಬಂಧಕ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಕನಸುಗಳ ಬೆನ್ನತ್ತಿ ಶಿಕ್ಷಣದ ಬೆಳಕನ್ನು ಅರಸಿ ಬರುವ ಯುವ ಪೀಳಿಗೆ ಬದ್ಧತೆ ಹಾಗೂ ಪರಿಶ್ರಮದಿಂದ ತಮ್ಮನ್ನು ಕಲಿಕೆಯಲ್ಲಿ ತೊಡಗಿಸಿದಲ್ಲಿ ಮಾತ್ರ ಪ್ರಬುದ್ಧ ಸಮಾಜ ನಿರ್ಮಾಣ ಸಾಧ್ಯ ಎಂದರು. ಮೀಂಜ ಗ್ರಾಮ ಪಂಚಾಯತ್ ಸದಸ್ಯ ಸಿದ್ದೀಕ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರತಿಷ್ಠಿತ ಐಸ್ ಕ್ರೀಂ ಸಂಸ್ಥೆ ಪೋಲಾರ್ ಬೇರ್ ವತಿಯಿಂದ ಶಾಲೆಯ ವಿಜ್ಞಾನ ವಿಭಾಗಕ್ಕೆ ವಿಜ್ಞಾನ ಪರಿಕರಗಳನ್ನು ನೀಡಲಾಯಿತು. ಸಂಸ್ಥೆಯ ಸ್ಥಾಪಕ ನಿರ್ದೇಶಕ ಹಾಗೂ ಶಾಲಾ ಹಳೆ ವಿದ್ಯಾರ್ಥಿ ಕಿಶೋರ್ ಕುಮಾರ್ ರೈ ಅವರ ಅನುಪಸ್ಥಿತಿಯಲ್ಲಿ ಅವರ ತೀರ್ಥರೂಪರಾದ ಸದಾಶಿವ ರೈ ಅವರು ಪರಿಕರಗಳನ್ನು ಹಸ್ತಾಂತರಿಸಿ ಶುಭಕೋರಿದರು. ಅವರನ್ನು ಶಾಲೆಯ ವತಿಯಿಂದ ಸನ್ಮಾನಿಸಲಾಯಿತು. ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಇಬ್ರಾಹಿಂ ಹೊಸ್ನಕಟ್ಟೆ ಮಿಸ್ರಿಯ, ಶಾಲಾ ಪ್ರಾಂಶುಪಾಲ ರಮೇಶ್ ಕೆ.ಎನ್. ಕಾರ್ಯ ಕ್ರಮಕ್ಕೆ ಶುಭಹಾರೈಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಮೃದುಲಾ ಸ್ವಾಗತಿಸಿ, ಕನ್ನಡ ಅಧ್ಯಾಪಕ ರಾಜಾರಾಮ ವಂದಿಸಿದರು. ಸಮಾಜ ವಿಜ್ಞಾನ ಅಧ್ಯಾಪಕ ಕಿರಣ್ ಕೆ.ಎಸ್. ಕಾರ್ಯಕ್ರಮ ನಿರೂಪಿಸಿದರು.

ಸಂತ ಅಲೋಶಿಯಸ್ ಗೊನ್ಸಾಗ ಶಾಲಾ ಆರಂಭೋತ್ಸವ ಸಂಭ್ರಮ



ಮಂಗಳೂರು: ನಗರದ ಸಂತ ಅಲೋಶಿಯಸ್ ಗೊನ್ಸಾಗದಲ್ಲಿ 2026–27ನೇ ಶೈಕ್ಷಣಿಕ ವರ್ಷದ ಆರಂಭೋತ್ಸವ ಕಾರ್ಯಕ್ರಮವು ಸಂಭ್ರಮದಿಂದ ಸೋಮವಾರ ನಡೆಯಿತು. 10ರಿಂದ 12 ತರಗತಿಯ ವಿದ್ಯಾರ್ಥಿಗಳು ಹೊಸ ಶೈಕ್ಷಣಿಕ ವರ್ಷದ ಆರಂಭವನ್ನು ಉತ್ಸಾಹಭರಿತವಾಗಿ ಸ್ವಾಗತಿಸಿದರು.

1 ರಿಂದ 12ನೇ ತರಗತಿಗಳ ಶೈಕ್ಷಣಿಕ ಸಂಯೋಜಕರಾದ ಕ್ಯಾರೆಲ್ ಟೀನಾ ರೋಡ್ರಿಗಸ್ ಹಾಗೂ ದೀಪ್ತಿ ಕರ್ಕಡ ಅವರನ್ನು, 11ಮತ್ತು 12ನೇ ತರಗತಿಗಳ ಸಂಯೋಜಕರಾಗಿ ದೀಪಾ ಕರ್ಕಡ ಅವರನ್ನು ಪರಿಚಯಿಸಲಾಯಿತು. ಜತೆಗೆ ಹೊಸದಾಗಿ ಸೇರ್ಪಡೆಯಾದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನು ಶಾಲಾ ಸಮುದಾಯಕ್ಕೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ಶಾಲೆಯ ಪ್ರಾಂಶುಪಾಲ ಫಾ. ರೋಹನ್ ಡಿಅಲ್ಮೇಡ ಎಸ್.ಜೆ. ಮಾತನಾಡಿ, ವಿದ್ಯಾರ್ಥಿಗಳು ಸಂತೋಷ, ಉತ್ಸಾಹ ಮತ್ತು ಪ್ರೇರಣೆಯೊಂದಿಗೆ ಹೊಸ ಶೈಕ್ಷಣಿಕ ವರ್ಷವನ್ನು ಆರಂಭಿಸಬೇಕು ಎಂದರು. ಕಳೆದ ಶೈಕ್ಷಣಿಕ ವರ್ಷದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.100 ಫಲಿತಾಂಶ ದಾಖಲಿಸಿದ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಅಭಿನಂದಿಸಿದರು. ಉಪ ಪ್ರಾಂಶುಪಾಲರಾದ ಅಪರ್ಣಾ ಸುರೇಶ್ ಹಾಗೂ ಲಾರೆಲ್ ಡಿಸೋಜ ಉಪಸ್ಥಿತರಿದ್ದರು.

ಬೆಳ್ಮಣ್ ಶಾಲಾ ಪ್ರಾರಂಭೋತ್ಸವ, ಎಲ್‌ಕೆಜಿ-ಯುಕೆಜಿ ತರಗತಿಗಳ ಉದ್ಘಾಟನೆ



ಶಿರ್ವ: ದೇವರು ನಮ್ಮನ್ನು ಕಾಪಾಡುವನು ಎಂಬ ಬಲವಾದ ನಂಬಿಕೆ ಮತ್ತು ಶಾಲಾ ಶಿಕ್ಷಕರ ಮೇಲಿರುವ ಭರವಸೆಯಿಂದ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಶಾಲೆಯಲ್ಲಿ ಒಳ್ಳೆಯ ಸಂಸ್ಕಾರವಂತ, ಬದುಕಿಗೆ ಬೇಕಾಗಿರುವ ಮೌಲ್ಯಾಧಾರಿತ ಶಿಕ್ಷಣ ಶಾಲೆಗಳಲ್ಲಿ ಮಾತ್ರ ಸಿಗುತ್ತದೆ. ಈ ಕನ್ನಡ ಮಾಧ್ಯಮ ಶಾಲೆಯಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕು ಎನ್ನುವ ನಿಟ್ಟಿನಲ್ಲಿ ಆಂಗ್ಲ ಶಿಕ್ಷಣವನ್ನೂ ಕಲಿಸುವ ಕಾರ್ಯಕ್ಕೆ ಕೈ ಹಾಕಿರುವ ಇಲ್ಲಿನ ಸಂಸ್ಥೆಯ ಸಾಧನೆ ನಿಜಕ್ಕೂ ಶ್ಲಾಘನೀಯ ಎಂದು ನಂದಳಿಕೆ ಚಾವಡಿ ಅರಮನೆ ಸುಹಾಸ್ ಹೆಗ್ಡೆ ನುಡಿದರು.

ಅವರು ನಂದಳಿಕೆ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ನಡೆದ ಶಾಲಾ ಪ್ರಾರಂಭೋತ್ಸವ ಮತ್ತು ಎಲ್‌ಕೆಜಿ–ಯುಕೆಜಿ ತರಗತಿಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಖಾದಿ ಮತ್ತು ಗ್ರಾಮೋದ್ಯೋಗ ಮಜಿ ಅಧ್ಯಕ್ಷ ಮಿಥುನ್ ಹೆಗ್ಡೆ ಪಡುಬಿದ್ರಿ ಮಾತನಾಡಿ ಸರ್ಕಾರಿ ಕನ್ನಡ ಮಾಧ್ಯಮ ಶಾಲೆ ಎಂಬ ಕೀಳರಿಮೆ ಬೇಡ. ಇದೇ ಶಾಲೆಯಲ್ಲಿ ಕಲಿತವರು ಇಂದು ಉನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಅದೆಷ್ಟೋ ಸಾಧಕರೂ ಆಗಿದ್ದಾರೆ. ಶಿಕ್ಷಣವನ್ನು ಕಲಿಸುವುದರ ಹಿಂದೆ ಶಿಕ್ಷಕರ ಪರಿಶ್ರಮವಿದ್ದರೆ ಸಾಲದು. ಪೋಷಕರ ಸಹಕಾರವೂ ಅತೀ ಮುಖ್ಯವಾಗಿದೆ ಎಂದರು.

ಅಧ್ಯಕ್ಷತೆಯನ್ನು ಕ್ಷೇತ್ರ ಸಂಪನ್ಮೂಲ ಕೇಂದ್ರ ಕಾರ್ಕಳದ ಸಮನ್ವಯ ಅಧಿಕಾರಿ ಇಂದಿರಾ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಪ್ರಾಂಶುಪಾಲ ಡಾ.ಜನಾರ್ದನ ಭಟ್, ನಿವೃತ್ತ ಶಿಕ್ಷಕ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಕಾಪು ತಾಲೂಕು ಅಧ್ಯಕ್ಷ ಬಿ.ಪುಂಡಲೀಕ ಮರಾಠೆ, ನಿವೃತ್ತ ಸಂಪನ್ಮೂಲ ವ್ಯಕ್ತಿ ಸಂಜೀವ ದೇವಾಡಿಗ ಸಕಾಲಿಕವಾಗಿ ಮಾತನಾಡಿದರು. ಹಳೆವಿದ್ಯಾರ್ಥಿ ಸಂಘದ ಗೌರವ ಅಧ್ಯಕ್ಷ ಬಾಲಚಂದ್ರ ಶೆಟ್ಟಿ ಎಸ್‌ಡಿಎಮ್‌ಸಿ ಅಧ್ಯಕ್ಷೆ ಮಮತಾ ಇದ್ದರು. ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ಸುಭಾಸ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಲಾ ಮುಖ್ಯ ಶಿಕ್ಷಕಿ ಜೆಸಿಂತಾ ನ್ಯಾನ್ಸಿ ಅಗೇರ ಸ್ವಾಗತಿಸಿ, ನಿವೃತ್ತ ಮುಖ್ಯ ಶಿಕ್ಷಕ ಸದಾನಂದ ಶೆಟ್ಟಿ ನಿರೂಪಿಸಿದರು. ಶಿಕ್ಷಕ ಚಂದ್ರಕಾಂತ ಡೇಸ ಧನ್ಯವಾದವಿತ್ತರು.

ಅಲ್ಲಲ್ಲಿ ಶಾಲಾ ಪ್ರಾರಂಭೋತ್ಸವದ ಸಂಭ್ರಮ


ಕಾರ್ಕಳ ತಾಲೂಕಿನ ನಿಟ್ಟೆ ಗ್ರಾಮದ ಪದವು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ನಡೆಯಿತು. ಶಾಸಕ ವಿ. ಸುನೀಲ್ ಕುಮಾರ್ ಶುಭ ಹಾರೈಸಿದರು. ಪುಟಾಣಿ ಮಕ್ಕಳಿಗೆ, ಪೋಷಕರು ಮತ್ತು ಶಿಕ್ಷಕ ವೃಂದದವರುಪಸ್ಥಿತರಿದ್ದರು.


ವಿಟ್ಲ ಪಿಎಂಶ್ರೀ ಸರಕಾರಿ ಪ್ರೌಢ ಶಾಲೆಯ ಪ್ರಾರಂಭೋತ್ಸವವನ್ನು ವಿಟ್ಲ ಪಟ್ಟಣ ಪಂಚಾಯತ್ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷ ರವಿಪ್ರಕಾಶ್ ಉದ್ಘಾಟಿಸಿದರು. ಎಸ್‌ಡಿಎಂಸಿ ಉಪಾಧ್ಯಕ್ಷ ಸದಾಶಿವ ಭಟ್, ಸದಸ್ಯರು, ಮುಖ್ಯ ಶಿಕ್ಷಕಿ ಫೆಲ್ಸಿಟಾ ಈವಾ ಗಲ್ಲಾವ್ಡೊ ಉಪಸ್ಥಿತರಿದ್ದರು.


ಗಂಗೊಳ್ಳಿ ರಥಬೀದಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಸೋಮವಾರ ನಡೆಯಿತು. ಎಸ್‌ಡಿಎಂಸಿ ಅಧ್ಯಕ್ಷೆ ಶೋಭಾ ಖಾರ್ವಿ, ಶಾಲಾ ಮುಖ್ಯ ಶಿಕ್ಷಕಿ ಚಂದ್ರಕಲಾ, ಸಹಶಿಕ್ಷಕಿ ಪ್ರೇಮಲತಾ, ಅಂಗನವಾಡಿ ಕಾರ್ಯಕರ್ತೆ ಫಿಲೋಮಿನಾ, ಎಸ್‌ಡಿಎಂಸಿ ಉಪಾಧ್ಯಕ್ಷೆ ಶ್ವೇತ ವಿಶ್ವನಾಥ್ ಖಾರ್ವಿ, ಶಿಕ್ಷಕರು, ಪೋಷಕರು ಉಪಸ್ಥಿತರಿದ್ದರು. ಬಳಿಕ ಉಚಿತ ಪಠ್ಯಪುಸ್ತಕ ವಿತರಿಸಲಾಯಿತು.


ಕುಂದಾಪುರ ತಾಲೂಕಿನ ಮೊವಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಾರಂಭೋತ್ಸವ ಸಂಭ್ರಮದಿಂದ ನಡೆಯಿತು. ದಾನಿ ಸುರೇಶ ಮೊಗವೀರ ಬೆಂಗಳೂರು ಅವರು ಮಕ್ಕಳಿಗೆ ಕೊಡ ಮಾಡಿದ ಸಮವಸ್ತ್ರವನ್ನು ವಿತರಿಸಲಾಯಿತು. ಶಾಲೆಯ ಮುಖ್ಯೋಪಾಧ್ಯಾಯರು, ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಅಧ್ಯಾಪಕರು, ಪೋಷಕರು ಉಪಸ್ಥಿತರಿದ್ದರು.


ಕುಂದಾಪುರ ಸಂತ ಜೋಸೆಫರ ಪ್ರೌಢಶಾಲೆ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಸೋಮವಾರ ನಡೆಯಿತು. ಶಾಲಾ ಸಭಾಂಗಣದಲ್ಲಿ ಎಲ್ಲಾ ವಿದ್ಯಾರ್ಥಿಗಳನು ಸ್ವಾಗತಿಸಲಾಯಿತು. ಶಾಲಾ ಜಂಟಿ ಕಾರ್ಯದರ್ಶಿಗಳಾದ ಭಗಿನಿ ಸುಗುಣ ಅವರು ವಿದ್ಯಾರ್ಥಿಗಳಿಗೆ ಸರಕಾರ ಕೊಡ ಮಾಡಿದ ಉಚಿತ ಪಠ್ಯ ಪುಸ್ತಕಗಳನು ಹಾಗೂ ಎಂಸಿಸಿ ಬ್ಯಾಂಕ್ ಉಚಿತವಾಗಿ ನೀಡಿದ ನೋಟ್ಸ್ ಪುಸ್ತಕಗಳನ್ನು ವಿತರಿಸಿದರು. ವಿದ್ಯಾರ್ಥಿಗಳಿಗೆ ಸಿಹಿ ತಿಂಡಿಗಳನ್ನು ವಿತರಿಸಲಾಯಿತು.


ಕೋಟದ ಹಂಗಾರಕಟ್ಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಪ್ರಾರಂಭೋತ್ಸವ ನಡೆಯಿತು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರೇಖಾ ಉಡುಪ, ಐರೋಡಿ ಗ್ರಾ.ಪಂ. ಮಾಜಿ ಸದಸ್ಯ ನಟರಾಜ್ ಗಾಣಿಗ, ಶಾಲೆಯ ಎಸ್‌ಡಿಎಂಸಿ ಉಪಾಧ್ಯಕ್ಷ ಶೇಖರ ಪೂಜಾರಿ ಹಾಗೂ ಶಾಲೆಯ ಮುಖ್ಯ ಶಿಕ್ಷಕಿ ಪ್ರಿಸಿಲ್ಲಾ ಉಪಸ್ಥಿತರಿದ್ದರು.

ಬೆಳ್ತಂಗಡಿ ಬಜಿರೆ ಸರಕಾರಿ ಪಿಎಂಶ್ರೀ ಶಾಲೆಯಲ್ಲಿ ಪ್ರಾರಂಭೋತ್ಸವ, ನೂತನ ವಿದ್ಯಾರ್ಥಿಗಳಿಗೆ ಹೂ ನೀಡಿ ಸ್ವಾಗತ

ಮಕ್ಕಳು ಮೊಬೈಲ್,ಟಿವಿಗೆ ದಾಸರಾಗದಿರಲಿ: ಜಿನೇಂದ್ರ ಕೋಟ್ಯಾನ್

ಬೆಳ್ತಂಗಡಿ: ಇಲ್ಲಿಯ ಬಜಿರೆ ಸರಕಾರಿ ಪಿಎಂಶ್ರೀ ಶಾಲೆಯಲ್ಲಿ ಸೋಮವಾರ ಅದ್ದೂರಿಯಾಗಿ ಶಾಲಾ ಪ್ರಾರಂಭೋತ್ಸವ ನಡೆಯಿತು. ಪುಟಾಣಿ ವಿದ್ಯಾರ್ಥಿಗಳು ಶಾಲೆಗಳತ್ತ ಅತೀ ಸಂಭ್ರಮದಿಂದ ಹೆಜ್ಜೆ ಹಾಕಿದರು.



ಪಥಸಂಚಲನ ಮೆರವಣಿಗೆಯಲ್ಲಿ ಸಾಗಿ ಬಂದ ವಿದ್ಯಾರ್ಥಿಗಳನ್ನು ಆರತಿ ಎತ್ತಿ ಸ್ವಾಗತಿಸಲಾಯಿತು. ವೇಣೂರು ಗ್ರಾ.ಪಂ. ಅಧ್ಯಕ್ಷೆ ಮಲ್ಲಿಕಾ ಕಾಶಿನಾಥ್ ಹೆಗ್ಡೆ ಅವರು ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿದರು. ವಿದ್ಯಾರ್ಥಿಗಳಿಗೆ ಸಿಹಿತಿಂಡಿ ವಿತರಿಸಲಾಯಿತು. ಶಾಲೆಗೆ ನೂತನವಾಗಿ ದಾಖಲಾತಿಗೊಂಡ ವಿದ್ಯಾರ್ಥಿಗಳನ್ನು ಹೂ ನೀಡಿ ಸ್ವಾಗತಿಸಲಾಯಿತು. ಬಳಿಕ ಶಾಲೆಯ ಸಭಾಂಗಣದಲ್ಲಿ ಎಸ್‌ಡಿಎಂಸಿ ಅಧ್ಯಕ್ಷೆ ಜಯಶ್ರೀ ಅವರ ಅಧ್ಯಕ್ಷತೆಯಲ್ಲಿ ಪೋಷಕರ ಸಭೆ ನಡೆಯಿತು. ಮಂಗಳೂರು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಿನೇಂದ್ರ ಕೋಟ್ಯಾನ್ ಅವರು ಸಭೆಗೆ ಚಾಲನೆ ನೀಡಿ ಮಾತನಾಡಿ, ವಿದ್ಯಾರ್ಥಿಗಳು ಗೈರು ಹಾಜರಾಗದಂತೆ ಪೋಷಕರು ನೋಡಿಕೊಳ್ಳಬೇಕು. ವಿದ್ಯಾರ್ಥಿಗಳ ಸ್ವಚ್ಛತೆಗೆ ಗಮನವಹಿಸಬೇಕು, ಮೊಬೈಲ್‌ಗಳಿಂದ ಮಕ್ಕಳನ್ನು ದೂರವಿರಿಸಿ, ಟಿವಿಗಳು ಕೇವಲ ನ್ಯೂಸ್ ನೋಡುವುದಕ್ಕೆ ಮಾತ್ರವೇ ಸೀಮಿತವಿರಲಿ ಎಂದರು. ಮಕ್ಕಳ ಬಗ್ಗೆ ಪೋಷಕರು ಹೆಚ್ಚಿನ ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದು ಒಳಿತಲ್ಲ, ಬದಲಾಗಿ ಅವರನ್ನು ಬುದ್ಧಿವಂತ ನಾಗರಿಕರನ್ನಾಗಿ ಮಾಡುವಲ್ಲಿ ಪ್ರೇರಣೆ ನೀಡಿ ಎಂದರು. ಅವರ ಅಭಿರುಚಿಗಳನ್ನು ಗಮನಿಸಿ ಆಸಕ್ತಿಗೆ ಹೆಚ್ಚಿನ ಪ್ರೋತ್ಸಾಹ ನೀಡುವಂತೆ ಪೋಷಕರಿಗೆ ಕರೆ ನೀಡಿದ ಅವರು, ಶಾಲೆಯನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಲು ಇಲಾಖೆಯಿಂದ ಸಹಕಾರ ನೀಡುವುದಾಗಿ ತಿಳಿಸಿದರು.

ಸನ್ಮಾನ

ಎಸ್‌ಡಿಎಂಸಿ ಅಧ್ಯಕ್ಷರಾಗಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿರುವ ಎಸ್‌ಡಿಎಂಸಿ ನಿಕಟಪೂರ್ವ ಅಧ್ಯಕ್ಷರಾದ ದಿನೇಶ್ ಪಿ. ಅವರನ್ನು ಗೌರವಿಸಲಾಯಿತು. ಜಗನ್ನಾಥ ದೇವಾಡಿಗ ಅವರು ಸನ್ಮಾನಪತ್ರ ವಾಚಿಸಿದರು. ಉಚಿತ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಎಸ್‌ಡಿಎಂಸಿ ಅಧಿಕಾರ ಹಸ್ತಾಂತರ ನಡೆಯಿತು. ಇಬ್ಬರು ನೂತನ ಸದಸ್ಯರನ್ನು ಎಸ್‌ಡಿಎಂಗೆ ಆಯ್ಕೆ ಮಾಡಲಾಯಿತು. ವೇಣೂರು ಗ್ರಾ.ಪಂ. ಸದಸ್ಯರಾದ ಅರುಣ್ ಕ್ರಾಸ್ತ, ಸುನಿಲ್, ಶಿವಾನಂದ ಗೌಡ, ಎಸ್‌ಡಿಎಂಸಿ ಉಪಾಧ್ಯಕ್ಷ ಲೋಕೇಶ್ ಕೋರ್ಲೋಡಿ, ಎಸ್‌ಡಿಎಂಸಿ ಸದಸ್ಯರು, ತಾಯಂದಿರ ಸಮಿತಿ ಸದಸ್ಯರು ಉಪಸ್ಥಿತರಿದ್ದರು. ಸ್ಪಂದನಾ ಬಳಗ ಪ್ರಾರ್ಥಿಸಿದರು. ಪ್ರಭಾರ ಮುಖ್ಯ ಶಿಕ್ಷಕಿ ರಶ್ಮಿ ಶೆಟ್ಟಿ ಸ್ವಾಗತಿಸಿ, ಶಾಲೆಯ ಕೆಲವು ನಿಯಮಗಳ ಬಗ್ಗೆ ತಿಳಿಸಿದರು. ಶಿಕ್ಷಕಿ ನಾಗವೇಣಿ ಮತ್ತು ಹರ್ಷಲಾ ನಿರೂಪಿಸಿ, ಶಿಕ್ಷಕಿ ಬಾಲಕ್ಕ ವಂದಿಸಿದರು.

ಬೆಳ್ಳೂರಿನ ಅಟಲ್‌ಜಿ ಬಡ್ಸ್ ಶಾಲೆಯಲ್ಲಿ ಪ್ರವೇಶೋತ್ಸವದ ಕಲರವ



ಮುಳ್ಳೇರಿಯ: ಬೆಳ್ಳೂರು ಗ್ರಾಮ ಪಂಚಾಯತ್ ಅಟಲ್‌ಜಿ ಬಡ್ಸ್ ಶಾಲೆಯ 2026–27ನೇ ಶೈಕ್ಷಣಿಕ ವರ್ಷದ ಪ್ರವೇಶೋತ್ಸವ ಕಾರ್ಯಕ್ರಮವನ್ನು ಬೆಳ್ಳೂರು ಗ್ರಾಮ ಪಂಚಾಯತ್ ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಸುಕುಮಾರ ಎನ್. ಉದ್ಘಾಟಿಸಿದರು.

ಕುಟುಂಬಶ್ರೀ ಸಿಡಿಎಸ್ ಅಧ್ಯಕ್ಷೆ ಗೀತಾ ಬಿ.ಎನ್. ಅಧ್ಯಕ್ಷತೆ ವಹಿಸಿದ್ದರು. ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಸತ್ಯವತಿ ರೈ, ಸದಸ್ಯರಾದ ಶ್ರೀಧರ ಎಂ., ಭಾಗೀರಥಿ, ಆಶಿಫಾ, ದುರ್ಗಾದೇವಿ, ಶಾಲಾ ಪ್ರಾಂಶುಪಾಲ ಅನಾಮಿಕ, ಕುಟುಂಬಶ್ರೀ ಸಿಡಿಎಸ್ ಸದಸ್ಯೆಯರು, ಮಕ್ಕಳ ರಕ್ಷಕರು ಇದ್ದರು. ಪ್ರಾಂಶುಪಾಲ ಅನಾಮಿಕ ಸ್ವಾಗತಿಸಿ, ವಿದ್ಯಾ ವಂದಿಸಿದರು.

ಸುತ್ತ ಮುತ್ತ

ಇಂದು ಕಾಲೇಜು ಮನಃಶಾಸ್ತ್ರಜ್ಞರ ನೇಮಕಾತಿ

ಕಾಸರಗೋಡು: ಜೀವನಿ ಸೆಂಟರ್ ಫೇರ್ ಬೀಯಿಂಗ್ ಯೋಜನೆಯ ಭಾಗವಾಗಿ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಕಾಲೇಜು ಮನಃಶಾಸ್ತ್ರಜ್ಞ ಹುದ್ದೆಗೆ ನೇಮಕಾತಿ ಸಂದರ್ಶನ ಜೂ.4 ರಂದು ಬೆಳಿಗ್ಗೆ 11 ಗಂಟೆಗೆ ಕಾಸರಗೋಡು ಸರಕಾರಿ ಕಾಲೇಜಿನ ಪ್ರಾಂಶುಪಾಲರ ಕಚೇರಿಯಲ್ಲಿ ನಡೆಯಲಿದೆ. ಮನೋವಿಜ್ಞಾನ ವಿಷಯದಲ್ಲಿ ನಿಯಮಿತ ಅಧ್ಯಯನದ ಮೂಲಕ ಪಡೆದ ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 04994 256027 ಕರೆ ಮಾಡಬಹುದು.

ಇಂದು ವಿವಿಧೆಡೆ ಶಿಕ್ಷಕರ ನೇಮಕಾತಿ

ಕಾಸರಗೋಡು: ದೇಲಂಪಾಡಿ ಜಿವಿಎಚ್‌ಎಸ್ ಎಸ್‌ನ ವಿಎಚ್‌ಎಸ್‌ಇ ವಿಭಾಗದಲ್ಲಿ ಜೂನಿಯರ್ ಕೆಮಿಸ್ಟ್ರಿ ಹುದ್ದೆಗೆ ನೇಮಕಾತಿ ಸಂದರ್ಶನವು ಜೂ.4 ರಂದು ಪೂರ್ವಾಹ್ನ 11 ಗಂಟೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 8086066137 ಕರೆ ಮಾಡಬಹುದು. ಅಡೂರು ಹೈಯರ್ ಸೆಕೆಂಡರಿ ಶಾಲೆಯಲ್ಲಿ ಎಚ್‌ಎಸ್‌ಎಸ್‌ಟಿ ಜೂನಿಯರ್ ಅರೇಬಿಕ್ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಜೂ.3ರಂದು ಬೆಳಗ್ಗೆ 10 ಗಂಟೆಗೆ ಹೈಯರ್ ಸೆಕೆಂಡರಿ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಚೆಮ್ನಾಡು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಪ್ರೌಢಶಾಲಾ ವಿಭಾಗದಲ್ಲಿ ಚಿತ್ರಕಲಾ ಶಿಕ್ಷಕರು ಮತ್ತು ಯುಪಿ ವಿಭಾಗದಲ್ಲಿ ಯುಪಿಎಸ್‌ಟಿ (ಮಲೆಯಾಳ) ಜೂನಿಯರ್ ಸಂಸ್ಕೃತ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಜೂ.3ರಂದು ಬೆಳಿಗ್ಗೆ 11 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ವಿವರಗಳಿಗೆ 9495795061 ಸಂಪರ್ಕಿಸಬಹುದು.

ಜೂ.7: ಕಣಿಪುರ ಮಹಾಸಭೆ

ಕುಂಬಳೆ: ಕಣಿಪುರ ಸಾರ್ವಜನಿಕ ಶ್ರೀಕೃಷ್ಣ ಜನ್ಮಾಷ್ಟಮಿ, ಶ್ರೀ ಗಣೇಶೋತ್ಸವ ಹಾಗೂ ಶ್ರೀ ವರಮಹಾಲಕ್ಷ್ಮಿ ಪೂಜಾ ಸಮಿತಿ ಕುಂಬಳೆ ಇದರ ವಾರ್ಷಿಕ ಮಹಾಸಭೆ ಜೂ.7ರಂದು ಸಂಜೆ 4.30ಕ್ಕೆ ಕಣಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಕಣ್ವ ಮಂಟಪದಲ್ಲಿ ನಡೆಯಲಿದೆ. ಭಕ್ತಜನರು ಸಭೆಯಲ್ಲಿ ಭಾಗವಹಿಸಿ 47ನೇ ವರ್ಷದ ಉತ್ಸವಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಬೇಕಾಗಿ ವಿನಂತಿಸಲಾಗಿದೆ.

ಶಿಕ್ಷಕ ಹುದ್ದೆಗೆ ಸಂದರ್ಶನ

ಕಾಸರಗೋಡು: ಅಂಗಡಿಮೊಗರು ಜಿಎಚ್ ಎಸ್‌ಎಸ್‌ನ ಹೈಯರ್ ಸೆಕೆಂಡರಿ ವಿಭಾಗದಲ್ಲಿ ರಾಜ್ಯಶಾಸ್ತ್ರ (ಜೂನಿಯರ್) ಶಿಕ್ಷಕರ ತಾತ್ಕಾಲಿಕ ಖಾಲಿ ಹುದ್ದೆಯನ್ನು ದಿನ ವೇತನ ಆಧಾರದಲ್ಲಿ ಭರ್ತಿಗೊಳಿಸಲಾಗುವುದು. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ಜೂ.10ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಹೈಯರ್ ಸೆಕೆಂಡರಿ ಕಚೇರಿಯಲ್ಲಿ ನಡೆಯುವ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ 9446461450 ಕರೆ ಮಾಡಬಹುದು.

ಅಧ್ಯಾಪಕರ ನೇಮಕಾತಿ

ಕಾಸರಗೋಡು: ಚಂದ್ರಗಿರಿ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಪೂರ್ಣಾವಧಿ ಜೂನಿಯರ್ ಲ್ಯಾಂಗ್ವೇಜ್ ಅರೇಬಿಕ್ ಯುಪಿಎಸ್‌ಟಿ, ಎಚ್ ಎಸ್‌ಟಿ ಅರೇಬಿಕ್ ಮತ್ತು ಎಚ್‌ಎಸ್‌ಟಿ ಭೌತಶಾಸ್ತ್ರ ವಿಜ್ಞಾನ ಹುದ್ದೆಗಳಿಗೆ ದಿನ ವೇತನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಆಸಕ್ತ ಅಭ್ಯರ್ಥಿಗಳು ಜೂ.5 ರಂದು ಬೆಳಿಗ್ಗೆ 11 ಗಂಟೆಗೆ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ವಿವರಗಳಿಗೆ 9745696261 ಅಥವಾ 9447349295 ಸಂಪರ್ಕಿಸಬಹುದು.

ಶಿಕ್ಷಕರ ಸಂದರ್ಶನ

ಕಾಸರಗೋಡು: ಮುಳ್ಳೇರಿಯ ಜಿವಿಎಚ್ ಎಸ್‌ಎಸ್‌ನ ಪ್ರೌಢಶಾಲಾ ವಿಭಾಗದಲ್ಲಿ ಎಚ್ ಎಸ್‌ಟಿ ಸಮಾಜ ವಿಜ್ಞಾನ (ಕನ್ನಡ) ಹುದ್ದೆಗೆ ದಿನ ವೇತನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಅಭ್ಯರ್ಥಿಗಳು ಜೂ.5ರಂದು ಬೆಳಗ್ಗೆ 11 ಗಂಟೆಗೆ ಮೂಲ ಪ್ರಮಾಣಪತ್ರಗಳೊಂದಿಗೆ ಶಾಲಾ ಕಚೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ವಿವರಗಳಿಗೆ 8921007533 ಅಥವಾ 9447150276 ಕರೆ ಮಾಡಬಹುದು.

ಮಾಂಟೆಸರಿ, ಪೂರ್ವ ಪ್ರಾಥಮಿಕ ಶಿಕ್ಷಕರ ತರಬೇತಿಗೆ ಅರ್ಜಿ ಆಹ್ವಾನ

ಕಾಸರಗೋಡು: ಕೇಂದ್ರ ಸರಕಾರದ ಉಪಕ್ರಮವಾದ ಬಿಸಿಐಎಲ್ ತರಬೇತಿ ವಿಭಾಗವು ಜೂನ್‌ನಲ್ಲಿ ಪ್ರಾರಂಭವಾಗುವ ಎರಡು ವರ್ಷ, ಒಂದು ವರ್ಷ ಮತ್ತು ಆರು ತಿಂಗಳ ಮಾಂಟೆಸ್ಸರಿ, ಪೂರ್ವ ಪ್ರಾಥಮಿಕ ಮತ್ತು ನರ್ಸರಿ ಶಿಕ್ಷಕರ ತರಬೇತಿ ಕೋರ್ಸ್‌ಗಳಿಗೆ ಪದವಿ, ಪ್ಲಸ್ ಟು ಮತ್ತು ಎಸ್‌ಎಸ್ ಎಲ್‌ಸಿ ಅರ್ಹತೆ ಹೊಂದಿರುವ ಮಹಿಳೆಯರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗೆ 7994449314 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ತಾತ್ಕಾಲಿಕ ಶಿಕ್ಷಕರ ನೇಮಕಾತಿ

ಕಾಸರಗೋಡು: ತೃಕ್ಕರೀಪ್ಪುರ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಬಯೋಮೆಡಿಕಲ್ ಇಂಜಿನಿಯರಿಂಗ್ ಶಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ದಿನ ವೇತನ ಆಧಾರದ ಮೇಲೆ ತಾತ್ಕಾಲಿಕ ನೇಮಕಾತಿಗಾಗಿ ಸಂದರ್ಶನವು ಜೂ.9 ರಂದು ಬೆಳಿಗ್ಗೆ 10.30ಕ್ಕೆ ಕಾಲೇಜಿನಲ್ಲಿ ನಡೆಯಲಿದೆ. ಅಭ್ಯರ್ಥಿಗಳು ತಮ್ಮ ಬಯೋಡೇಟಾ, ಮೂಲ ಪ್ರಮಾಣಪತ್ರಗಳು ಮತ್ತು ಪ್ರತಿಗಳೊಂದಿಗೆ ಕಾಲೇಜಿಗೆ ತಲುಪಿ ನೋಂದಣಿ ಮಾಡಿಕೊಳ್ಳಬೇಕು. ಬಯೋಮೆಡಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಟೆಕ್ ಪ್ರಥಮ ದರ್ಜೆ ವಿದ್ಯಾರ್ಹತೆಯಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ 04672211400 ಅಥವಾ 9947847799 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜಿಲ್ಲೆಯ ವಿವಿಧೆಡೆ ರಾಷ್ಟ್ರೀಯ ಹೆದ್ದಾರಿಯ ಕಾಲುದಾರಿ ಸಂಪೂರ್ಣ ಹದೆಗೆಟ್ಟಿದ್ದು, ಸಂಚಾರ ದುಸ್ತರ

ಕಳಪೆ ಕಾಮಗಾರಿಯಿಂದ ಪಾದಚಾರಿಗಳಿಗೆ ಸಮಸ್ಯೆ: ಆರೋಪ

ಕಾಸರಗೋಡು: ಅತ್ಯಾಧುನಿಕ ಮಾದರಿಯಲ್ಲಿ ನಿರ್ಮಾಣಗೊಂಡಿರುವ ರಾಷ್ಟ್ರೀಯ ಹೆದ್ದಾರಿ 66ರ ತಲಪಾಡಿಯಿಂದ ಚೆಂಗಳ ತನಕದ ಪ್ರಥಮ ರೀಚ್ ಉದ್ಘಾಟಿಸಲಾಗಿದ್ದರೂ, ಫುಟ್‌ಪಾತ್ (ಕಾಲ್ನಡೆ ವ್ಯವಸ್ಥೆ) ಕೆಲವೆಡೆ ಸಂಪೂರ್ಣ ಹದಗೆಟ್ಟಿರುವುದು ಕಂಡುಬರುತ್ತಿದೆ. ಇದರಿಂದ ಪಾದಚಾರಿಗಳು ಸಮಸ್ಯೆ ಎದುರಿಸುವಂತಾಗಿದೆ. ಜಿಲ್ಲೆಯ ಕೆಲವು ಕಡೆಗಳಲ್ಲಿ ಫುಟ್‌ಪಾತ್‌ಗಳು ನಡೆದಾಡಲು ಸಾಧ್ಯವಿಲ್ಲದಂತಹ ಸ್ಥಿತಿಗೆ ತಲುಪಿರುವುದು ಗೋಚರಿಸುತ್ತಿವೆ.

ಕೆಲವು ಕಡೆಗಳಲ್ಲಿ ಕಾಲ್ನಡೆ ವ್ಯವಸ್ಥೆಯ ಕಾಮಗಾರಿಯನ್ನು ಪೂರ್ಣಗೊಳಿಸಲಿಲ್ಲ, ಇನ್ನು ಕೆಲವೆಡೆ ವಾಹನಗಳು ಸಂಚರಿಸಿ ಹಾನಿಗೊಂಡಿದೆ.

ಮುಂದಿನ ಕೆಲವೇ ದಿನಗಳಲ್ಲಿ ಮುಂಗಾರು ಮಳೆಯು ಅಬ್ಬರದಿಂದ ಸುರಿಯಲಿದ್ದು, ಇದರೊಂದಿಗೆ ಇನ್ನಷ್ಟು ಸಮಸ್ಯೆ ತಲೆದೋರಲಿದೆ. ಕಾಲ್ನಡೆ ಪ್ರಯಾಣಿಕರ ವಿಷಯದಲ್ಲಿ ಸುಪ್ರೀಂಕೋರ್ಟ್ ಕಠಿಣ ನಿಲುವು ತಳೆದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಕಾಸರಗೋಡು ಜಿಲ್ಲೆಯಲ್ಲಿ ಸಮರ್ಪಕ ಫುಟ್‌ಪಾತ್ ನಿರ್ಮಿಸುವಂತೆ ಗುತ್ತಿಗೆ ಸಂಸ್ಥೆಯ ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೆ ಗುತ್ತಿಗೆ ಕಂಪೆನಿಯ ಅಧಿಕಾರಿಗಳು ಈ ವಿಚಾರದಲ್ಲಿ ನಿರ್ಲಕ್ಷ್ಯ ಧೋರಣೆ ತಳೆದರೆಂದು ಆರೋಪಿಸಲಾಗಿದೆ.





ಇಕ್ಕಟ್ಟಾದ ಸರ್ವೀಸ್ ರಸ್ತೆಗಳಲ್ಲಿ ಅತ್ತಿಂದಿತ್ತ ಎರಡು ವಾಹನಗಳು ಸಂಚರಿಸುವಾಗ ಒಂದು ವಾಹನ ಫುಟ್‌ಪಾತ್ ಮೂಲಕ ಸಾಗುತ್ತಿದ್ದು ಇದರಿಂದ ಹಾನಿಯಾಗಿರುವುದಾಗಿ ದೂರಲಾಗಿದೆ. ಭಾರೀ ಭಾರದ ವಾಹನಗಳು ಫುಟ್‌ಪಾತ್ ಮೂಲಕ ಸಂಚರಿಸಿದಾಗ ಇಂಟರ್‌ಲಾಕ್‌ಗಳು ಸಂಪೂರ್ಣ ಹಾನಿಗೊಳ್ಳುತ್ತಿದೆ.

ಈ ಮಧ್ಯೆ ತಲಪಾಡಿಯಿಂದ ಕಾಸರಗೋಡು ಮೂಲಕ ಚೆಂಗಳದ ತನಕ ರಾಷ್ಟ್ರೀಯ ಹೆದ್ದಾರಿ ಮತ್ತು ಸರ್ವೀಸ್ ರಸ್ತೆಗಳ ನಿರ್ಮಾಣದ ಲೋಪ ದೋಷಗಳನ್ನು ಪರಿಹರಿಸುವುದಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಉನ್ನತ ಮಟ್ಟದ ತಜ್ಞರ ತಂಡವು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಕಳೆದ ವರ್ಷ ಸಮಗ್ರ ತಪಾಸಣೆ ನಡೆಸಿದೆಯಾದರೂ ಸಮಸ್ಯೆಗೆ ಪರಿಹಾರ ಸಾಧ್ಯವಾಗಿಲ್ಲ ಎಂದು ದೂರಲಾಗಿದೆ. ಅಲ್ಲದೆ ಸಮಸ್ಯೆಗಳ ಕುರಿತು ತಜ್ಞರ ತಂಡವು ತಿಳಿಸಿದ್ದರೂ ಗುತ್ತಿಗೆ ಕಂಪೆನಿಯು ಪರಿಹಾರದ ವ್ಯವಸ್ಥೆಗಳನ್ನು ಕಾರ್ಯಗತಗೊಳಿಸಿಲ್ಲ ಎಂದು ಆರೋಪಿಸಲಾಗಿದೆ.

ನಿರ್ಮಾಣ ಕಾಮಗಾರಿ ಮುಂದುವರಿಯುತ್ತಿರುವ ಚೆರ್ಕಳ – ನೀಲೇಶ್ವರ ದ್ವಿತೀಯ ರೀಚ್‌ನ ಹಲವು ಕಡೆಗಳಲ್ಲೂ ಕಾಲ್ನಡೆ ವ್ಯವಸ್ಥೆ ಸರಿಪಡಿಸಿಲ್ಲ. ಹಲವೆಡೆ ಭೂಕುಸಿತ ಸಂಭವಿಸುವ ಸಾಧ್ಯತೆ ಇರುವುದರಿಂದ ಅಂತಹ ಭಾಗಗಳಲ್ಲಿ ಕಾಲ್ನಡೆ ದಾರಿ ಸ್ಥಾಪಿಸುವ ಗೋಜಿಗೆ ಗುತ್ತಿಗೆ ಸಂಸ್ಥೆ ಹೋಗಿಲ್ಲ ಎನ್ನಲಾಗಿದೆ. ಇನ್ನು ಮುಂದಾದರೂ ಫುಟ್‌ಪಾತ್ ವ್ಯವಸ್ಥೆ ರಾಷ್ಟ್ರೀಯ ಹೆದ್ದಾರಿ

ಸಮಸ್ಯೆಯಾಗುತ್ತಿದೆ

ಜಿಲ್ಲೆಯ ಕೆಲವೆಡೆ ಸರ್ವೀಸ್ ರಸ್ತೆಗಳ ಆಸುಪಾಸುಗಳಲ್ಲಿ ಮಣ್ಣಿನ ಮೇಲೆ ಇಂಟರ್‌ಲಾಕ್ ಅಳವಡಿಸಲಾಗಿದೆ. ಇದು ಕ್ರಮೇಣ ಬಿರುಕು ಬಿಟ್ಟು ಅಪಾರ ಸಮಸ್ಯೆ ಎದುರಿಸುವಂತಾಗಿದೆ. ಇನ್ನೊಂದೆಡೆ ಕಾಸರಗೋಡು ಜಿಲ್ಲೆಯ ಹೈವೇ ಫುಟ್‌ಪಾತ್ ನಿರ್ಮಾಣ ಕಾಮಗಾರಿಯಲ್ಲಿ ಭಾರೀ ಪ್ರಮಾಣದ ಭ್ರಷ್ಟಾಚಾರ ನಡೆದಿರುವುದಾಗಿ ಆರೋಪಿಸಲಾಗಿದೆ.

ಸರ್ವೀಸ್ ರಸ್ತೆಗಳ ಅಂಚಿಗೆ ಫುಟ್‌ಪಾತ್ ಅಗತ್ಯ

ಕಾಸರಗೋಡು ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ಸರ್ವೀಸ್ ರಸ್ತೆಗಳ ಅಂಚಿಗೆ ಫುಟ್‌ಪಾತ್ ಅತ್ಯಗತ್ಯ ಎಂದು ನಾಗರಿಕರು ತಿಳಿಸಿದ್ದಾರೆ. ದಿನಂಪ್ರತಿ ನೂರಾರು ಮಂದಿ ಫುಟ್‌ಪಾತ್‌ಗಳಲ್ಲಿ ನಡೆದು ಹೋಗುತ್ತಿದ್ದು, ಸಮರ್ಪಕ ವ್ಯವಸ್ಥೆ ಬೇಕೆಂಬುದು ಜನರ ಅಭಿಪ್ರಾಯ. ಆದರೆ ಗುತ್ತಿಗೆ ಕಂಪೆನಿಗಳು ಈ ಯೋಜನೆ ಅಂಗವಾಗಿ ಸಮರ್ಥ ಕಾರ್ಯಚಟುವಟಿಕೆ ಸಿದ್ಧಪಡಿಸಿಲ್ಲ. ಅನುಭವಿಯಲ್ಲದ ಕಾರ್ಮಿಕರಿಂದ ಫುಟ್‌ಪಾತ್‌ನ ಇಂಟರ್‌ಲಾಕ್ ಅಳವಡಿಸಲಾಗಿದೆ ಎಂಬ ದೂರುಗಳಿವೆ. ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಜನಹಿತದ ಸೂಕ್ತ ಕ್ರಮ ಅನುಷ್ಠಾನಗೊಳಿಸಬೇಕಾಗಿದೆ.

ಸರ್ವೀಸ್ ರಸ್ತೆಗಳ ಎರಡೂ ಬದಿ ಸಮರ್ಪಕವಾಗಿ ಅಳವಡಿಸಲು ಸಾರ್ವಜನಿಕ ವಲಯ ಒತ್ತಾಯಿಸಿದೆ.

ಕಾಸರಗೋಡು ಜಿಲ್ಲಾ ಕುಲಾಲ ಸಂಘದ 42ನೇ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ, ಸನ್ಮಾನ



ಮಂಜೇಶ್ವರ: ಕಾಸರಗೋಡು ಜಿಲ್ಲಾ ಕುಲಾಲ ಸಂಘದ ಆಶ್ರಯದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಗಣಪತಿ ಹೋಮ, 42ನೇ ವಾರ್ಷಿಕೋತ್ಸವ, ಮಹಾಸಭೆ, ಪುಸ್ತಕ ವಿತರಣೆ, ಪ್ರತಿಭಾ ಪುರಸ್ಕಾರ ಕುಂಜತ್ತೂರು ತೂಮಿನಾಡು ಜಿಲ್ಲಾ ಕುಲಾಲ ಸಮುದಾಯ ಭವನದಲ್ಲಿ ಜರಗಿತು.

ಬಳಿಕ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಂದಪ್ಪ ಮೂಲ್ಯ ಉಪ್ಪಿನಂಗಡಿ ವಹಿಸಿದ್ದರು. ರಾಜೇಶ್ ಪಾಲಂಗಾಟ್ ದೀಪ ಪ್ರಜ್ವಲಿಸಿದರು. ಡಾ.ಎಂ.ಪಿ.ವರ್ಷಾ ಮೈಸೂರು ಪ್ರಧಾನ ಭಾಷಣ ಮಾಡಿದರು. ಕಮಲಾಕ್ಷಿ ವಿ.ಕುಲಾಲ್, ಕೆ.ಭಾಸ್ಕರನ್, ಕೆ. ವಿಜಯನ್, ಕೆ. ಜಿತೇಶ್ ಕುಮಾರ್, ದಯಾನಂದ ಮುಜಂಗಾವು, ರವೀಂದ್ರ ಸಾಲ್ಯಾನ್, ಸುಜಿತ್ ಕೊಂಚಾಡಿ, ಚಂಚಲಾ, ಕೊರಗಪ್ಪ ಬಂಜನ್, ಹೂವಯ್ಯ ನೂಜಿ ಶುಭಕೋರಿದರು.

ವಿಶೇಷ ಸಾಧಕರಾದ ಸೇಸಮ್ಮ ನಾರಾಯಣ ಮೂಲ್ಯ ಮುನ್ನಿಪ್ಪಾಡಿ, ಲೀಲಾ ಟೀಚರ್ ಪೆರ್ಮುದೆ, ರಾಮಚಂದ್ರ ಬಡಾಜೆ, ಶ್ರೀನಿವಾಸ ಮೂಲ್ಯ ಹೇರೂರು, ಕೆ. ಸೀತಾರಾಮ ಕುಲಾಲ್ ಕಣ್ವತೀರ್ಥ, ಮೋಹನ ಕಡಂಬಾರು, ಚಂದ್ರಹಾಸ ದೈಗೋಳಿ, ಸತೀಶ್ ದೈಗೋಳಿ, ಕೃಷ್ಣ ಎನ್. ನೆಲ್ಲಿಕಳಯ, ಡಾ.ಆನಂದ ಎಂ. ಕಿದೂರು, ರಾಮ ತುಳುವನ ಉಪ್ಪಿನೆ, ಸಂದೀಪ್ ಕೋಳೂರು, ಚಂದ್ರಶೇಖರ ಬೇಡಗುಡ್ಡೆ ನಮಿತಾ, ಕೆ.ಜಿ.ಕುಮಾರ್, ಸುದೀಪ್ ಪಳ್ಳತಡ್ಕ ಮೀಯಪದವು ಅವರನ್ನು 'ಕುಲಾಲಸಾಧಕ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜನಪ್ರತಿನಿಧಿಗಳ ಅಭಿನಂದಿಸಲಾಯಿತು.

ಸುಮಾರು 40ಕ್ಕಿಂತಲೂ ಅಧಿಕ ವಿದ್ಯಾರ್ಥಿಗಳಿಗೆ ವಿಶೇಷ ಪ್ರತಿಭಾ ಪುರಸ್ಕಾರ, 15, 16ನೇ ಆಸರೆ ಕಾರ್ಯಕ್ರಮದಡಿ 2 ಫಲಾನುಭವಿಗಳಿಗೆ ಸಹಾಯಧನ ನೀಡಲಾಯಿತು. ಮಕ್ಕಳಿಗೆ ಉಚಿತ ಪುಸ್ತಕ ವಿತರಿಸಲಾಯಿತು.

ಜಿಲ್ಲಾಧ್ಯಕ್ಷ, ವಕೀಲ ರವೀಂದ್ರ ಮುನ್ನಿಪ್ಪಾಡಿ ಸ್ವಾಗತಿಸಿ, ದಾಮೋದರ ಮಾಸ್ಟರ್ ಕಬ್ಬಿನಹಿತ್ತಿಲು ವಂದಿಸಿ, ನವೀನ್ ಕುಲಾಲ್ ಕಜೆಚಪ್ಪಾರು ನಿರೂಪಿಸಿದರು.

ಹೆಚ್ಚುತ್ತಿರುವ ಆಟೋಗಳ ಸಂಖ್ಯೆ: ಕಡಿವಾಣಕ್ಕೆ ಬಿಎಂಎಸ್ ಕುಂಬಳೆ ಘಟಕ ಸಭೆಯಲ್ಲಿ ಆಗ್ರಹ

ಕುಂಬಳೆ: ಆಟೋರಿಕ್ಷಾ ಮಜ್ದೂರ್ ಸಂಘದ ಕುಂಬಳೆ ಘಟಕದ ಸಭೆ ಕುಂಬಳೆ ಶ್ರೀ ಜಯ ಮಾರುತಿ ವ್ಯಾಯಾಮ ಶಾಲೆಯಲ್ಲಿ ಸಮಿತಿಯ ಉಪಾಧ್ಯಕ್ಷ ಸುನೀಲ್ ಅಧ್ಯಕ್ಷತೆಯಲ್ಲಿ ಜರಗಿತು.

ಗ್ರಾಮ ಪಂಚಾಯತ್ ಆಡಳಿತವು ಕುಂಬಳೆ ನಗರದಲ್ಲಿ ಪದೇ ಪದೇ ಬಸ್ ನಿಲ್ದಾಣವನ್ನು ಬದಲಾವಣೆ ಮಾಡಿ ಜನರಿಗೆ ಹಾಗೂ ಆಟೋ ಕಾರ್ಮಿಕರಿಗೆ ತೊಂದರೆ ಕೊಡುವುದನ್ನು ನಿಲ್ಲಿಸಬೇಕು ಹಾಗೂ ಕುಂಬಳೆ ನಗರದಲ್ಲಿ ಆಟೋಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಎಂದು ಸಭೆಯಲ್ಲಿ ಆಗ್ರಹಿಸಲಾಯಿತು.

ಕಳೆದ ಕೆಲವು ವರ್ಷಗಳಿಂದ ಕುಂಬಳೆ ನಗರದಲ್ಲಿ ಶಾಶ್ವತವಾದ ಸುಸಜ್ಜಿತ ಬಸ್ ನಿಲ್ದಾಣವಿಲ್ಲದೆ ಪ್ರಯಾಣಿಕರು ಕಷ್ಟಪಡುತ್ತಿರುವಾಗ ಪಂಚಾಯತ್ ಅಧಿಕಾರಿಗಳು ಬಸ್ ನಿಲ್ದಾಣ ಕಾಂಪ್ಲೆಕ್ಸ್ ನಿರ್ಮಾಣ ಮಾಡದೆ ಜನರನ್ನು ವಂಚಿಸುವುದನ್ನು ಕೊನೆಗೊಳಿಸಬೇಕು ಹಾಗೂ ಕುಂಬಳೆಗೆ ಬರುವ ಜನರಿಗೆ ಮೂಲಭೂತ ಸೌಕರ್ಯ ನೀಡಬೇಕು ಎಂದು ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿ ಪಿ.ದಿನೇಶ್ ಬಂಬ್ರಾಣ ಅಭಿಪ್ರಾಯಪಟ್ಟರು.

ಸಮರ್ಪಕ ವ್ಯವಸ್ಥೆ ಅಗತ್ಯ

ಕುಂಬಳೆ ಪೇಟೆಯು ದಿನದಿಂದ ದಿನಕ್ಕೆ ಬೆಳವಣಿಗೆ ಹೊಂದುತ್ತಿದ್ದು ಈ ಹಿನ್ನೆಲೆ ಕುಂಬಳೆ ಗ್ರಾ.ಪಂ.ಆಡಳಿತವು ಸಮರ್ಪಕ ಯೋಜನೆ ಜಾರಿಗೊಳಿಸಬೇಕು. ಬಸ್ ನಿಲ್ದಾಣ, ಆಟೋರಿಕ್ಷಾ ನಿಲ್ದಾಣ, ಟ್ಯಾಕ್ಸಿ ನಿಲ್ದಾಣ ಇತ್ಯಾದಿಗಳನ್ನು ಜನರಿಗೆ ಅನುಕೂಲವಾಗುವಲ್ಲಿ ಶಾಶ್ವತವಾಗಿ ಅಳವಡಿಸಬೇಕು. ಆದರೆ ಪಂಚಾಯತ್ ಆಡಳಿತವು ಈ ವಿಚಾರ ಬೇಜವಾಬ್ದಾರಿ ಧೋರಣೆ ಅನುಸರಿಸುತ್ತಿರುವುದು ಕಂಡುಬರುತ್ತಿದೆ ಎಂದರು.

ಜಿಲ್ಲಾ ಜೊತೆ ಕಾರ್ಯದರ್ಶಿ ಹರೀಶ್ ಕುದ್ರೆಪ್ಪಾಡಿ, ಪಂಚಾಯತ್ ಸಮಿತಿ ಅಧ್ಯಕ್ಷ ಶಿವಾನಂದ ರಾವ್, ಕುಂಬಳೆ ಯೂನಿಟ್ ಕಾರ್ಯದರ್ಶಿ ದಿವಾಕರ ರೈ ಉಜಾರು, ಭೋಜರಾಜ್ ಬೆಜಪ್ಪೆ ಮಾತನಾಡಿದರು. ಬೋಜರಾಜ್ ಬೆಜಪ್ಪೆ ಸ್ವಾಗತಿಸಿ, ದಿವಾಕರ ರೈ ಉಜಾರು ವಂದಿಸಿದರು.

ಜೂ.12ರ ಪ್ರತಿಭಟನೆಗೆ ಭಾಗವಹಿಸಲು ಕರೆ

ಆಟೋ ಚಾರ್ಜ್ ಹೆಚ್ಚಳಗೊಳಿಸಬೇಕೆಂದು ಆಗ್ರಹಿಸಿ ಜೂ.12ರಂದು ಕಾಸರಗೋಡು ತಾಲೂಕು ಕಚೇರಿಗೆ ಆಟೋರಿಕ್ಷಾ ಮಜ್ದೂರ್ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆಸುವ ಪ್ರತಿಭಟನಾ ಧರಣಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಟೋ ಕಾರ್ಮಿಕರು ಭಾಗವಹಿಸಬೇಕೆಂದು ವಿನಂತಿಸಲಾಯಿತು.



ಭತ್ತದ ಕೃಷಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಬದಿಯಡ್ಕ ಗ್ರಾ.ಪಂ. ಯೋಜನೆಯಡಿ ಕೃಷಿಭವನದ ಮೂಲಕ ಭತ್ತದ ಬೀಜ ವಿತರಣೆಗೆ ಮಂಗಳವಾರ ಚಾಲನೆ ನೀಡಲಾಯಿತು. ಗ್ರಾ.ಪಂ. ಅಧ್ಯಕ್ಷ ಶಂಕರ ಡಿ. ಉದ್ಘಾಟಿಸಿದರು. ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷ ಹಮೀದ್ ಕೆಡೆಂಜಿ, ಸದಸ್ಯರಾದ ಶಾಹಿನಾ, ಬಾಲಕೃಷ್ಣ ಶೆಟ್ಟಿ ಕೆ., ಶ್ಯಾಮಪ್ರಸಾದ ಸರಳಿ, ಕೃಷಿ ಅಧಿಕಾರಿ ಬಿಂದು ಜೋರ್ಜ್, ಸಹಾಯಕ ಕೃಷಿ ಅಧಿಕಾರಿ ಮೋಹನನ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ಜರಗಿದ ಪುನರ್ ಪ್ರತಿಷ್ಠಾ ಬ್ರಹ್ಮಕಲಶದ ಅಂಗವಾಗಿ ದೃಢಕಲಶ ಜೂ.15ರಂದು ಜರಗಲಿದ್ದು, ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಶ್ರೀ ಕ್ಷೇತ್ರದಲ್ಲಿ ಬಿಡುಗಡೆಗೊಳಿಸಲಾಯಿತು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ, ಪ್ರಧಾನ ಕಾರ್ಯದರ್ಶಿ ದಯಾನಂದ ಕೊಳ್ಕಿಬೈಲು, ರಂಜಿತ್ ಮನಿಪ್ಪಾಡಿ, ಶಾಂತಕುಮಾರ್ ಮುಂಡ್ಯತ್ತಡ್ಕ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನ್‌ರಾಜ್, ಹರೀಶ್ ಕೆ.ಆರ್., ಪುನೀತ್ ಕೆಮ್ಮಣ್ಣು, ಶ್ರೀ ಕ್ಷೇತ್ರದ ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು, ಅರ್ಚಕ ಯೋಗೀಶ್, ಶ್ರೀ ಮೂಕಾಂಬಿಕಾ ಕ್ಲಬ್‌ನ ಸದಸ್ಯ ಅಭಿಲಾಷ್ ಕಾಳ್ಯಂಗಾಡು ಉಪಸ್ಥಿತರಿದ್ದರು.

ಉಬ್ರಂಗಳ ಗ್ರಾಮ ವಿಕಾಸ ಸಮಿತಿ: ಮಕ್ಕಳಿಗೆ ಕಲಿಕೋಪಕರಣ ವಿತರಣೆ



ಬದಿಯಡ್ಕ: ಉಬ್ರಂಗಳದ ಗ್ರಾಮ ವಿಕಾಸ ಸಮಿತಿ ನೇತೃತ್ವದಲ್ಲಿ ಶ್ರೀ ಭಾರ್ಗವ ರಾಮ ಬಾಲಗೋಕುಲದ ಮಕ್ಕಳಿಗೆ ಕಲಿಕೋಪಕರಣಗಳ ವಿತರಣಾ ಕಾರ್ಯಕ್ರಮ ಭಾನುವಾರ ನಡೆಯಿತು. ಸಮಾರಂಭದ ಉದ್ಘಾಟನೆಯನ್ನು ಕುಂಬ್ಡಾಜೆ ಗ್ರಾಮ ಪಂಚಾಯತ್‌ನ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಪ್ರಿಯಾಂಕ ಎ.ಸಿ. ನಿರ್ವಹಿಸಿ ಶುಭಕೋರಿದರು.

ಸಂಘ ಪರಿವಾರದ ಹಿರಿಯ ಕಾರ್ಯಕರ್ತ ಸುಬ್ರಾಯ ಭಟ್ ಉಬ್ರಂಗಳ ಅಧ್ಯಕ್ಷತೆ ವಹಿಸಿದರು. ಅತಿಥಿಯಾಗಿ ಖ್ಯಾತ ಗೀತ ರಚನಕಾರ, ಗಾಯಕ ರತ್ನಾಕರ ಒಡಂಗಲ್ಲು ಆಗಮಿಸಿ ಶುಭಹಾರೈಸಿದರು. ಗೋವಿಂದ ರಾಜ್ ಮೈಲ್ತೊಟ್ಟಿ, ಸಂತೋಷ್ ಕುಮಾರ್ ರೈ ಗಾಡಿಗುಡ್ಡೆ, ಗಂಗಾಧರ ಮವ್ವಾರು, ಉದಯಕುಮಾರ್ ಚೂರಿಕ್ಕೋಡು, ನಿವೃತ್ತ ಅಧ್ಯಾಪಕ ಪುರುಷೋತ್ತಮ ಪ್ರಸಾದ್ ಗೋವಿಂದಕೂಡ್ಲು, ಕೃಷ್ಣ ಮಣಿಯಾಣಿ ಆಗಲ್ಪಾಡಿ, ಗಣರಾಜ ಭಟ್ ಉಬ್ರಂಗಳ, ಪ್ರದೀಪ್ ಬಳ್ಳಕ್ಕುರಾಯ ಉಬ್ರಂಗಳ, ಸತೀಶ್ ಉಬ್ರಂಗಳ, ಸ್ವಾತಿ ಭಾಸ್ಕರ, ರವಿ ಕುರುಪ್ ಉಬ್ರಂಗಳ, ಹರೀಶ್ ಉಬ್ರಂಗಳ, ವೇಣುಗೋಪಾಲ ಚೂರಿಕ್ಕೋಡು ಮತ್ತಿತರರು ಭಾಗವಹಿಸಿದ್ದರು.

ಸುಮಾರು 10 ಸಾವಿರ ರೂ.ಗಳ ಕಲಿಕೋಪಕರಣಗಳನ್ನು ಮಕ್ಕಳಿಗೆ ಈ ವಿತರಿಸಲಾಯಿತು. ಹೈಸ್ಕೂಲ್ ಮತ್ತು ಹೈಯರ್ ಸೆಕೆಂಡರಿ ವಿಭಾಗದಲ್ಲಿ ಅತ್ಯುನ್ನತ ಅಂಕಗಳನ್ನು ಗಳಿಸಿದ ಮಕ್ಕಳನ್ನು ಅಭಿನಂದಿಸಲಾಯಿತು. ಸುಮಾರು 33 ಮಂದಿ ಮಕ್ಕಳು ಪ್ರಯೋಜನ ಪಡೆದರು.

ರಾಜೇಶ್ ಮಾಸ್ಟರ್ ಸ್ವಾಗತಿಸಿ, ರಮ್ಯಾ ಸತೀಶ್ ವಂದಿಸಿದರು. ಬಾಲಗೋಕುಲ ಮಕ್ಕಳು, ಶಿಕ್ಷಕರು, ಹೆತ್ತವರು, ಗ್ರಾಮ ವಿಕಾಸ ಸಮಿತಿ ಸದಸ್ಯರು ಮತ್ತಿತರರಿದ್ದರು.

ಜೂ.8,9ರಂದು ಪೆರಡಾಲ ಶ್ರೀ ಉದನೇಶ್ವರ ಕ್ಷೇತ್ರದಲ್ಲಿ ದೃಢಕಲಶ,108 ಸೀಯಾಳಾಭಿಷೇಕ

ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ಕ್ಷೇತ್ರದ ಬ್ರಹ್ಮಕಲಶವು ನಡೆದಿದ್ದು, ಇದರ ಅಂಗವಾಗಿ ಜೂ.8 ಮತ್ತು 9ರಂದು ದೃಢಕಲಶ ಕಾರ್ಯಕ್ರಮವು ಜರಗಲಿದೆ.

ಈ ಸಂದರ್ಭದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರ ದಿವ್ಯ ಉಪಸ್ಥಿತಿಯಲ್ಲಿ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ನೇತೃತ್ವದಲ್ಲಿ ಶ್ರೀ ದೇವರಿಗೆ ದೃಢಕಲಶ, 108 ಸೀಯಾಳಾಭಿಷೇಕ, ಲೋಕಕಲ್ಯಾಣಾರ್ಥವಾಗಿ ಶ್ರೀ ಮಹಾರುದ್ರಯಾಗ ಹಾಗೂ ಶ್ರೀ ರಂಗಪೂಜೆ ಕಾರ್ಯಕ್ರಮಗಳು ನಡೆಯಲಿವೆ.

ಕಾರ್ಯಕ್ರಮದ ಅಂಗವಾಗಿ ಜೂ.8ರಂದು ರಾತ್ರಿ 7 ಗಂಟೆಗೆ ಪುಣ್ಯಾಹವಾಚನ, ಪ್ರಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಬಲಿ, ವಾಸ್ತು ಪುಣ್ಯಾಹಾಂತ ಕಾರ್ಯಕ್ರಮ ನೆರವೇರಲಿದೆ.

ಜೂ.9ರಂದು ಬೆಳಿಗ್ಗೆ 7 ಗಂಟೆಗೆ ಗಣಪತಿ ಹವನ, ಕಲಶಪೂಜೆ, ಕಲಶಾಭಿಷೇಕ, 9.30ಕ್ಕೆ ಶ್ರೀ ಮಹಾರುದ್ರಯಾಗ ಆರಂಭ, ಮಧ್ಯಾಹ್ನ 12ಕ್ಕೆ ಶ್ರೀ ಮಹಾರುದ್ರಯಾಗ ಪೂರ್ಣಾಹುತಿ, 12.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಭೋಜನ ಪ್ರಸಾದ, ಅಪರಾಹ್ನ 2.30ರಿಂದ ಕಾರ್ಯಕರ್ತರಿಗೆ ಅಭಿನಂದನಾ ಸಮಾರಂಭ ಮತ್ತು ಸಭಾ ಕಾರ್ಯಕ್ರಮದಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಬಿ.ವಸಂತ ಪೈ ಬದಿಯಡ್ಕ ಅಧ್ಯಕ್ಷತೆ ವಹಿಸುವರು.

ಕೃಷ್ಣರಾಜ ಬಲ್ಲಾಳ್ ಕೊಡ್ಯಮೆ ಅರಮನೆ, ಶ್ರೀ ಕ್ಷೇತ್ರ ಆಡಳಿತ ಮೊಕ್ತೇಸರ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಬ್ರಹ್ಮಕಲಶೋತ್ಸವ ಸಮಿತಿಯ ಗೌರವಾಧ್ಯಕ್ಷ ಜಯದೇವ ಖಂಡಿಗೆ, ಸಮಿತಿ ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲಗುತ್ತು, ಮೊಕ್ತಸರರಾದ ಸೀತಾರಾಮ ನವಕಾನ, ಕೃಷ್ಣ ಬದಿಯಡ್ಕ, ಕೋಶಾಧಿಕಾರಿ ಸೂರ್ಯನಾರಾಯಣ ಬಿ., ರಕ್ಷಾಧಿಕಾರಿ ಕೃಷ್ಣಮೂರ್ತಿ ಪುದುಕೋಳಿ, ಉದಯ ಶಂಕರ ಪಿ.ಎಸ್., ಗಣೇಶ್ ಪ್ರಸಾದ ಕಡಪ್ಪು, ಡಾ.ಶ್ರೀಶಕುಮಾರ್ ಪಂಜಿತ್ತಡ್ಕ, ಭಾಸ್ಕರ ಪಂಜಿತ್ತಡ್ಕ ಮೊದಲಾದವರು ಭಾಗವಹಿಸುವರು. ರಾತ್ರಿ 7.30ಕ್ಕೆ ಶ್ರೀ ದೇವರಿಗೆ ರಂಗಪೂಜೆ, ಪ್ರಸಾದ ವಿತರಣೆ, ಭೋಜನ ಪ್ರಸಾದ ನಡೆಯಲಿದೆ.

- **ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ನೇತೃತ್ವದಲ್ಲಿ ನಡೆಯಲಿದೆ ವೈದಿಕ ಕಾರ್ಯಕ್ರಮ**
- **ಜೂ.8ರಂದು ರಾತ್ರಿ ಪುಣ್ಯಾಹ ವಾಚನ, ರಾಕ್ಷೋಘ್ನ ಹೋಮ**
- **ಜೂ.9ರಂದು ಬೆಳಿಗ್ಗೆ 9.30ಕ್ಕೆ ಶ್ರೀ ಮಹಾರುದ್ರಯಾಗ ಆರಂಭ**



ಬದಿಯಡ್ಕ ಸಮೀಪದ ಕುಂಬ್ಡಾಜೆ ಗ್ರಾಮ ಸೇವಾ ಸಂಘ ಗ್ರಂಥಾಲಯ ಏತಡ್ಕ ಇದರ ಆಶ್ರಯದಲ್ಲಿ ಮಕ್ಕಳಿಗಾಗಿ ಕವಿತಾ ರಚನಾ ಶಿಬಿರ ಜರಗಿತು. ಹಿರಿಯ ಸಾಹಿತಿ ನರಸಿಂಹ ಭಟ್ ಕಟ್ಟದಮೂಲೆ ಶಿಬಿರವನ್ನು ನಡೆಸಿಕೊಟ್ಟರು. ವೈ.ಕೆ.ಗಣಪತಿ ಭಟ್, ಲಕ್ಷ್ಮಿತಾ ಎಚ್.ಎಸ್., ಸುಬ್ರಹ್ಮಣ್ಯ ಭಟ್ ಕೆ. ಮುಂತಾದವರು ಪಾಲ್ಗೊಂಡಿದ್ದರು.



ಪೆರ್ಲ ನಾಲಂದ ಕಾಲೇಜಿನ ಸಮೀಪವಿರುವ ವಿವೇಕಾನಂದ ಶಿಶು ಮಂದಿರದಲ್ಲಿ ಪ್ರವೇಶೋತ್ಸವವು ನಡೆಯಿತು. ಪುಟಾಣಿಗಳನ್ನು ಆರತಿ ಬೆಳಗಿ ಸ್ವಾಗತಿಸಲಾಯಿತು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತೃ ಮಂಡಳಿ ಅಧ್ಯಕ್ಷೆ ಶ್ವೇತಾ ನೇರೋಳು, ಶಿಶು ಮಂದಿರ ಕೋಶಾಧಿಕಾರಿ ಜಯಶ್ರೀ ಪೆರ್ಲ, ಶಿಕ್ಷಕಿ ರೇಖಾ ಮಾತಾಜಿ, ವೈಷ್ಣವಿ ಸಿ., ಶ್ರೇಷ್ಠಾ ಪಿ.ಜಿ. ಮತ್ತಿತರರು ಭಾಗವಹಿಸಿದ್ದರು.

ಕಾಸರಗೋಡಿನಲ್ಲಿ ಗೊಂದಲ ಮೂಡಿಸುತ್ತಿದೆ ಹೆದ್ದಾರಿ | ಹೆದರಿ ಹೆದರಿ ಇಲ್ಲಿ ವಾಹನ ಸವಾರಿ

ಎಲ್ಲೆಂದರಲ್ಲಿ ಯೂ ಟರ್ನ್‌ನಿಂದ ಕಂಗಾಲಾಗುತ್ತಿದ್ದಾರೆ ಚಾಲಕರು

ಕಾಸರಗೋಡು: ಸುರಕ್ಷಿತ ಪ್ರಯಾಣಕ್ಕೆ ಅನುಕೂಲಕರ ವಾಗಿರುವ ಹೆದ್ದಾರಿಗಳು ಹಲವೆಡೆ ಇವೆ. ಈ ರಸ್ತೆಗಳಲ್ಲಿ ಪ್ರಯಾಣಿಸುವುದೇ ಒಂದು ರೀತಿಯ ಖುಷಿಯ ವಿಚಾರ. ಆದರೆ ಕಾಸರಗೋಡಿನಲ್ಲಿ ಮಾತ್ರ ಹಾಗಿಲ್ಲ. ಎಲ್ಲೆಂದರಲ್ಲಿ ಯೂ ಟರ್ನ್, ತ್ರಿಪಥ ರಸ್ತೆಗಳಿಂದಾಗಿ ವಾಹನ ಸವಾರರು ಕಂಗೆಟ್ಟು ಹೋಗುವ ಸ್ಥಿತಿ ಇದೆ.

ಎಲ್ಲೆಲ್ಲಿ ಸಮಸ್ಯೆ?

ಕಾಸರಗೋಡಿನ ಬೇವಿಂಜೆ ಸ್ಟಾರ್‌ನಗರದಲ್ಲಿ ಹೆದ್ದಾರಿಗಾಗಿ ಭೂಮಿ ಸ್ವಾಧೀನಪಡಿಸಿದ್ದರೂ, ಅಲ್ಪದೂರದವರೆಗೆ ಎರಡು ಕಡೆಗಳಲ್ಲಿ ಹೆದ್ದಾರಿ ನಿರ್ಮಾಣಗೊಂಡಿದೆ. ಚೆರ್ಕಳ ಭಾಗಕ್ಕಿರುವ ತ್ರಿಪಥ ಹೆದ್ದಾರಿಯು ನೇರ ದಿಕ್ಕಿನ ಮೂಲಕ ಸಂಚರಿಸುವಾಗ ಚಟ್ಟಂಚಾಲ್ ಭಾಗಕ್ಕಿರುವ ತ್ರಿಪಥ ಹೆದ್ದಾರಿಯು ಯು ಆಕಾರದಲ್ಲಿ ಮುಂದುವರಿಯುತ್ತದೆ.



ಭೀತಿ ಎದುರಿಸುವಂತಾಗಿದೆ

ಬೇವಿಂಜೆ ಸ್ಟಾರ್ ನಗರದಲ್ಲಿ ಈಗಾಗಲೇ ಸ್ಥಳ ಸ್ವಾಧೀನ ಪಡಿಸಲಾಗಿದೆ. ಗುಡ್ಡ ಸಮತಟ್ಟುಗೊಳಿಸಿ ಇಲ್ಲಿ ನೂತನ ಹೆದ್ದಾರಿ ನಿರ್ಮಿಸಲಾಗಿದೆ. ಆದರೆ ಗುಡ್ಡದ ಎತ್ತರದ ಭಾಗದಲ್ಲಿ ಹಲವಾರು ಮನೆಗಳಿವೆ. ಭೂಕುಸಿತ ಹಿನ್ನೆಲೆ ಇಲ್ಲಿನ ಕುಟುಂಬಗಳು ಭೀತಿ ಎದುರಿಸುವಂತಾಗಿದೆ. ಗುಡ್ಡ ಅಗೆದ ಭಾಗ ಸುರಕ್ಷಿತಗೊಳಿಸಲು ಸೋಯಿಲ್ ನೆಯ್ಲಿಂಗ್ ಮಾಡಿದ ಭಾಗ ಕಳೆದ ವರ್ಷ ಕುಸಿದು ಬಿದ್ದಿತ್ತು. ಇದೀಗ ಸೋಯಿಲ್ ನೆಯ್ಲಿಂಗ್ ಬದಲಿಗೆ ಇಲ್ಲಿ ಕಾಂಕ್ರೀಟ್ ತಡೆಗೋಡೆ ನಿರ್ಮಿಸಿ ಹುಲ್ಲುಹಾಸು ಅಳವಡಿಸಲಾಗುತ್ತಿದೆ.

ಗುಡ್ಡ, ತಿರುವುಗಳು ತುಂಬಿಕೊಂಡಿರುವ ಚೆರ್ಕಳ – ಚಟ್ಟಂಚಾಲ್ ರೀಚ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಬೇರೆ ಬೇರೆ ಕಾರಣಗಳಿಂದ ಭಾರೀ ಸಮಸ್ಯೆಯುಂಟುಮಾಡಿದೆ. ಬೇವಿಂಜೆ ಸ್ಟಾರ್ ನಗರದಲ್ಲಿ ಈಗಾಗಲೇ ಸ್ಥಳ ಸ್ವಾಧೀನ ಪಡಿಸಲಾಗಿದೆ. ಗುಡ್ಡ ಸಮ ತಟ್ಟುಗೊಳಿಸಿ ಇಲ್ಲಿ ನೂತನ ಹೆದ್ದಾರಿ ನಿರ್ಮಿಸಲಾಗಿದೆ. ಆದರೆ ಇಲ್ಲಿ ಗುಡ್ಡದ ಎತ್ತರದಲ್ಲಿ ಹಲವಾರು ಮನೆಗಳಿದ್ದು, ಭೂ ಕುಸಿತದ ಭೀತಿ ಹೆಚ್ಚಿದೆ.

ಅಪಾಯ ಸಾಧ್ಯತೆ ಹೆಚ್ಚಿದೆ

ಷಟ್ಪಥ ಹೆದ್ದಾರಿಯು ಏಕಪಥದಲ್ಲಿ ಬರಬೇಕಾದರೆ ಗುಡ್ಡದ ಬಾಕಿ ಇರುವ ಭಾಗವನ್ನು ಅಗೆಯಬೇಕಾದ ಆವಶ್ಯಕತೆ ಇದೆ. ಇದು ಭವಿಷ್ಯದಲ್ಲಿ ಅಪಾಯ ಸಾಧ್ಯತೆ ಹೆಚ್ಚಿಸಲಿದೆ. ಆದುದರಿಂದ ಗುಡ್ಡದ ಇಳಿಜಾರಿನಲ್ಲಿ ವಾಸವಿರುವವರಿಂದ ಪ್ರತಿಭಟನೆ ಎದುರಾಗಿದೆ. ಇದನ್ನು ತಪ್ಪಿಸುವುದಕ್ಕಾಗಿ ಚಟ್ಟಂಚಾಲ್ ಭಾಗಕ್ಕಿರುವ ತ್ರಿಪಥ ಹೆದ್ದಾರಿಯನ್ನು ಇಲ್ಲಿ ಎರಡು ಕಡೆಗಳಲ್ಲಾಗಿ ನಿರ್ಮಿಸಲು ಅಧಿಕಾರಿಗಳು ತಾತ್ಕಾಲಿಕ ಉಪಾಯ ಕಂಡುಕೊಂಡಿದ್ದಾರೆ.

ಅಪಾಯಕಾರಿ ವಲಯ

ಹೊಸದಾಗಿ ಸ್ವಾಧೀನಪಡಿಸಿದ ಸ್ಥಳದ ಮೂಲಕ ಹೆದ್ದಾರಿ ನಿರ್ಮಿಸುವ ಬದಲು ಹಳೆಯ ರಾಷ್ಟ್ರೀಯ ಹೆದ್ದಾರಿ ಅಗೆದು ತ್ರಿಪಥ ಹೆದ್ದಾರಿಯಾಗಿ ಮರು ನಿರ್ಮಿಸಲಾಗಿದೆ. ಅತ್ಯಧಿಕ ತಿರುವು ಇರುವ ಅಪಾಯಕಾರಿ ವಲಯ ಇದಾಗಿದೆ.

ಸುತ್ತ ಮುತ್ತ

ಪ್ರಾಂಶುಪಾಲರಾಗಿ ಡಾ.ಸರೋಜ ಎಂ. ಆಯ್ಕೆ

ಕುಂದಾಪುರ: ಕುಂದಾಪುರದ ಭಂಡಾರ್ಕಾರ್ಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಡಾ.ಸರೋಜ ಎಂ. ಆಯ್ಕೆಯಾಗಿದ್ದಾರೆ. ಡಾ. ಸರೋಜ ಎಂ. ಅವರು ಭಂಡಾರ್ಕಾರ್ಸ್ ಪದವಿ ಪೂರ್ವ ಕಾಲೇಜಿನಲ್ಲಿ ಸುಮಾರು 20 ವರ್ಷಗಳಿಂದ ಜೀವಶಾಸ್ತ್ರ ವಿಭಾಗದ ಉಪನ್ಯಾಸಕಿಯಾಗಿ ಮತ್ತು ವಿಭಾಗ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದರು.



ಕುಂದಾಪುರ: ಪ್ರಾಕೃತಿಕ ವಿಕೋಪ ನಿರ್ವಹಣೆ - ಸೇವಾ ಕೇಂದ್ರ ಸ್ಥಾಪನೆ

ಉಡುಪಿ: ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ಮಳೆಗಾಲದ ಸಮಯದಲ್ಲಿ ಅವಘಡಗಳನ್ನು ತಪ್ಪಿಸಲು ಮತ್ತು ಸಾರ್ವಜನಿಕರ ಸುರಕ್ಷತೆಗಾಗಿ ಕುಂದಾಪುರ ಪುರಸಭೆಯ ವತಿಯಿಂದ 24/7 ಕಾರ್ಯನಿರ್ವಹಿಸುವ ಹೆಲ್ಪ್‌ಲೈನ್ ಕೇಂದ್ರವನ್ನು ತೆರೆಯಲಾಗಿದ್ದು, ಮಳೆಗಾಲದಲ್ಲಿ ಎದುರಾಗಬಹುದಾದ ಪ್ರವಾಹ, ಸಾಂಕ್ರಾಮಿಕ ರೋಗಗಳು ಮತ್ತು ಇತರೆ ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಲು ಸಾರ್ವಜನಿಕರು ಹೆಲ್ಪ್‌ಲೈನ್ ಸಂಖ್ಯೆ :08254-230410 ಗೆ ಕರೆ ಮಾಡಬಹುದಾಗಿದೆ.
ಮಳೆಗಾಲದ ಸಮಯದಲ್ಲಿ ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳು: ಅಪಾಯಕಾರಿ ಕಟ್ಟಡಗಳಿಂದ ದೂರವಿರಬೇಕು - ಮಳೆಯಿಂದಾಗಿ ಕುಸಿಯುವ ಹಂತದಲ್ಲಿರುವ ಹಳೆಯ ಗೋಡೆ ಅಥವಾ ಕಟ್ಟಡಗಳ ಆಸುಪಾಸಿನಲ್ಲಿ ಆಶ್ರಯ ಪಡೆಯಬಾರದು. ವಿದ್ಯುತ್ ಕಂಬಗಳಿಂದ ಎಚ್ಚರ - ರಸ್ತೆ ಬದಿಯ ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್‌ಗಳು ಹಾಗೂ ಜೋತಾಡುವ ವಿದ್ಯುತ್ ತಂತಿಗಳನ್ನು ಮುಟ್ಟಬಾರದು. ಮರಗಳ ಕೆಳಗೆ ನಿಲ್ಲಬಾರದು - ಬಿರುಗಾಳಿ ಸಹಿತ ಭಾರಿ ಮಳೆ ಬರುವಾಗ ದೊಡ್ಡ ಮರಗಳು ಅಥವಾ ಜಾಹೀರಾತು ಫಲಕಗಳ (ಹೋರ್ಡಿಂಗ್ಸ್) ಕೆಳಗೆ ವಾಹನ ನಿಲ್ಲಿಸುವುದನ್ನು ತಪ್ಪಿಸಬೇಕು. ತ್ಯಾಜ್ಯ ವಿಲೇವಾರಿ - ಒಣ ಮತ್ತು ಹಸಿ ಕಸವನ್ನು ಚರಂಡಿಗಳಿಗೆ ಎಸೆಯಬಾರದು. ಇದು ಚರಂಡಿ ಬ್ಲಾಕ್ ಆಗಿ ನೀರು ರಸ್ತೆಗೆ ನುಗ್ಗಲು ಕಾರಣವಾಗುತ್ತದೆ. ಮಳೆಗಾಲದ ಸಂದರ್ಭದಲ್ಲಿ ಯಾವುದೇ ರೀತಿಯ ತುರ್ತು ಪರಿಸ್ಥಿತಿ ಎದುರಾದಲ್ಲಿ ಪುರಸಭೆಯ ಮುಖ್ಯಾಧಿಕಾರಿ ಮೊ. ಸಂಖ್ಯೆ : 9880034793, ಪರಿಸರ ಅಭಿಯಂತರು ಮೊ ಸಂಖ್ಯೆ : 7353255268, ಹಿರಿಯ ಆರೋಗ್ಯ ನಿರೀಕ್ಷಕರು ಮೊ.ಸಂಖ್ಯೆ 6360027331 ಹಾಗೂ ಕಿರಿಯ ಅಭಿಯಂತರರು ಮೊ.ನಂ: 9902377287 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕುಂದಾಪುರ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆ ತಿಳಿಸಿದೆ.

ಪುಸ್ತಕ ಮರು ಮುದ್ರಣ ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನ

ಉಡುಪಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶನಾಲಯದ ಆದೇಶದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಾಲಿನಲ್ಲಿ ಈ ಹಿಂದೆ ಮುದ್ರಿತವಾಗಿ ಹಾಲಿ ಲಭ್ಯವಿಲ್ಲದಿರುವ ಕೆಲವು ಪ್ರಮುಖ ಕೃತಿಗಳನ್ನು ಮರು ಮುದ್ರಣ ಮಾಡುವ ಯೋಜನೆಯನ್ನು ಸಿದ್ಧಪಡಿಸಿದ್ದು, ಅದಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.
ಮರು ಮುದ್ರಿಸಬೇಕಾದ ಕೃತಿಗಳ ಸಂಬಂಧ ಸಾರ್ವಜನಿಕರಿಂದಲೂ ಕೋರಿಕೆ ಮತ್ತು ಅಭಿಪ್ರಾಯ ಪಡೆಯುವ ನಿಟ್ಟಿನಲ್ಲಿ ಇಲಾಖೆಯ ವೆಬ್‌ಸೈಟ್ kannadasiri.karnataka.gov.in ನಲ್ಲಿ ಸಾಹಿತ್ಯಾಸಕ್ತರಿಂದ ಅಭಿಪ್ರಾಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ರೈಲು ವಿಸ್ತರಿಸಲು ಆಗ್ರಹ

ಪರಿಗಣಿಸಿ ಪ್ರಸ್ತುತ ಹೈ ಸ್ಪೀಡ್ ರೈಲನ್ನು ಕಾಸರಗೋಡು ತನಕ ವಿಸ್ತರಿಸಬೇಕು. ಕಾಸರಗೋಡು ಜಿಲ್ಲೆಯಲ್ಲಿ ಕೈಗಾರಿಕೋದ್ಯಮಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. ಇದೇ ರೀತಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ವಲಯವು ಕೂಡಾ ಹೆಚ್ಚುತ್ತಿದೆ. ಆದ್ದರಿಂದ ರಾಜ್ಯ ಸರಕಾರವು ಪ್ರಸ್ತುತ ಉದ್ದೇಶಿತ ಸೆಮಿ ಹೈ ಸ್ಪೀಡ್ ರೈಲುಗಾಡಿಯನ್ನು ಕಾಸರಗೋಡು ತನಕ ವಿಸ್ತರಿಸಬೇಕೆಂದು ಅವರು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಸಾದ್ ಮಣಿಯಾಣಿ, ಜಲೀಲ್ ಮುಹಮ್ಮದ್, ಫಾರೂಕ್ ಕಾಸ್ಮಿ ಉಪಸ್ಥಿತರಿದ್ದರು.

ಪುರಸಭಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅರ್ಹ ವಸತಿ ರಹಿತರು, ನಿವೇಶನ ರಹಿತರಿಂದ ಅರ್ಜಿ ಆಹ್ವಾನ

ಬಡವರ ಸ್ವಂತ ಮನೆ ಆಸೆಗೆ ಹೊಸ ಆಶಾಕಿರಣ ಪಿಎಂ ಆವಾಸ್

ಉಡುಪಿ: ದೇಶದ ನಗರ ಪ್ರದೇಶಗಳಲ್ಲಿ ವಾಸಿಸುವ ಪ್ರತಿಯೊಬ್ಬ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಕ್ಕೂ ಸ್ವಂತ ಸೂರಿನ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ಅನ್ನು ಜಾರಿಗೆ ತಂದಿದೆ. 2024ರ ಸೆ.1ರಿಂದ ಅನ್ವಯವಾಗುವಂತೆ ಜಾರಿಗೆ ಬಂದಿರುವ ಈ ಯೋಜನೆಯಡಿ, ಪ್ರಸ್ತುತ ಉಡುಪಿ ಜಿಲ್ಲೆಯ ಪುರಸಭಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅರ್ಹ ವಸತಿ ರಹಿತರು ಮತ್ತು ನಿವೇಶನ ರಹಿತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಬಡವರ ಸ್ವಂತ ಮನೆ ನಿರ್ಮಾಣದ ಆಸೆಗೆ ಹೊಸ ಆಶಾಕಿರಣ ಮೂಡಿದೆ.
ಯೋಜನೆಯಡಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ ದೇಶಾದ್ಯಂತ ನಗರ ಪ್ರದೇಶಗಳಲ್ಲಿ ವಾಸಿಸುವ ಸುಮಾರು ಒಂದು ಕೋಟಿ ಬಡವರು, ಕೊಳಚೆ ಪ್ರದೇಶಗಳ ನಿವಾಸಿಗಳು ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಸುಸಜ್ಜಿತ ಮನೆಗಳನ್ನು ಒದಗಿಸಲು ಕೇಂದ್ರ ಸರ್ಕಾರವು ಬೃಹತ್ ಮೊತ್ತದ



ಸಹಾಯಧನವನ್ನು ನೀಡಲು ಮುಂದಾಗಿದೆ. ಪುರಸಭಾ ವ್ಯಾಪ್ತಿಯ ಆಸಕ್ತ ಫಲಾನುಭವಿಗಳು ಕೇಂದ್ರ ಸರ್ಕಾರದ ಅಧಿಕೃತ ವೆಬ್ ಪೋರ್ಟಲ್ ಮೂಲಕ ಸ್ವ-ಇಚ್ಛೆಯಿಂದ ನೇರವಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಪರ್ಯಾಯವಾಗಿ ಸಾರ್ವಜನಿಕರು ಸೇವಾ ಸಿಂಧು ಹಾಗೂ ಗ್ರಾಮ ಒನ್ ಕೇಂದ್ರಗಳ ಮೂಲಕವೂ ನಿಗದಿತ ವೆಬ್‌ಸೈಟ್‌ಗೆ ಭೇಟಿ ನೀಡಿ ಜೂ.30ರ ಒಳಗಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
ಅರ್ಜಿ ಸಲ್ಲಿಸಲು ಇಚ್ಛಿಸುವ ನಾಗರಿಕರು ಕುಟುಂಬದ ಎಲ್ಲಾ ಸದಸ್ಯರ ಆಧಾರ್ ಕಾರ್ಡ್, ಪಡಿತರ ಚೀಟಿ, ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರಗಳು, ಮೊಬೈಲ್ ಸಂಖ್ಯೆ ಹಾಗೂ ಲಭ್ಯವಿದ್ದಲ್ಲಿ ಪ್ಯಾನ್ ಕಾರ್ಡ್ ಪ್ರತಿಗಳನ್ನು ಒದಗಿಸಬೇಕಾಗುತ್ತದೆ. ಇದರೊಂದಿಗೆ ನಿವೇಶನ ಹೊಂದಿರುವ ವಸತಿ ರಹಿತರು ಜಾಗಕ್ಕೆ ಸಂಬಂಧಿಸಿದ ಹಕ್ಕುಪತ್ರ, ಕ್ರಯಪತ್ರ, ದಾನಪತ್ರ, ಉಡುಗೊರೆ ಪತ್ರ ಅಥವಾ ಖಾತಾ ಬದಲಾವಣೆ ದಾಖಲೆಗಳನ್ನು ಹಾಗೂ ನಿಗದಿತ ಸೆಲ್ಫ್ ಡಿಕ್ಲರೇಷನ್ ಫಾರ್ಮ್ ಅನ್ನು ಲಗತ್ತಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಪುರಸಭೆಯ ವಸತಿ ಶಾಖೆಯನ್ನು ಸಂಪರ್ಕಿಸಬಹುದಾಗಿದೆ.

ಏನಿದು ಯೋಜನೆ?

ನಗರ ಪ್ರದೇಶಗಳಲ್ಲಿ ವಸತಿ ರಹಿತರಾಗಿರುವ ಬಡ ಮತ್ತು ಸಮಾಜದ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸುಸಜ್ಜಿತವಾದ ಪಕ್ಕಾ ಮನೆ ನಿರ್ಮಿಸಿಕೊಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಆರಂಭಿಸಿರುವ ಬೃಹತ್ ವಸತಿ ಯೋಜನೆಯೇ ಪ್ರಧಾನ ಮಂತ್ರಿ ಆವಾಸ್ ಯೋಜನೆಯಾಗಿದೆ. ಇದರ ಮೊದಲ ಹಂತದ ಅಭೂತಪೂರ್ವ ಯಶಸ್ಸಿನ ನಂತರ, ಜಾರಿಗೆ ಬಂದಿರುವ ಪಿಎಂ ಆವಾಸ್ 2.0 ಯೋಜನೆಯು ಕೇವಲ ಅತ್ಯಂತ ಬಡವರನ್ನು ಮಾತ್ರವಲ್ಲದೆ ನಗರದ ಕೊಳಚೆ ಪ್ರದೇಶಗಳ ನಿವಾಸಿಗಳು, ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ಮಧ್ಯಮ ವರ್ಗದ ಜನರಿಗೂ ಸ್ವಂತ ಮನೆ ಹೊಂದುವ ಸೌಲಭ್ಯ ವಿಸ್ತರಿಸಿದೆ.

ಯಾರಿಗೆಲ್ಲ ಅನುಕೂಲ?

ಫಲಾನುಭವಿಗಳು ಪಕ್ಕಾ ಮನೆ ಹೊಂದಿರಬಾರದು. ಆರ್ಥಿಕವಾಗಿ ಹಿಂದುಳಿದ ವರ್ಗಗಳು ಕಡಿಮೆ ಆದಾಯದ ಗುಂಪುಗಳು ಮತ್ತು ಮಧ್ಯಮ ಆದಾಯದ ಗುಂಪುಗಳಿಗೆ ಸೇರಿದ ಕುಟುಂಬಗಳು ಅವಕಾಶ. ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ವಿಕಲಚೇತನರು ಹಾಗೂ ತೃತೀಯ ಲಿಂಗಿಗಳಿಗೆ ಯೋಜನೆಯಲ್ಲಿ ವಿಶೇಷ ಆದ್ಯತೆ ನೀಡಲಾಗುತ್ತದೆ. ಪುರಸಭಾ ವ್ಯಾಪ್ತಿಯಲ್ಲಿ ದೀರ್ಘಕಾಲದಿಂದ ವಾಸವಿದ್ದು ಸ್ವಂತ ನಿವೇಶನವಿದ್ದೂ ಮನೆ ಇಲ್ಲದವರು ಅಥವಾ ಸಂಪೂರ್ಣ ವಸತಿ ರಹಿತರಾದವರು ಇದಕ್ಕೆ ಅರ್ಜಿ ಸಲ್ಲಿಸಲು ಯೋಗ್ಯರಾಗಿದ್ದಾರೆ.

ಯೋಜನೆಯಲ್ಲಿ ಏನೇನು ಸೌಲಭ್ಯಗಳಿವೆ?

ಪಿಎಂ ಆವಾಸ್ ಯೋಜನೆ 2.0ರ ಅಡಿಯಲ್ಲಿ ಹೊಸ ಮನೆ ನಿರ್ಮಿಸಿಕೊಳ್ಳಲು ಸರ್ಕಾರದಿಂದ ನೇರ ಹಣಕಾಸಿನ ಸಹಾಯಧನ ದೊರೆಯುತ್ತದೆ. ಕೊಳಚೆ ಪ್ರದೇಶಗಳ ಪುನರಾಭಿವೃದ್ಧಿ ಯೋಜನೆ, ಕೈಗೆಟುಕುವ ದರದಲ್ಲಿ ಪಾಲುದಾರಿಕೆಯೊಂದಿಗೆ ಮನೆ ನಿರ್ಮಿಸುವ ಸೌಲಭ್ಯಗಳೂ ಇದರಲ್ಲಿ ಅಡಕವಾಗಿವೆ. ಮುಖ್ಯವಾಗಿ ಮಧ್ಯಮ ವರ್ಗದ ಜನರಿಗೆ ಸ್ವಂತ ಮನೆ ಖರೀದಿಸಲು ಅಥವಾ ನಿರ್ಮಿಸಲು ಬ್ಯಾಂಕುಗಳಿಂದ ಪಡೆಯುವ ಗೃಹ ಸಾಲದ ಮೇಲಿನ ಬಡ್ಡಿಗೆ ಭಾರಿ ಪ್ರಮಾಣದ ಸಬ್ಸಿಡಿ (ಬಡ್ಡಿ ಮನ್ನಾ ನೆರವು) ನೀಡುವ ಅತ್ಯುತ್ತಮ ಆರ್ಥಿಕ ಸೌಲಭ್ಯವನ್ನು ಈ ಯೋಜನೆ ಒಳಗೊಂಡಿದೆ. ಪ್ರತಿ ಮನೆಯೂ ಕಡ್ಡಾಯವಾಗಿ ಶೌಚಾಲಯ, ವಿದ್ಯುತ್ ಸಂಪರ್ಕ, ಕುಡಿಯುವ ನೀರು, ಅಡುಗೆ ಕೋಣೆಯಂತಹ ಕನಿಷ್ಠ ಮೂಲಸೌಕರ್ಯ ಇರುವಂತೆ ವಿನ್ಯಾಸಗೊಳಿಸಲಾಗಿದೆ.

ತಾಯಿ-ಮಕ್ಕಳ ಆಸ್ಪತ್ರೆಯ ಮರುವಿನ್ಯಾಸಕ್ಕೆ ತಾಂತ್ರಿಕ ತಜ್ಞರ ವರದಿ ಸಲ್ಲಿಕೆ

ಅನುದಾನಕ್ಕೆ ಶಾಸಕ ಯಶ್‌ಪಾಲ್ ಆಗ್ರಹ

ಉಡುಪಿ: ಇಲ್ಲಿನ ಕೂಸಮ್ಮ ಶಂಭುಶೆಟ್ಟಿ ಸ್ಮಾರಕ ಹಾಜಿ ಅಬ್ದುಲ್ಲಾ ತಾಯಿ ಹಾಗೂ ಮಕ್ಕಳ ಸರಕಾರಿ ಆಸ್ಪತ್ರೆಯ ಕಟ್ಟಡ ವಿದೇಶಿ ಮಾದರಿಯಲ್ಲಿ ನಿರ್ಮಾಣಗೊಂಡಿರುವುದರಿಂದ ಅದರ ನಿರ್ವಹಣೆ ಸರಕಾರಕ್ಕೆ ದೊಡ್ಡ ಹೊರೆಯಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಆಸ್ಪತ್ರೆಯ ಮೂರು ಮಹಡಿಗಳನ್ನು ಮರುವಿನ್ಯಾಸಗೊಳಿಸಲು ತಾಂತ್ರಿಕ ತಜ್ಞರಿಂದ ವರದಿ ಪಡೆಯಲು ನಿರ್ಧರಿಸಲಾಗಿದ್ದು, ರಾಜ್ಯ ಸರ್ಕಾರವು ಇದಕ್ಕೆ ಸೂಕ್ತ ಅನುದಾನ ಬಿಡುಗಡೆಗೊಳಿಸಬೇಕು ಎಂದು ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಆಗ್ರಹಿಸಿದ್ದಾರೆ.
ಶಾಸಕರು ಬುಧವಾರ ಆಸ್ಪತ್ರೆಗೆ ಖುದ್ದಾಗಿ ಭೇಟಿ ನೀಡಿ, ಅಲ್ಲಿನ ಮೂಲಸೌಕರ್ಯಗಳನ್ನು ಪರಿಶೀಲಿಸಿದ ಬಳಿಕ ವೈದ್ಯಾಧಿಕಾರಿಗಳೊಂದಿಗೆ ನಡೆಸಿದ ಮಹತ್ವದ ಸಮಾಲೋಚನಾ ಸಭೆಯಲ್ಲಿ ಈ ವಿಷಯ ತಿಳಿಸಿದರು.

ಮೇಲ್ದರ್ಜೆಗೆ ಮನವಿ

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕರು, ಪ್ರಸ್ತುತ ಈ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು 200 ಬೆಡ್ ಸಾಮರ್ಥ್ಯದ ಸುಸಜ್ಜಿತ ಜಿಲ್ಲಾಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಹಾಗೂ ಅದಕ್ಕೆ ತಕ್ಕಂತೆ ಅಗತ್ಯ ಸಿಬ್ಬಂದಿ ನಿಯೋಜಿಸಲು ರಾಜ್ಯ ಸರ್ಕಾರಕ್ಕೆ ಶೀಘ್ರದಲ್ಲೇ ಅಧಿಕೃತ ಮನವಿ ಸಲ್ಲಿಸಲಾಗುವುದು. ಸದ್ಯಕ್ಕೆ ಕೇವಲ 70 ಬೆಡ್‌ಗಳನ್ನು ಮಾತ್ರ ಬಳಸಿಕೊಂಡು ಲಭ್ಯವಿರುವ ವೈದ್ಯರು ಹಾಗೂ ಸಿಬ್ಬಂದಿ ಮೂಲದ ಸೇವೆ ನೀಡಲಾಗುತ್ತಿದೆ. ಆದರೆ, ಆಸ್ಪತ್ರೆಯ ಬೃಹತ್ ಕಟ್ಟಡದ ನಿರ್ವಹಣಾ ವೆಚ್ಚವೇ ಅತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.
ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಶಸ್ತ್ರಚಿಕಿತ್ಸಕರಾದ (ಜಿಲ್ಲಾ ಸರ್ಜನ್) ಡಾ. ಎಚ್. ಅಶೋಕ್ ಹಾಗೂ ಆಸ್ಪತ್ರೆಯ ಉಪ ವೈದ್ಯಾಧಿಕಾರಿ ಡಾ. ಸಂದೀಪ್ ಉಪಸ್ಥಿತರಿದ್ದರು.



ದುಬಾರಿ ನಿರ್ವಹಣೆ, ವಾರ್ಷಿಕ 60 ಲಕ್ಷ ರೂ. ವೆಚ್ಚ

ಆಸ್ಪತ್ರೆಯ ಲಿಫ್ಟ್ ಸಂಪೂರ್ಣ ಕೆಟ್ಟುಹೋಗಿದ್ದು, ಕಟ್ಟಡದ ಅನೇಕ ಕಡೆಗಳಲ್ಲಿ ಮಳೆ ನೀರು ಸೋರಿಕೆಯಾಗುತ್ತಿದೆ. ಆವರಣದಲ್ಲಿ ಇಲಿ ಹಾಗೂ ಹೆಗ್ಗಣಗಳ ಕಾಟ ವಿಪರೀತವಾಗಿದೆ. ಇಲ್ಲಿರುವ ಬಹುತೇಕ ವೈದ್ಯಕೀಯ ಯಂತ್ರೋಪಕರಣಗಳು ವಿದೇಶದಿಂದ ಆಮದಾಗಿದ್ದು, ಇವುಗಳ ರಿಪೇರಿ ಮತ್ತು ನಿರ್ವಹಣಾ ವೆಚ್ಚ ಅತ್ಯಂತ ದುಬಾರಿಯಾಗಿದೆ. ಆಸ್ಪತ್ರೆಯ ಒಟ್ಟು ವಾರ್ಷಿಕ ನಿರ್ವಹಣೆಗಾಗಿ ಸುಮಾರು 60 ಲಕ್ಷ ರೂ. ಅಗತ್ಯವಿದ್ದು, ಈ ಎಲ್ಲಾ ಸಮಸ್ಯೆಗಳ ಕುರಿತು ನೂತನ ಆರೋಗ್ಯ ಸಚಿವರಿಗೆ ಸವಿಸ್ತಾರವಾದ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

ಸಾಲಿಗ್ರಾಮ ಗುಂಡ್ಮಿಯಲ್ಲಿ ನಾವುಡ- ಧಾರೇಶ್ವರ ಸಂಸ್ಮರಣೆ | ಕಲ್ಕೂರ ಅಭಿಪ್ರಾಯ

ಸಂಘಟಿತ ಪ್ರಯತ್ನದಿಂದ ಯಕ್ಷಕಲೆಯ ಉಳಿವು

ಕೋಟ: ಸರ್ವಾಂಗ ಸುಂದರ ಯಕ್ಷಗಾನ ಕಲೆಯ ಸ್ವರೂಪವನ್ನು ಉಳಿಸುವಲ್ಲಿ ಮೇಳದ ವ್ಯವಸ್ಥಾಪಕರು ಕಲಾವಿದರು ಮತ್ತು ಪ್ರೇಕ್ಷಕರು ವಿಮರ್ಶಿಸಿ ಮುಂದುವರಿಯುವ ಅಗತ್ಯವಿದೆಯೆಂದು ಮಂಗಳೂರು ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಮತ್ತು ದ.ಕ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ ಘಟಕದ ನಿಕಟ ಪೂರ್ವ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ ತಿಳಿಸಿದರು.
ಗುಂಡ್ಮಿ ಐರೋಡಿ ಸದಾನಂದ ಹೆಬ್ಬಾರ್ ರಂಗಮಂಟಪದಲ್ಲಿ ನಡೆದ ನೆನಪಿನಂಗಳದಲ್ಲಿ ಕಾಳಿಂಗ ನಾವುಡ ಮತ್ತು ಸುಬ್ರಹ್ಮಣ್ಯ ಧಾರೇಶ್ವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.
ಯಕ್ಷಗಾನ ಕ್ಷೇತ್ರವು ಇಂದು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆಯಾದರೂ ರಂಗ ಪ್ರದರ್ಶನದಲ್ಲಿ ಕಾಣಿಸಿಕೊಳ್ಳುವ ಪರಿವರ್ತನೆಗಳು ಮೂಲ ಯಕ್ಷಗಾನಕ್ಕಿಂತ ಭಿನ್ನವಾಗಿದೆ. ಸತ್ವಭರಿತವಾದ ಪೌರಾಣಿಕ ಕಥಾನಕಗಳಲ್ಲಿ ಇಂತಹ ಆಭಾಸಗಳು ಇರಲಿಲ್ಲ, ಇಂದು ಪ್ರದರ್ಶನಗೊಳ್ಳುತ್ತಿರುವ ಕೆಲವು ಕಾಲ್ಪನಿಕ ಕಥಾನಕಗಳಲ್ಲಿ ಯಕ್ಷಗಾನೀಯ ವಾತಾವರಣ ಕಡಿಮೆಯಾಗಿದೆ. ಕಾಲಮಿತಿಯ ಪ್ರದರ್ಶನವೂ ಕೆಲವು ಇತಿಮಿತಿ ಹೊಂದಿದೆ ಎಂದರು.

ಭಾಗವತದ್ವಯರ ಸಂಸ್ಮರಣೆ

ನಿವೃತ್ತ ಅಧ್ಯಾಪಕ , ಲೇಖಕ ಜಿ .ಹರಿಕೃಷ್ಣ ಹೊಳ್ಳ ಬ್ರಹ್ಮಾವರ, ಉಪ್ಪಿನಂಗಡಿ ಶ್ರೀ ಕಾಳಿಕಾಂಬ ಯಕ್ಷಕಲಾ ಟ್ರಸ್ಟ್ ಅಧ್ಯಕ್ಷ ದಿವಾಕರ ಆಚಾರ್ಯ ಗೇರುಕಟ್ಟೆ ಭಾಗವತದ್ವಯರ ಸಂಸ್ಮರಣೆ ಮಾಡಿದರು.

ಸನ್ಮಾನ ಕಾರ್ಯಕ್ರಮ

ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಯಕ್ಷ ಗುರು ದೇವದಾಸ ರಾವ್ ಕೂಡ್ಲಿ ಅವರನ್ನು ಸನ್ಮಾನಿಸಲಾಯಿತು. ಪ್ರಸಂಗಕರ್ತ, ಕಲಾವಿದ ಡಾ. ಶಿವಕುಮಾರ್ ಅಳಗೋಡು ಅಭಿನಂದನಾ ನುಡಿಗಳನ್ನಾಡಿದರು. ಕವಿ ಚಾರ ಪ್ರದೀಪ ಹೆಬ್ಬಾರ್ ಸನ್ಮಾನ ಪತ್ರ ವಾಚಿಸಿದರು. ಕಾರ್ಕಡ ಗೆಳೆಯರ ಬಳಗದ ಅಧ್ಯಕ್ಷ ಕೆ ತಾರಾನಾಥ ಹೊಳ್ಳ ಶುಭ ಹಾರೈಸಿದರು. ಯಕ್ಷಗಾನ ಕಲಾ ಕೇಂದ್ರದ ಕಾರ್ಯದರ್ಶಿ ಎ. ರಾಜಶೇಖರ್ ಹೆಬ್ಬಾರ್, ಶಿಕ್ಷಕ, ಕಲಾವಿದ ನಾಗರಾಜ್ ಆಚಾರ್ಯ ವಡ್ಡರ್ಸೆ, ವಿನುತ ಆಚಾರ್, ಉಮೇಶ್ ಆಚಾರ್ಯ ಸಾಲಿಗ್ರಾಮ ಶಿಕ್ಷಕಿ ಸವಿತಾ, ಉಪನ್ಯಾಸಕಿ ಭಾರತಿ ಯಂ. ಎಲ್ ಗೇರುಕಟ್ಟೆ ಇದ್ದರು. ಶ್ರೀ ಮಹಿಷ ಮರ್ದಿನಿ ಯಕ್ಷಕಲಾ ಪ್ರತಿಷ್ಠಾನ ಚಾರ - ಹೆಬ್ರಿ ಕಾರ್ಯಕ್ರಮವನ್ನು ಸಂಘಟಿಸಿತ್ತು. ಪ್ರದೀಪ ಹೆಬ್ಬಾರ ಸ್ವಾಗತಿಸಿ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ ನಿರೂಪಿಸಿದರು. ರವಿರಾಜ್ ಬೈಕಾಡಿ ವಂದಿಸಿದರು. ಚಾರ ಪ್ರದೀಪ ಹೆಬ್ಬಾರ್ ವಿರಚಿತ ಉಲೂಪಿ ಕಲ್ಯಾಣ ಪ್ರಸಂಗದ ತಾಳಮದ್ದಳೆ ಜರಗಿತು. ಭಾಗವತರಾಗಿ ಶಿವಶಂಕರ ಭಟ್ ಹರಿಹರಪುರ ಹಿಮ್ಮೇಳದಲ್ಲಿ ದೇವದಾಸ್ ರಾವ್ ಕೂಡ್ಲಿ, ರಾಮಕೃಷ್ಣ ಮಂದರ್ತಿ, ಕು. ಪ್ರದ್ಯುಮ್ನ, ಕು. ಸಂದೇಶ ಅರ್ಥಧಾರಿಗಳಾಗಿ ದಿವಾಕರ ಆಚಾರ್ಯ ಗೇರುಕಟ್ಟೆ (ಕೌರವ್ಯ), ಆನಂದ ಭಟ್ ಕೆಕ್ಕಾರು(ಅರ್ಜುನ), ಡಾ. ಶಿವಕುಮಾರ ಅಳಗೋಡು(ವಿಪ್ರರು), ಆದಿತ್ಯ ಹೆಗಡೆ ಯಡೂರು(ಉಲೂಪಿ) , ಚಾರ ಪ್ರದೀಪ ಹೆಬ್ಬಾರ್(ಧೃತರಾಷ್ಟ್ರ) ಭಾಗವಹಿಸಿದ್ದರು.




ಜ್ಞಾನಸುಧಾ ಪಿಯು ಕಾಲೇಜು ಪ್ರಥಮ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ



ಕಾರ್ಕಳ: ದೇಶದ ಉನ್ನತಿಗೋಸ್ಕರ ಜ್ಞಾನಕ್ಕೆ ಪ್ರಾಧಾನ್ಯತೆ ನೀಡಬೇಕಾಗಿದೆ. ಅಜ್ಞಾನವನ್ನು ತೊಲಗಿಸುವ ಸರಿಯಾದ ದಾರಿ ಜ್ಞಾನವೇ ಆಗಿದೆ ಎಂದು ಉಡುಪಿ ಕೃಷ್ಣಾಪುರ ಮಠದ ಶ್ರೀ ವಿದ್ಯಾಸಾಗರ ತೀರ್ಥ ಸ್ವಾಮೀಜಿ ಹೇಳಿದ್ದಾರೆ.
ಅಜೆಕಾರು ಪದ್ಮನಗರ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮತ್ತು ಅಜೆಕಾರು ಜ್ಞಾನಸುಧಾ ಪಿಯು ಕಾಲೇಜಿನ ಪ್ರಥಮ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ, ಪದ್ಮಗೋಪಾಲ ಸಭಾಂಗಣ, ದೇಶಸುಧಾ ಕಾರ್ಯಕ್ರಮದ ಬುಧವಾರ ಉದ್ಘಾಟಿಸಿ ಆಶೀರ್ವಚನ ನೀಡಿದರು.
ಅಜೆಕಾರು ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ. ಸುಧಾಕರ ಶೆಟ್ಟಿ ಸ್ವಾಗತಿಸಿ, ನನ್ನ ತಾಯಿ ನೆನಪಿಗಾಗಿ ಶಾಲೆಯನ್ನು ನಿರ್ಮಿಸಿ, ತನ್ನೂರಿನ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದಿಂದ ವಂಚಿರಾಗಬಾರದೆಂಬ ಉದ್ದೇಶದಿಂದ, ಬಡ ವಿದ್ಯಾರ್ಥಿಗಳಿಗೂ ಅತ್ಯಾಧುನಿಕ ಸೌಲಭ್ಯದೊಂದಿಗೆ ಉಚಿತ ಶಿಕ್ಷಣ ನೀಡಬೇಕೆಂಬ ಕಾಳಜಿಯಿಂದ ಸುಸಜ್ಜಿತ, ಸುಂದರವಾಗಿ ಕನಸಿನ ವಿದ್ಯಾಮಂದಿರವೊಂದು ಅಜೆಕಾರು ಪದ್ಮನಗರದಲ್ಲಿ ನಿರ್ಮಾಣಗೊಂಡು, ಕಳೆದ 15 ವರ್ಷಗಳಿಂದ ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿದೆ. ಅನೇಕ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಿದ್ಯಾರ್ಥಿ ವೇತನ ನೀಡುತ್ತಾ ಬಂದಿರುವ ಅಜೆಕಾರ್ ಪದ್ಮ ಗೋಪಾಲ್ ಶಿಕ್ಷಣ ಟ್ರಸ್ಟ್ ವತಿಯಿಂದ ಅಜೆಕಾರು ಪದ್ಮನಗರದಲ್ಲಿ 4ನೇ ಕ್ಯಾಂಪಸ್ ಇದಾಗಿದೆ ಎಂದರು.
ವಿಧಾನ ಪರಿಷತ್ ಮಾಜಿ ಸದಸ್ಯ ಕ್ಯಾ.ಗಣೇಶ್ ಕಾರ್ಣಿಕ್ ಅಧ್ಯಕ್ಷತೆ ವಹಿಸಿದ್ದರು. (ಪ.ಪೂ.) ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಾರುತಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಲೋಕೇಶ್, ಟ್ರಸ್ಟಿ ನಿತ್ಯಾನಂದ ಪ್ರಭು, ಅನಿಲ್ ಕುಮಾರ್ ಉಪಸ್ಥಿತರಿದ್ದರು. ಡಾ.ಸುಧಾಕರ ಶೆಟ್ಟಿ ಸ್ವಾಗತಿಸಿದರು, ದರ್ಶನ ಕಾರ್ಯಕ್ರಮ ನಿರೂಪಿಸಿದರು.

ಜೆಇಇ ಅಡ್ವಾನ್ಸ್: ಕ್ರಿಯೇಟಿವ್ ಸಂಸ್ಥೆಯ 19 ಮಂದಿ ತೇರ್ಗಡೆ



ಕಾರ್ಕಳ: ಜೆಇಇ ಅಡ್ವಾನ್ಸ್ - 2026ನೇ ಸಾಲಿನ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಕಾರ್ಕಳದ ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯ ನಾಗದೇವ್ ಎಂ.ಜಿ. ರಾಷ್ಟ್ರಮಟ್ಟದಲ್ಲಿ 196 ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.



ಫಲಿತಾಂಶದ ವಿವರ ನಾಗದೇವ್ ಎಂ.ಜಿ. 196, ಋಷಿ ರಾಜ ವಿ.648, ದಿಶಾಂತ್ ಎಂ. 1207, ರಶ್ಮಿ ಆರ್. ಎಚ್.1754, ಧನುಷ್ ಎಚ್. ಎ.2193, ನಯನ ಡಿ ಗೌಂಡ 2638, ಸೃಜನಾ ಎಸ್.3618 ಶಶಾಂಕ್ ಡಿ. ಎಸ್. 3800, ಹೃತಿಕ್ ಮಹೇಶ್3803, ತೇಜಸ್ ಆರ್. ಬಿ.5124, ಸುಜನ್ ಕೆ. ಎಚ್.5377, ವಿಶ್ವಾಸ್ ಕೆ. ಎಸ್.5549, ಧ್ರುವ ವಿ. ಬಿ.6057, ನಮಿತ್ ಕೆ. ಹೆಗ್ಡೆ 8164, ಪ್ರಥಮ್ ಟಿ.10982, ಧ್ರುಶ್ 11103, ನೀನಾದ್ ರಾಜೇಶ್ ನಾಯ್ಕ್ 12563, ಸಂವಿತ್ ಎ. ಗೋಕರ್ಣ 19289, ಪ್ರಜ್ವಲ್ ಭಟ್ 16885ರ್‍ಯಾಂಕ್ ಪಡೆದುಕೊಂಡಿದ್ದಾರೆ ಎಂದು ಎಂದು ಸಂಯೋಜಕ ತಿರುಮಲಾ ರೆಡ್ಡಿ ತಿಳಿಸಿದ್ದಾರೆ.

ಕೇಂದ್ರದ ಯೋಜನೆ ಮನೆ, ಮನೆಗೆ ತಲುಪಿಸಿ: ನವೀನ್



ಕುಂದಾಪುರ: ಪಕ್ಷದ ಸಂಘಟನೆ, ಬೂತ್ ಮಟ್ಟದ ಬಲವರ್ಧನೆ ಹಾಗೂ ಮುಂಬರುವ ಚುನಾವಣೆಗಳ ಹಿನ್ನೆಲೆಯಲ್ಲಿ ಕಾರ್ಯ ಕರ್ತರು ಹೆಚ್ಚಿನ ಜವಾಬ್ದಾರಿ ವಹಿಸಬೇಕಾಗಿದೆ. ಪ್ರತಿಯೊಬ್ಬ ಕಾರ್ಯಕರ್ತರು ಕೇಂದ್ರ ಸರ್ಕಾರದ ಯೋಜನೆಗಳನ್ನು ಮನೆಮನೆಗೆ ತಲುಪಿಸುವ ಕೆಲಸ ಮಾಡಬೇಕು ಎಂದು ಉಡುಪಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಕುತ್ಯಾರು ನವೀನ್ ಕುಮಾರ್ ಶೆಟ್ಟಿ ಕರೆ ನೀಡಿದರು.
ಕುಂದಾಪುರ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಬಿಜೆಪಿ ಸಂಘಟನಾತ್ಮಕ ಸಭೆಯಲ್ಲಿ ಅವರು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು. ಕುಂದಾಪುರ ಬಿಜೆಪಿ ಕ್ಷೇತ್ರ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್ ಮಾತನಾಡಿ, ವಿಶ್ವ ಪರಿಸರ ದಿನದ ಅಂಗವಾಗಿ 'ಏಕ್ ಪೇಡ್ ಮಾ ಕೆ ನಾಮ್" ಅಭಿಯಾನದಡಿ ಜಿಲ್ಲೆಯಾದ್ಯಂತ 17 ದಿನಗಳ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ. ಜೂ. 5ರಂದು ನೀಲಾವರದಲ್ಲಿರುವ ಗೋಶಾಲೆಯಲ್ಲಿ ಉದ್ಘಾಟನೆ ನೆರವೇರಲಿದೆ. ನೀಲಾವರದಲ್ಲಿ ಉದ್ಘಾಟನೆಯಾಗಲಿದೆ ಎಂದರು.
ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆರ್ಗ ದಿನಕರ ಶೆಟ್ಟಿ, ಮಂಡಲ ನಿಕಟಪೂರ್ವ ಅಧ್ಯಕ್ಷ ಶಂಕರ ಅಂಕದಕಟ್ಟೆ ಇದ್ದರು. ಸತೀಶ್ ಪೂಜಾರಿ ವಕ್ವಾಡಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು ಸುಧೀರ್ ಕೆ. ಎಸ್. ವಂದಿಸಿದರು.

ಕಾಪು ಪುರಸಭೆ ಸಾಮಾನ್ಯಸಭೆ | ಪಟ್ಟಣ ವ್ಯಾಪ್ತಿಯಲ್ಲಿ 29 ರೆಸಾರ್ಟ್, ಹೋಮ್ ಸ್ಟೇಗಳ ಕಾರ್ಯಾಚರಣೆ, 4 ಅನಧಿಕೃತ: ಅಧಿಕಾರಿಗಳ ಮಾಹಿತಿ

ರಾಷ್ಟ್ರೀಯ ಹೆದ್ದಾರಿ ಸರ್ವಿಸ್ ರಸ್ತೆಯಲ್ಲಿ ಪುರಸಭೆಯಿಂದ ಸ್ಪೀಡ್ ಬ್ರೇಕರ್ ಅಳವಡಿಸಿ: ಗುರ್ಮೆ

ಕಾಪು: ಕಾಪು ಪುರಸಭೆ ಸಾಮಾನ್ಯಸಭೆಯು ಅಧ್ಯಕ್ಷೆ ಮೋಹಿನಿ ಶೆಟ್ಟಿ ಅಧ್ಯಕ್ಷತೆಯಲ್ಲಿ ಪುರಸಭೆ ಸಭಾಂಗಣದಲ್ಲಿ ನಡೆಯಿತು.
ಪಾಲ್ಗೊಂಡಿದ್ದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು, ಕಾಪು ಪುರಸಭೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ ಇಕ್ಕೆಲಗಳ ಸರ್ವಿಸ್ ರಸ್ತೆಯಲ್ಲಿ ಪುರಸಭೆಯ ವತಿಯಿಂದಲೇ ಸ್ಪೀಡ್ ಬ್ರೇಕರ್ ಅಳವಡಿಸುವಂತೆ ಸಲಹೆಯನ್ನು ನೀಡಿದರು. ಯಾರಿಂದಲೂ ಆಕ್ಷೇಪ ವ್ಯಕ್ತವಾದರೆ ಗಮನಕ್ಕೆ ತರುವಂತೆ ಶಾಸಕರು ಸಮಜಾಯಿಷಿ ನೀಡಿದರು.
ರಾಷ್ಟ್ರೀಯ ಹೆದ್ದಾರಿ 66ರ ನೀರು ನಿಲ್ಲುವ ಸ್ಥಳಗಳಲ್ಲಿ ಪರಿಹಾರ ಕೆಲಸ ಆರಂಭಗೊಂಡಿದೆ. ಪುರಸಭೆ ವ್ಯಾಪ್ತಿಯಲ್ಲಿ ಮೂರು ಪಾಯಿಂಟ್‌ಗಳನ್ನು ಗುರುತಿಸಿದ್ದು ಎಲ್ಲೆಲ್ಲಿ ಸಮಸ್ಯೆಯಿದೆಯೋ ಪ್ರದೇಶವನ್ನು ತಿಳಿಸಿದರೆ, ಅಲ್ಲಿ ಪರಿಶೀಲನೆ ನಡೆಸಿ ಕೆಲಸ ನಡೆಸುತ್ತೇವೆ ಎಂದು ಇಂಜಿನಿಯರ್ ತಿಳಿಸಿದರು.
ಪುರಸಭೆ ವ್ಯಾಪ್ತಿಯಲ್ಲಿ ನಾಯಿಕೊಡೆಗಳಂತೆ ರೆಸಾರ್ಟ್- ಹೋಮ್ ಸ್ಟೇಗಳು ತೆರೆದಿವೆ. ಮೆಸ್ಕಾಂ ವಿದ್ಯುತ್ ಸಂಪರ್ಕ ನೀಡುವಾಗ ಎನ್‌ಒಸಿ ನೀಡಲಾಗಿದೆಯೇ ಎಂದು ಕಿರಣ್ ಆಳ್ವ ಪ್ರಶ್ನಿಸಿದ್ದು, ಕಾಪು ಪುರಸಭೆ ವ್ಯಾಪ್ತಿಯಲ್ಲಿ 29 ರೆಸಾರ್ಟ್, ಹೋಮ್ ಸ್ಟೇಗಳಿದ್ದು ಅದರಲ್ಲಿ ನಾಲ್ಕು ಅನಧಿಕೃತ ಹೋಮ್ ಸ್ಟೇಗಳನ್ನು ಗುರುತಿಸಲಾಗಿದೆ. ಉಳಿದವುಗಳನ್ನು ಸರ್ವೆ ಮಾಡಿ ಪತ್ತೆ ಹಚ್ಚಲಾಗುವುದು ಎಂದು ಮುಖ್ಯಾಧಿಕಾರಿ ನೀಲಕಂಠ ಮೇಸ್ತ ತಿಳಿಸಿದರು.
ಅನಧಿಕೃತ ಕಟ್ಟಡಗಳನ್ನು ಪತ್ತೆ ಹಚ್ಚಿ ಕ್ರಮ ತೆಗೆದುಕೊಳ್ಳುವಂತೆ ಸದಸ್ಯರು ಒತ್ತಾಯಿಸಿದರು. ಪುರಸಭೆ ವ್ಯಾಪ್ತಿಯಲ್ಲಿ 40 ಕಟ್ಟಡಗಳಲ್ಲಿ 384 ಮನೆಗಳಿವೆ. ಅವುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಂದಾಯ ಅಧಿಕಾರಿ ಶಶಿಕಲಾ ಭರವಸೆ ನೀಡಿದರು.
ಕಾಪು ಪೇಟೆಯ ಟ್ರಾಫಿಕ್ ನಿರ್ವಹಣೆ, ಪಾರ್ಕಿಂಗ್ ಒತ್ತಡ ಕಡಿಮೆ ಮಾಡಲು ಪಿಡಬ್ಲ್ಯುಡಿ ಮತ್ತು ಕಾಪು ಪುರಸಭೆ ವತಿಯಿಂದ ಜಂಟಿ ಸರ್ವೆ ನಡೆಸಲಾಗಿದೆ. ಈ ಬಗ್ಗೆ ಮ್ಯಾಪಿಂಗ್ ನಡೆಸಿ ಪುರಸಭೆ, ಪಿಡಬ್ಲ್ಯುಡಿ, ಪೊಲೀಸ್, ಆರ್‌ಟಿಒ ಸೇರಿ ಮುಂದಿನ ಕ್ರಮ ವಹಿಸಲಾಗುವುದು ಎಂದು ಮುಖ್ಯಾಧಿಕಾರಿ ತಿಳಿಸಿದರು.
ಕಾಪು ಪೇಟೆಯಲ್ಲಿ ಹೈಕೋರ್ಟ್ ಆದೇಶದಂತೆ ರಿಕ್ಷಾ ನಿಲ್ದಾಣ ತೆರವುಗೊಳಿಸುವ ಪುರಸಭೆ ಪೇಟೆಯಲ್ಲಿ ಸರ್ಕಾರಿ ಜಾಗದಲ್ಲಿ ಪಾರ್ಕಿಂಗ್ ನಿರಾಕರಿಸುವ ಅಂಗಡಿ ಮಾಲಕರು, ಕಟ್ಟಡ ನಿರ್ಮಿಸುವವರ ವಿರುದ್ಧದ ಯಾಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಸದಸ್ಯರು ಪ್ರಶ್ನಿಸಿದರು. ಈ ಬಗ್ಗೆ ಪರಿಶೀಲನೆ ನಡೆಸಿ ಕ್ರಮವಹಿಸುವುದಾಗಿ ಅಧಿಕಾರಿಗಳು ಸ್ಪಷ್ಟನೆ ನೀಡಿದರು. ಪೊಲಿಪು ವಾರ್ಡ್‌ನಲ್ಲಿ ಇಂಟರ್ ಲಾಕ್ ಅಳವಡಿಕೆ ಕಾಮಗಾರಿ ನಡೆಸದೇ ಇರುವ ಬಗ್ಗೆ ವಾರ್ಡ್ ಸದಸ್ಯೆ ಆಕ್ಷೇಪ ವ್ಯಕ್ತಪಡಿಸಿದರು. ಈ ವಿಚಾರದಲ್ಲಿ ಸದಸ್ಯರೆಲ್ಲರೂ ದನಿಗೂಡಿಸಿ ಅದು ಸರ್ಕಾರಿ ಜಾಗವೆಂದು ಗುರುತಿಸಿದ್ದು ಕೂಡಲೇ ಕ್ರಮ ವಹಿಸುವಂತೆ ಒತ್ತಾಯಿಸಿದರು.
ತ್ಯಾಜ್ಯ ವಿಂಗಡಣೆ ಕರಪತ್ರವನ್ನು ಬಿಡುಗಡೆಗೊಳಿಸಲಾಯಿತು. ಶಾಲೆ, ಕಾಲೇಜು, ಅಂಗನವಾಡಿ, ದೇವಸ್ಥಾನ, ಸ್ಮಶಾನ ಸಹಿತ ಇತರ ಕಡೆಗಳಲ್ಲಿ ಹಣ್ಣು ಹಂಪಲುಗಳ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಗುರ್ಮೆ ಸಲಹೆ ನೀಡಿದರು.
ಈ ಸಂದರ್ಭ ಉಪಾಧ್ಯಕ್ಷೆ ಸರಿತಾ ಶಿವಾನಂದ ಉಪಸ್ಥಿತರಿದ್ದರು.



ಆಹಾರ ಇಲಾಖೆ ಅಧಿಕಾರಿ ಗೈರು

ಸರ್ವರ್ ತೊಂದರೆಯಿಂದಾಗಿ ಪಡಿತರ ಪಡೆಯಲು ಸಾಧ್ಯವಾಗದೇ ಜನ ಹಿಂತೆರಳುವಂತಾಗಿದೆ. ಇಂತಹ ಸಮಸ್ಯೆ ಆಲಿಸಲು ಆಹಾರ ಇಲಾಖೆ ಅಧಿಕಾರಿಗಳು ಸತತವಾಗಿ ಗೈರು ಹಾಜರಾಗುತ್ತಿರುವುದಕ್ಕೆ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಈ ಬಗ್ಗೆ ಪತ್ರ ಬರೆಯುವುದಾಗಿ ಮುಖ್ಯಾಧಿಕಾರಿ ಭರವಸೆ ನೀಡಿದರು.